ಮಂಗಳೂರು
ಶನಿವಾರ, 16 ಮೇ 2026
ಸಂಪುಟ 48, ಸಂಚಿಕೆ 58, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ




ಏನಾಪಸಂನಿಂದ ಎಲ್ಲರಿಗೂ ಸಮಾನ ಹಕ್ಕು | ೦೨
18ಕ್ಕೆ ಸರ್ಕಾರ ರಚನೆ: ಸತೀಶನ್ ಸಿದ್ಧತೆ | ೦೨
ಯುದ್ಧ ನಿಲ್ಲಿಸಲು ಭಾರತದಿಂದ ಸಾಧ್ಯ | ೦೨

ಹಿಂದುಗಳಿಗೆ ಪೂಜೆ ಹಕ್ಕು: ಮ.ಪ್ರ. ಹೈಕೋರ್ಟ್ ಐತಿಹಾಸಿಕ ತೀರ್ಪು

ಭೋಜಶಾಲೆ ಸರಸ್ವತಿಗೆ ಸಮರ್ಪಿತ ದೇವಸ್ಥಾನ

ಭೋಪಾಲ್: ಹಲವು ದಶಕಗಳಿಂದ ರಾಷ್ಟ್ರ ಮಟ್ಟದಲ್ಲಿ ವಿವಾದಕ್ಕೆ ಕಾರಣವಾಗಿದ್ದ ಮಧ್ಯಪ್ರದೇಶದ ಧಾರ ಜಿಲ್ಲೆಯ ಭೋಜಶಾಲೆ–ಕಮಾಲ್ ಮೌಲಾ ಸಮುಚ್ಚಯದ ಕುರಿತಾಗಿ ಮಧ್ಯಪ್ರದೇಶ ಹೈಕೋರ್ಟ್ ಶುಕ್ರವಾರ ಐತಿಹಾಸಿಕ ತೀರ್ಪು ನೀಡಿದ್ದು, ವಿವಾದಿತ ಪ್ರದೇಶದ ಧಾರ್ಮಿಕ ಸ್ವರೂಪ 'ವಾಗ್ದೇವಿ ಸರಸ್ವತಿ ದೇವಾಲಯ' ಎಂದು ಘೋಷಿಸಿದೆ. ರಾಜಾ ಭೋಜನ ಕಾಲದಲ್ಲಿ ಇದು ಸಂಸ್ಕೃತ ಶಿಕ್ಷಣದ



ಪ್ರಮುಖ ಕೇಂದ್ರವಾಗಿತ್ತು ಎಂಬುದನ್ನೂ ನ್ಯಾಯಪೀಠ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ವಿಜಯ್ ಕುಮಾರ್ ಶುಕ್ಲಾ ಹಾಗೂ ಅಲೋಕ್ ಅವಸ್ಥಿ ಅವರ ವಿಭಾಗೀಯ ಪೀಠವು, ಐತಿಹಾಸಿಕ ಸಾಹಿತ್ಯ, ವಾಸ್ತುಶಿಲ್ಪದ ಉಲ್ಲೇಖಗಳು ಮತ್ತು ಪುರಾತತ್ವ ದಾಖಲೆಗಳು ಭೋಜಶಾಲೆಯ ಅಸ್ತಿತ್ವವನ್ನು ದೃಢಪಡಿಸುತ್ತವೆ ಎಂದು ಅಭಿಪ್ರಾಯಪಟ್ಟಿತು. ಈ ಪ್ರದೇಶ ಸರಸ್ವತಿ ಆರಾಧನೆ ಹಾಗೂ ಸಂಸ್ಕೃತ ಅಧ್ಯಯನದ ಕೇಂದ್ರವಾಗಿತ್ತು ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಹಿಂದು ಫ್ರಂಟ್ ಫಾರ್ ಜಸ್ಟಿಸ್ ಸೇರಿದಂತೆ ಹಲವು ಸಂಘಟನೆಗಳು ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸಿದ ನ್ಯಾಯಾಲಯ, 2003ರಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಜಾರಿಗೊಳಿಸಿದ್ದ ಪೂಜೆ–ನಮಾಜ್ ವ್ಯವಸ್ಥೆಯ ಆದೇಶದ ಕೆಲವು ಭಾಗಗಳನ್ನು ರದ್ದುಪಡಿಸಿದೆ. ➡ಪುಟ ೪

ತೀರ್ಪಿನ ಪ್ರಮುಖ ಅಂಶಗಳು



1. ಭೋಜಶಾಲೆಯು ಧಾರ್ಮಿಕ ಸ್ವರೂಪ ದೇವಾಲಯ
2. ರಾಜಾ ಭೋಜನ ಕಾಲದ ಸರಸ್ವತಿ ಮಂದಿರ, ಸಂಸ್ಕೃತ ವಿದ್ಯಾಕೇಂದ್ರ
3. 2003ರ ಎಎಸ್ಐ ಪೂಜೆ–ನಮಾಜ್ ವ್ಯವಸ್ಥೆಯ ಭಾಗಶಃ ರದ್ದು
4. ಎಎಸ್ಐಗೆ ಸಂಪೂರ್ಣ ನಿಯಂತ್ರಣ ಮತ್ತು ಸಂರಕ್ಷಣೆ ಜವಾಬ್ದಾರಿ
5. ಮುಸ್ಲಿಂ ಸಮುದಾಯಕ್ಕೆ ಪರ್ಯಾಯ ಮಸೀದಿ ಜಾಗ ಪರಿಗಣನೆ
6. ಲಂಡನ್‌ನಲ್ಲಿರುವ ಸರಸ್ವತಿ ವಿಗ್ರಹ ವಾಪಸಾತಿಗೆ ಕೇಂದ್ರಕ್ಕೆ ಸೂಚನೆ

ಸುಪ್ರೀಂನಲ್ಲಿ ಹಿಂದು ಸಂಘಟನೆಗಳಿಂದ ಕೆವಿಯಟ್


ಮಧ್ಯಪ್ರದೇಶದ ಧಾರ್ ಜಿಲ್ಲೆಯ ಐತಿಹಾಸಿಕ ಭೋಜಶಾಲೆ–ಕಮಾಲ್ ಮೌಲಾ ಮಸೀದಿ ವಿವಾದದಲ್ಲಿ ಮಧ್ಯಪ್ರದೇಶ ಹೈಕೋರ್ಟ್ ನೀಡಿರುವ ಮಹತ್ವದ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಕೆಯಾಗುವ ಸಾಧ್ಯತೆ ನಡುವೆಯೇ ಹಿಂದು ಪರ ಅರ್ಜಿದಾರರು ಶುಕ್ರವಾರ ಕೆವಿಯಟ್ ಅರ್ಜಿ ಸಲ್ಲಿಸಿದ್ದಾರೆ.

ಭೋಜಶಾಲೆ ಸಂಕೀರ್ಣವು ದೇವಿ ಸರಸ್ವತಿಗೆ ಸಮರ್ಪಿತ ಹಿಂದು ದೇವಾಲಯ ಎಂಬುದಾಗಿ ಹೈಕೋರ್ಟ್ ಘೋಷಿಸಿರುವುದು ಹಿಂದುಪಕ್ಷಕ್ಕೆ ದೊಡ್ಡ ಜಯವಾಗಿದೆ. 'ಭೋಜಶಾಲೆಯಲ್ಲಿ ಹಿಂದುಗಳಿಗೆ ನಿರಂತರ ಹಾಗೂ ಅಡೆತಡೆಯಿಲ್ಲದ ಪೂಜೆಗೆ ಹಕ್ಕು ದೊರೆತಿದೆ.
■ **ಅಲೋಕ್ ಕುಮಾರ್**
ವಿಹಿಂಪ ಅಂತಾರಾಷ್ಟ್ರೀಯ ಅಧ್ಯಕ್ಷ

ಹಿಂದುಪಕ್ಷದ ವಾದಗಳಿಗೆ ನ್ಯಾಯಾಲಯ ಮನ್ನಣೆ • ಪುಟ ೧೧



ಶತಮಾನಗಳ ವಿವಾದಕ್ಕೆ ತಿರುವು ನೀಡಿದ ತೀರ್ಪು



ಭೋಜಶಾಲೆ ವಿವಾದವು ಕೇವಲ ಒಂದು ಧಾರ್ಮಿಕ ಸ್ಥಳದ ಕುರಿತ ಕಾನೂನು ಹೋರಾಟವಾಗಿರಲಿಲ್ಲ, ಅದು ಭಾರತದ ಸಾಂಸ್ಕೃತಿಕ ಪರಂಪರೆ, ಪುರಾತತ್ವ ಸಾಕ್ಷ್ಯ, ಮಧ್ಯಯುಗೀನ ಇತಿಹಾಸ ಮತ್ತು ಆಧುನಿಕ ರಾಜಕೀಯಗಳ ನಡುವೆ ಸಾಗಿದ ಬಹುಮಟ್ಟದ ಸಂಘರ್ಷವಾಗಿತ್ತು. ಹಿಂದೂಗಳು ಈ ಸ್ಥಳವನ್ನು ಸರಸ್ವತಿ ದೇವಾಲಯ, ಸಂಸ್ಕೃತ ವಿದ್ಯಾ ಕೇಂದ್ರ ವೆಂದು ಪರಿಗಣಿಸಿದರೆ, ಮುಸ್ಲಿಮರು ಇದನ್ನು ಕಮಾಲ್ ಮೌಲಾ ಮಸೀದಿ ಎಂದು ವಾದಿಸುತ್ತಿದ್ದರು. ➡ಪುಟ ೪

ತೈಲ ದರ ಹೆಚ್ಚಳ | ರಾಜ್ಯ ಸರ್ಕಾರ ಖಂಡನೆ

ಬೆಲೆ ಏರಿಕೆ ನಿರ್ಣಯ ಹಿಂಪಡೆಯಿರಿ: ಸಿಎಂ



ಬೆಂಗಳೂರು: ಕೇಂದ್ರ ಸರ್ಕಾರವು ಪೆಟ್ರೋಲ್–ಡೀಸೆಲ್ ಬೆಲೆ ಏರಿಸಿರುವುದನ್ನು ರಾಜ್ಯ ಸರ್ಕಾರ ಖಂಡಿಸಿ, ಬೆಲೆ ಏರಿಕೆ ನಿರ್ಣಯ ಹಿಂಪಡೆಯಲು ಒತ್ತಾಯಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿ, ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳ ನಂತರ ಕೇಂದ್ರ ಸರ್ಕಾರ ಪೆಟ್ರೋಲ್–ಡೀಸೆಲ್ ದರ ಏರಿಸುವ ನಿರೀಕ್ಷೆ ಇತ್ತು. ನಿರೀಕ್ಷೆಯಂತೆಯೇ ಹೆಚ್ಚಿಸಿದ್ದಾರೆ. ಆದರೆ, ಕರ್ನಾಟಕದಲ್ಲಿ ಇತರೆ ರಾಜ್ಯಗಳಿಗಿಂತ ಗಣನೀಯವಾಗಿ ಕಡಿಮೆಯಿರುವ ಪೆಟ್ರೋಲ್ ಬೆಲೆಯನ್ನು ಹೆಚ್ಚಿಸಿದ್ದರ ಬಗ್ಗೆ ಬಿಜೆಪಿಯವರು ಟೀಕಿಸಿದ್ದರು. ಮೋದಿ ದೇಶದ ಪ್ರಧಾನಿಯಾದ ನಂತರ ಹಲವು ಬಾರಿ ಪೆಟ್ರೋಲ್ ಡೀಸೆಲ್ ದರ ಹೆಚ್ಚಿಸಿದ್ದಾರೆ. ಕೇಂದ್ರದ ಈ ಬೆಲೆ ಏರಿಕೆ ಕ್ರಮವನ್ನು ರಾಜ್ಯ ಸರ್ಕಾರ ಖಂಡಿಸುವುದಲ್ಲದೇ ಈ ನಿರ್ಣಯವನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯಿಸುತ್ತೇವೆ ಎಂದರು. ಮೋದಿ ಅವರ ಆಡಳಿತ ಪ್ರಾರಂಭವಾಗುವ ಮೊದಲು 413 ರೂ. ಗಳಿದ್ದ ಗೃಹಬಳಕೆ ಎಲ್‌ಪಿಜಿ ದರ ಈಗ 1000 ರೂ. ದಾಟಿದೆ. ಈ ಬೆಲೆ ಏರಿಕೆ ದಿನಬಳಕೆ ವಸ್ತುಗಳ ಬೆಲೆ ಹೆಚ್ಚಳಕ್ಕೂ ಕಾರಣವಾಗಲಿದೆ. ➡ಪುಟ ೪



ಬೆಲೆ ಏರಿಕೆ ಮೋದಿ ಕೊಡುಗೆ: ಡಿಸಿಎಂ ಡಿ.ಕೆ.ಶಿವಕುಮಾರ್

ಬೆಲೆ ಏರಿಕೆ ಪ್ರಧಾನಿ ನರೇಂದ್ರ ಮೋದಿ ಅವರ



ಕೊಡುಗೆ. ಅವರು ಬೇರೆ ರಾಷ್ಟ್ರಗಳ ಜತೆ ಉತ್ತಮ ಸಂಬಂಧ ಉಳಿಸಿಕೊಂಡು ಬಂದಿಲ್ಲ. ಅಂತಾರಾಷ್ಟ್ರೀಯ ಬಿಕ್ಕಟ್ಟಿನ ಪರಿಸ್ಥಿತಿ ನಿಭಾಯಿಸುವಲ್ಲಿ ವಿಫಲರಾಗಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ➡ಪುಟ ೪

ತೈಲ ಬೆಲೆ ಹೆಚ್ಚಳ

ಹೊಸದಿಲ್ಲಿ: ಸಾರ್ವಜನಿಕ ವಲಯದ ತೈಲ ಕಂಪನಿಗಳು ಶುಕ್ರವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 3 ರೂ. ಹಾಗೂ ಸಿಎನ್‌ಜಿ ಬೆಲೆಯನ್ನು ಪ್ರತಿ ಕೆಜಿಗೆ 2 ರೂ. ಏರಿಕೆ ಮಾಡಿವೆ. ದಿಲ್ಲಿಯಲ್ಲಿ ಪೆಟ್ರೋಲ್ ಬೆಲೆ ಪ್ರತಿ ಲೀಟರ್‌ಗೆ 97.77 ರೂ. ಹಾಗೂ ಡೀಸೆಲ್ ಬೆಲೆ 90.67 ರೂ.ಗೆ ತಲುಪಿದೆ. ಮುಂಬೈನಲ್ಲಿ ಪೆಟ್ರೋಲ್ 106.68 ರೂ., ಡೀಸೆಲ್ 93.14 ರೂ. ಆಗಿದೆ. ದಿಲ್ಲಿಯಲ್ಲಿ ಸಿಎನ್‌ಜಿ ಬೆಲೆ ಕೆಜಿಗೆ 79.09 ರೂ. ಮತ್ತು ಮುಂಬೈನಲ್ಲಿ 84 ರೂ.ಗೆ ಏರಿಕೆಯಾಗಿದೆ. ಆದರೆ, ಪಿಎನ್‌ಜಿ ಮತ್ತು ಎಲ್‌ಪಿಜಿ ದರಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷದಿಂದಾಗಿ ಫೆ.28ರಿಂದ ಹಾರ್ಮುಜ್ ಜಲಸಂಧಿಯಲ್ಲಿ ಉಂಟಾದ ಅಡೆತಡೆಗಳಿಂದಾಗಿ ಜಾಗತಿಕ ಕಚ್ಚಾತೈಲ ಬೆಲೆ ಶೇ.50 ರಷ್ಟು ಏರಿಕೆಯಾಗಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಅಮಾವಾಸ್ಯೆ, ನಕ್ಷತ್ರ: ಭರಣಿ

ದಿನದ ಮಾತು

ನಂಬಿಕೆಗಳನ್ನು ಬದಲಾಯಿಸಿಕೊಳ್ಳುವುದರಿಂದ ಮಾತ್ರವೇ ಗುರಿ ಈಡೇರುವುದಿಲ್ಲ.
▲ ಗಾಂಧೀಜಿ

ಸೂರ್ಯ ಶಕ್ತಿ ಮತ್ತು ನಾಡಿಗಳು

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
• ಪುಟ ೬

ಕಿರುಸುದ್ದಿ

ಜೂನ್ 21ಕ್ಕೆ ನೀಟ್ ಮರುಪರೀಕ್ಷೆ

ಹೊಸದಿಲ್ಲಿ: ನೀಟ್–ಯುಜಿ ಮರುಪರೀಕ್ಷೆಯನ್ನು ಜೂ.21ರಂದು ನಡೆಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಶುಕ್ರವಾರ ಘೋಷಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ಅಕ್ರಮಗಳ ಆರೋಪಗಳ ದೃಷ್ಟಿಯಿಂದ ಸುಧಾರಣೆಗಳ ಭಾಗವಾಗಿ ಮುಂದಿನ ವರ್ಷದಿಂದ ವೈದ್ಯಕೀಯ ಪ್ರವೇಶ ಪರೀಕ್ಷೆಯು ಕಂಪ್ಯೂಟರ್ ಆಧಾರಿತ ಪರೀಕ್ಷೆಯಾಗಲಿದೆ ಎಂದು ಹೇಳಿದರು. ➡ಪುಟ ೪

ಮಳೆಗೆ ಛಾವಣಿ ಕುಸಿದು ನಾಲ್ವರ ಜೀವಂತ ಸಮಾಧಿ

ವಿಜಯಪುರ: ಜೋರಾದ ಮಳೆ, ಗಾಳಿಗೆ ಮನೆ ಛಾವಣಿ ಕುಸಿದು ಇಬ್ಬರು ಪುಟ್ಟ ಮಕ್ಕಳು, ಪತಿ, ಪತ್ನಿ ಸೇರಿ ಕುಟುಂಬದ ನಾಲ್ವರು ಜೀವಂತ ಸಮಾಧಿಯಾಗಿರುವ ಹೃದಯ ವಿದ್ರಾವಕ ಘಟನೆ ಜಿಲ್ಲೆಯ ಆಲಮೇಲ ತಾಲೂಕಿನ ಮೋರಟಗಿ ಗ್ರಾಮದಲ್ಲಿ ನಡೆದಿದೆ. ಗುರುನಾಥ ಬಡಿಗೇರ (35), ಪತ್ನಿ ಜ್ಯೋತಿ (28), ಮಕ್ಕಳಾದ ಕಾಳಮ್ಮ (13), ಕೀರ್ತಿ (9) ಮೃತ ದುರ್ದೈವಿಗಳು.

• ಪುಟ ೫

ಕೊಪ್ಪಳ: ರಸ್ತೆ ಅಪಘಾತ, ಏಳು ಮಂದಿ ಸಾವು

• ಪುಟ ೫

ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಕಿಂಗ್ ಪಿನ್ ಸೆರೆ

• ಪುಟ ೨

19ಕ್ಕೆ ಸಾರ್ಥಕ ಸೇವೆಗಳ ಸಮರ್ಪಣಾ ಸಮಾವೇಶ

• ಪುಟ ೪

ಪ.ಕರಾವಳಿಯಲ್ಲಿ ಮೊದಲ ಪ್ಲಾಸ್ಟಿಸ್ಟೋನ್ ಶಿಲೆ ಪತ್ತೆ

• ಪುಟ ೨

ಅಮೆರಿಕ, ಫ್ರಾನ್ಸ್ ಸೇರಿ 20ಕ್ಕೂ ಹೆಚ್ಚು ದೇಶಗಳಲ್ಲಿ ತೈಲ ಬೆಲೆ ಭಾರೀ ಏರಿಕೆ
ಭಾರತದಲ್ಲಿ ಅತ್ಯಲ್ಪ ಹೆಚ್ಚಳ
• ಪುಟ ೨
ಸುದ್ದಿ ಸಮಗ್ರ

4 ದಿನ ಮುನ್ನವೇ ಮಾನ್ಸೂನ್ ಮಳೆ ಆಗಮನ: ಐಎಂಡಿ

ಮೇ 26ಕ್ಕೆ ಕೇರಳಕ್ಕೆ ಮುಂಗಾರು

ತಿರುವನಂತಪುರಂ: ಈ ಬಾರಿ ಮೇ 26ರಂದು ಕೇರಳಕ್ಕೆ ನೈಋತ್ಯ ಮುಂಗಾರು ಆಗಮನದ ನಿರೀಕ್ಷೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ)ಶುಕ್ರವಾರ ತಿಳಿಸಿದೆ.

ಮುಂದಿನ 24 ಗಂಟೆಗಳೊಳಗೆ ಬಂಗಾಳಕೊಲ್ಲಿಯ ದಕ್ಷಿಣ ಭಾಗಗಳು, ಅಂಡಮಾನ್ ಸಮುದ್ರ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳತ್ತ ಮುಂದುವರಿಯಲು ಪರಿಸ್ಥಿತಿ ಅನುಕೂಲಕರವಾಗಿದೆ ಎಂದೂ ಅದು ಹೇಳಿದೆ. ಬಂಗಾಳಕೊಲ್ಲಿಯ ನೈಋತ್ಯ ಮತ್ತು ಪಶ್ಚಿಮ–ಮಧ್ಯ ಭಾಗಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ವಾಯುಭಾರ ನಿಮ್ನತೆ ಮುಂದುವರಿದಿದೆ. ಇದಕ್ಕೆ ಸಂಬಂಧಿಸಿದ ಚಂಡಮಾರುತದ ಪರಿಚಲನೆಯು ಸಮುದ್ರ ಮಟ್ಟದಿಂದ 5.8 ಕಿಮೀವರೆಗೆ ವಿಸ್ತರಿಸಿದ್ದು, ನೈಋತ್ಯಕ್ಕೆ ವಾಲುತ್ತಿದೆ ಎಂದು ಐಎಂಡಿ ಮಾಹಿತಿ ನೀಡಿದೆ.

ಮಳೆ ಸಂಬಂಧಿ ವಾತಾವರಣ ತೀವ್ರಗೊಳ್ಳುತ್ತಿರುವಂತೆಯೇ, ಇಡುಕ್ಕಿ ಮತ್ತು ಮಲಪ್ಪುರಂ ಜಿಲ್ಲೆಗಳಲ್ಲಿ ಶುಕ್ರವಾರ ಐಎಂಡಿ ಆರೆಂಜ್ ಅಲರ್ಟ್ ಘೋಷಿಸಿದೆ. ➡ಪುಟ ೪



ರಾಜ್ಯದ ಹಲವೆಡೆ 3 ದಿನ ಗುಡುಗು ಸಹಿತ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂದಿನ ಮೂರು ದಿನ ಗುಡುಗು ಮಿಂಚು, ಗಾಳಿ ಸಹಿತ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಸಿದೆ. • ವಿವರ ಪುಟ ೪

ಎಲ್‌ಪಿಜಿ, ರಕ್ಷಣೆ ಸೇರಿ ಹಲವು ಒಪ್ಪಂದಗಳಿಗೆ ಮೋದಿ–ನಹ್ಯಾನ್ ಸಹಿ

ಭಾರತದಲ್ಲಿ ₹48 ಸಾವಿರ ಕೋಟಿ ಹೂಡಿಕೆ

ಅಬುಧಾಬಿ: ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಸಂಘರ್ಷದ ನಡುವೆಯೇ ಭಾರತ ಮತ್ತು ಯುಎಇ ಪೆಟ್ರೋಲಿಯಂ ಸಂಗ್ರಹಣೆ, ದೀರ್ಘಾವಧಿಯ ಎಲ್‌ಪಿಜಿ ಪೂರೈಕೆ, ರಕ್ಷಣಾ ಮತ್ತು ಹಡಗು ಸಾಗಣೆ ಸೇರಿದಂತೆ ಹಲವು ಐತಿಹಾಸಿಕ ಒಪ್ಪಂದಗಳಿಗೆ ಸಹಿ ಹಾಕಿದವು.



ಇದೇ ವೇಳೆ, ಅಬುಧಾಬಿ ಭಾರತದಲ್ಲಿ ಒಟ್ಟು 5 ಬಿಲಿಯನ್ ಡಾಲರ್ (48 ಸಾವಿರ ಕೋಟಿ ರೂ.) ಹೂಡಿಕೆ ಮಾಡುವುದಾಗಿ ಘೋಷಿಸಿತು.

ಪಂಚ ರಾಷ್ಟ್ರಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರನ್ನು ಭೇಟಿಯಾಗಿ ಹಲವು ಒಪ್ಪಂದಗಳಿಗೆ ಸಹಿ ಹಾಕಿದರು. ➡ಪುಟ ೪



ಮೋದಿ ವಿಮಾನಕ್ಕೆ ಎಫ್–16 ಎಸ್ಕಾರ್ಟ್

ಯುಎಇ ಅಧ್ಯಕ್ಷ ನಹ್ಯಾನ್ ಸ್ವತಃ ಅಬುಧಾಬಿ ವಿಮಾನ ನಿಲ್ದಾಣದಲ್ಲಿ ಮೋದಿಯವರನ್ನು ಬರಮಾಡಿಕೊಂಡರು. ವಿಶೇಷ ಗೌರವ ಸೂಚಕವಾಗಿ, ಮೋದಿ ವಿಮಾನಕ್ಕೆ ಯುಎಇಯ ಎಫ್–16 ಸೇನಾ ಯುದ್ಧ ವಿಮಾನಗಳು ಎಸ್ಕಾರ್ಟ್ ನೀಡಿದವು.

ರಕ್ಷಣಾ ಕ್ಷೇತ್ರದಲ್ಲಿ ಸಹಕಾರ

ರಕ್ಷಣಾ ಕೈಗಾರಿಕಾ ಸಹಕಾರ ಕೊಂಡಿಯ ಬಲವರ್ಧನೆ, ಆವಿಷ್ಕಾರ ಮತ್ತು ತಂತ್ರಜ್ಞಾನ ವಿನಿಮಯಗಳಿಗೆ ಒತ್ತು, ರಾಷ್ಟ್ರೀಯ, ವಲಯವಾರು ಭದ್ರತೆ ಬಲಪಡಿಸುವ ಆಶಯದ ನಿರ್ಣಾಯಕ ರಕ್ಷಣಾ ಪಾಲುದಾರಿಕೆ ಒಪ್ಪಂದಕ್ಕೆ ಉಭಯ ನಾಯಕರು ಸಹಿಹಾಕಿದ್ದಾರೆ.

ತೈಲ ಉಳಿಕೆಗೆ ಸುಪ್ರೀಂ ಸಾಥ್

ಹೊಸದಿಲ್ಲಿ: ಮಧ್ಯಪ್ರಾಚ್ಯ ಉದ್ವಿಗ್ನತೆ ಹಿನ್ನೆಲೆ ಉಂಟಾದ ಆರ್ಥಿಕ ಕುಸಿತವನ್ನು ಎದುರಿಸಲು ಇಂಧನ ಉಳಿತಾಯಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಕರೆಗೆ ಓಗೊಟ್ಟ ಸುಪ್ರೀಂ ಕೋರ್ಟ್, ವಾರದಲ್ಲಿ 2 ದಿನ (ಸೋಮವಾರ ಮತ್ತು ಶುಕ್ರವಾರ) ಸಂಪೂರ್ಣ ವರ್ಚುವಲ್ ವಿಚಾರಣೆ ನಡೆಸಲು ನಿರ್ಧರಿಸಿದೆ. ವಾರಕ್ಕೆ ಎರಡು ದಿನ ವರ್ಚುವಲ್ ವಿಚಾರಣೆ ಯಲ್ಲದೆ, ಉಳಿದ ದಿನಗಳಲ್ಲಿ (ಮಂಗಳವಾರದಿಂದ ಗುರುವಾರದವರೆಗೆ) ಹೈಬ್ರಿಡ್ ಮೋಡ್ ವಿಚಾರಣೆ ನಡೆಸುವುದಾಗಿ ನ್ಯಾಯಾಲಯ ಹೇಳಿದೆ. ಪರಿಷ್ಕೃತ ವ್ಯವಸ್ಥೆಯಲ್ಲಿ ಎಲ್ಲಾ ವಿಚಾರಣೆಗಳು, ಸೋಮವಾರ ಮತ್ತು ಶುಕ್ರವಾರ ಆನ್‌ಲೈನ್‌ನಲ್ಲೇ ನಡೆಸಲಾಗುವುದು. ➡ಪುಟ ೪



ವಾರದಲ್ಲಿ ಎರಡು ಬಾರಿ ವರ್ಚುವಲ್ ವಿಚಾರಣೆ

ಎಸ್‌ಐಆರ್‌ಗೆ ಸಿದ್ಧತೆ

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಗೆ ಚುನಾವಣಾ ಆಯೋಗವು ಸಜ್ಜಾಗಿದೆ. ಜೂನ್ 30ರಿಂದ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ಭೇಟಿ ನೀಡುವ ಪ್ರಕ್ರಿಯೆ ಅಧಿಕೃತವಾಗಿ ಆರಂಭವಾಗಲಿದೆ.

ಜೂ.30ಕ್ಕೆ ಮನೆ ಮನೆ ಭೇಟಿ ಪ್ರಕ್ರಿಯೆಗೆ ಚಾಲನೆ



ರಾಜ್ಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಮಾಧ್ಯಮ ಗೋಷ್ಠಿ ನಡೆಸಿದ ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಈ ಕುರಿತು ವಿವರಗಳನ್ನು ನೀಡಿದರು. ಯಾವುದೇ ಅರ್ಹ ಮತದಾರ ಪಟ್ಟಿಯಿಂದ ಹೊರಗುಳಿಯಬಾರದು, ಇದಕ್ಕಾಗಿ ಬಿಎಲ್‌ಒಗಳಿಂದ ಹಿಡಿದು ಜಿಲ್ಲಾಧಿಕಾರಿಗಳವರೆಗೆ ಬೃಹತ್ ಪಡೆ ಕಾರ್ಯ ನಿರ್ವಹಿಸುತ್ತಿದೆ. ಕೇಂದ್ರ ಚುನಾವಣಾ ಆಯೋಗದ ಸೂಚನೆಯಂತೆ ರಾಜ್ಯದಲ್ಲಿ ಎಸ್‌ಐಆರ್‌ಗೆ ತಯಾರಿ ನಡೆಸಲಾಗಿದೆ. ರಾಜ್ಯದಲ್ಲಿ 2026 ಮೇ 12ರಂತೆ 5,55,74,064 ಮತದಾರರು ವಿಶೇಷ ತೀವ್ರ ಪರಿಷ್ಕರಣೆ ಒಳಗೊಂಡಿದ್ದಾರೆ. ಅದರಲ್ಲಿ 4,80,39,560 ಮತದಾರರ ಮ್ಯಾಪಿಂಗ್ ಪೂರ್ಣವಾಗಿದೆ. ಅಂದರೆ ಶೇ.86.46 ರಷ್ಟು ಮ್ಯಾಪಿಂಗ್ ಕಾರ್ಯ ಮುಗಿದಿದೆ. ಉಳಿದ ಮ್ಯಾಪಿಂಗ್ ಕಾರ್ಯ ಶೀಘ್ರ ಪೂರ್ತಿಗೊಳಿಸಲಾಗುವುದು ಎಂದು ಹೇಳಿದರು. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,77,700(2,98,000) ಅಪರಂಜಿ ಚಿನ್ನ 15,950(16,240) ಆಭರಣ ಚಿನ್ನ: 14,675(14,880) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 75,237(160↓) ಎನ್‌ಎಸ್‌ಇ 23,643(46↓)

$1=₹95.71

ಯುಎಇ ಅಧ್ಯಕ್ಷರಿಗೆ ಮೋದಿ ಭರವಸೆ

ಶಾಂತಿ ಸ್ಥಾಪನೆಗೆ ಬೆಂಬಲ ಖಚಿತ





• ಅಬುಧಾಬಿ: ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗಾಗಿ ಸಾಧ್ಯವಾದ ಎಲ್ಲಾ ರೀತಿಯ ಬೆಂಬಲ ನೀಡಲು ಭಾರತ ಸಿದ್ಧವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಯುಎಇ ಅಧ್ಯಕ್ಷ ಶೇಖ್ ಮೊಹಮದ್ ಬಿನ್ ಝಾಯೇದ್‌ರೊಂದಿಗೆ ಮಾತುಕತೆ ವೇಳೆ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಉಭಯ ನಾಯಕರು ಇಂಧನ, ರಕ್ಷಣೆ, ತಂತ್ರಜ್ಞಾನ ಸಹಿತ ಏಳು ರಂಗಗಳಲ್ಲಿ ವ್ಯೂಹಾತ್ಮಕ ಸಹಕಾರ ಕೊಂಡಿಗಳನ್ನು ಮತ್ತಷ್ಟು ಬಲಪಡಿಸಬಲ್ಲ ಒಪ್ಪಂದಗಳಿಗೆ ಸಹಿ ಹಾಕಿದ್ದಾರೆ. ಭಾರತದಲ್ಲಿ ಸುಮಾರು 5 ಶತಕೋಟಿ ಡಾಲರ್ ಭಾರೀ ಹೂಡಿಕೆ ಮಾಡುವುದಾಗಿ ಯುಎಇ ಅಧ್ಯಕ್ಷರು ಘೋಷಿಸಿರುವುದಾಗಿ ಪ್ರಧಾನಿ ಮೋದಿ ಹೇಳಿದ್ದಾರೆ.

ಸನ್ನಿವೇಶ ನಿಭಾಯಿಸಿದ ರೀತಿ ಪ್ರಶಂಸಾರ್ಹ: ಯುಎಇ ಮೇಲಿನ ದಾಳಿಯನ್ನು ನಾವು ಖಂಡಿಸುತ್ತೇವೆ ಎಂದು ಪ್ರಧಾನಿ ಮೋದಿ ಝಾಯೇದ್ ಜತೆ ಮಾತಿಗೆ ಆರಂಭದಲ್ಲೇ ಹೇಳಿದ್ದಾರೆ. ಯುಎಇಯನ್ನು ಟಾರ್ಗೆಟ್ ಮಾಡಿದ ರೀತಿ ಸರಿಯಲ್ಲ. ಆದರೆ ಯುಎಇ ಅತ್ಯಂತ ತಾಳ್ಮೆಯಿಂದ ಪ್ರಸ್ತುತ ಸನ್ನಿವೇಶ ನಿಭಾಯಿಸಿದ್ದು ಪ್ರಶಂಸಾರ್ಹ ಎಂದು ಮೋದಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಾಲ್ಕು ಯುರೋಪಿಯನ್ ರಾಷ್ಟ್ರಗಳು ಸೇರಿದಂತೆ ಪಂಚ ರಾಷ್ಟ್ರಗಳಿಗೆ ತಮ್ಮ ಪ್ರವಾಸದಂಗ ಮೋದಿ, ಮೊದಲಿಗೆ ಶುಕ್ರವಾರ ಯುಎಇಗೆ ಭೇಟಿ ನೀಡಿದ ಕೆಲವೇ ಹೊತ್ತಲ್ಲಿ ಉಭಯ ನಾಯಕರು ಮಾತುಕತೆ ನಡೆಸಿದ್ದಾರೆ. ಯುಎಇಯಲ್ಲಿ ಎರಡೂವರೆ ತಾಸು ಉಳಿದುಕೊಂಡಿದ್ದ ಪ್ರಧಾನಿ ಮೋದಿ ಬಳಿಕ ನೆದರ್‌ಲೆಂಡ್‌ಗೆ ತೆರಳಿದ್ದಾರೆ.

ಶಾಂತಿಗಾಗಿ ಭಾರತದ ಸಂಪೂರ್ಣ ಬೆಂಬಲ: ಪಶ್ಚಿಮ ಏಷ್ಯಾದ ಬಿಕ್ಕಟ್ಟು ಜಾಗತಿಕ ಪರಿಣಾಮ ಬೀರಿದ್ದನ್ನು ಯುಎಇ ಅಧ್ಯಕ್ಷರ ಗಮನಕ್ಕೆ ತಂದ ಪ್ರಧಾನಿ ಮೋದಿ, ಮಧ್ಯಪ್ರಾಚ್ಯದಲ್ಲಿ ಶಾಂತಿ ಸ್ಥಾಪನೆಗೆ ಭಾರತ ತನ್ನಿಂದ ಸಾಧ್ಯವಾದ ಎಲ್ಲಾ ರೀತಿಯ ಬೆಂಬಲ ನೀಡಲು ಸಿದ್ಧವಿದೆ ಎಂದು ಪುನರುಚ್ಚರಿಸಿದರು.

ಯುಎಇ ಭೇಟಿ ವೇಳೆ ಇಂಧನ, ರಕ್ಷಣೆ, ಮೂಲಸೌಕರ್ಯ, ಶಿಪ್ಪಿಂಗ್, ಅತ್ಯಾಧುನಿಕ ತಂತ್ರಜ್ಞಾನದಂತಹ ಪ್ರಮುಖ ರಂಗಗಳಲ್ಲಿ ಮಹತ್ವದ ಒಪ್ಪಂದಗಳೇರ್ಪಟ್ಟಿದ್ದು, ಇದು ಭಾರತ-ಯುಎಇ ನಡುವಣ ಸಮಗ್ರ ವ್ಯೂಹಾತ್ಮಕ ಪಾಲುದಾರಿಕೆಗೆ ಹೊಸ ಪ್ರೇರಣೆ-ವೇಗ ನೀಡಲಿದೆ ಎಂದು ಮೋದಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಇನ್ನೊಂದು ಮಹತ್ವದ ಬೆಳವಣಿಗೆಯಲ್ಲಿ ಭಾರತದಲ್ಲಿ 5 ಶತಕೋಟಿ ಡಾಲರ್ ಹೂಡಿಕೆ ಹೂಡುವುದಾಗಿ ಯುಎಇ ಘೋಷಿಸಿದೆ. ಇದು ಉಭಯ ರಾಷ್ಟ್ರಗಳ ನಡುವಣ ಆರ್ಥಿಕ ಕೊಂಡಿಗಳನ್ನು ಮತ್ತಷ್ಟು ಬಲಪಡಿಸಲಿದೆ ಎಂದು ಮೋದಿ ಭರವಸೆ ವ್ಯಕ್ತಪಡಿಸಿದ್ದಾರೆ.

ಮೋದಿಗೆ ಎಫ್-16 ಯುದ್ಧ ವಿಮಾನದ ಬೆಂಗಾವಲು

ಪ್ರಧಾನಿ ಮೋದಿಗೆ ಯುಎಇ ಕೆಂಪು ಹಾಸಿನೊಂದಿಗೆ ಮತ್ತು ವಾಯುಪಡೆಯ ಎಫ್-16 ಯುದ್ಧ ವಿಮಾನಗಳ ಎಸ್ಕಾರ್ಟ್ ಸ್ವಾಗತವನ್ನು ನೀಡಿದ್ದು, ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ ಯುಎಇ ಅಧ್ಯಕ್ಷ ಅಲ್ ನಹ್ಯಾನ್ ಸ್ನೇಹದ ಅಪ್ಪುಗೆಯೊಂದಿಗೆ ಮೋದಿಯವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಇದಾದ ಬಳಿಕ ಝಾಯೇದ್‌ರೊಂದಿಗೆ ಯುಎಇ ಸೈನಿಕರಿಂದ ಮೋದಿ ಗಾರ್ಡ್ ಆಫ್ ಹಾನರ್ ಸ್ವೀಕರಿಸಿದರು. ಮೋದಿ ತಮ್ಮ ಎಕ್ಸ್ ಪೋಸ್ಟ್ ನಲ್ಲಿ ಯುಎಇ ನೀಡಿದ ಅದ್ಧೂರಿ ಸ್ವಾಗತಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.



ಭಾರತದಲ್ಲಿ ಅತ್ಯಲ್ಪ ಹೆಚ್ಚಳ

ಅಮೆರಿಕ, ಚೀನಾ, ಫ್ರಾನ್ಸ್ ಸೇರಿ 20ಕ್ಕೂ ಹೆಚ್ಚು ದೇಶಗಳಲ್ಲಿ ತೈಲ ಬೆಲೆ ಭಾರೀ ಏರಿಕೆ

ಬೆಲೆ ಏರಿಕೆಗೆ ಕಾರಣವೇನು?

ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷದಿಂದಾಗಿ ಹಾರ್ಮುಜ್ ಜಲಸಂಧಿಯ ಮೂಲಕ ಹಡಗು ಸಂಚಾರಕ್ಕೆ ಅಡ್ಡಿಯಾಗಿದ್ದು ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಈ ಮಾರ್ಗದಲ್ಲಿ ಹಡಗು ಸಂಚಾರದ ವೆಚ್ಚ ಪ್ರತಿ ಪ್ರಯಾಣಕ್ಕೆ 2 ಮಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಅನೇಕ ದೇಶಗಳು ಕೆಲವೇ ದಿನಗಳಲ್ಲಿ ತೈಲ ಬೆಲೆ ಹೆಚ್ಚಿಸಿದರೂ, ಭಾರತ ತಕ್ಷಣವೇ ಬೆಲೆ ಏರಿಕೆ ಮಾಡದೆ ತಾಳ್ಮೆವಹಿಸಿತ್ತು.

ಇರಾನ್ ಯುದ್ಧದಿಂದಾಗಿ ಹಾರ್ಮುಜ್ ಜಲಸಂಧಿಯಲ್ಲಿನ ಸಂಚಾರ ವ್ಯತ್ಯಯದಿಂದ ಕೆಲವು ದೇಶಗಳಲ್ಲಿ ಇಂಧನ ಬೆಲೆ ಶೇ.52ರಷ್ಟು ಏರಿಕೆಯಾಗಿದೆ. ಆದರೆ ಭಾರತದಲ್ಲಿ ಶುಕ್ರವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 3 ರೂ. ಹೆಚ್ಚಿಸಲಾಗಿದೆ. ಇದು ಕಳೆದ ಸುಮಾರು ನಾಲ್ಕು ವರ್ಷಗಳಲ್ಲೇ ನಡೆದ ಮೊದಲ ಬೆಲೆ ಪರಿಷ್ಕರಣೆಯಾಗಿದೆ. ಆದಾಗ್ಯೂ ವಿಶ್ವದ ಪ್ರಮುಖ ಆರ್ಥಿಕತೆ ಹೊಂದಿರುವ ದೇಶಗಳಿಗೆ ಹೋಲಿಸಿದರೆ ಭಾರತದ ಬೆಲೆ ಏರಿಕೆ ಅತ್ಯಂತ ಕನಿಷ್ಠ. ಸಾರ್ವಜನಿಕ ವಲಯದ ತೈಲ ಕಂಪನಿಗಳು ಜಾಗತಿಕ ಬೆಲೆ ಏರಿಕೆಯ ಪೂರ್ಣ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸುವ ಬದಲು ಕಳೆದ 76 ದಿನಗಳಿಂದ ತಾವೇ ನಷ್ಟ ಅನುಭವಿಸಿದ್ದವು. ಈ ಅವಧಿಯಲ್ಲಿ ಕಂಪನಿಗಳ ನಷ್ಟದ ಪ್ರಮಾಣ ಪ್ರತಿದಿನ ಸುಮಾರು 1,000 ಕೋಟಿ ರೂ. ತಲುಪಿತ್ತು.

ವಿದೇಶಿ ವಿನಿಮಯದ ಮೇಲೆ ಒತ್ತಡ

ಸುದ್ದಿ ಸಮಗ್ರ

ಭಾರತ ತನ್ನ ಒಟ್ಟು ಅಗತ್ಯದ ಶೇ.80-85ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಕಚ್ಚಾ ತೈಲ ಬೆಲೆಯಲ್ಲಿ ಪ್ರತಿ 10 ಡಾಲರ್ ಏರಿಕೆಯಾದಾಗಲೂ ದೇಶದ ಆಮದು ವೆಚ್ಚವು 13-14 ಬಿಲಿಯನ್ ಡಾಲರ್ ಹೆಚ್ಚಾಗುತ್ತದೆ. ವಾರ್ಷಿಕ ತೈಲ ಆಮದು ವೆಚ್ಚ 12-15 ಲಕ್ಷ ಕೋಟಿ ರೂ. ಎಂದು ಅಂದಾಜಿಸಲಾಗಿದ್ದು, ಜತೆಗೆ 6 ಲಕ್ಷ ಕೋಟಿ ರೂ. ಮೌಲ್ಯದ ಚಿನ್ನದ ಆಮದು ವಿದೇಶಿ ವಿನಿಮಯದ ಮೇಲೆ ಭಾರಿ ಒತ್ತಡ ಹೇರುತ್ತಿದೆ. ಗ್ರಾಹಕರ ಹಿತದೃಷ್ಟಿಯಿಂದ ಸರ್ಕಾರ ಈಗಾಗಲೇ ಪೆಟ್ರೋಲ್ ಮೇಲೆ 8 ರೂ. ಮತ್ತು ಡೀಸೆಲ್ ಮೇಲೆ 6 ರೂ. ಅಬಕಾರಿ ಸುಂಕ ಕಡಿತಗೊಳಿಸಿತ್ತು. ಮೇ 15ರ ವೇಳೆಗೆ ತೈಲ ಕಂಪನಿಗಳು ಪೆಟ್ರೋಲ್ ಮೇಲೆ ಪ್ರತಿ ಲೀಟರ್‌ಗೆ 26 ರೂ. ಹಾಗೂ ಡೀಸೆಲ್ ಮೇಲೆ ಸುಮಾರು 82 ರೂ. ನಷ್ಟ ಅನುಭವಿಸುತ್ತಿದ್ದವು.

ತೈಲ ಬೆಲೆ ಏರಿಕೆ ಅತ್ಯಲ್ಪ

ಮಧ್ಯಪ್ರಾಚ್ಯ ಬಿಕ್ಕಟ್ಟಿನ ಪರಿಣಾಮವಾಗಿ ಜಾಗತಿಕ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ತೀವ್ರ ಅಸ್ಥಿರತೆ ಉಂಟಾಗಿದ್ದು, ಜಗತ್ತಿನ ಬಹುತೇಕ ದೇಶಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರಗಳು ತೀವ್ರವಾಗಿ ಏರಿಕೆಯಾಗಿದ್ದು, ಭಾರತದಲ್ಲಿ 2022ರಿಂದ ಬಹುತೇಕ ಸ್ಥಿರವಾಗಿದ್ದ ಇಂಧನ ಬೆಲೆಯನ್ನು 4 ವರ್ಷಗಳ ಬಳಿಕ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ತಲಾ 3 ರೂ.ಗಳಷ್ಟು ಹೆಚ್ಚಿಸಲಾಗಿದೆ. ಜಾಗತಿಕ ತೈಲ ಪೂರೈಕೆ ವ್ಯವಸ್ಥೆಯಲ್ಲಿ ಅಸ್ತವ್ಯಸ್ತತೆ ಉಂಟಾಗಿರುವ ಹಿನ್ನೆಲೆಯಲ್ಲಿ ಭಾರತದಲ್ಲಿನ ಇಂಧನ ದರದಲ್ಲಿ ಮಾಡಲಾದ ಈ ಏರಿಕೆಯನ್ನು ಕೇಂದ್ರ ಸರ್ಕಾರ ಬಲವಾಗಿ ಸಮರ್ಥಿಸಿಕೊಂಡಿದೆ.

ಗ್ರಾಹಕರು ಮತ್ತು ಆರ್ಥಿಕತೆಯ ಮೇಲೆ ಪ್ರಭಾವ

ಜಾಗತಿಕ ದರಗಳನ್ನು ನೇರವಾಗಿ ಅನ್ವಯಿಸಿದ್ದರೆ ಭಾರತದಲ್ಲಿ ಇಂಧನ ಬೆಲೆಗಳು ಶೇ. 200-300ರಷ್ಟು ಹೆಚ್ಚಾಗಬೇಕಿತ್ತು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಭಾರತದಲ್ಲಿ ರೈತರು ನೀರಾವರಿ ಪಂಪ್‌ಗಳಿಗೆ, ಸಾರಿಗೆ ಸಂಸ್ಥೆಗಳು ಸರಕು ಸಾಗಣೆಗೆ ಮತ್ತು ಆಟೋ ಚಾಲಕರು ಜೀವನೋಪಾಯಕ್ಕೆ ಡೀಸೆಲ್ ಮೇಲೆ ಅವಲಂಬಿತರಾಗಿದ್ದಾರೆ. ಭಾರೀ ಬೆಲೆ ಏರಿಕೆ, ಶೇ.20ರಷ್ಟು ಕೆಳವರ್ಗದ ಜನರ ಮೇಲೆ ತೀವ್ರ ಪರಿಣಾಮ ಬೀರಬಹುದೆಂಬ ಕಾರಣಕ್ಕೆ ಸರ್ಕಾರ ಅತ್ಯಲ್ಪ ಏರಿಕೆ ಮಾಡಿದೆ. ಪ್ರಸ್ತುತ 3 ರೂ. ಏರಿಕೆಯು ಮೂಲ ಬೆಲೆಯ ಮೇಲೆ ಶೇ.3 ರಿಂದ 3.5 ರಷ್ಟು ಮಾತ್ರ ಹೆಚ್ಚಳವಾಗಿದೆ.

ಸರ್ಕಾರದ ಪ್ರತಿಕ್ರಿಯೆ, ಮುನ್ನೆಚ್ಚರಿಕೆ

ಜಾಗತಿಕ ಬಿಕ್ಕಟ್ಟಿನ ನಡುವೆಯೂ ಭಾರತದ ಚಾಲ್ತಿ ಖಾತೆ ಕೊರತೆ ಶೇ.1.5 ಕ್ಕಿಂತ ಕಡಿಮೆ ಇದೆ. ಸುಮಾರು 82 ದೇಶಗಳು ಇಂಧನ ರೇಷನಿಂಗ್ ಅಥವಾ ಭಾರೀ ಬೆಲೆ ಏರಿಕೆ ಜಾರಿಗೆ ತಂದಿದ್ದರೂ, ಭಾರತ ಅಂತಹ ಯಾವುದೇ ಕಠಿಣ ಕ್ರಮ ಕೈಗೊಂಡಿಲ್ಲ. ಬದಲಾಗಿ, ನಾಗರಿಕರು ಸ್ವಯಂಪ್ರೇರಿತವಾಗಿ ಇಂಧನ ಬಳಕೆ ಕಡಿಮೆ ಮಾಡಲು ಮತ್ತು ಚಿನ್ನದ ಖರೀದಿ ಹಾಗೂ ಅನಗತ್ಯ ವಿದೇಶಿ ಪ್ರವಾಸಗಳನ್ನು ನಿಯಂತ್ರಿಸಲು ಸರ್ಕಾರ ಮನವಿ ಮಾಡಿದೆ. ಹಾಗೆಯೇ, ರೈತರಿಗೆ ನೆರವಾಗಲು 2.25 ಲಕ್ಷ ಕೋಟಿ ರೂ. ಗೊಬ್ಬರ ಸಬ್ಸಿಡಿ ನೀಡಲಾಗುತ್ತಿದ್ದು, ಇದರಿಂದ 2,200 ರೂ. ಮೌಲ್ಯದ ಗೊಬ್ಬರದ ಚೀಲ ಕೇವಲ 242 ರೂ.ಗೆ ದೊರೆಯುತ್ತಿದೆ.



ತೈಲ ಕಂಪನಿಗಳ ಮೌನ ನಷ್ಟ

ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಸಂಸ್ಥೆಗಳು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ದರಕ್ಕೆ ತೈಲ ಖರೀದಿಸಿ, ದೇಶೀಯವಾಗಿ ಕಡಿಮೆ ದರಕ್ಕೆ ಮಾರಾಟ ಮಾಡುತ್ತಿವೆ. ಇವುಗಳ ಒಟ್ಟು ದೈನಂದಿನ ನಷ್ಟ 2,400 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಸರ್ಕಾರ ಅಬಕಾರಿ ಸುಂಕ ಕಡಿತಗೊಳಿಸಿದರೂ ಕಂಪನಿಗಳ ಮೇಲಿನ ನಷ್ಟದ ಹೊರೆ ಇನ್ನೂ ಮುಂದುವರಿದಿದೆ.



ವಿವಿಧ ದೇಶಗಳಲ್ಲಿ ತೈಲ ಬೆಲೆ ಹೆಚ್ಚಳ ಪಟ್ಟಿ

ದೇಶ	ಪೆಟ್ರೋಲ್ ಬೆಲೆ	ಡೀಸೆಲ್ ಬೆಲೆ
ಮ್ಯಾನ್ಮಾರ್	ಶೇ.89.7	ಶೇ.112.7
ಮಲೇಶ್ಯಾ	ಶೇ.56.3	ಶೇ.71.2
ಪಾಕಿಸ್ತಾನ	ಶೇ.54.9	ಶೇ.44.9
ಯುಎಇ	ಶೇ.52.4	ಶೇ.86.1
ಅಮೆರಿಕ	ಶೇ.44.5	ಶೇ.48.1
ಶ್ರೀಲಂಕಾ	ಶೇ.38.2	ಶೇ.41.8
ನೇಪಾಳ	ಶೇ.38.2	ಶೇ.58.5
ನ್ಯೂಜಿಲ್ಯಾಂಡ್	ಶೇ.30.7	ಶೇ.88.6
ಚೀನಾ	ಶೇ.21.7	ಶೇ.23.7
ಫ್ರಾನ್ಸ್	ಶೇ.20.9	ಶೇ.31.0
ಬ್ರಿಟನ್	ಶೇ.19.2	ಶೇ.34.2
ದಕ್ಷಿಣ ಕೊರಿಯಾ	ಶೇ.19.0	ಶೇ.26.2
ಆಸ್ಟ್ರೇಲಿಯಾ	ಶೇ.18.5	ಶೇ.43.1
ಬಾಂಗ್ಲಾ ದೇಶ	ಶೇ.16.7	ಶೇ.15.0
ಸಿಂಗಾಪುರ	ಶೇ.12.7	ಶೇ.64.7
ಜಪಾನ್	ಶೇ.9.7	ಶೇ.11.2
ದುಬೈ	ಶೇ.7.9	ಶೇ.8.7
ಭಾರತ	ಶೇ.3.2	ಶೇ.3.7

ಬೆಲೆ ಸ್ಥಿರತೆಯ ಉದ್ದೇಶ

ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ತಡೆಯಲು ಸರ್ಕಾರ ಇಂಧನ ದರವನ್ನು ಸ್ಥಿರವಾಗಿಟ್ಟಿತ್ತು. ಆಹಾರ ಪದಾರ್ಥಗಳ ಸಾಗಣೆ ವೆಚ್ಚ ಡೀಸೆಲ್ ದರವನ್ನು ಅವಲಂಬಿಸಿರುವುದರಿಂದ, ಬೆಲೆ ಏರಿಕೆ ಎಲ್ಲ ವಸ್ತುಗಳ ದರ ಹೆಚ್ಚಳಕ್ಕೆ ಕಾರಣವಾಗುತ್ತಿತ್ತು. ಮೇ 15ರ ಪರಿಷ್ಕರಣೆಗೂ ಮುನ್ನ ದೆಹಲಿಯಲ್ಲಿ ಪೆಟ್ರೋಲ್ 94.72 ರೂ. ಮತ್ತು ಡೀಸೆಲ್ 87.62 ರೂ. ಇತ್ತು.

ಕಿರುಸುದ್ದಿ

ಅರಾವಳಿ ಗಣಿಗಾರಿಕೆಗೆ ಸದ್ಯ ಅನುಮತಿಯಿಲ್ಲ

• ಹೊಸದಿಲ್ಲಿ: ಅರಾವಳಿ ಪರ್ವತ ಶ್ರೇಣಿಗಳಲ್ಲಿ ನಡೆಯುತ್ತಿರುವ ಗಣಿಗಾರಿಕೆಯ ಕುರಿತು ಆತಂಕಕಾರಿ ವರದಿಗಳು ಬರುತ್ತಿರುವ ಹಿನ್ನೆಲೆಯಲ್ಲಿ, ಗಣಿ ಗುತ್ತಿಗೆದಾರರ ಪರವಾಗಿ ಯಾವುದೇ ಆದೇಶ ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ. ಪರಿಸರ ನಾಶದ ಆತಂಕಗಳನ್ನು ಪೂರ್ಣವಾಗಿ ಪರಿಹರಿಸುವವರೆಗೆ ಯಾವುದೇ ಚಟುವಟಿಕೆಗೆ ಅವಕಾಶ ನೀಡುವುದಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ ಮಾಲ್ಯ ಬಾಗ್ಚಿ ಅವರ ಪೀಠ ತಿಳಿಸಿದೆ. ದಿಲ್ಲಿ, ಹರ್ಯಾಣ, ರಾಜಸ್ಥಾನ ಮತ್ತು ಗುಜರಾತ್ ವ್ಯಾಪ್ತಿಯ ಅರಾವಳಿ ಪ್ರದೇಶದಲ್ಲಿ ಹೊಸ ಗಣಿಗಾರಿಕೆ ಗುತ್ತಿಗೆ ನೀಡಿಕೆಯನ್ನು ನ್ಯಾಯಾಲಯ 2025 ನವೆಂಬರ್ 20ರಂದು ನಿಷೇಧಿಸಿತ್ತು. ಅರಾವಳಿ ಬೆಟ್ಟಗಳ ಅಧಿಕೃತ ವ್ಯಾಖ್ಯಾನ ಮತ್ತು ಪರಿಸರ ರಕ್ಷಣೆಯ ಕುರಿತಾದ ಅಸ್ಪಷ್ಟತೆಗಳನ್ನು ಬಗೆಹರಿಸಲು ತಜ್ಞರ ಸಮಿತಿಯನ್ನು ರಚಿಸುವಂತೆ ಈ ಹಿಂದೆ ಸೂಚಿಸಲಾಗಿತ್ತು.

ಕೋಲ್ಕತ್ತಾ ಡಿಸಿಪಿ ಶಾಂತನು ಸಿನ್ಹಾರನ್ನು ಬಂಧಿಸಿದ ಇಡಿ

• ಕೋಲ್ಕತ್ತಾ: ಸುಲಿಗೆ ಜಾಲ ನಡೆಸುತ್ತಿದ್ದ ಆರೋಪದ ಮೇಲೆ ಕೋಲ್ಕತ್ತಾ ಪೊಲೀಸ್ ಉಪ ಆಯುಕ್ತ ಶಾಂತನು ಸಿನ್ಹಾ ಬಿಸ್ವಾಸ್ ಅವರನ್ನು ಜಾರಿ ನಿರ್ದೇಶನಾಲಯ (ಇಡಿ) ಬಂಧಿಸಿದೆ. ಸಿಜಿಒ ಸಂಕೀರ್ಣದಲ್ಲಿ ಹತ್ತು ಗಂಟೆಗಳ ಸುದೀರ್ಘ ವಿಚಾರಣೆಯ ನಂತರ ಅವರನ್ನು ಬಂಧಿಸಲಾಯಿತು. ವಿಶ್ವಜಿತ್ ಪೋದ್ದಾರ್ ಅಲಿಯಾಸ್ ಸೋನಾ ಪಪ್ಪು ನಡೆಸುತ್ತಿದ್ದ ಕ್ರಿಮಿನಲ್ ಜಾಲಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಿಸ್ವಾಸ್ ಅವರನ್ನು ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಉದ್ಯಮಿ ಜಾಯ್ ಕಮ್ದಾರ್ ಮತ್ತು ಪೋದ್ದಾರ್ ಅವರೊಂದಿಗೆ ಅವರು ಹಣಕಾಸಿನ ವಹಿವಾಟು ನಡೆಸಿರುವುದನ್ನು ತನಿಖಾಧಿಕಾರಿಗಳು ಪತ್ತೆಹಚ್ಚಿದ್ದಾರೆ.

ನೀಟ್-ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ: ಕಿಂಗ್ ಪಿನ್ ಸೆರೆ

• ಪುಣೆ: ನೀಟ್-ಯುಜಿ 2026 ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದ ಕಿಂಗ್ ಪಿನ್ ಪಿವಿ ಕುಲಕರ್ಣಿ ಅನ್ನು ಸಿಬಿಐ ಸಿಬ್ಬಂದಿ ಶುಕ್ರವಾರ ಬಂಧಿಸಿದ್ದಾರೆ. ಪುಣೆ ಮೂಲದ ನಿವೃತ್ತ ರಸಾಯನಶಾಸ್ತ್ರ ಉಪನ್ಯಾಸಕ ಪಿವಿ ಕುಲಕರ್ಣಿ ನೀಟ್ ಹಗರಣದ ಕಿಂಗ್ ಪಿನ್ ಎಂದು ಸಿಬಿಐ ತನಿಖೆಯಲ್ಲಿ ತಿಳಿದುಬಂದಿದೆ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ವೈದ್ಯಕೀಯ ಪ್ರವೇಶಾತಿ ಪರೀಕ್ಷೆಯೊಂದನ್ನು ರದ್ದುಗೊಳಿಸಲಾಗಿತ್ತು.

ಕ್ಯೂಬಾದಲ್ಲಿ ಇಂಧನ ಕೊರತೆ, ಪ್ರತಿಭಟನೆ


• ಹವಾನಾ: ಅಮೆರಿಕ ಹೇರಿದ ಕಠಿಣ ಆರ್ಥಿಕ ಮತ್ತು ವ್ಯಾಪಾರ ನಿರ್ಬಂಧಗಳಿಂದ (ಬ್ಲಾಕೇಡ್) ಕ್ಯೂಬಾಗೆ ಇತರ ರಾಷ್ಟ್ರಗಳಿಂದ ತೈಲ ಖರೀದಿಸುವುದು ಕಷ್ಟವಾಗಿದೆ. ಈ ಕಾರಣದಿಂದ ಕ್ಯೂಬಾ ದೊಡ್ಡ ಮಟ್ಟದ ಇಂಧನ ಕೊರತೆಯನ್ನು ಎದುರಿಸುತ್ತಿದ್ದು, ರಾಜಧಾನಿ ಹವಾನಾದಲ್ಲಿ ಭಾರೀ ಪ್ರತಿಭಟನೆಗಳು ನಡೆದಿವೆ. ಅಮೆರಿಕ ಹೇರಿದ ಆರ್ಥಿಕ ಮತ್ತು ವ್ಯಾಪಾರ ನಿರ್ಬಂಧಗಳೇ ಪ್ರಮುಖವಾಗಿ ತೈಲ ಕೊರತೆಗೆ ಕಾರಣವೆಂದು ಕ್ಯೂಬಾ ಅಧಿಕಾರಿಗಳು ಆರೋಪಿಸಿದ್ದಾರೆ. ಇದರಿಂದಾಗಿ ಕ್ಯೂಬಾದಲ್ಲಿ ಸತತ 22 ಗಂಟೆ ವಿದ್ಯುತ್ ಕಡಿತ(ಬ್ಲ್ಯಾಕ್‌ಔಟ್) ಮಾಡಲಾಗಿದ್ದು, ಜನ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ಅಮೆರಿಕ ನೆರವಿನ ಭರವಸೆ: ಸಿಐಎ ಮುಖ್ಯಸ್ಥ ಜಾನ್ ರ್‍ಯಾಟ್‌ಕ್ಲಿಫ್ ಹವಾನಾಗೆ ಭೇಟಿ ನೀಡಿದ್ದು, ಕ್ಯೂಬಾ ಭದ್ರತಾ ಅಧಿಕಾರಿ ರಾಲ್ ಕ್ಯಾಸ್ಟ್ರೋ ಮೊಮ್ಮಗ ರಾಲ್ ರಾಡ್ರಿಗಸ್ ಕ್ಯಾಸ್ಟ್ರೋನೊಂದಿಗೆ ಮಾತುಕತೆ ನಡೆಸಿದ್ದಾರೆ. 100 ದಶಲಕ್ಷ ಡಾಲರ್ ಮಾನವೀಯ ನೆರವಿನ ಭರವಸೆ ನೀಡಿದ್ದಾರೆ.

ಕ್ಯಾಸ್ಟ್ರೋ ವಿರುದ್ಧ ದೋಷಾರೋಪ: ಇದೇ ವೇಳೆ 1996ರ ಅಮೆರಿಕದ ಅವಳಿ ವಿಮಾನ ಧ್ವಂಸ ಪ್ರಕರಣದಲ್ಲಿ ಫಿಡೆಲ್ ಕ್ಯಾಸ್ಟ್ರೋ ಸಹೋದರ 94 ವರ್ಷದ ರಾಲ್ ಕ್ಯಾಸ್ಟ್ರೋ ವಿರುದ್ಧ 30 ವರ್ಷಗಳ ಬಳಿಕ ಅಮೆರಿಕ ಸರ್ಕಾರ ದೋಷಾರೋಪವನ್ನು ಹೊರಿಸಿದೆ.

ಕೇರಳ: ಮೇ18ಕ್ಕೆ ಹೊಸ ಸರಕಾರ ರಚನೆಗೆ ವಿ.ಡಿ.ಸತೀಶನ್ ಸಿದ್ಧತೆ, ನಾಯಕರ ಭೇಟಿ

• ತಿರುವನಂತಪುರಂ: ಕೇರಳದಲ್ಲಿ ನಿಯೋಜಿತ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಮೇ18ರಂದು ನೂತನ ಸರಕಾರ ರಚನೆಗೆ ಭರದ ಸಿದ್ಧತೆಗಳನ್ನು ನಡೆಸುತ್ತಿದ್ದು, ಶುಕ್ರವಾರ ಮಾಜಿ ಮುಖ್ಯಮಂತ್ರಿ , ಎಲ್‌ಡಿಎಫ್ ನಾಯಕ ಪಿಣರಾಯಿ ವಿಜಯನ್ , ಹಿರಿಯ ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತ್ತಲ ಸೇರಿದಂತೆ ವಿವಿಧ ನಾಯಕರನ್ನು ಭೇಟಿ ಮಾಡಿದರು. ನೂತನ ಯುಡಿಎಫ್ ಸರಕಾರದಲ್ಲಿ ಕಾಂಗ್ರೆಸಿಗೆ 11ಖಾತೆಗಳು ಲಭಿಸುವ ನಿರೀಕ್ಷೆಯಿದೆ.



ಶುಕ್ರವಾರ ಅಪರಾಹ್ನ ಬೇಕರಿ ಜಂಕ್ಷನ್‌ನಲ್ಲಿರುವ ಪಿಣರಾಯಿ ವಿಜಯನ್ ಅವರ ನಿವಾಸಕ್ಕೆ ಭೇಟಿ ನೀಡಿದ ವಿ.ಡಿ.ಸತೀಶನ್ ಅವರು ಅವರೊಂದಿಗೆ ಮಾತುಕತೆನಡೆಸಿದರು.ಪಿಣರಾಯಿವಿಜಯನ್ ಮತ್ತು ಕುಟುಂಬ ಸತೀಶನ್ ಅವರನ್ನು ಬರಮಾಡಿಕೊಂಡರು. ಬಳಿಕ ಮಾತನಾಡಿದ ಅವರು, ಹೊಸ ಸರಕಾರ ಹಿಂದಿನ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗಲಿದೆ ಎಂದರು. ವಿವಿಧ ವಿಷಯಗಳಲ್ಲಿ ಪಿಣರಾಯಿ ವಿಜಯನ್ ಅವರ ಸಹಕಾರ ಕೋರಿದರು.

ರಾಜಕೀಯ ಅಭಿಪ್ರಾಯ ವ್ಯತ್ಯಾಸಗಳು ಇರಬಹುದು.ಆದರೆ ಪ್ರಮುಖ ವಿಷಯಗಳಲ್ಲಿ ನಾವು ಒಂದಾಗಿ ನಿಲ್ಲಬೇಕಿದೆ ಎಂದು ಸತೀಶನ್ ನುಡಿದರು. ಕೇರಳ ರಾಜಕೀಯದಲ್ಲಿ ಪಾತ್ರಗಳೀಗ ತಿರುವು ಮುರುವಾಗಿದ್ದು, ಪಿಣರಾಯಿ ವಿಜಯನ್ ಅವರು ಕೇರಳ ವಿಧಾನಸಭೆಯ ವಿಪಕ್ಷ ನಾಯಕರಾಗಲು ಸಜ್ಜಾಗಿದ್ದು, ವಿಪಕ್ಷ ನಾಯಕನಾಗಿದ್ದ ವಿ.ಡಿ.ಸತೀಶನ್ ಮುಖ್ಯಮಂತ್ರಿ ಸ್ಥಾನಕ್ಕೇರಲು ಸಿದ್ಧರಾಗುತ್ತಿದ್ದಾರೆ.

ಇದಕ್ಕೂ ಮುನ್ನ , ಸತೀಶನ್ ಅವರು ಗುರುವಾರ ನಿಯೋಗದೊಂದಿಗೆ ರಾಜ್ಯಪಾಲ ವಿಶ್ವನಾಥ್ ಆರ್ಲೇಕರ್ ಅವರನ್ನು ಭೇಟಿ ಮಾಡಿ ಸರಕಾರ ರಚನೆಗೆ ಹಕ್ಕು ಮಂಡಿಸಿದ್ದರು. ಮೇ 18ರಂದು ಬೆಳಗ್ಗೆ 10ಗಂಟೆಗೆ ಸೆಂಟ್ರಲ್ ಸ್ಟೇಡಿಯಂನಲ್ಲಿ ಸತೀಶನ್ ಅವರು ಕೇರಳದ 16ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಸತೀಶನ್ ಅವರು ಹಿರಿಯ ಕಾಂಗ್ರೆಸ್ ನಾಯಕರಾಗಿದ್ದ ದಿ.ಜಿ.ಕಾರ್ತಿಕೇಯನ್ ಅವರ ನಿವಾಸಕ್ಕೂ ಭೇಟಿ ನೀಡಿ ಅವರ ಪತ್ನಿ, ಪುತ್ರ ಕಾಂಗ್ರೆಸ್ ನಾಯಕ ಕೆ.ಶಬರೀನಾಥನ್ ಅವರನ್ನು ಭೇಟಿ ಮಾಡಿದರು. ಕಾರ್ತಿಕೇಯನ್ ಅವರು ಸತೀಶನ್ ಅವರ ರಾಜಕೀಯ ಪಯಣದ ಆರಂಭಿಕ ದಿನಗಳಲ್ಲಿ ಬೆಂಬಲ ನೀಡಿದವರಾಗಿದ್ದು, ಅದನ್ನು ನೆನಪಿನಲ್ಲಿಟ್ಟುಕೊಂಡು ಸತೀಶನ್ ಅವರ ನಿವಾಸಕ್ಕೆ ಭೇಟಿ ನೀಡಿದ್ದಾರೆ.ಯುಡಿಎಫ್ ಸಂಚಾಲಕ ಅಡೂರ್ ಪ್ರಕಾಶ್ ಅವರ ನಿವಾಸಕ್ಕೂ ಭೇಟಿ ನೀಡಿದರು.

ರಮೇಶ್ ಚೆನ್ನಿತ್ತಲ ಅಸಮಾಧಾನ?

ಈ ನಡುವೆ ,ಅತ್ಯಂತ ಹಿರಿಯ ನಾಯಕನಾಗಿದ್ದು, ಕೇರಳ ಮುಖ್ಯಮಂತ್ರಿ ಸ್ಥಾನಕ್ಕೆ ಏರಲು ತಮಗಿರುವ ಕೊನೆಯ ಅವಕಾಶ ಇದು ಎಂದು ಹೈಕಮಾಂಡಿಗೆ ಮನವರಿಕೆ ಮಾಡಿಕೊಟ್ಟಿದ್ದರೂ, ತಮಗೆ ಅವಕಾಶ ನೀಡದೆ ಇದ್ದುದಕ್ಕೆ ಹಿರಿಯ ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತ್ತಲ ಅವರು ಅಸಮಾಧಾನಗೊಂಡಿದ್ದಾರೆನ್ನಲಾಗಿದೆ. ಆದರೆ ಈ ಬಗ್ಗೆ ಸತೀಶನ್ ಅವರನ್ನು ಪತ್ರಕರ್ತರು ಪ್ರಶ್ನಿಸಿದಾಗ "ಅಂತಹ ಯಾವುದೇ ಸಮಸ್ಯೆ ಇಲ್ಲ.ನಾನು ಅವರನ್ನೂ ಭೇಟಿ ಮಾಡಲಿದ್ದೇನೆ "ಎಂಬುದಾಗಿ ತಿಳಿಸಿದರು.

ಮುಖ್ಯಮಂತ್ರಿ ಸ್ಥಾನಕ್ಕೆ ರಮೇಶ್ ಚೆನ್ನಿತ್ತಲ, ಗಾಂಧಿ ಕುಟುಂಬದ ನಿಕಟವರ್ತಿ ಕೆ.ಸಿ.ವೇಣುಗೋಪಾಲ್ ಮತ್ತು ಸತೀಶನ್ ನಡುವೆ ಪೈಪೋಟಿ ಇದ್ದು, ಕೊನೆಗಳಿಗೆಯಲ್ಲಿ ವೇಣುಗೋಪಾಲ್ ಮತ್ತು ಸತೀಶನ್ ಅವರ ನಡುವೆ ತೀವ್ರ ಪೈಪೋಟಿ ನಡೆದಿತ್ತು.11ದಿನಗಳ ತೀವ್ರ ಹಗ್ಗಜಗ್ಗಾಟದ ಬಳಿಕ ಅಂತಿಮವಾಗಿ ಹೈಕಮಾಂಡ್ ಸತೀಶನ್ ಅವರಿಗೆ ಮಣೆ ಹಾಕಬೇಕಾಗಿ ಬಂದಿದ್ದನ್ನು ಇಲ್ಲಿ ಸ್ಮರಿಸಬಹುದು. ಶುಕ್ರವಾರ ಸಂಜೆ ಸಚಿವ ಖಾತೆಗಳ ಹಂಚಿಕೆಗೆ ಸಂಬಂಧಿಸಿ ಕಾಂಗ್ರೆಸ್ ಶಾಸಕಾಂಗ ಸಭೆ ನಡೆದಿದೆ.11ಖಾತೆಗಳು ಕಾಂಗ್ರೆಸಿಗೆ ಮತ್ತು 5 ಮುಸ್ಲಿಂಲೀಗಿಗೆ, 2 ಕೇರಳ ಕಾಂಗ್ರೆಸಿಗೆ, 1 ಆರ್‌ಎಸ್‌ಪಿ ಸೇರಿದಂತೆ ಉಳಿದ ಖಾತೆಗಳನ್ನು ಮಿತ್ರಪಕ್ಷಗಳಿಗೆ ಹಂಚಿಕೆ ಮಾಡಲಾಗುವುದು ಎಂದು ಅವರು ಸುಳಿವು ನೀಡಿದರು.

ಬಿಗಿಮುಖದ ವೇಣುಗೋಪಾಲ್ !

ತಿರುವನಂತಪುರಂ ವಿಮಾನ ನಿಲ್ದಾಣದಲ್ಲಿ ಕೆ.ಸಿ.ವೇಣುಗೋಪಾಲ್ ಬಂದಿಳಿದಾಗ ಸುತ್ತುವರಿದ ಪತ್ರಕರ್ತರ ಜೊತೆಗೆ ಬಿಗಿತನದಿಂದಲೇ ಪ್ರತಿಕ್ರಿಯಿಸಿದ್ದು ಮುಖ್ಯಮಂತ್ರಿ ಸ್ಥಾನ ವಂಚಿತರಾದ ಆಘಾತದಿಂದ ಅವರಿನ್ನೂ ಹೊರಬಂದಿಲ್ಲ ಎಂಬುದನ್ನು ಸಾರುವಂತಿತ್ತು

ಏನಾಸಂನಿಂದ ಎಲ್ಲರಿಗೂ ಸಮಾನ ಹಕ್ಕು

• ಗುವಾಹಟಿ: ಪ್ರಸ್ತಾವಿತ ಸಮಾನ ನಾಗರಿಕ ಸಂಹಿತೆ (ಏನಾಸಂ)ಯಲ್ಲಿ ನಾಡಿನ ಕಾನೂನು ಎಲ್ಲಾ ಜನರಿಗೆ ಸಮಾನವಾಗಿ ಅನ್ವಯಿಸಲಿದೆ. ಎಲ್ಲರಿಗೂ, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳಿಗೆ ನ್ಯಾಯೋಚಿತ ಹಕ್ಕುಗಳು ಲಭಿಸಲಿವೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ. ಬುಡಕಟ್ಟು ಸಮುದಾಯ ಅಥವಾ ಅಸ್ಸಾಂನ ಜನಜಾತೀಯ ಸಮಾಜದ ಸಂಪ್ರದಾಯ, ರೀತಿರಿವಾಜುಗಳ ಸಂರಕ್ಷಣೆ ದೃಷ್ಟಿಯಿಂದ ಈ ಸಮುದಾಯವನ್ನು ಸಮಾನ ನಾಗರಿಕ ಸಂಹಿತೆ (ಏನಾಸಂ) ವ್ಯಾಪ್ತಿಯಿಂದ ಹೊರಗಿಡಲಾಗುವುದು ಎಂದು ಸಿಎಂ ಶರ್ಮಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಪ್ರಸ್ತಾವಿತ ಯುಸಿಸಿ ಧ್ಯೇಯೋದ್ದೇಶಗಳಿಗೆ ಸಂಬಂಧಿಸಿ ಸಾಮಾಜಿಕ ಜಾಲತಾಣದಲ್ಲಿ ಎರಡು ಸ್ಲೈಡ್‌ಗಳನ್ನು ಶೇರ್ ಮಾಡಿರುವ ಸಿಎಂ ಶರ್ಮಾ, ಒಂದು ರಾಜ್ಯಕ್ಕೆ ಒಂದೇ ಕಾನೂನು ಯುಸಿಸಿ ಆಶಯವಾಗಿದೆ.

ಭಾರತಕ್ಕಿದೆ ರಾಜತಾಂತ್ರಿಕ ಅನುಭವ: ಸೆರ್ಗೆ ಲಾವ್ರೊವ್

ಭಾರತದ ಮಧ್ಯಸ್ಥಿಕೆಗೆ ಬೆಂಬಲ

• ಹೊಸದಿಲ್ಲಿ: ಇರಾನ್ ಮತ್ತು ಅಮೆರಿಕವನ್ನು ಒಳಗೊಂಡ ಸಂಘರ್ಷದಲ್ಲಿ ಭಾರತ ದೀರ್ಘಾವಧಿ ಸಂಭಾವ್ಯ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಬಹುದು ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಶುಕ್ರವಾರ ಆಶಯ ವ್ಯಕ್ತಪಡಿಸಿದ್ದಾರೆ.



ಬ್ರಿಕ್ಸ್ ವಿದೇಶಾಂಗ ಮಂತ್ರಿಗಳ ಸಭೆ ನಂತರ ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಲಾವ್ರೊವ್, ಭಾರತದ ವಿಶಾಲವಾದ ರಾಜತಾಂತ್ರಿಕ ಅನುಭವ ಮತ್ತು ಅಂತಾರಾಷ್ಟ್ರೀಯ ನಿಲುವನ್ನು ಉಲ್ಲೇಖಿಸಿದ್ದಾರೆ. ಆದರೆ ದೀರ್ಘಾವಧಿ ಪ್ರಾದೇಶಿಕ ಸ್ಥಿರತೆಯನ್ನು ಖಾತ್ರಿಪಡಿಸುವಲ್ಲಿ ಭಾರತವು ವಿಶಾಲವಾದ ರಾಜತಾಂತ್ರಿಕ ಪಾತ್ರ ವಹಿಸಬಹುದು ಎಂದು ಸೂಚಿಸಿದರು. ತುರ್ತು ಸಮಸ್ಯೆಗಳನ್ನು ಪರಿಹರಿಸಲು ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆಗಳನ್ನು ನಡೆಸಲು ಪಾಕಿಸ್ತಾನ ಸಹಾಯ ಮಾಡುತ್ತಿದೆ. ಅವರು ಇರಾನ್ ಮತ್ತು ಅದರ ಅರಬ್ ಸ್ನೇಹಿತರ ನಡುವೆ ದೀರ್ಘಾವಧಿಯ ಮಧ್ಯವರ್ತಿಯನ್ನು ಬಯಸಿದರೆ, ಭಾರತವು ತನ್ನ ಅಪಾರ ರಾಜತಾಂತ್ರಿಕ ಅನುಭವವನ್ನು ಪರಿಗಣಿಸಿ ಈ ಪಾತ್ರವನ್ನು ವಹಿಸಬಹುದು. ಪ್ರಸ್ತುತ ಬ್ರಿಕ್ಸ್ ಅಧ್ಯಕ್ಷರಾಗಿ ಮತ್ತು ಪ್ರಾದೇಶಿಕ ಸ್ಥಿರತೆಯಲ್ಲಿ ನೇರ ಹಿತಾಸಕ್ತಿಗಳನ್ನು ಹೊಂದಿರುವ ಪ್ರಮುಖ ಇಂಧನ ಗ್ರಾಹಕನಾಗಿ ಭಾರತವು ಪ್ರಮುಖ ಪಾಲುದಾರರ ನಡುವೆ ಸಂವಾದವನ್ನು ಸುಗಮಗೊಳಿಸಲು ಉತ್ತಮ ಸ್ಥಿತಿಯಲ್ಲಿದೆ.

ಭಾರತದ ಮೇಲೆ ಇರಾನ್‌ಗೂ ಭರವಸೆ

ಇರಾನ್ ಮೇಲಿನ ಅಮೆರಿಕ-ಇಸ್ರೇಲ್ ಯುದ್ಧದ ಆರ್ಥಿಕ ಕುಸಿತದ ಬಗ್ಗೆ ಜಾಗತಿಕ ಕಳವಳ ಹೆಚ್ಚುತ್ತಿರುವ ಮಧ್ಯೆ, ಈ ಪ್ರದೇಶದ ಬಹುತೇಕ ಎಲ್ಲಾ ದೇಶಗಳೊಂದಿಗಿನ ಸ್ನೇಹ ಸಂಬಂಧದಿಂದಾಗಿ ಪಶ್ಚಿಮ ಏಷ್ಯಾದಲ್ಲಿ ಶಾಂತಿಯನ್ನು ತರುವಲ್ಲಿ ಭಾರತವು ಹೆಚ್ಚಿನ ಪಾತ್ರವನ್ನು ವಹಿಸಬಹುದು ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಶುಕ್ರವಾರ ಹೇಳಿದ್ದಾರೆ.

ಬಂಡೆಗಳ ನಡುವೆ ಹಸಿರು ಬಣ್ಣದ ಪ್ಲಾಸ್ಟಿಕ್ ಬಲೆ ಶಿಲೆ: ಪತ್ರಿಕಾ ವರದಿ

ಪಶ್ಚಿಮ ಕರಾವಳಿಯಲ್ಲಿ ಪ್ಲಾಸ್ಟಿಸ್ಟೋನ್

• ರಾಯಗಡ: ಸಂಶೋಧಕರು, ಮಹಾರಾಷ್ಟ್ರದ ರಾಯಗಡ ಜಿಲ್ಲೆಯ ದೈವೇಗರ್ ಕಡಲತೀರದಲ್ಲಿ ಭಾರತದ ಪಶ್ಚಿಮ ಕರಾವಳಿಯಲ್ಲಿ ಮೊದಲ ಬಾರಿಗೆ ಪ್ಲಾಸ್ಟಿಸ್ಟೋನ್ (ಪ್ಲಾಸ್ಟಿಕ್ ಮತ್ತು ಶಿಲೆ ಸಮ್ಮಿಶ್ರಣ) ಎಂಬ ವಿಚಿತ್ರ ಶಿಲಾರೂಪ ಪತ್ತೆಹಚ್ಚಿದ್ದಾರೆ.

ಕೋಲ್ಕತ್ತಾದ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ (ಐಐಎಸ್‌ಇಆರ್) ಸಂಶೋಧನಾ ತಂಡ, 2024 ಮೇನಲ್ಲಿ ದೈವೇಗರ್ ತೀರದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಅಧ್ಯಯನ ನಡೆಸಿ ಈ ಮಾದರಿಗಳನ್ನು ಸಂಗ್ರಹಿಸಿತ್ತು. ಅಲ್ಲಿನ ಬಂಡೆಗಳ ನಡುವೆ ಹಸಿರು ಬಣ್ಣದ ಪ್ಲಾಸ್ಟಿಕ್ ಬಲೆ ಶಿಲೆಯೊಂದಿಗೆ ಬೆಸೆದುಕೊಂಡಿರುವುದು ಕಂಡುಬಂದಿದೆ. ಇದನ್ನು ಡಿಸ್ಕವರ್ ಓಷನ್ಸ್ ಎಂಬ ವಿಜ್ಞಾನ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.



ಹೇಗಾಯಿತು ಇದು?: ಸಂಶೋಧನೆಯ ನೇತೃತ್ವ ವಹಿಸಿದ್ದ ಪ್ರೊ. ಪುಣ್ಯಶ್ಲೋಕ ಭಾದುರಿ ಪ್ರಕಾರ, ಇದು ಭಾರತೀಯ ಉಪಖಂಡದಲ್ಲಿ ವರದಿಯಾದ ಮೊದಲ ಪ್ಲಾಸ್ಟಿಸ್ಟೋನ್. ಈ ಹಿಂದೆ ಪತ್ತೆಯಾದ ಪ್ಲಾಸ್ಟಿಕ್ ಶಿಲೆಗಳು ಸುಡುವಿಕೆಯಿಂದ ಉಂಟಾಗಿದ್ದರೆ, ಇದು ನೈಸರ್ಗಿಕ ಪ್ರಕ್ರಿಯೆಯಿಂದ ರೂಪುಗೊಂಡಿದೆ. ಅಲ್ಟ್ರಾವೈಲೆಟ್ (ಯುವಿ) ಕಿರಣಗಳು, ಹೆಚ್ಚಿನ ತಾಪಮಾನ ಮತ್ತು ಸಮುದ್ರದ ಅಲೆಗಳ ಹೊಡೆತದಿಂದಾಗಿ ಪ್ಲಾಸ್ಟಿಕ್ ತ್ಯಾಜ್ಯ, ಮರಳು, ಮೃದ್ವಂಗಿಗಳ ಚಿಪ್ಪುಗಳು ಮತ್ತು ಜೈವಿಕ ಅಂಶಗಳೊಂದಿಗೆ ಬೆರೆತು ಕಲ್ಲಿನಂತಾಗಿದೆ.

ರಾಸಾಯನಿಕ ವಿಶ್ಲೇಷಣೆಯಲ್ಲಿ, ಈ ಶಿಲೆಯಲ್ಲಿ ಪಾಲಿಥಿಲಿನ್, ಪಾಲಿಪ್ರೊಪಿಲಿನ್ ಮತ್ತು ಪಾಲಿಮೈಡ್‌ಗಳಂತಹ ಅಂಶಗಳನ್ನು ಪತ್ತೆಹಚ್ಚಿದೆ. ಶಿಲೆಯೊಳಗಿರುವ ಪ್ಲಾಸ್ಟಿಕ್ ಎಳೆಗಳು ಮೀನುಗಾರಿಕೆಗೆ ಬಳಸುವ ನೈಲಾನ್ ಬಲೆಗಳ ಭಾಗ ಎಂದು ತಿಳಿದುಬಂದಿದೆ. ಪ್ಲಾಸ್ಟಿಕ್ ಕಲ್ಲಿನೊಂದಿಗೆ ಬೆರೆಯುವ ಈ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

ಪರಿಸರಕ್ಕೆ ಅಪಾಯ: ಈ ಪ್ಲಾಸ್ಟಿಸ್ಟೋನ್‌ಗಳು ಬಂಡೆಗಳ ಶಾಖ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಬದಲಾಯಿಸುತ್ತವೆ. ಇದರಿಂದ ಏಡಿ ಮತ್ತು ಆಮೆಗಳಂತಹ ಸಮುದ್ರ ಜೀವಿಗಳ ಸಂತಾನೋತ್ಪತ್ತಿಯ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ಅಷ್ಟೇ ಅಲ್ಲದೆ, ಇವು ಮೈಕ್ರೋಪ್ಲಾಸ್ಟಿಕ್ ಮತ್ತು ವಿಷಕಾರಿ ಅಂಶಗಳನ್ನು ನಿರಂತರವಾಗಿ ಪರಿಸರಕ್ಕೆ ಬಿಡುಗಡೆ ಮಾಡಿ ಆಹಾರ ಸರಪಳಿಯ ಮೇಲೆ ಪ್ರಭಾವ ಬೀರಬಹುದು, ಎನ್ನಲಾಗಿದೆ.

2026ರ ವರದಿಯಂತೆ ಭಾರತ ವಾರ್ಷಿಕವಾಗಿ 9.3 ಮಿಲಿಯನ್ ಟನ್ ಪ್ಲಾಸ್ಟಿಕ್ ಮಾಲಿನ್ಯವನ್ನು ಹೊರಹಾಕುತ್ತಿದೆ. ಇದು ಜಾಗತಿಕ ಮಾಲಿನ್ಯದ ಐದನೇ ಒಂದು ಭಾಗ.



‘ಅಮಲ ಭಾರತ ಅಭಿಯಾನ’ ಮೂಲಕ ಸ್ವಚ್ಛತೆಯತ್ತ ದಿಟ್ಟ ಹೆಜ್ಜೆ | ಪರಿಸರದ ಬಗ್ಗೆ ಜಾಗೃತಿ ಅಭಿಯಾನದ ಮುಖ್ಯ ಉದ್ದೇಶ

ಅಮ್ಮನ ಭಕ್ತರ ಮೂಲಕ ಸದ್ದಿಲ್ಲದೆ ಸಾಗಿದೆ ಸ್ವಚ್ಛತಾ ಕಾರ್ಯ





ಮಂಗಳೂರಿನ ವಿವಿಧೆಡೆ ಅಮಲ ಭಾರತ ಸ್ವಚ್ಛತಾ ಅಭಿಯಾನ





ಬೋಳೂರಿನಲ್ಲಿರುವ ಅಮೃತಾ ವಿದ್ಯಾಲಯಂ ಆವರಣ

▸ಸುರೇಶ್ ಡಿ. ಪಳ್ಳಿ

• **ಮಂಗಳೂರು:** ಅಂದು 2014ರ ಅಕ್ಟೋಬರ್ 2. ಮಹಾತ್ಮ ಗಾಂಧೀಜಿಯವರ 145ನೇ ಜನ್ಮ ದಿನಾಚರಣೆ ದೇಶದೆಲ್ಲೆಡೆ ಸಂಭ್ರಮ ಸಡಗರದಿಂದ ಆಚರಿಸಲ್ಪಡುತ್ತಿತ್ತು. ಇದೇ ವೇಳೆ ದೇಶದ ಅಗ್ರಮಾನ್ಯ ನಾಯಕ ಪ್ರಧಾನಿ ನರೇಂದ್ರ ಮೋದಿಯವರು ಸ್ವಚ್ಛ ಭಾರತ್ ಅಭಿಯಾನಕ್ಕೆ ಚಾಲನೆ ನೀಡಿದ್ದರು. ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಯ ಅನುಷ್ಠಾನದ ಜೊತೆಗೆ ಸ್ವಚ್ಛತಾ ಜಾಗೃತಿಗೆ ಪ್ರಧಾನಿ ಮೋದಿ ಕರೆ ನೀಡಿದ್ದರು. ಅದು ಮಹತ್ ಪರಿವರ್ತನೆಗೂ ಕಾರಣವಾಗಿತ್ತು. ಆದರೆ, ಅದಕ್ಕೂ ಮುನ್ನವೇ ದೇಶದೆಲ್ಲೆಡೆ ಸ್ವಚ್ಛತಾ ಅಭಿಯಾನವೊಂದು ಸದ್ದಿಲ್ಲದೆ ಸಾಗಿತ್ತು. ಅದುವೆ ‘ಅಮಲ ಭಾರತ ಅಭಿಯಾನ’.

ದೇಶದಲ್ಲಿನ ಸಾರ್ವಜನಿಕ ಸ್ಥಳಗಳು, ರಸ್ತೆಗಳು ಹಾಗೂ ರಾಷ್ಟ್ರೀಯ ಹೆದ್ದಾರಿಗಳನ್ನು ಸ್ವಚ್ಛಗೊಳಿಸುವ ಸದುದ್ದೇಶದಿಂದ ಆರಂಭಿಸಲಾದ ಮಹತ್ವದ ಈ ಸ್ವಚ್ಛತಾ ಚಳುವಳಿಯನ್ನು 2010ರ ಸೆಪ್ಟೆಂಬರ್ 27ರಂದು ಸದ್ಗುರು ಮಾತಾ ಅಮೃತಾನಂದಮಯಿ ಅವರು ಆರಂಭಿಸಿದ್ದರು. ಕೇರಳದ ಕೊಲ್ಲಂ ಜಿಲ್ಲೆಯ ಅಮೃತಪುರಿಯಲ್ಲಿ ಆರಂಭಗೊಂಡ ಈ ಅಭಿಯಾನ ಬಳಿಕ ದೇಶದ ಇತರೆ ರಾಜ್ಯಗಳಿಗೆ ವಿಸ್ತರಣೆಗೊಂಡಿತ್ತು. ಸ್ವಚ್ಛ ಭಾರತ ಮತ್ತು ಆರೋಗ್ಯಕರ ಸಮಾಜ ನಿರ್ಮಿಸುವ ಗುರಿಯನ್ನು ಈ ಅಭಿಯಾನ ಹೊಂದಿದ್ದು, ಯಾವ ಪ್ರಚಾರದ ಹಂಗೂ ಇಲ್ಲದೆ ಈಗಲೂ ಮುಂದುವರಿಯುತ್ತಿದೆ.

ಅಭಿಯಾನದ ಉದ್ದೇಶ

ಕೇವಲ ಸ್ವಚ್ಛತೆಯಷ್ಟೇ ಈ ಅಭಿಯಾನದ ಉದ್ದೇಶವಲ್ಲ. ದೇಶದ ಜನತೆಯಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಪ್ರಕೃತಿಯೊಂದಿಗೆ ಮಾನವನ ಬಾಂಧವ್ಯವನ್ನು ಗಟ್ಟಿಗೊಳಿಸುವುದು ಅಭಿಯಾನದ ಮುಖ್ಯ ಉದ್ದೇಶ.

ಭಾರತವನ್ನು ಸ್ವಚ್ಛವಾಗಿಡಲು ಪ್ರಾಯೋಗಿಕ ಕ್ರಮಗಳನ್ನು ಕೈಗೊಳ್ಳುವುದು, ಆರೋಗ್ಯ ಮತ್ತು ಸ್ವಚ್ಛತೆಯ ಮಹತ್ವವನ್ನು ಜನರಿಗೆ ತಿಳಿಸುವುದು, ಕಸವನ್ನು ವಿಂಗಡಿಸಿ ಸರಿಯಾಗಿ ವಿಲೇವಾರಿ ಮಾಡುವ ಅಭ್ಯಾಸ ಬೆಳೆಸುವುದು, ಮುಂದಿನ ಪೀಳಿಗೆಗೆ ಆರೋಗ್ಯಕರ ಪರಿಸರವನ್ನು ಉಳಿಸುವುದು ಅಮಲ ಭಾರತ ಅಭಿಯಾನದ ಪ್ರಮುಖ ಉದ್ದೇಶವಾಗಿದೆ.

ಸ್ವಚ್ಛತೆ ಅಭಿವೃದ್ಧಿಯ ಭಾಗ



ನಮ್ಮನ್ನು ನಾವು ಸ್ವಚ್ಛವಾಗಿಟ್ಟುಕೊಳ್ಳುವಂತೆ, ನಮ್ಮ ದೇಶದ ರಸ್ತೆ ಮತ್ತು ಸಾರ್ವಜನಿಕ ಸ್ಥಳಗಳನ್ನೂ ಸ್ವಚ್ಛವಾಗಿಡಬೇಕು. ಸ್ವಚ್ಛತೆ ಅಭಿವೃದ್ಧಿಯ ಒಂದು ಭಾಗ; ಅದು ಸಂಸ್ಕಾರದ ಪ್ರತೀಕವೂ ಹೌದು. ಮನೆ, ಪರಿಸರ ಮತ್ತು ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡುವುದು ಒಂದು ಪವಿತ್ರ ಕರ್ತವ್ಯ.

■ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿ

ಜಾಗೃತಿ ಮೂಡಿದೆ



ಸ್ವಚ್ಛತೆಯ ಬಗ್ಗೆ ಜನತೆಯಲ್ಲಿ ಜಾಗೃತಿ ಮೂಡಿಸುವಲ್ಲಿ ಅಮಲ ಭಾರತ ಸ್ವಚ್ಛತಾ ಅಭಿಯಾನ ಯಶ ಕಂಡಿದೆ. ಯಾವುದೇ ಪ್ರಚಾರ ಬಯಸದೆ ಕಳೆದ ಹಲವು ವರ್ಷಗಳಿಂದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಿಯಾನ ಅತ್ಯಂತ ಯಶಸ್ವಿಯಾಗಿ ನಡೆಯುತ್ತಾ ಬಂದಿದೆ. ಅಮ್ಮನ ಭಕ್ತರ ಶ್ರದ್ಧೆ, ಸೇವಾ ತತ್ಪರತೆ ಶ್ಲಾಘನೀಯ. ಅನೇಕ ಸಂಘ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಈ ಜಾಗೃತಿ ಕಾರ್ಯದಿಂದ ಪ್ರೇರಣೆ ಪಡೆದು ತಾವೂ ಅಭಿಯಾನದಲ್ಲಿ ಪಾಲ್ಗೊಳ್ಳುತ್ತಿರುವುದನ್ನು ಮರೆಯುವಂತಿಲ್ಲ.

■ ಸುರೇಶ್ ಅಮೀನ್, ಅಧ್ಯಕ್ಷರು, ಮಾತಾ ಅಮೃತಾನಂದಮಯಿ ಸೇವಾ ಸಮಿತಿ

▸2019ರಲ್ಲಿ ಮಹತ್ವದ ಕಾರ್ಯಕ್ರಮ

2019ರ ಅಕ್ಟೋಬರ್ 2ರಂದು ಅಮೃತಾನಂದಮಯಿ ಸೇವಾ ಸಮಿತಿಯ ನೇತೃತ್ವದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಸ್ವಚ್ಛತಾ ಕಾರ್ಯಕ್ರಮ ಒಂದು ಐತಿಹಾಸಿಕ ಕಾರ್ಯಕ್ರಮವಾಗಿ ಮೂಡಿಬಂದಿತ್ತು. 4 ಸಾವಿರಕ್ಕೂ ಅಧಿಕ ಮಂದಿ ಇಲ್ಲಿ ನಡೆದ ಸ್ವಚ್ಛತಾ ಅಭಿಯಾನದಲ್ಲಿ ಕೈ ಜೋಡಿಸಿದ್ದರು.

ಸಮಿತಿಯಿಂದಲೂ ನಿರಂತರ ಕಾರ್ಯ

ಅಮ್ಮನವರ ಕರೆಯಂತೆ ಮಂಗಳೂರಿನಲ್ಲೂ ಅಮಲ ಭಾರತ ಸ್ವಚ್ಛತಾ ಅಭಿಯಾನ 2011ರ ಮೇ 1ರಿಂದ ನಿರಂತರವಾಗಿ ನಡೆಯುತ್ತಾ ಬರುತ್ತಿದೆ. ಮಾತಾ ಅಮೃತಾನಂದಮಯಿ ಮಠ ಹಾಗೂ ಮಾತಾ ಅಮೃತಾನಂದಮಯಿ ಸೇವಾ ಸಮಿತಿ ಮಂಗಳೂರು ಇದರ ನೇತೃತ್ವದಲ್ಲಿ ಮಂಗಳೂರಿನಿಂದ ಕಾಸರಗೋಡು, ಕುಂದಾಪುರದವರೆಗೂ 800ಕ್ಕೂ ಅಧಿಕ ಸ್ವಚ್ಛತಾ ಕಾರ್ಯಕ್ರಮಗಳು ನಡೆದಿವೆ. ಸಮಿತಿ ಹಾಗೂ ಮಠದ ಇತರೆ ಸೇವಾ ಕಾರ್ಯಗಳ ಜೊತೆಗೆ ಸ್ವಚ್ಛತೆಯ ಕಾರ್ಯವೂ ನಿರಂತವಾಗಿ ನಡೆಯುತ್ತಿದೆ ಎನ್ನುತ್ತಾರೆ ಸೇವಾ ಸಮಿತಿಯ ಅಧ್ಯಕ್ಷ ಸುರೇಶ್ ಅಮೀನ್ ಅವರು.

ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸುವುದರೊಂದಿಗೆ ಮಹತ್ತರ ಬದಲಾವಣೆಗೆ ಈ ಅಭಿಯಾನ ಕಾರಣವಾಗಿದೆ.

ನದಿ ಮತ್ತು ಕಡಲ ತೀರಗಳ ಸ್ವಚ್ಛತೆ, ಸರ್ಕಾರಿ ಶಾಲೆಗಳು ಮತ್ತು ಸಂಸ್ಥೆಗಳಿಗೆ ಕಸದ ಬುಟ್ಟಿ ವಿತರಣೆ, ಜ್ಯೂಟ್ ಚೀಲಗಳ ವಿತರಣೆಯನ್ನೂ ಸಮಿತಿ ನಿರಂತರವಾಗಿ ಮಾಡುತ್ತಾ ಬಂದಿದೆ ಎನ್ನುತ್ತಾರೆ ಸೇವಾ ಸಮಿತಿಯ ಪ್ರಮುಖರಲ್ಲೊಬ್ಬರಾದ ಡಾ.ದೇವದಾಸ್ ಪುತ್ರನ್ ಅವರು.

ಕಿರುಸುದ್ದಿ

ಮರೋಳಿ ದೇವಸ್ಥಾನದಲ್ಲಿ ಸಾಮೂಹಿಕ ಸೀಯಾಳಾಭಿಷೇಕ

• **ಮಂಗಳೂರು:** ಇತಿಹಾಸ ಪ್ರಸಿದ್ಧ ಮರೋಳಿ ಶ್ರೀ ಸೂರ್ಯ ನಾರಾಯಣ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವ ಸಾಮೂಹಿಕ ಸೀಯಾಳ ಅಭಿಷೇಕವು ಮೇ 17ರಂದು ನಡೆಯಲಿದೆ. ಬೆಳಿಗ್ಗೆ ಉಷಾಪೂಜೆ, ಗಣಪತಿ ಹವನ ಬೆಳಿಗ್ಗೆ 7.30ರಿಂದ ಸಾಮೂಹಿಕ ಪ್ರಾರ್ಥನೆಯೊಂದಿಗೆ ಸೀಯಾಳ ಅಭಿಷೇಕವು ಪ್ರಾರಂಭಗೊಂಡು 11 ರತನಕ ನಡೆಯಲಿರುವುದು. ಶ್ರೀದೇವರಿಗೆ ವಿಶೇಷ ಅಲಂಕಾರ ಹಾಗೂ ಮಧ್ಯಾಹ್ನ 12ಕ್ಕೆ ಮಹಾಪೂಜೆ ಜರಗಿ ವಿಶೇಷ ಪ್ರಾರ್ಥನೆ ಹಾಗೂ ಅನ್ನಸಂತರ್ಪಣೆ ನಡೆಯಲಿದೆ ಎಂದು ದೇವಳದ ಪ್ರಕಟಣೆ ತಿಳಿಸಿದೆ.

ಇಂದು ಕರಾವಳಿ ಕಾಲೇಜುಗಳ ಸಮೂಹದಲ್ಲಿ ‘ಪ್ರಶಸ್ತಿ ಪ್ರದಾನ’ ಸಮಾರಂಭ

• **ಮಂಗಳೂರು:** ಪ್ರತಿಷ್ಠಿತ ಕರಾವಳಿ ಕಾಲೇಜುಗಳ ಸಮೂಹದ ‘ಪ್ರಶಸ್ತಿ ಪ್ರದಾನ’ ಸಮಾರಂಭವು ಮಂಗಳೂರಿನ ನೀರುಮಾರ್ಗದಲ್ಲಿರುವ ಕರಾವಳಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಮೇ 16ರಂದು ನಡೆಯಲಿದೆ. ಕಾರ್ಯಕ್ರಮವನ್ನು ಸಂಜೆ 4 ಗಂಟೆಗೆ ಕರಾವಳಿ ಕಾಲೇಜುಗಳ ಸಮೂಹದ ಆಡಳಿತ ಮಂಡಳಿ, ಜಿ. ಆರ್ ಎಜ್ಯುಕೇಶನ್ ಟ್ರಸ್ಟ್‌ನ ಸ್ಥಾಪಕಾಧ್ಯಕ್ಷ ಎಸ್. ಗಣೇಶ್ ರಾವ್ ಉದ್ಘಾಟಿಸಲಿದ್ದಾರೆ. ಕಾಲೇಜಿನ ನಿರ್ದೇಶಕಿ ಲತಾ ಜಿ. ರಾವ್ ಮುಖ್ಯಅತಿಥಿಯಾಗಿ ಭಾಗವಹಿಸಲಿರುವರು. ಕರಾವಳಿ ಕಾಲೇಜುಗಳ ಸಮೂಹದ ವಿವಿಧ ಕೋರ್ಸುಗಳ ವಿದ್ಯಾರ್ಥಿಗಳು ಶೈಕ್ಷಣಿಕ, ಕ್ರೀಡೆ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಜಯಶಾಲಿಗಳಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ನಡೆಯಲಿದೆ. ಅಲ್ಲದೆ ಕರಾವಳಿ ಕಾಲೇಜುಗಳ ಸಮೂಹದ ವಿವಿಧ ಪದವಿ ಪರೀಕ್ಷೆಗಳಲ್ಲಿ ರ‍್ಯಾಂಕ್‌ಗಳಿಸಿದ ವಿದ್ಯಾರ್ಥಿಗಳಿಗೆ ಅವರ ವಿಶೇಷ ಸಾಧನೆಯನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಗುವುದು. ಕಾರ್ಯಕ್ರಮದಲ್ಲಿ ಕರಾವಳಿ ಕಾಲೇಜುಗಳ ಸಮೂಹದ ಎಲ್ಲಾ ಪ್ರಾಂಶುಪಾಲರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಸಭಾಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಿಂದ ಭರತನಾಟ್ಯ, ಜಾನಪದ ನೃತ್ಯ, ಭಾರತೀಯ ಶೈಲಿಯ ಫ್ಯಾಶನ್ ಶೋ, ರಾಜಸ್ಥಾನಿ ನೃತ್ಯ, ಕ್ಲಿಲ್ಲೀ ನೃತ್ಯ, ಗುಜರಾತಿ ನೃತ್ಯ, ಮಣಿಪುರಿ ನೃತ್ಯ, ಕೇರಳ ಸಾಂಪ್ರದಾಯಿಕ ನೃತ್ಯ ಮೊದಲಾದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 19: ಬಲ್ಮಠ ಸರಕಾರಿ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಸಮ್ಮೇಳನ

• **ಮಂಗಳೂರು:** ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಮಂಡಳಿ (ಐಸಿಎಸ್‌ಆರ್)ಹೊಸದಿಲ್ಲಿ ಪ್ರಾಯೋಜಿತ ರಾಷ್ಟ್ರೀಯ ಸಮ್ಮೇಳನ ಮೇ 19 ರಂದು ನಗರದ ಬಲ್ಮಠದಲ್ಲಿರುವ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ಬ್ಲೂ ಎಕಾನಮಿ: ಗವರ್ನನ್ಸ್, ಸೊಸೈಟಿ ಆಂಡ್ ಸಸ್ಟೈನೆಬಲ್ ಡೆವಲಪ್ಮೆಂಟ್ ಪಾತ್ವೇಸ್ ಟು ಇನ್‌ಕ್ಲೂಸಿವ್, ರೆಸಿಲಿಯಂಟ್ ಆಂಡ್ ಸಸ್ಟೈನಬಲ್ ಕೋಸ್ಟಲ್ ಫ್ಯೂಚರ್ಸ್‌ ಎಂಬ ವಿಷಯದಡಿ ನಡೆಯಲಿರುವ ಈ ರಾಷ್ಟ್ರೀಯ ಸಮ್ಮೇಳನವನ್ನು ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಅರ್ಥಶಾಸ್ತ್ರ ವಿಭಾಗವು ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ವಾಣಿಜ್ಯ ಮತ್ತು ನಿರ್ವಹಣಾ ವಿಭಾಗಗಳ ಸಹಯೋಗದಲ್ಲಿ ಆಯೋಜಿಸಿದೆ. ಅಧ್ಯಕ್ಷತೆಯನ್ನು ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಡಿ. ವೇದವ್ಯಾಸ ಕಾಮತ್ ವಹಿಸಲಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಕಚೇರಿ ಮಂಗಳೂರು ಇಲ್ಲಿನ ಜಂಟಿ ನಿರ್ದೇಶಕರಾದ ಪ್ರೊ ಕೆ. ಆರ್. ಕವಿತಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಭಾಷಣಕಾರರಾಗಿ ಐಸಿಎಆರ್‌ಕೇಂದ್ರೀಯ ಸಮುದ್ರ ಮೀನುಗಾರಿಕಾ ಸಂಶೋಧನಾ ಸಂಸ್ಥೆ ಮಂಗಳೂರು ಇದರ ಪ್ರಧಾನ ವಿಜ್ಞಾನಿಗಳಾದ ಡಾ.ರಾಜೇಶ್ ಕೆ. ಎಂ. ಭಾಗವಹಿಸಲಿದ್ದಾರೆ. ಅತಿಥಿಗಳಾಗಿ ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕ್ ಮ್ಯಾನೇಜ್ಮೆಂಟ್‌ನ ಸಹ ಪ್ರಾಧ್ಯಾಪಕರಾದ ಡಾ.ನವೀನ್ ಕುಮಾರ್ ಕೆ. ಹಾಗೂ ಕೇರಳದ ಕಣ್ಣೂರಿನ ನಹೆರ್ ಆರ್ಟ್ಸ್ ಆಂಡ್ ಸೈನ್ಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಶಫ್ರಾಸ್ ನವಾಸ್ ಎಂ. ಎ. ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಮಂಗಳೂರು ಜೈಲಿನಲ್ಲಿ ಕಾನೂನು ನೆರವು ಸಹಾಯ ಕೇಂದ್ರ ಉದ್ಘಾಟನೆ

ಜೈಲಿನಲ್ಲೇ ಸೂಕ್ತ ಮಾರ್ಗದರ್ಶನ ನೀಡಲಿದ್ದಾರೆ ಮೂವರು ವಕೀಲರು



• **ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಮಂಗಳೂರಿನಲ್ಲಿರುವ ಜಿಲ್ಲಾ ಕಾರಾಗೃಹದಲ್ಲಿ ಆರಂಭಗೊಂಡ ಕಾನೂನು ನೆರವು ಸಹಾಯಕೇಂದ್ರಕ್ಕೆ ಶುಕ್ರವಾರ ಜಿಲ್ಲಾ ಪ್ರಧಾನ ನ್ಯಾಯಾಧೀಶ ಬಸವರಾಜ ಅವರು ಚಾಲನೆ ನೀಡಿದರು.

ಬಳಿಕ ಮಾತನಾಡಿದ ನ್ಯಾಯಾಧೀಶರು, ಗಂಭೀರ ಅಪರಾಧ ಪ್ರಕರಣಗಳನ್ನು ಹೊರತುಪಡಿಸಿ ಸಣ್ಣಪುಟ್ಟ ಪ್ರಕರಣಗಳಲ್ಲಿ ಜೈಲು ಸೇರಿರುವ ಕೈದಿಗಳಿಗೆ ಹಾಗೂ ಅವರ ಕುಟುಂಬದವರಿಗೆ ಉಚಿತ ಕಾನೂನು ಸೇವೆ ಈ ಕೇಂದ್ರದಲ್ಲಿ ದೊರೆಯಲಿದೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಈಗಾಗಲೇ ಉಚಿತ ಕಾನೂನು ನೆರವನ್ನು ಒದಗಿಸುವ ಕಾರ್ಯ ನಡೆಯುತ್ತಿದೆ. ಇದೀಗ ಜೈಲಿನಲ್ಲಿ ಇದನ್ನು ವಿಸ್ತರಿಸುವ ಮೂಲಕ ಸಣ್ಣ ಪುಟ್ಟ ಪ್ರಕರಣಗಳಲ್ಲಿ ಜೈಲು ಸೇರಿರುವ ಕೈದಿಗಳು ಹಾಗೂ ಸಂಬಂಧಿಕರಿಗೆ ಪೂರಕವಾಗಿ ಈ ಕೇಂದ್ರ ಸಹಕಾರ ನೀಡಲಿದೆ ಎಂದರು.

ಜಾಮೀನಿಗೆ ಸಹಕಾರಿ

ಕಾರ್ಯಕ್ರಮ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಸಿವಿಲ್ ನ್ಯಾಯಾಧೀಶರಾದ ಜೈಬುನ್ನೀಸಾ, ಕೆಲವೊಂದು ಬಾರಿ ಕಾನೂನು ಸೂಕ್ಷ್ಮ ಕಾರಣಗಳಿಂದಾಗಿ ಸಂಬಂಧಿಕರು ಜೈಲಿನಲ್ಲಿರುವ ತಮ್ಮವರನ್ನು ಭೇಟಿಯಾಗಲು ತೊಂದರೆಯಾಗುತ್ತದೆ. ಕೆಲವರಿಗೆ ತಮ್ಮ ಮನೆಯವರು ಯಾವ ಕಾರಣಕ್ಕೆ ಜೈಲಿನಲ್ಲಿದ್ದಾರೆ ಎಂಬ ಮಾಹಿತಿಯೂ ಇರುವುದಿಲ್ಲ. ಇದರಿಂದಾಗಿ ಜಾಮೀನು ಪಡೆದುಕೊಳ್ಳಲು ತೊಂದರೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ಕೈದಿಗಳು ಹಾಗೂ ಮನೆಯವರು ಕಾನೂನು ನೆರವು ಸೇವಾ ಕೇಂದ್ರದ ಮೂಲಕ ಉಚಿತವಾಗಿ ಕಾನೂನು ನೆರವು ಪಡೆಯಬಹುದು.

ಸೇವಾ ಕೇಂದ್ರದ ಮೂಲಕ ಕೈದಿಗಳ ಮನೆಯವರಿಗೆ ಕೈದಿಗಳ ಜತೆ ವಾರದಲ್ಲಿ ಎರಡು ಬಾರಿ ಸಂಪರ್ಕಕ್ಕೂ ಅವಕಾಶ ಕಲ್ಪಿಸಲಾಗುತ್ತದೆ. ಪೂರ್ವಾಹ್ನ 11ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಂಜೆ 4.00ರಿಂದ 5.30ವರೆಗೆ ಈ ಸಹಾಯ ಕೇಂದ್ರ ಕಾರ್ಯಾಚರಿಸಲಿದೆ. ಮೂವರು ವಕೀಲರನ್ನು ಈ ಕೇಂದ್ರಕ್ಕೆ ನಿಯೋಜಿಸಲಾಗಿದ್ದು, ಅವರು ಆರೋಪಿಗಳ ಕುಟುಂಬಿಕರಿಗೆ ಕಾನೂನು ಸಲಹೆ, ಮಾರ್ಗದರ್ಶನ ನೀಡಲಿದ್ದಾರೆ.

ಇದಲ್ಲದೆ ಜಿಲ್ಲೆಯಲ್ಲಿ ಇಂತಹ ಕಾನೂನು ನೆರವು ನೀಡುವ ನಿಟ್ಟಿನಲ್ಲಿ ಪ್ರಾಧಿಕಾರದಿಂದ 10ಮಂದಿ ಕಾನೂನು ಅಭಿರಕ್ಷಕರನ್ನು ನೇಮಿಸಲಾಗಿದೆ. ಆರೋಪಿಗಳು ಬಂಧನಕ್ಕೆ ಮುನ್ನವೂ ಈ ಸೌಲಭ್ಯ ತೆಗೆದುಕೊಳ್ಳಬಹುದು. ಕೊಲೆ, ಪೋಕ್ಸೋ, ದೊಡ್ಡ ಪ್ರಮಾಣದ ಎನ್‌ಡಿಪಿಎಸ್, ಅತ್ಯಾಚಾರ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳನ್ನು ಹೊರತುಪಡಿಸಿ ಇತರ ಪ್ರಕರಣಗಳ ಆರೋಪಿಗಳಿಗೆ ಈ ಕೇಂದ್ರದ ನೆರವು ದೊರಕಲಿದೆ ಎಂದು ಅವರು ವಿವರ ನೀಡಿದರು.

ಕಾರ್ಯಕ್ರಮದಲ್ಲಿ ಮಂಗಳೂರು ಕಾರಾಗೃಹದ ಅಧೀಕ್ಷಕ ಶರಣಬಸಪ್ಪ, ವಕೀಲರಾದ ರವಿರಾಜ್, ಕೆಎಸ್‌ಐಎಸ್‌ಎಫ್ ನಿರೀಕ್ಷಕರಾದ ಸುಭಾಷ್, ಕೇಂದ್ರದ ಸಲಹೆಗಾರರಾದ ಡೆನ್ನಿಸ್ ಡಿಸೋಜಾ ಉಪಸ್ಥಿತರಿದ್ದರು.

ಕೇಂದ್ರದ ಸಲಹೆಗಾರರಾದ ಪ್ರೇಮಿ ಫೆರ್ನಾಂಡೀಸ್ ಕಾಯಕ್ರಮ ನಿರೂಪಿಸಿದರು. ಹರ್ಷಿತಾ ವಂದಿಸಿದರು.

ಶ್ರೀರಾಮ ತಲೆಂಗಳಗೆ ಇಂದಿರಾಗಾಂಧಿ ಕೃಷಿ ವಿವಿ ಡಾಕ್ಟರೇಟ್



• **ಕಾಸರಗೋಡು:** ಮಂಜೇಶ್ವರ ತಾಲೂಕು ಮೀಯಪದವಿನ ಶ್ರೀರಾಮ ತಲೆಂಗಳ ಅವರು ಹಾರ್ಟಿಕಲ್ಚರ್‌ನ ವೆಜಿಟೆಬಲ್ ಸೈನ್ಸ್ ವಿಭಾಗದಲ್ಲಿ ಮಂಡಿಸಿದ ಪಿಎಚ್‌ಡಿ ಸಂಶೋಧನಾ ಮಹಾಪ್ರಬಂಧಕ್ಕೆ ಛತ್ತಿಸಗಢ ರಾಜ್ಯದ ರಾಯಪುರದ ಇಂದಿರಾ ಗಾಂಧಿ ಕೃಷಿ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ಶುಕ್ರವಾರ ವಿ.ವಿ.ಯಲ್ಲಿ ನಡೆದ 11ನೇ ಘಟಿಕೋತ್ಸವದಲ್ಲಿ ಅವರು ಪದವಿ ಸ್ವೀಕರಿಸಿದರು. ಅವರು ವಿ.ವಿ.ಯ ಡಾ.ಜಿತೇಂದ್ರ ತ್ರಿವೇದಿ ಮಾರ್ಗದರ್ಶನದಲ್ಲಿ ‘ಇಫೆಕ್ಟ್ ಆಫ್ ಮಲ್ಚಿಂಗ್ ಆ್ಯಂಡ್ ಟ್ರೈನಿಂಗ್ ಸಿಸ್ಟಮ್ಸ್ ಆನ್ ಗ್ರೋಥ್, ಯೀಲ್ಡ್ ಆ್ಯಂಡ್ ಸೀಡ್ ಕ್ವಾಲಿಟಿ ಆಫ್ ಟೊಮ್ಯಾಟೋ’ ವಿಷಯದಲ್ಲಿ ಪ್ರಬಂಧ ಸಿದ್ಧಪಡಿಸಿದ್ದರು. ಅವರು ಮೀಯಪದವು ಶ್ರೀ ವಿದ್ಯಾವರ್ಧಕ ಹೈಯರ್ ಸೆಕೆಂಡರಿ ಸ್ಕೂಲ್, ಪುತ್ತೂರು ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಹಳೆ ವಿದ್ಯಾರ್ಥಿ. ಮೈಸೂರಿನ ಕಾಲೇಜ್ ಆಫ್ ಹಾರ್ಟಿಕಲ್ಚರ್‌ನಲ್ಲಿ ಬಿಎಸ್ಸಿ ಪದವಿ, ಮಹಾರಾಷ್ಟ್ರದ ರಾಹುರಿಯ ಮಹಾತ್ಮಾ ಫುಲೆ ಕೃಷಿ ವಿದ್ಯಾಪೀಠದಲ್ಲಿ ಹಾರ್ಟಿಕಲ್ಚರ್ ನ ವೆಜಿಟೇಬಲ್ ಸೈನ್ಸ್ ಎಂಎಸ್ಸಿ ವ್ಯಾಸಂಗ ಪೂರೈಸಿದ್ದರು. ಪ್ರಸ್ತುತ ಕೇರಳದ ಪಡನ್ನಕಾಡಿನ ಕಾಲೇಜ್ ಆಫ್ ಅಗ್ರಿಕಲ್ಚರ್‌ನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಫ್ ಹಾರ್ಟಿಕಲ್ಚರ್ ಹುದ್ದೆ ನಿರ್ವಹಿಸುತ್ತಿದ್ದಾರೆ. ಮೀಯಪದವಿನ ನಿವೃತ್ತ ಶಿಕ್ಷಕ ದಂಪತಿ ಸದಾಶಿವ ಭಟ್ ತಲೆಂಗಳ-ನಳಿನಿ ಇವರ ದ್ವಿತೀಯ ಪುತ್ರ.

ಬಜೆ ಅಣೆಕಟ್ಟಿಗೆ ಶಾಸಕ ಯಶ್‌ಪಾಲ್ ಸುವರ್ಣ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ



• **ಉಡುಪಿ:** ನಗರಸಭೆಯ ಕುಡಿಯುವ ನೀರಿನ ಬಜೆ ಅಣೆಕಟ್ಟು ಪ್ರದೇಶಕ್ಕೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಅಧಿಕಾರಿಗಳೊಂದಿಗೆ ಭೇಟಿ ನೀಡಿ ನೀರಿನ ಸಂಗ್ರಹ ಮಟ್ಟವನ್ನು ಪರಿಶೀಲಿಸಿ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದರು.

ಬಜೆ ಅಣೆಕಟ್ಟು ನೀರಿನ ಸಂಗ್ರಹ ಸಾಮರ್ಥ್ಯ, ಒಳಹರಿವು ಬಗ್ಗೆ ಚರ್ಚೆ ನಡೆಸಿ ಉಡುಪಿ ನಗರದ ಜನತೆಗೆ ನಿರಂತರನೀರುಸರಬರಾಜಿಗೆಯಾವುದೇ ಯಾವುದೇ ಸಮಸ್ಯೆಯಾಗದಂತೆ ಈಗಿನಿಂದಲೇ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಯಶ್ ಪಾಲ್ ಸುವರ್ಣ ಸೂಚನೆ ನೀಡಿದರು.

ವಾರಾಹಿ ಯೋಜನೆಯ ಮೂಲಕವೂ ನಗರಕ್ಕೆ ನೀರು ಸರಬರಾಜಾಗುತ್ತಿದ್ದು, ಬಜೆ ಅಣೆಕಟ್ಟಿನಲ್ಲಿ ಕಳೆದ ವರ್ಷಕ್ಕಿಂತ ನೀರಿನ ಲಭ್ಯತೆ ಕಡಿಮೆ ಇದ್ದು, ಉಡುಪಿ ನಗರ ಭಾಗಕ್ಕೆ ನಿರಂತರ ನೀರು ಪೂರೈಕೆಗೆ ಸಮಸ್ಯೆಯಾಗದಂತೆ ಕ್ರಮ ವಹಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ನೀರು ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿ ಕಾರ್ಯ ಚಟುವಟಿಕೆಗಳ ಬಗ್ಗೆ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿ, ಘಟಕವನ್ನು ಉತ್ತಮವಾಗಿ ನಿರ್ವಹಿಸಿ ಉಡುಪಿ ಜನತೆಗೆ ನಿರಂತರ ಶುದ್ಧ ಕುಡಿಯುವ ನೀರು ಸರಬರಾಜಿಗೆ ವಿಶೇಷ ಆದ್ಯತೆ ನೀಡುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತರಾದ ಮಹಾಂತೇಶ್ ಹಂಗರಗಿ, ನಗರಸಭೆ ನಿಕಟಪೂರ್ವ ಅಧ್ಯಕ್ಷರಾದ ಪ್ರಭಾಕರ ಪೂಜಾರಿ, ನಗರಸಭಾ ಮಾಜಿ ಸದಸ್ಯರಾದ ಗಿರೀಶ್ ಅಂಚನ್, ನಗರ ಸಭೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ದುರ್ಗಾ ಪ್ರಸಾದ್, ಸಹಾಯಕ ಅಭಿಯಂತರ ಚೇತನ್, ವಾರಾಹಿ ಯೋಜನೆಯ ಆರ್ಕೇಶ್ ಗೌಡ ಮೊದಲಾದವರು ಉಪಸ್ಥಿತರಿದ್ದರು.

ಮಡಿಕೇರಿ ನಗರದಲ್ಲಿ 272 ಲಕ್ಷ ರೂ. ವೆಚ್ಚದ ಯೋಜನೆ

ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ



• **ಮಡಿಕೇರಿ:** ಮುಖ್ಯಮಂತ್ರಿ ಅವರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ರಾಜ್ಯ ವಿಪತ್ತು ನಿರ್ವಹಣಾ ನಿಧಿ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಾ.ಮಂಥರ್ ಗೌಡ ಅವರು ಶುಕ್ರವಾರ ಭೂಮಿಪೂಜೆ ನೆರವೇರಿಸಿದರು. ಬಳಿಕ ಮಾತನಾಡಿದ ಅವರು, ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ ರಸ್ತೆ, ತಡೆಗೋಡೆ, ಚರಂಡಿ ಮತ್ತಿತರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಮಡಿಕೇರಿ ನಗರಕ್ಕೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಆದ್ದರಿಂದ ಮಡಿಕೇರಿ ನಗರದ ಅಭಿವೃದ್ಧಿಗೆ ಪ್ರಥಮ ಆದ್ಯತೆ ಮೇಲೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆ ಎಂದರು.

ಈಗಾಗಲೇ ಪರಿಸರ ಶುಚಿತ್ವಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಅದೇ ರೀತಿ ಗುಂಡಿ ಬಿದ್ದ ರಸ್ತೆಗಳನ್ನು ಮುಚ್ಚುವುದು, ಹಲವು ಕಡೆಗಳಲ್ಲಿ ರಸ್ತೆ ನಿರ್ಮಿಸುವುದು, ಆಗತ್ಯವಿರುವ ಕಡೆ ತಡೆಗೋಡೆ ನಿರ್ಮಾಣ ಮತ್ತಿತರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ಶಾಸಕರು ವಿವರಿಸಿದರು.

ನಗರಸಭೆ ಅಧ್ಯಕ್ಷರಾದ ಪಿ.ಕಲಾವತಿ, ಉಪಾಧ್ಯಕ್ಷರಾದ ಮಹೇಶ್ ಜೈನಿ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ ಯಲ್ಲಪ್ಪ, ಪೌರಾಯುಕ್ತರಾದ ಎಚ್.ಆರ್.ರಮೇಶ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಸತೀಶ್, ಅರುಣ್ ಶೆಟ್ಟಿ, ಶಾರದ ನಾಗರಾಜು, ನಗರಸಭೆ ಸದಸ್ಯರು ಇತರರು ಇದ್ದರು.

ಆಳ್ವಾಸ್ ವಿದ್ಯಾರ್ಥಿಗಳ ಮಾದರಿ ಕಾರ್ಯ: ‘ಚಿಣ್ಣರ ತಂಗುದಾಣ’ಕ್ಕೆ ನೆರವಿನ ಹಸ್ತ





• **ಮೂಡುಬಿದಿರೆ:** ಸಮಾಜಮುಖಿ ಚಿಂತನೆ ಹಾಗೂ ಸಾಂಸ್ಕೃತಿಕ ಸೌಹಾರ್ದತೆಯ ಸಾರ್ಥಕ ಉದಾಹರಣೆಯಾಗಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿದ್ಯಾರ್ಥಿಗಳು ಮಂಗಳೂರಿನ ನಿರಾಶ್ರಿತ ಮಕ್ಕಳ ಆಶ್ರಯತಾಣ ‘ಚಿಣ್ಣರ ತಂಗುದಾಣ’ಕ್ಕೆ ಭೇಟಿ ನೀಡಿ ರೂ. 50,000ಕ್ಕೂ ಅಧಿಕ ಮೊತ್ತದ ದೈನಂದಿನ ಅಗತ್ಯ ವಸ್ತುಗಳು, ಆಹಾರ ಸಾಮಗ್ರಿಗಳು, ಕ್ರೀಡಾ ಉಪಕರಣಗಳು ಹಾಗೂ ಶೈಕ್ಷಣಿಕ ಸಾಮಗ್ರಿಗಳನ್ನು ಹಸ್ತಾಂತರಿಸಿದರು.

ಇತ್ತೀಚೆಗೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಲ್ಲಿ ಸಂಪ್ರದಾಯ ದಿನಾಚರಣೆಯನ್ನು ವೈವಿಧ್ಯತೆಯಲ್ಲಿ ಏಕತೆ ಎಂಬ ಸಂದೇಶದೊಂದಿಗೆ ಅದ್ದೂರಿಯಾಗಿ ಆಚರಿಸಲಾಗಿತ್ತು. ಕಾರ್ಯಕ್ರಮದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಪರ್ಧೆಗಳು, ಸಾಂಪ್ರದಾಯಿಕ ಆಹಾರ ಮೇಳ ಹಾಗೂ ವಿವಿಧ ರಾಜ್ಯಗಳ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿತ್ತು. ಕೇರಳ ರಾಜ್ಯದ ವಿದ್ಯಾರ್ಥಿಗಳ ತಂಡವು ಅತ್ಯುತ್ತಮ ಪ್ರದರ್ಶನ ಹಾಗೂ ಸಮೃದ್ಧ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಮೂಲಕ ಚಾಂಪಿಯನ್ ಪಟ್ಟವನ್ನು ತನ್ನದಾಗಿಸಿಕೊಂಡಿತ್ತು.

ಕೇವಲ ಸಾಂಸ್ಕೃತಿಕ ಸಂಭ್ರಮಕ್ಕೆ ಸೀಮಿತವಾಗದೆ, ಸಮಾಜದ ಒಳಿತಿಗೂ ಕೈಜೋಡಿಸುವ ಉದ್ದೇಶದಿಂದ ಆಹಾರ ಮೇಳದಿಂದ ಸಂಗ್ರಹವಾದ ಮೊತ್ತವನ್ನು ಪ್ರತಿ ವರ್ಷದಂತೆ ಸಮಾಜಮುಖಿ ಕಾರ್ಯಕ್ಕೆ ಬಳಸಲು ನಿರ್ಧರಿಸಲಾಯಿತು. ಕಳೆದ ಬಾರಿಯ ಟ್ರೆಡಿಷನಲ್ ಡೇ ಸಂದರ್ಭದಲ್ಲಿ ಸಂಗ್ರಹಿಸಿದ ಸುಮಾರು 1 ಲಕ್ಷ ರೂಪಾಯಿಯನ್ನು ಮಣಿಪುರದ ಸಂಘರ್ಷದಲ್ಲಿ ನೊಂದ ಕುಟುಂಬಗಳಿಗೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ನೆರವು ನೀಡಲಾಗಿತ್ತು. ಆ ನೆಲೆಯಲ್ಲಿ ಈ ಬಾರಿ ಮಂಗಳೂರಿನ ನಿರಾಶ್ರಿತ ಮಕ್ಕಳ ಆಶ್ರಯತಾಣ ‘ಚಿಣ್ಣರ ತಂಗುದಾಣ’ಕ್ಕೆ ಭೇಟಿ ನೀಡಿ ಅಗತ್ಯ ವಸ್ತುಗಳನ್ನು ನೀಡಲಾಯಿತು.

ಶಿಕ್ಷಣವು ಕೇವಲ ಪಠ್ಯ ಜ್ಞಾನಕ್ಕೆ ಸೀಮಿತವಾಗಿರದೆ, ಸಮಾಜದ ನೋವಿಗೆ ಸ್ಪಂದಿಸುವ ಮನಸ್ಸನ್ನು ರೂಪಿಸಬೇಕು. ಸಂಪ್ರದಾಯ ದಿನಾಚರಣೆ ಮೂಲಕ ವಿದ್ಯಾರ್ಥಿಗಳು ಸಾಂಸ್ಕೃತಿಕ ವೈವಿಧ್ಯತೆಯನ್ನು ಅರಿತುಕೊಳ್ಳುವುದರ ಜೊತೆಗೆ, ಸಮಾಜದತ್ತ ತಮ್ಮ ಹೊಣೆಗಾರಿಕೆಯನ್ನು ಕಾರ್ಯರೂಪದಲ್ಲಿ ತೋರಿಸಿದ್ದಾರೆ. ಈ ಮನೋಪ್ರವೃತ್ತಿ ಯುವಜನರಲ್ಲಿ ಮಾನವೀಯತೆ, ಸಹಾನುಭೂತಿ ಮತ್ತು ಸಾಮಾಜಿಕ ಬದ್ಧತೆಯನ್ನು ಬೆಳೆಸುತ್ತದೆ

■ ವಿವೇಕ ಆಳ್ವ, ಟ್ರಸ್ಟಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ

ಡ್ರೋನ್ ಉದ್ಯಮ ನಾವೀನ್ಯತೆ ಅಭಿವೃದ್ಧಿ: ಖರ್ಗೆ

ಬೆಂಗಳೂರು: ಡ್ರೋನ್‌ಗಳು ಆಡಳಿತದ ದಕ್ಷತೆ ಮತ್ತು ಸಾರ್ವಜನಿಕ ಸೇವೆಗಳ ಸ್ವರೂಪವನ್ನು ಗಮನಾರ್ಹವಾಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿರುವುದರಿಂದ ಅವುಗಳ ವ್ಯಾಪಕ ಬಳಕೆಗೆ ರಾಜ್ಯ ಸರ್ಕಾರವು ಅಗತ್ಯ ಉತ್ತೇಜನ ನೀಡಲಿದೆ ಎಂದು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.


ತಮ್ಮ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಡ್ರೋನ್ ಉದ್ಯಮದ ಅಭಿವೃದ್ಧಿಗೆ ಸಂಬಂಧಿಸಿದ ಉನ್ನತ ಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು. ಡ್ರೋನ್‌ಗಳ ತಯಾರಿಕೆ ಮತ್ತು ಬಳಕೆಯಲ್ಲಿ ಕರ್ನಾಟಕವು ಆದ್ಯತೆಯ ಕೇಂದ್ರವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಕಾರ್ಯಪ್ರವೃತ್ತವಾಗಿದೆ. ಮೂಲಸೌಕರ್ಯಗಳ ಅಭಿವೃದ್ಧಿ, ಸರ್ಕಾರದ ಅಗತ್ಯ ಬೆಂಬಲ ಮತ್ತು ಅಗತ್ಯ ಇರುವ ಕಡೆಗಳಲ್ಲಿ ಡ್ರೋನ್ ಬಳಕೆ ಹೆಚ್ಚಿಸುವ ಮೂಲಕ ದೇಶದ ಡ್ರೋನ್ ಆರ್ಥಿಕತೆಯನ್ನು ಮುನ್ನಡೆಸಲು ಕರ್ನಾಟಕ ಬದ್ಧವಾಗಿದೆ. ಡ್ರೋನ್‌ಗಳ ಪರೀಕ್ಷಾ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು, ನಿಯಂತ್ರಣ ಕ್ರಮಗಳನ್ನು ಸರಳೀಕರಿಸುವುದು, ಈ ವಲಯದ ನವೋದ್ಯಮಗಳು ಮತ್ತು ಡ್ರೋನ್ ಉದ್ಯಮವು ನಾವೀನ್ಯತೆ ಸಾಧಿಸಲು ಮತ್ತು ದೊಡ್ಡ ಪ್ರಮಾಣದಲ್ಲಿ ಬೆಳೆಯುವುದಕ್ಕೆ ರಾಜ್ಯ ಸರ್ಕಾರ ಗಮನ ನೀಡುತ್ತಿದೆ ಎಂದು ಹೇಳಿದರು.



ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಇಲಾಖೆಯು ಭಾರತದ ಡ್ರೋನ್ ಒಕ್ಕೂಟದ (ಡಿಎಫ್‌ಐ) ಸಹಯೋಗದಲ್ಲಿ ಈ ಸಭೆ ಆಯೋಜಿಸಿತ್ತು. ಡ್ರೋನ್ ನಾವೀನ್ಯತೆ ಮತ್ತು ಅವುಗಳ ಬಳಕೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿ ಇರುವುದಕ್ಕೆ ಇನ್ನಷ್ಟು ವೇಗ ನೀಡಲು ಕೈಗೊಳ್ಳಬೇಕಾದ ಕ್ರಮಗಳನ್ನು ಸಭೆಯಲ್ಲಿ ಪ್ರಮುಖವಾಗಿ ಚರ್ಚಿಸಲಾಯಿತು. ಡ್ರೋನ್ ತಯಾರಿಕೆ, ಪರೀಕ್ಷೆ ಮತ್ತು ದಿನನಿತ್ಯದ ಬಳಕೆಗೆ ಅವುಗಳನ್ನು ವ್ಯಾಪಕವಾಗಿ ಬಳಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಉದ್ಯಮದ ಪ್ರಮುಖರು ಸಲಹೆಗಳನ್ನು ನೀಡಿದರು.

ಬೆಂಗಳೂರಿನ ಸಮೀಪ ಪ್ರತ್ಯೇಕ ಡ್ರೋನ್ ಹಾರಾಟ ಪರೀಕ್ಷಾ ಸೌಲಭ್ಯ ಅಭಿವೃದ್ಧಿಪಡಿಸುವುದನ್ನು ಸಭೆಯಲ್ಲಿ ಪ್ರಮುಖವಾಗಿ ಚರ್ಚಿಸಲಾಯಿತು. ಡ್ರೋನ್ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಪರಿಣತರ ಸಂಖ್ಯೆ ಹೆಚ್ಚಿಸಲು ಕಾರ್ಯಪಡೆಯ ತರಬೇತಿ, ಆಡಳಿತ ಸುಧಾರಣೆ ಮತ್ತು ಸೇವೆಗಳನ್ನು ದಕ್ಷ ರೀತಿಯಲ್ಲಿ ಒದಗಿಸಲು ಪ್ರಮುಖ ವಲಯಗಳಲ್ಲಿ ಡ್ರೋನ್ ತಂತ್ರಜ್ಞಾನಗಳ ಬಳಕೆ ವಿಸ್ತರಿಸುವುದು; ಡ್ರೋನ್ ರೇಸಿಂಗ್, ಹ್ಯಾಕಥಾನ್‌ಗಳು, ನಾವೀನ್ಯತೆ ಪ್ರದರ್ಶನಗಳು ಮತ್ತು ಸಾರ್ವಜನಿಕರ ತೊಡಗಿಸಿಕೊಳ್ಳುವಿಕೆ ಉತ್ತೇಜಿಸಲು ಡ್ರೋನ್ ಉತ್ಸವ ಆಯೋಜನೆ ಮತ್ತು ಬೆಂಗಳೂರನ್ನು ಡ್ರೋನ್ ತಂತ್ರಜ್ಞಾನದ ರಾಷ್ಟ್ರೀಯ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದು ಮುಂತಾದ ವಿಷಯಗಳ ಕುರಿತು ಚರ್ಚಿಸಲಾಯಿತು. ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ. ಎನ್. ಮಂಜುಳಾ, ರಾಹುಲ್ ಶರಣಪ್ಪ ಸಂಕನೂರ, ಕೆಡಿಇಎಂ ಸಿಇಒ ಸಂಜೀವ್ ಕುಮಾರ್ ಗುಪ್ತಾ, ಭಾರತದ ಡ್ರೋನ್ ಒಕ್ಕೂಟದ ಅಧ್ಯಕ್ಷ ಸ್ಮಿತ್ ಶಾ ಸಭೆಯಲ್ಲಿ ಇದ್ದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಪ್ರಧಾನಿ ಮೋದಿ ನೀಡಿರುವ ಹೇಳಿಕೆಯ ಬಗ್ಗೆ ಪ್ರತಿಪಕ್ಷವಾದ ಕಾಂಗ್ರೆಸ್ ಸಣ್ಣತನದಿಂದ ಮಾತನಾಡುವುದು ಸರಿಯಲ್ಲ – **ಕುಮಾರಸ್ವಾಮಿ**

- ಅವರಿಂದ ದೊಡ್ಡತನದ ವರ್ತನೆಯನ್ನು ನಿರೀಕ್ಷಿಸುವುದು ಮೂರ್ಖತನ!

ದಿನ ಭವಿಷ್ಯ

ಮೇಷ
ಧಾವಂತದ ದಿನ. ಪ್ರತಿಕ್ಷಣ ಒತ್ತಡ. ನಿಮ್ಮ ಕಾರ್ಯ ಮೆಚ್ಚುಗೆಗೂ ಪಾತ್ರ. ವೃತ್ತಿ ಸಂಬಂಧ ಪ್ರಯಾಣ ಸಂಭವ. ಆಪ್ತರ ಸಾಹಚರ್ಯ.

ವೃಷಭ
ಯೋಚಿಸಿ ಮಾತಾಡಿ. ಏಕೆಂದರೆ ಮಾತಿನಿಂದ ವಿವಾದಕ್ಕೆ ಸಿಲುಕುವ ಸಾಧ್ಯತೆ ಇದೆ. ಹಣಕಾಸು ಒತ್ತಡ. ಖರ್ಚು ಅನಿವಾರ್ಯ.

ಮಿಥುನ
ಯಶಸ್ವೀ ದಿನ. ಉದ್ದೇಶ ಈಡೇರಿಕೆ. ವೃತ್ತಿಯಲ್ಲಿ ಉನ್ನತಿ. ಮನಸ್ತಾಪ ಇದ್ದವರ ಜತೆ ಸಂಬಂಧ ಸುಧಾರಣೆ. ಆರೋಗ್ಯ ಸುಸ್ಥಿರ.

ಕಟಕ
ನಿಮ್ಮ ಮನಸ್ಥಿತಿಯ ದುರುಪಯೋಗ ಮಾಡಿಕೊಳ್ಳಲು ಅವಕಾಶ ಕೊಡದಿರಿ. ವ್ಯಕ್ತಿಯೊಬ್ಬರು ನಿಮ್ಮ ಮೇಲೆ ದೊಡ್ಡ ಪ್ರಭಾವ ಬೀರಬಹುದು.

ಸಿಂಹ
ನಿಮ್ಮ ಕೆಲಸ ತಕ್ಷಣಕ್ಕೆ ಫಲ ನೀಡದು. ಸರಿಯಾದ ಯೋಜನೆ ಮುಖ್ಯ. ಖಾಸಗಿ ಬದುಕಲ್ಲಿ ಸಂವಹನ ಕೊರತೆ. ಭಿನ್ನಮತ ಸಂಭವ.

ಕನ್ಯಾ
ಕೆಲಸದಲ್ಲಿ ವಿಘ್ನ. ಆದರೂ ಕೌಶಲದಿಂದ ಕಾರ್ಯ ಮುಗಿಸುವಿರಿ. ಖರೀದಿ ಹುಮ್ಮಸ್ಸು. ಅವಿವಾಹಿತರಿಗೆ ಸಂಗಾತಿ ಸಿಗಬಹುದು.

ತುಲಾ
ಸುಲಭದಲ್ಲಿ ಕಾರ್ಯ ಸಾಧ್ಯ. ಸಮಸ್ಯೆಗೆ ತಕ್ಷಣವೇ ಸ್ಪಂದಿಸುವ ರೀತಿ ಯಶಸ್ಸು ತರಲಿದೆ. ಆಹಾರದಲ್ಲಿ ಹಿತಮಿತ ಸಾಧಿಸಿರಿ.

ವೃಶ್ಚಿಕ
ನಿಮ್ಮ ಪರಿಶ್ರಮಕ್ಕೆ ಸೂಕ್ತ ಫಲ ಪಡೆಯುವ ಕಾಲ ಬಂದಿದೆ. ಕುಟುಂಬದಲ್ಲಿ ಭಿನ್ನಮತ ಸಂಭವ. ದೇಹಾಲಸ್ಯ ಕಾಡಬಹುದು.

ಧನು
ಪ್ರಮುಖ ನಿರ್ಧಾರ ಮುಂದೂಡಿ. ಕಾಲ ಪಕ್ವವಾಗಿಲ್ಲ. ನಿಮ್ಮಿಂದ ಲೋಪ ಉಂಟಾದೀತು. ಎಚ್ಚರದಿಂದ ಕಾರ್ಯ ನಿರ್ವಹಿಸಿ.

ಮಕರ
ನಿಂತ ನೀರಾಗಬೇಡಿ. ಹೊಸತನಕ್ಕೆ ತುಡಿಯಿರಿ. ವಾಗ್ವಾದದಿಂದ ದೂರವಿರಿ. ಆರೋಗ್ಯ ಸಮಸ್ಯೆ ಕಾಡಬಹುದು. ಆರ್ಥಿಕ ಒತ್ತಡ ಹೆಚ್ಚಲಿದೆ.

ಕುಂಭ
ಒತ್ತಡದಿಂದ ನಿರಾಳತೆ. ಸಮಸ್ಯೆ ಪರಿಹಾರದ ಸಂಕೇತ. ಆಪ್ತರಿಂದ ಬೆಂಬಲ. ಆತ್ಮೀಯರ ಜತೆ ಕಾಲ ಕಳೆಯುವ ಅವಕಾಶ.

ಮೀನ
ಕುಟುಂಬ ಸದಸ್ಯರ ಒಳಿತಿಗೆ ಶ್ರಮಿಸುವಿರಿ. ನಿಮ್ಮ ಕುರಿತಂತೆಯೆ ಅಂತರ್ಮಥನ. ಆರ್ಥಿಕ ಸ್ಥಿತಿ ಉತ್ತಮ. ಆದರೂ ಖರ್ಚು ಹೆಚ್ಚಿದ ಚಿಂತೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 6,0,4,1

ಸಿಎಂ, ಡಿಸಿಎಂ ಡಿಕೆಶಿ ಸೇರಿದಂತೆ ಪ್ರಮುಖ ನಾಯಕರು ಭಾಗಿ: ಪರಮೇಶ್ವರ್

19ಕ್ಕೆ ಸಾರ್ಥಕ ಸಮಾವೇಶ

ತುಮಕೂರು: ಇದೇ ಮೇ 20ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರಕ್ಕೆ 3 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿ ಸಾರ್ಥಕ ಸೇವೆಗಳ ಸಮರ್ಪಣಾ ಸಮಾವೇಶ ಮೇ 19ರಂದು ನಡೆಯಲಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದ್ದಾರೆ.

ತುಮಕೂರಿನ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹಲವಾರು ಯೋಜನೆಗಳನ್ನು ರಾಜ್ಯ ಸರ್ಕಾರ ಚಾಲನೆ ನೀಡಿ ಅವುಗಳನ್ನು ಆದ್ಯತಾ ಕಾರ್ಯಕ್ರಮಗಳಾಗಿ ತೆಗೆದುಕೊಂಡು ಸಮರ್ಪಕವಾಗಿ ಅನುಷ್ಠಾನಗೊಳಿಸಿದೆ. ಈ ವಿಷಯವನ್ನು ಜನಸಮುದಾಯದೊಂದಿಗೆ ಹಂಚಿಕೊಳ್ಳಬೇಕಿತ್ತು, ಹೀಗಾಗಿ ಕಾರ್ಯಕ್ರಮ ಆಯೋಜಿಸಿದ್ದೇವೆ ಎಂದು ಹೇಳಿದರು.

- ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ 3 ವರ್ಷ
- 20ರ ಬದಲು ಒಂದು ದಿನ ಮುಂಚಿತವಾಗಿ ಸಮಾರಂಭ

ಈ ಮೊದಲು ಮೇ 20ರಂದೇ ಸಮಾರಂಭ ನಡೆಸಲು ಉದ್ದೇಶಿಸಲಾಗಿತ್ತಾದರೂ, ಅಂದು ಸಾರಿಗೆ ನೌಕರರ ಮುಷ್ಕರ ಇರುವುದರಿಂದ ಸಮಾರಂಭಕ್ಕೆ ಅಡ್ಡಿಯಾಗದಂತೆ ಮುನ್ನಾದಿನವೇ ನಡೆಸಲು ಸಿಎಂ ಸಿದ್ದರಾಮಯ್ಯ ಸೂಚಿಸಿದ್ದಾರೆ. ಹೀಗಾಗಿ, ದಿನಾಂಕ ಬದಲಾವಣೆ ಮಾಡಲಾಗಿದೆ ಎಂದು ಪರಮೇಶ್ವರ್ ತಿಳಿಸಿದರು. ಹಾಗೆಯೇ, ಉಳಿದ ಎಲ್ಲ ಕಾರ್ಯಕ್ರಮಗಳು ಪೂರ್ವ ಯೋಜಿತದಂತೆ ನಡೆಯಲಿವೆ ಎಂದು ವಿವರಿಸಿದ್ದಾರೆ.

ಹಕ್ಕುಪತ್ರಗಳ ವಿತರಣೆ: ಪ್ರಮುಖವಾಗಿ ಕಂದಾಯ ಇಲಾಖೆಯಲ್ಲಿ ಬಹುಕಾಲದಿಂದ ಜಮೀನು ವಾರಸುದಾರರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಕಳೆದ ಒಂದೂವರೆ ವರ್ಷದಲ್ಲಿ ತುಮಕೂರು ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಅಭೂತಪೂರ್ವ ಅಭಿವೃದ್ಧಿ ಕೆಲಸಗಳು ನಡೆದಿದ್ದು, ಮೇ 19ರ ಕಾರ್ಯಕ್ರಮದಲ್ಲಿ ಇ-ಪೌತಿ ಖಾತೆ, ದರಖಾಸ್ತು ಪೋಡಿ, ಕಂದಾಯ ಗ್ರಾಮ ಹಕ್ಕುಪತ್ರಗಳು, ಪಿಂಚಣಿ ಸೇರಿದಂತೆ ಸುಮಾರು 1,52,492 ಫಲಾನುಭವಿಗಳಿಗೆ ಹಕ್ಕುಪತ್ರ ಮತ್ತು ಸೌಲಭ್ಯಗಳನ್ನು ವಿತರಿಸಲಾಗುತ್ತಿದೆ. ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಸುಮಾರು 14 ಲಕ್ಷ ಜನರಿಗೆ ಈ ಸೌಲಭ್ಯಗಳು ದೊರೆತಿವೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ತುಮಕೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸುಮಾರು 2ಲಕ್ಷಕ್ಕೂ ಹೆಚ್ಚು ಜನ ಆಗಮಿಸಲಿದ್ದು, ಅವರಿಗೆ ಬಸ್ಸುಗಳ ವ್ಯವಸ್ಥೆ ಹಾಗೂ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜ ಉಪಸ್ಥಿತರಿದ್ದರು.



682 ಕೋಟಿ ರೂ.ಗಳ ಕಾಮಗಾರಿಗಳಿಗೆ ಚಾಲನೆ

ಅಲ್ಲದೆ, ತುಮಕೂರು ಜಿಲ್ಲೆಯಲ್ಲಿ ಆಗಿರುವ ಇತರೆ ಇಲಾಖೆಗಳ ಅಭಿವೃದ್ಧಿ ಸಂಬಂಧಿಸಿದಂತೆ ಸುಮಾರು 682 ಕೋಟಿ ರೂ.ಗಳ ಕಾಮಗಾರಿಗಳಿಗೆ ಅಡಿಗಲ್ಲು ಹಾಗೂ ಉದ್ಘಾಟನೆ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವೇರಿಸಿಕೊಡಲಿದ್ದಾರೆ ಎಂದು ಸಚಿವರು ತಿಳಿಸಿದರು. ಈ ಕಾರ್ಯಕ್ರಮ ಸಂಪೂರ್ಣ ಸರ್ಕಾರಿ ಕಾರ್ಯಕ್ರಮವಾಗಿದ್ದು, ಪಕ್ಷಾತೀತ ಕಾರ್ಯಕ್ರಮ ಎಂದು ಈ ಹಿಂದೆಯೇ ತಿಳಿಸಲಾಗಿತ್ತು. ಅಂತೆಯೇ ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವ ಸಂಪುಟದ ಎಲ್ಲಾ ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಮುಖಂಡರು ಆಗಮಿಸಲಿದ್ದಾರೆ.

ರಾಜ್ಯದಲ್ಲಿ ಮೂರು ದಿನ ಗುಡುಗು ಸಹಿತ ಮಳೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂದಿನ ಮೂರು ದಿನಗಳ ಕಾಲ ಗುಡುಗು ಮಿಂಚು, ಗಾಳಿ ಸಹಿತ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಸಿದೆ.

ಈ ಹಿನ್ನೆಲೆಯಲ್ಲಿ ಹಲವು ಪ್ರದೇಶಗಳಿಗೆ ಆರೆಂಜ್ ಅಲರ್ಟ್ ಮತ್ತು ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಐಎಂಡಿ ಪ್ರಕಾರ, ಕರ್ನಾಟಕದ ಉತ್ತರ ಒಳನಾಡು ಭಾಗದಲ್ಲಿ ಮೇ 17 ರವರೆಗೆ ತಾಸಿಗೆ 40-50 ಕಿ.ಮೀ. ವೇಗದ ಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಮೇ 16 ಮತ್ತು 17 ರಂದು ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ.

ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ವಾಯುಭಾರ ಕುಸಿತ ಪರಿಣಾಮ

ಬಂಗಾಳ ಕೊಲ್ಲಿಯ ನೈಋತ್ಯ ಭಾಗದಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು, ಇದರ ಪರಿಣಾಮವಾಗಿ ಸುಮಾರು 5.8 ಕಿ.ಮೀ. ಎತ್ತರದವರೆಗೆ ಸುಳಿಗಾಳಿ ಉಂಟಾಗಿದೆ. ಇದರ ನೇರ ಪ್ರಭಾವ ಕರ್ನಾಟಕದ ಹವಾಮಾನದ ಮೇಲೆ ಬೀರಲಿದೆ. ರಾಜ್ಯಾದ್ಯಂತ ಮಳೆಯ ಜೊತೆಗೆ ಗುಡುಗು ಮಿಂಚಿನ ಆರ್ಭಟ ಹೆಚ್ಚಿರಲಿದ್ದು, ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸುವಂತೆ ಹವಾಮಾನ ಇಲಾಖೆ ಮನವಿ ಮಾಡಿದೆ.

ಈ ಭಾಗದಲ್ಲಿ ಗಾಳಿಯ ವೇಗ ಪ್ರತಿ ತಾಸಿಗೆ 40 ರಿಂದ 50 ಕಿ.ಮೀ. ಇರಲಿದೆ. ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಕೆಲವು ಕಡೆ ಹಗುರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯಲ್ಲಿ ಮಳೆ: ಓರ್ವ ಸಾವು

ಮಂಗಳೂರು: ಕೆಲವು ದಿನಗಳಿಂದ ಕರಾವಳಿಯ ಕೆಲವು ಪ್ರದೇಶಗಳಲ್ಲಿ ಗಾಳಿ, ಗುಡುಗು ಸಹಿತ ಭಾರೀ ಮಳೆಯಾಗುತ್ತಿದೆ. ಉಡುಪಿ ಜಿಲ್ಲೆಯಲ್ಲಿ ಸಿಡಿಲಿನ ಆಘಾತಕ್ಕೆ ಓರ್ವ ಬಲಿಯಾದ ಘಟನೆ ಗುರುವಾರ ಸಂಜೆ ಸಂಭವಿಸಿದೆ. ದ.ಕ. ಜಿಲ್ಲೆಯ ವಿವಿಧೆಡೆ ಮಳೆಗೆ ಹಾನಿ ಸಂಭವಿಸಿದ್ದುಘಿ, ಶುಕ್ರವಾರ ಮಳೆಯ ಆಗಮನವಿರಲಿಲ್ಲ. ಕುಂದಾಪುರದಲ್ಲಿ ರಸ್ತೆ ಕಾಮಗಾರಿ ಪರಿಶೀಲನೆ ನಡೆಸುತ್ತಿದ್ದ ಕಾರ್ಮಿಕರಿಗೆ ಸಿಡಿಲು ಬಡಿದ ಪರಿಣಾಮ ಓರ್ವ ಕಾರ್ಮಿಕ ಮೃತಪಟ್ಟ ಘಟನೆ ಹೊಸಾಡು ಗ್ರಾಮದ ಆರಾಟೆ ಸೇತುವೆ ಸಮೀಪ ಗುರುವಾರ ಸಂಜೆ ನಡೆದಿದೆ. ಸಾವನ್ನಪ್ಪಿದ ಕಾರ್ಮಿಕನನ್ನು ಪಂಜಾಬ್ ರಾಜ್ಯದ ನಿವಾಸಿ ಆಶಿತೋಷ್ ಸಿಂಗ್ (35) ಎಂದು ಗುರುತಿಸಲಾಗಿದೆ. ಇನ್ನೋರ್ವ ಕಾರ್ಮಿಕ ಗಂಭೀರವಾಗಿ ಗಾಯಗೊಂಡು ಕುಂದಾಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾರ್ಕಳ ತಾಲೂಕಿನ ಮುಂಡೂರು ಗ್ರಾಮದಲ್ಲಿ ಜಯ ಸಾಲ್ಯಾನ್ ಎಂಬವರ ಮನೆಗೆ ಸಿಡಿಲು ಬಡಿದು, ಮನೆಯ ಗೋಡೆ ಹಾಗೂ ವಿದ್ಯುತ್ ಉಪಕರಣಗಳು ಹಾನಿಗೀಡಾಗಿವೆ.

ಭೋಜಶಾಲೆ ಸರಸ್ವತಿಗೆ ಸಮರ್ಪಿತ ದೇವಸ್ಥಾನ

ಪುಟ ೧➔ ಆ ಆದೇಶದ ಪ್ರಕಾರ ಮಂಗಳವಾರ ಹಿಂದುಗಳಿಗೆ ಪೂಜೆ ಹಾಗೂ ಶುಕ್ರವಾರ ಮುಸ್ಲಿಮರಿಗೆ ನಮಾಜ್ ಅವಕಾಶ ನೀಡಲಾಗುತ್ತಿತ್ತು. ಹಿಂದುಗಳ ಪೂಜಾ ಹಕ್ಕುಗಳನ್ನು ಅನಾವಶ್ಯಕವಾಗಿ ಸೀಮಿತಗೊಳಿಸಲಾಗಿತ್ತು ಎಂದು ಅರ್ಜಿದಾರರು ವಾದಿಸಿದ್ದರು.

ನ್ಯಾಯಾಲಯವು ಎಎಸ್‌ಐಗೆ ಸ್ಮಾರಕದ ಸಂರಕ್ಷಣೆ, ನಿರ್ವಹಣೆ ಹಾಗೂ ಧಾರ್ಮಿಕ ಚಟುವಟಿಕೆಗಳ ಮೇಲ್ವಿಚಾರಣೆಯ ಸಂಪೂರ್ಣ ಅಧಿಕಾರ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದೆ. ಇದೇ ವೇಳೆ ಮುಸ್ಲಿಂ ಸಮುದಾಯದ ಧಾರ್ಮಿಕ ಹಕ್ಕುಗಳನ್ನು ಗಮನದಲ್ಲಿಟ್ಟುಕೊಂಡು ಧಾರ ಜಿಲ್ಲೆಯಲ್ಲೇ ಪರ್ಯಾಯ ಮಸೀದಿ ಅಥವಾ ಪ್ರಾರ್ಥನಾ ಕೇಂದ್ರ ನಿರ್ಮಾಣಕ್ಕೆ ಸೂಕ್ತ ಜಾಗ ಒದಗಿಸುವ ಬಗ್ಗೆ ರಾಜ್ಯ ಸರ್ಕಾರ ಪರಿಗಣಿಸಬಹುದು ಎಂದು ಸೂಚಿಸಿದೆ. ಲಂಡನ್‌ನ ಸಂಗ್ರಹಾಲಯದಲ್ಲಿರುವ ಸರಸ್ವತಿ ದೇವಿಯ ವಿಗ್ರಹವನ್ನು ಭಾರತಕ್ಕೆ ಮರಳಿ ತಂದು ಭೋಜಶಾಲೆಯಲ್ಲಿ ಮರು ಪ್ರತಿಷ್ಠಾಪಿಸುವಂತೆ ಸಲ್ಲಿಸಿರುವ ಮನವಿಗಳನ್ನೂ ಕೇಂದ್ರ ಸರ್ಕಾರ ಪರಿಗಣಿಸಬಹುದು ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಶತಮಾನಗಳ ವಿವಾದಕ್ಕೆ ತಿರುವು ನೀಡಿದ ತೀರ್ಪು

ಪುಟ ೧➔ ಧಾರದಲ್ಲಿರುವ ಈ ಸಮುಚ್ಚಯದಲ್ಲಿ ಹಿಂದೂ ಶೈಲಿಯ ಕಂಬಗಳು, ಸಂಸ್ಕೃತ ಶಾಸನಗಳು, ದೇವಾಲಯದ ವಿನ್ಯಾಸಗಳು ಹಾಗೂ ಮಸೀದಿ ಶೈಲಿಯ ಕಮಾನುಗಳು, ಮಿಹ್ರಾಬ್‌ಗಳು ಮತ್ತು ಪಕ್ಕದಲ್ಲೇ ಕಮಾಲ್ ಮೌಲಾ ದರ್ಗಾ ಇರುವುದರಿಂದಲೇ ವಿವಾದ ವರ್ಷಗಳಿಂದ ಮುಂದುವರಿಯುತ್ತಿತ್ತು.

ರಾಜ್ಯದಲ್ಲಿ ಎಸ್‌ಐಆರ್‌ಗೆ ಸಿದ್ಧತೆ

ಪುಟ ೧➔ ಈ ಬಾರಿ ರಾಜ್ಯದಲ್ಲಿ 2026 ಅಕ್ಟೋಬರ್ 1 ಅನ್ನು ಅರ್ಹತಾ ದಿನಾಂಕ ಎಂದು ನಿಗದಿಪಡಿಸಲಾಗಿದೆ. ಅರ್ಹತಾ ದಿನಾಂಕ ಎಂದರೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು ಅರ್ಜಿದಾರರ ಕನಿಷ್ಠ ವಯಸ್ಸು 18 ವರ್ಷ ತುಂಬಿದೆಯೇ ಎಂದು ನಿರ್ಧರಿಸುವ ಮಾನದಂಡವಾಗಿದೆ ಎಂದರು. ಪರಿಷ್ಕರಣೆ ಪ್ರಕ್ರಿಯೆ, ನಮೂನೆಗಳು ಹಾಗೂ ವೇಳಾಪಟ್ಟಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳ ಅಧಿಕೃತ ಜಾಲತಾಣಗಳು, ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ಹಾಗೂ ಭಾರತದ ಚುನಾವಣಾ ಆಯೋಗದ ಅಧಿಕೃತ ಜಾಲತಾಣಗಳಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಕಾರ್ಯಪಡೆ ಸನ್ನದ್ಧ

ರಾಜ್ಯದಲ್ಲಿ 59,050 ಬಿಎಲ್‌ಒಗಳು ಪರಿಷ್ಕರಣೆ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಪ್ರತಿ 10 ಬಿಎಲ್‌ಒಗಳಿಗೆ ಒಬ್ಬ ಮುಖ್ಯಸ್ಥರಂತೆ 5,905 ಅಧಿಕಾರಿಗಳನ್ನು ನೇಮಿಸಲಾಗಿದೆ. ಅಲ್ಲದೆ 336 ಎಇಆರ್‌ಒ, 224 ಇಆರ್‌ಒ, 31 ಇಆರ್‌ಒ, 4 ಸಹಾಯಕ ಇಆರ್‌ಒಗಳನ್ನು ನೇಮಿಸಲಾಗಿದೆ. ಪ್ರಸ್ತುತ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಂದ 25,284 ಬೂತ್ ಮಟ್ಟದ ಏಜೆಂಟರನ್ನು(ಬಿಎಲ್‌ಎ) ನೇಮಕ ಮಾಡಲಾಗಿದೆ. ರಾಜಕೀಯ ಪಕ್ಷಗಳಲ್ಲಿ ಪ್ರತಿಯೊಂದು ಮತಗಟ್ಟೆಗೆ ಬೂತ್ ಏಜೆಂಟರನ್ನು ನೇಮಕ ಮಾಡುವಂತೆ ಕೇಳಲಾಗಿದೆ.



ರಾಜ್ಯದಲ್ಲಿ ಚುನಾವಣಾ ಆಯೋಗದಿಂದ ಎಸ್‌ಐಆರ್ ಪ್ರಕ್ರಿಯೆಯು ಪ್ರಾರಂಭವಾಗಿದ್ದು, ಇದಕ್ಕೆ ಬೇಕಾದ ಸಿದ್ಧತೆಯನ್ನು ಸರ್ಕಾರ ಮಾಡಿಕೊಳ್ಳುತ್ತಿದೆ.

■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಎನ್ಯೂಮರೇಷನ್ ಫಾರ್ಮ್ ಪ್ರಮುಖ ಅಂಶಗಳು

- ಪರಿಷ್ಕರಣೆ ಸಮಯದಲ್ಲಿ ಬಿಎಲ್‌ಒಗಳು ಪ್ರತಿ ಮನೆಗೆ ಭೇಟಿ ನೀಡಿ ಎರಡು ಸೆಟ್ ಫಾರ್ಮ್‌ಗಳನ್ನು ನೀಡಲಿದ್ದಾರೆ
- ಮತದಾರರು ಅರ್ಜಿಯನ್ನು ಭರ್ತಿ ಮಾಡಿ ಒಂದು ಪ್ರತಿಯನ್ನು ಬಿಎಲ್‌ಒಗೆ ನೀಡಿ, ಮತ್ತೊಂದನ್ನು ಸಹಿ ಪಡೆದು ತಮ್ಮ ಬಳಿ ಇಟ್ಟುಕೊಳ್ಳಬೇಕು
- ಪ್ರತಿಯೊಂದು ಅರ್ಜಿ ಕ್ಯೂಆರ್ ಕೋಡ್ ಹೊಂದಿದ್ದು, ಬಿಎಲ್‌ಒಗಳು ಆ್ಯಪ್ ಮೂಲಕ ಸುಲಭವಾಗಿ ಸ್ಕ್ಯಾನ್ ಮಾಡಿ ಮಾಹಿತಿ ತುಂಬಲಿದ್ದಾರೆ
- ಮತದಾರರ ಅನುಪಸ್ಥಿತಿಯಲ್ಲಿ ಮನೆಯಲ್ಲಿರುವ 18 ವರ್ಷ ಮೇಲ್ಪಟ್ಟ ಯಾವುದೇ ಸದಸ್ಯರು ಈ ಅರ್ಜಿಗೆ ಸಹಿ ಮಾಡಬಹುದಾಗಿದೆ
- ಭೌತಿಕವಾಗಿ ಅರ್ಜಿ ನೀಡಲು ಸಾಧ್ಯವಾಗದವರು ಆನ್‌ಲೈನ್ ಮೂಲಕವೂ ಸಲ್ಲಿಕೆ ಮಾಡಬಹುದು.

ಜೂ.21ಕ್ಕೆ ನೀಟ್ ಮರುಪರೀಕ್ಷೆ

ಪುಟ ೧➔ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಪ್ರಧಾನ್, ಸರ್ಕಾರದ ಅತ್ಯುನ್ನತ ಆದ್ಯತೆ ಎಂದರೆ ವಿದ್ಯಾರ್ಥಿಗಳು ಮತ್ತು ಅವರ ಭವಿಷ್ಯ ಎಂದು ಹೇಳಿದರು. ನೀಟ್-ಯುಜಿ ಪರೀಕ್ಷೆಯಲ್ಲಿನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು. ವಿದ್ಯಾರ್ಥಿಗಳ ಭವಿಷ್ಯವು ನಮ್ಮ ಮೊದಲ ಆದ್ಯತೆಯಾಗಿದೆ. ಈ ಬಾರಿ ಅಕ್ರಮ ನಡೆಯಲು ನಾವು ಬಿಡುವುದಿಲ್ಲ. ಸರ್ಕಾರ ನಿಮ್ಮೊಂದಿಗಿದೆ ಎಂದು ಹೇಳಿದರು. ಪರೀಕ್ಷಾ ಪ್ರಕ್ರಿಯೆಯಲ್ಲಿ ಅಕ್ರಮಗಳ ಆರೋಪಗಳ ಹಿನ್ನೆಲೆಯಲ್ಲಿ ಮೇ 3ರಂದು ನಡೆದ ನೀಟ್-ಯುಜಿಯನ್ನು ರದ್ದುಪಡಿಸಲಾಯಿತು. ಪರೀಕ್ಷಾ ಅಕ್ರಮಗಳು ಬೆಳಕಿಗೆ ಬಂದ ಬೆನ್ನಲ್ಲೇ ತನಿಖೆ ಪ್ರಾರಂಭಿಸಲಾಗಿದೆ ಎಂದು ಪ್ರಧಾನ್ ಹೇಳಿದರು. ಸರ್ಕಾರವು ಈ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಿದೆ ಮತ್ತು ತನಿಖೆಯ ಬಗ್ಗೆ ವಿಶ್ವಾಸವನ್ನು ವ್ಯಕ್ತಪಡಿಸಿದೆ ಎಂದು ಸಚಿವರು ಹೇಳಿದರು.

ಮೇ 26ಕ್ಕೆ ಕೇರಳಕ್ಕೆ ಮುಂಗಾರು

ಪುಟ ೧➔ ಮುಂದಿನ 24 ಗಂಟೆಗಳಲ್ಲಿ 115.6 ಮಿ.ಮೀ.ನಿಂದ 204.4 ಮಿ.ಮೀ.ನಷ್ಟು ಮಳೆಯಾಗುವ ಸಾಧ್ಯತೆ ಇದೆ ಎಂದು ಸೂಚಿಸಿದೆ. ಕೊಲ್ಲಂ, ಎರ್ನಾಕುಳಂ, ತ್ರಿಶೂರು, ಪಾಲಕ್ಕಾಡ್, ಕೋಯಿಕ್ಕೋಡ್, ವಯನಾಡ್, ಕಣ್ಣೂರು, ಕಾಸರಗೋಡು ಜಿಲ್ಲೆಗಳಲ್ಲಿ ಕೂಡ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ 64.5 ಮಿ.ಮೀ.ನಿಂದ 115.5 ಮಿ.ಮೀ.ನಷ್ಟು ತೀವ್ರ ಮಳೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಜೋರಾದ ಗಾಳಿ ಬೀಸುವ ಎಚ್ಚರಿಕೆ: ಮೇ 21ರವರೆಗೂ ಕೇರಳದಾದ್ಯಂತ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದ್ದು, ಮೇ 16ರವರೆಗೂ ಗರಿಷ್ಠ ತಾಪಮಾನ 33 ಡಿಗ್ರಿ ಸೆಲ್ಸಿಯಸ್‌ನಷ್ಟು ಇರಲಿದೆ.

ಬೆಲೆ ಏರಿಕೆ ನಿರ್ಣಯ ಹಿಂಪಡೆಯಿರಿ: ಸಿಎಂ

ಪುಟ ೧➔ ಎಲ್‌ಪಿಜಿ ಪೂರೈಕೆ ವ್ಯತ್ಯಯವಾಗಿರುವ ನಡುವೆಯೇ ಬೆಲೆ ಏರಿಕೆಯು ಜನಜೀವನವನ್ನು ಅಸ್ತವ್ಯಸ್ತಗೊಳಿಸಲಿದೆ. ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ತಲಾ 3 ರೂ. ಏರಿಕೆ ಮಾಡುವ ಮೂಲಕ ದೇಶದ ಜನಸಾಮಾನ್ಯರ ಬದುಕಿನ ಮೇಲೆ ಬರೆ ಎಳೆದಿದೆ. ಇದು ಬೆಲೆ ಏರಿಕೆಯಲ್ಲ, ಭಾರತದ ಸಾಮಾನ್ಯ ಜನರ ದೈನಂದಿನ ಬದುಕಿನ ಮೇಲೆ ನಡೆಸಿದ ನೇರ ದಾಳಿಯಾಗಿದೆ ಎಂದು ಟೀಕಿಸಿದರು.

ದಿನಬಳಕೆ ವಸ್ತುಗಳೂ ತುಟ್ಟಿ: ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀ. ಒಂದಕ್ಕೆ 106 ರೂ. ದಾಟಿದೆ. ಡೀಸೆಲ್ ದರವು 94 ರೂ. ಆಗಿದೆ. ಈ ಏರಿಕೆಯು ಕೇವಲ ಬಂಕ್‌ಗಳಿಗೆ ಸೀಮಿತಗೊಳ್ಳುವುದಿಲ್ಲ. ಇದರೊಂದಿಗೆ ಸಾರಿಗೆ ವೆಚ್ಚ, ತರಕಾರಿ, ಹಣ್ಣು, ಹಾಲು, ಸೇರಿದಂತೆ ಪ್ರತಿಯೊಂದು ದಿನಬಳಕೆ ವಸ್ತುಗಳ ದರ ಏರಿಕೆಯಾಗುತ್ತದೆ. ಇದರಿಂದ ಕಾರ್ಮಿಕರು, ರೈತರು, ಸಣ್ಣ ವ್ಯಾಪಾರಿಗಳು, ಮಹಿಳೆಯರು ಹಾಗೂ ಮಧ್ಯಮ ವರ್ಗದವರು ದೈನಂದಿನ ಬದುಕು ನಡೆಸುವುದು ಮತ್ತಷ್ಟು ದುಸ್ತರವಾಗಲಿದೆ ಎಂದು ತಿಳಿಸಿದರು.

ಜನತೆಯ ಮೇಲೆ ಸರ್ಕಾರದ ವೈಫಲ್ಯದ ನಷ್ಟ: ಮೋದಿ ಸರ್ಕಾರವು ಹಣದುಬ್ಬರ ನಿಯಂತ್ರಿಸಲು, ಡಾಲರ್ ಎದುರು ರೂಪಾಯಿ ಮೌಲ್ಯದ ಕುಸಿತ ತಡೆಯಲು, ದೇಶದ ಆರ್ಥಿಕ ನಿರ್ವಹಣೆಯಲ್ಲಿ ಹಾಗೂ ಒಟ್ಟಾರೆ ಸಾಮಾನ್ಯ ಜನರ ಹಿತ ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿದೆ. ದೇಶದ ಜನತೆಯ ಹಿತಾಸಕ್ತಿಗಳನ್ನು ಕಾಪಾಡುವ ಬದಲು ಅವರಿಂದಲೇ ಹಣ ಕಿತ್ತುಕೊಂಡು ತನ್ನ ವೈಫಲ್ಯದ ನಷ್ಟ ಭರಿಸುತ್ತಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಕಡಿಮೆಯಿದ್ದಾಗ ಅದರ ಲಾಭವನ್ನು ಮೋದಿ ಸರ್ಕಾರ ಎಂದಿಗೂ ಜನತೆಗೆ ಬಿಟ್ಟುಕೊಡಲೇ ಇಲ್ಲ. ಆಗಲೂ ಜನತೆಯಿಂದ ದೊಡ್ಡ ಮೊತ್ತದ ತೆರಿಗೆ ಸಂಗ್ರಹಿಸಿ ತನ್ನ ಬೊಕ್ಕಸ ತುಂಬಿಕೊಂಡಿತ್ತು. ದರ ಏರಿಕೆಯಾದಾಗಲೂ ಅದರ ಸಂಪೂರ್ಣ ಭಾರ ಜನಸಾಮಾನ್ಯರ ಮೇಲೆ ಹೊರಿಸಿ ಕೈತೊಳೆದುಕೊಳ್ಳುತ್ತಿದೆ. ಇದು ಆಡಳಿತ ನಡೆಸುವ ಕ್ರಮವಲ್ಲ, ಇದು ದೇಶದ ಜನತೆಯ ಮೇಲಿನ ಘೋರ ಶೋಷಣೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಲೆ ಏರಿಕೆ ಮೋದಿ ಕೊಡುಗೆ: ಡಿಸಿಎಂ ಡಿ.ಕೆ.ಶಿವಕುಮಾರ್

ಪುಟ ೧➔ ಆದಕ್ಕೆ ಅವರು ವಿದ್ಯುತ್ ಉಳಿಸಿ, ಪೆಟ್ರೋಲ್ ಬಳಸಬೇಡಿ ಎನ್ನುತ್ತಿದ್ದಾರೆ. ಇಂಧನಗಳನ್ನು ಬಳಸದೇ ದಿನನಿತ್ಯ ಜೀವನ ಮಾಡುವುದು ಹೇಗೆ? ಅನೇಕರು ತಮ್ಮ ಬೆಂಗಾವಲು ಪಡೆ ವಾಹನಗಳನ್ನು ಕಡಿತ ಮಾಡಿದ್ದಾರೆ. ಆದರೆ, ಜನ ಸಾಮಾನ್ಯ ಓಡಾಟ ಮಾಡದೇ ಇರಲು ಹೇಗೆ ಸಾಧ್ಯ? ಬದುಕಿಗಾಗಿ ಪ್ರಯಾಣ ಮಾಡಬೇಕಲ್ಲವೇ? ಚಿನ್ನ ಖರೀದಿ ಮಾಡಬೇಡಿ ಎಂದಿದ್ದಾರೆ, ಇದು ಹೇಗೆ ಸಾಧ್ಯ? ವಿವಾಹಿತ ಮಹಿಳೆಯರಿಗೆ ಮಾಂಗಲ್ಯ ಸರ ಬೇಕು. ಹೀಗಿದ್ದಾಗ ಚಿನ್ನ ಕೊಂಡುಕೊಳ್ಳಬೇಡಿ ಎಂಬುದು ಹೇಗೆ ಸಾಧ್ಯ? ಎಂದು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.



ತೈಲ ಉಳಿಕೆಗೆ ಸುಪ್ರೀಂ ಕೋರ್ಟ್ ಸಾಥ್

ಪುಟ ೧➔ ಮಂಗಳವಾರ, ಬುಧವಾರ, ಗುರುವಾರಗಳಂದು ವಕೀಲರು, ದಾವೆದಾರರು ನ್ಯಾಯಾಲಯದ ಮುಂದೆ ದೈಹಿಕವಾಗಿ ಅಥವಾ ಆನ್ಲೈನ್ ಮುಖೇನ ಹಾಜರಾಗುವ ಆಯ್ಕೆ ಹೊಂದಿದ್ದಾರೆ. ರಿಜಿಸ್ಟ್ರಿ ಅಧಿಕಾರಿಗಳು ತಮ್ಮ ಕಚೇರಿಯ ಸ್ಥಳಕ್ಕೆ ಅನುಗುಣವಾಗಿ ವರ್ಕ್ ಫ್ರಂ ಹೋಮ್ ನಿಯಮದಲ್ಲಿ ಬದಲಾವಣೆ ಮಾಡಿಕೊಳ್ಳಲು ಸುಪ್ರೀಂ ಅವಕಾಶ ನೀಡಿದೆ.

ಕಾರ್ ಪೂಲಿಂಗ್‌ನಿಂದ ಇಂಧನ ಉಳಿತಾಯ: ಈ ಸಂದರ್ಭ ಸುಪ್ರೀಂ ಕೋರ್ಟ್‌ಗೆ ಹಾಜರಾಗುವ ನ್ಯಾಯಮೂರ್ತಿಗಳು ಕಾರು ಪೂಲಿಂಗ್ ವ್ಯವಸ್ಥೆ ಅಳವಡಿಸಿಕೊಂಡು ಆದಷ್ಟು ಇಂಧನ ಉಳಿತಾಯ ಮಾಡಲು ನಿರ್ಧಾರ ತೆಗೆದುಕೊಂಡಿದ್ದಾರೆ.

ಸಚಿವಾಲಯಕ್ಕೆ ನಡೆದು ಬಂದ ಬಿಹಾರದ ಸಿಎಂ: ಪ್ರಧಾನಿ ಮೋದಿ ಇಂಧನ ಉಳಿತಾಯದ ಮನವಿಗೆ ಪ್ರತಿಕ್ರಿಯಿಸಿದ ಬಿಹಾರ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ, ಶುಕ್ರವಾರ ತಮ್ಮ ಅಧಿಕೃತ ನಿವಾಸದಿಂದ ಪಾಟ್ನಾದಲ್ಲಿನ ಸಚಿವಾಲಯಕ್ಕೆ ಹಿರಿಯ ಅಧಿಕಾರಿಗಳ ಜತೆ ನಡೆದುಕೊಂಡೇ ಹೋಗಿದ್ದಾರೆ. ಸಿಎಂ ಸಾಮ್ರಾಟ್ ತಮ್ಮ ಲೋಕ ಸೇವಕ ನಿವಾಸದಿಂದ ಸಂಪುಟ ಸಚಿವಾಲಯಕ್ಕೆ 500 ಮೀ. ದೂರ ನಡೆದುಕೊಂಡು ಹೋಗಿದ್ದಾರೆ. ಬಿಹಾರ ಶಿಕ್ಷಣ ಸಚಿವ ಮಿಥಿಲೇಶ್ ತಿವಾರಿ ಆಟೋರಿಕ್ಷಾ ಮೂಲಕ ಕಚೇರಿಗೆ ತೆರಳಿದ್ದರು.

ಭಾರತದಲ್ಲಿ 48 ಸಾವಿರ ಕೋಟಿ ರೂ. ಹೂಡಿಕೆ

ಪುಟ ೧➔ 6 ಒಪ್ಪಂದಗಳಲ್ಲಿ ಒಂದಾಗಿ, ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ಸ್ ಲಿಮಿಟೆಡ್, ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ ನಡುವೆ ಭಾರತದ ಇಂಧನ ಭದ್ರತೆಯನ್ನು ಬಲಪಡಿಸುವ ಉದ್ದೇಶದಿಂದ ತಂತ್ರಜ್ಞಾನದ ಸಹಯೋಗ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇಂಡಿಯನ್ ಆಯಿಲ್ ಲಿಮಿಟೆಡ್ ಕಂಪನಿ ಮತ್ತು ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ ನಡುವಿನ ಪ್ರತ್ಯೇಕ ಒಪ್ಪಂದವು ಎಲ್‌ಪಿಜಿ ಮಾರಾಟ ಮತ್ತು ಖರೀದಿಯಲ್ಲಿ ಹೊಸ ಅವಕಾಶಗಳಿಗೆ ನೆರವಾಗಲಿದ್ದು, ಇಂಧನದ ದೀರ್ಘಾವಧಿಯ ಪೂರೈಕೆ ಹಾಗೂ ಉಭಯ ಕಂಪನಿಗಳ ನಡುವೆ ದೀರ್ಘಾವಧಿಯ ಮಾರಾಟ-ಖರೀದಿ ಒಪ್ಪಂದಕ್ಕೂ ದಾರಿ ಮಾಡಿಕೊಡಲಿದೆ. ಭಾರತ, ಯುಎಇ ರಕ್ಷಣಾ ಕೈಗಾರಿಕಾ ಸಹಕಾರ, ತಂತ್ರಜ್ಞಾನ ಹಂಚಿಕೆ, ನವೀನತೆ ಮತ್ತು ಪ್ರಾದೇಶಿಕ ಭದ್ರತಾ ಸಹಕಾರದ ಮೇಲೆ ಕೇಂದ್ರೀಕೃತವಾದ ತಂತ್ರ ಜ್ಞಾನದ ರಕ್ಷಣಾ ಸಹಭಾಗಿತ್ವದ ಚೌಕಟ್ಟಿನ ಮೇಲೂ ಸಹಿ ಹಾಕಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ತಿಳಿಸಿದೆ.

ಸಿಇಟಿ ಕೌನ್ಸಿಲಿಂಗ್ ಬಗ್ಗೆ ಚರ್ಚೆ

ಬೆಂಗಳೂರು: ಸಿಇಟಿ ಕೌನ್ಸಿಲಿಂಗ್ ಬಗ್ಗೆ ವೈದ್ಯಕೀಯ ಶಿಕ್ಷಣ ಸಚಿವರ ಜೊತೆ ಚರ್ಚಿಸಿ ತೀರ್ಮಾನಿಸುವುದಾಗಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2023 ರಿಂದ ನೀಟ್ ಮತ್ತು ಸಿಇಟಿಯ ಕೌನ್ಸಿಲಿಂಗ್ ಅನ್ನು ಒಟ್ಟಿಗೆ ಮಾಡುತ್ತ ಬಂದಿದ್ದೆವು. ಇದರಿಂದಾಗಿ ಪ್ರತಿಭಾವಂತರಿಗೆ ಅವಕಾಶ ಸಿಗುತ್ತಿತ್ತು. ಇದೀಗ ನೀಟ್ ಮರು ಪರೀಕ್ಷೆಯಿಂದ ವಿಳಂಬವಾಗುತ್ತಿದೆ ಎಂದು ಹೇಳಿದರು.

ವೈದ್ಯಕೀಯ ಕೋರ್ಸ್‌ಗಳಿಗೆ ಸೇರಬೇಕಾದರೆ ನೀಟ್ ಪರೀಕ್ಷೆ ಬಹುಮುಖ್ಯವಾಗಿದೆ. ಕೆಲವು ಸಂದರ್ಭಗಳಲ್ಲಿ ಸಿಇಟಿ ಪರೀಕ್ಷೆ ಬರೆಯುವಾಗ ತಪಾಸಣೆ ಮಾಡುವವರಿಂದ ಬೇಜವಾಬ್ದಾರಿ ಆಯಿತು. ಅದನ್ನು ಬಿಜೆಪಿಯವರು ದೊಡ್ಡ ಮಟ್ಟಕ್ಕೆ ಬಿಂಬಿಸಿದ್ದರು. ಈಗ ಇಡೀ ದೇಶದ 22 ಲಕ್ಷ ಮಕ್ಕಳ ಭವಿಷ್ಯ ನೀಟ್ ಪರೀಕ್ಷೆಯ ತೂಗುಯ್ಯಾಲೆಯಲ್ಲಿದೆ. ಬಿಜೆಪಿಯ ಮಹಾನ್ ನಾಯಕರು ಏನು ಉತ್ತರ ಕೊಡುತ್ತಾರೆ ಎಂದು ಪ್ರಶ್ನಿಸಿದರು.

ಇನ್ನು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಬಿಜೆಪಿಯ ಅಂಧ ಭಕ್ತರು ಏನೇ ಮಾಡಿದರೂ ಸಂತೋಷ ಪಡುತ್ತಾರೆ. ಮೋದಿ ಅವರು ಹೇಳುವುದನ್ನು ಎಲ್ಲಾ ಕಡೆ ಅವರು ಕೇಳುತ್ತಾರೆ. ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಆಗಿರುವುದಕ್ಕೆ ಅವರೆಲ್ಲರಿಗೂ ಈಗ ಸಂತೋಷ ಆಗಿದೆ ಎಂದು ಲೇವಡಿ ಮಾಡಿದರು.



ಮೈಸೂರಿನಲ್ಲಿ ತೋಟಗಾರಿಕಾ ಇಲಾಖೆ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಮಾವು ಮೇಳದಲ್ಲಿ ಗ್ರಾಹಕರು ವಿವಿಧ ತಳಿ ಮಾವಿನ ಹಣ್ಣುಗಳನ್ನು ಖರೀದಿಸಿದರು.

ರಸ್ತೆ ಅಪಘಾತ: 7 ಮಂದಿ ಸಾವು

ಕೊಪ್ಪಳ: ತಾಲೂಕಿನ ಮುನಿರಾಬಾದ್ ಬಳಿ, ರಾಷ್ಟ್ರೀಯ ಹೆದ್ದಾರಿ 50ರಲ್ಲಿ ನಡೆದ ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ 7 ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅನೇಕರು ಚಿಂತಾಜನಕ ಸ್ಥಿತಿಯಲ್ಲಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

ಕೊಪ್ಪಳ ಮಾರ್ಗವಾಗಿ ತೆರಳುತ್ತಿದ್ದ ಟ್ರ್ಯಾಕ್ಟರ್‌ಗೆ ಟಿಪ್ಪರ್ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಟ್ರ್ಯಾಕ್ಟರ್ ಸೇತುವೆ ಮೇಲಿಂದ ಸುಮಾರು 20 ಅಡಿ ಕೆಳಗೆ ಬಿದ್ದಿದೆ. ಅಪಘಾತದಲ್ಲಿ ಕೆಂಚಪ್ಪ (35), ಮಹಾಂತೇಶ (18) ಭರತ್ (01) ಸವಿತಾ (12) ಮಾರೇಶ, ಗೌರಮ್ಮ, ಮಂಜಮ್ಮ ಸೇರಿ ಏಳು ಜನ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರು ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕು ಮಲ್ಲಾರಹಳ್ಳಿ ಹಾಗೂ ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ಯಶವಂತ ನಗರ ಗ್ರಾಮದ ನಿವಾಸಿಗಳು. ಉಳಿದಂತೆ ಟ್ರ್ಯಾಕ್ಟರ್ ನಲ್ಲಿದ್ದ 6 ವರ್ಷದ ಮಗು ಹೊರತಾಗಿ ಸುಮಾರು 10 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರು ಕೊಪ್ಪಳ ತಾಲೂಕು ಹುಲಗಿ ಗ್ರಾಮದ ಹುಲಿಗೆಮ್ಮ ದೇವಿ ದೇವಸ್ಥಾನಕ್ಕೆ ಹೋಗುತ್ತಿದ್ದಾಗ ಘಟನೆ ನಡೆದಿದೆ. ವಿಜಯನಗರ- ಕೊಪ್ಪಳ ಜಿಲ್ಲೆಯ ಗಡಿ ಭಾಗದಲ್ಲಿ ಅಪಘಾತ ಜರುಗಿದ್ದು, ಗಾಯಾಳುಗಳ ಪೈಕಿ ಹಲವರನ್ನು ಕೊಪ್ಪಳ ಕಿಮ್ಸ್‌ಗೆ ಮತ್ತು ಕೆಲವರನ್ನು ಹೊಸಪೇಟೆ ತಾಲೂಕು ಆಸ್ಪತ್ರೆಗೆ ರವಾನಿಸಲಾಗಿದೆ. ಸಂಡೂರು ತಾಲೂಕು ಮಲ್ಲಾರಹಳ್ಳಿ ಗ್ರಾಮದ ಅಜಯ್ ತಂದೆ ಜಾತಪ್ಪ (26), ಮಾಯಾ ತಂದೆ ಕೆಂಚಪ್ಪ (16)ವರ್ಷ, ಚೇತನ ತಂದೆ ನಾಗರಾಜ (21), ಹನುಮಕ್ಕ ಗಂಡ ಮಂಜುನಾಥ, ನಾಗರಾಜ ತಂದೆ ಯಶವಂತ್, ಅರುಣಮ್ಮ ಗಂಡ ಜಾತಪ್ಪ(45), ರೇಣುಕಾ ಗಂಡ ಚಂಚಪ್ಪ(36), ಅಂಜಲಿ ತಂದೆ ಮಹಾಂತೇಶ(12)

ಸವಿತಾ(9) ಅವರನ್ನು ಕೊಪ್ಪಳ ಕಿಮ್ಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ರವಾನಿಸಲಾಗಿದೆ. ಇನ್ನು ಕೂಡ್ಲಿಗಿಯ 14 ನೇ ವಾರ್ಡ್ ನ ರೇಖಾ ತಂದೆ ಮಂಜುನಾಥ(14), ಅರ್ಜುನ ತಾಯಿ ರತ್ನಮ್ಮ(13), ರಕ್ಷಿತಾ ತಾಯಿ ಸವಿತಾ(4), ಮಹಾಲಕ್ಷ್ಮಿ ತಂದೆ ಓಬಳೇಶ (6) ಎಂಬುವರು ಹೊಸಪೇಟೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇಂದಿನಿಂದ ಖಾಸಗಿ ಬಸ್ ಟಿಕೆಟ್ ದರ ಏರಿಕೆ


ಬೆಂಗಳೂರು: ಪೆಟ್ರೋಲ್, ಡಿಸೇಲ್ ದರ ಏರಿಕೆ ಹಿನ್ನೆಲೆ ಶುಕ್ರವಾರ ಮಧ್ಯರಾತ್ರಿಯಿಂದಲೇ ಖಾಸಗಿ ಬಸ್ ಟಿಕೆಟ್ ದರ ಏರಿಕೆಗೆ ತೀರ್ಮಾನಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ನಟರಾಜ್ ಶರ್ಮಾ ತಿಳಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಸ್ ಒಂದಕ್ಕೆ ಪ್ರತಿದಿನ ಕನಿಷ್ಠ 150 ಲೀ. ಡೀಸೆಲ್ ಹಾಕಿಸುತ್ತೇವೆ. ಇಂಧನ ಬೆಲೆಯಲ್ಲಿ 3 ರೂ. ಹೆಚ್ಚಳವಾಗಿರುವ ಕಾರಣ 450 ರೂ. ಹೆಚ್ಚುವರಿಯಾಗಿ ನಮಗೆ ಹೊರೆಯಾಗಲಿದೆ. ಹೀಗಾಗಿ ಟಿಕೆಟ್‌ಗಳ ದರ ಏರಿಸೋದು ನಮಗೂ ಅನಿವಾರ್ಯವಾಗಿದೆ. ಇದರ ಪರಿಣಾಮ ಪ್ರಯಾಣಿಕರ ಮೇಲೆ ಉಂಟಾಗಲಿದೆ ಎಂದು ಹೇಳಿದರು.

ಕಿರುಸುದ್ದಿ

ಮುಸ್ಲಿಂ ತುಷ್ಟೀಕರಣಕ್ಕೆ ಯತ್ನ: ಸಂಸದ ಬೊಮ್ಮಾಯಿ

ಬೆಂಗಳೂರು: ರಾಜ್ಯ ಸರ್ಕಾರ ಯಾವುದೇ ಬೇಡಿಕೆ ಇಲ್ಲದಿದ್ದರೂ ಶಾಲೆಗಳಲ್ಲಿ ಹಿಜಾಬ್ ಧರಿಸಲು ಅವಕಾಶ ಕಲ್ಪಿಸಿ ಧರ್ಮದ ಆಧಾರದಲ್ಲಿ ಮುಸ್ಲಿಂ ತುಷ್ಟೀಕರಣಕ್ಕಾಗಿ ಈ ಆಜ್ಞೆ ಮಾಡಿದೆ. ಇದನ್ನು ಹಿಂಪಡೆದಿದ್ದರೆ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಆಗುವ ಆತಂಕ ಮತ್ತು ಭೇದ-ಭಾವಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಎಚ್ಚರಿಸಿದ್ದಾರೆ.



1980 ರ ಶಾಲಾ ಸಮವಸ್ತ್ರ ಕಾನೂನಿನಡಿಯಲ್ಲಿ ನಾವು ಆ ಸ್ಪಷ್ಟೀಕರಣದ ಆದೇಶ ಮಾಡಿದ್ದೆವು. ಅದನ್ನು ಹೈಕೋರ್ಟ್ ಕೂಡ ಎತ್ತಿ ಹಿಡಿದಿತ್ತು. ಸುಪ್ರೀಂ ಕೋರ್ಟ್‌ನಲ್ಲಿಯೂ ಅದು ವಿಭಜಿತ ತೀರ್ಪು ಆಗಿತ್ತು. ಈ ಪ್ರಕರಣ ಇನ್ನೂ ಸುಪ್ರೀಂ ಕೋರ್ಟ್‌ನಲ್ಲಿರುವಾಗಲೇ ಮಕ್ಕಳಲ್ಲಿ ಮತ್ತೆ ಬೇಧ-ಭಾವದ ಆತಂಕವನ್ನು ಮೂಡಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ರಾಜ್ಯ ಸರ್ಕಾರ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹದಗೆಡಿಸಿದೆ. ಯಾವುದೇ ಸ್ಪಷ್ಟವಾದ ನೀತಿ ಇಲ್ಲ. ಯಾವುದೇ ವಿದ್ಯಾರ್ಜನೆ ಆಗುತ್ತಿಲ್ಲ. ಶಿಕ್ಷಕರ ಕೊರತೆ ಇದೆ. ಇಂತಹದನ್ನು ಮುಚ್ಚಿಕೊಳ್ಳಲು ಇಂತಹ ಆದೇಶ ಮಾಡಿದ್ದಾರೆ. ಕಾನೂನು ರೀತಿಯಲ್ಲಿ ರಾಜ್ಯ ಸರ್ಕಾರವೇ ವಿವಾದ ಹುಟ್ಟು ಹಾಕಿದೆ. ಇದು ನಾಗರಿಕ ಸರ್ಕಾರಕ್ಕೆ ಶೋಭೆ ತರುವುದಿಲ್ಲ. ಇದು ಜವಾಬ್ದಾರಿಯಲ್ಲ. ಅತ್ಯಂತ ಬೇಜವಾಬ್ದಾರಿಯ ನಿರ್ಣಯ ಎಂದು ಬಸವರಾಜ ಬೊಮ್ಮಾಯಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇಲೆಕ್ಟ್ರಿಕ್ ದ್ವಿಚಕ್ರ ವಾಹನದಲ್ಲಿ ಶಾಸಕ ಶ್ರೀವತ್ಸ ಸಂಚಾರ

ಮೈಸೂರು: ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು ತಮ್ಮ ಐಷಾರಾಮಿ ಪೆಟ್ರೋಲ್ ಕಾರಿನಲ್ಲಿ ಸಂಚರಿಸುವುದನ್ನು ಸ್ಥಗಿತಗೊಳಿಸಿದ್ದಾರೆ. ದೇಶದ ಪ್ರಧಾನಿ ನರೇಂದ್ರ ಮೋದಿ ಅವರು ಪೆಟ್ರೋಲ್ ಮತ್ತು ಡೀಸೆಲ್ ಬಳಕೆಯನ್ನು ಕಡಿಮೆ ಮಾಡುವಂತೆ ಸಾರ್ವಜನಿಕರಿಗೆ ಕರೆ ನೀಡಿದ್ದು, ಅದರಂತೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು ತಮ್ಮ ದಿನನಿತ್ಯದ ಸಂಚಾರಿ ವಾಹನ ವ್ಯವಸ್ಥೆಯಲ್ಲಿ ಶೇಕಡ 90ರಷ್ಟು ಇಂಧನ ಬಳಕೆ ಕಡಿತಗೊಳಿಸಲು ತೀರ್ಮಾನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಶುಕ್ರವಾರದಿಂದಲೇ ಇಲೆಕ್ಟ್ರಿಕ್ ಕಾರ್ ಮತ್ತು ಇಲೆಕ್ಟ್ರಿಕ್ ದ್ವಿಚಕ್ರ ವಾಹನದ ಮೂಲಕ ತಮ್ಮ ಕೆಲಸಗಳಿಗಾಗಿ ಮಾರ್ಪಾಡು ಮಾಡಿಕೊಂಡು ಸಂಚರಿಸಿದ್ದಾರೆ. ಇಲೆಕ್ಟ್ರಿಕ್ ದ್ವಿಚಕ್ರ ವಾಹನದಲ್ಲಿ ಓಡಾಡಿದ್ದಾರೆ. ಇದೇ ಸಂಧರ್ಭದಲ್ಲಿ ಕೃಷ್ಣರಾಜ ಕ್ಷೇತ್ರದ ನಾಗರೀಕರು ಸಮೂಹ ಸಾರಿಗೆ ಬಸ್‌ಗಳನ್ನು ಹೆಚ್ಚಾಗಿ ಬಳಸಬೇಕೆಂದು ಕರೆ ನೀಡಿದರು.



ಗೋಮಾಂಸ ಮಾರಾಟಕ್ಕೆ ಯತ್ನ: ದೂರು

ನಾಗಮಂಗಲ: ಪ್ಯಾಕೇಟ್‌ನಲ್ಲಿ ಗೋಮಾಂಸವನ್ನು ಮನೆ ಮನೆಗೆ ಮಾರಾಟ ಮಾಡಲು ಯತ್ನಿಸಿದ ಘಟನೆ ಬೆಳ್ಳೂರಿನ ಅಂಬೇಡ್ಕರ್ ಕಾಲೋನಿಯಲ್ಲಿ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ. ತಾಲೂಕಿನಲ್ಲಿ ಅಪರಿಚಿತ ವ್ಯಕ್ತಿ ರಾಜಾರೋಷವಾಗಿ ಅಂಬೇಡ್ಕರ್ ಕಾಲೋನಿಯಲ್ಲಿ 17 ಪ್ಲಾಸ್ಟಿಕ್ ಚೀಲದಲ್ಲಿ ಗೋಮಾಂಸವನ್ನು ಮಾರಾಟ ಮಾಡಲು ಯತ್ನಿಸಿದಾಗ ಸ್ಥಳೀಯರು ತಡೆದು ವಿಚಾರಿಸಿದ ವೇಳೆ ಬೈಕ್ ಅಲ್ಲೆ ಬಿಟ್ಟು ಆತ ಪರಾರಿಯಾಗಿದ್ದಾನೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಈ ಬಗ್ಗೆ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೆಂಗಳೂರಲ್ಲಿ 875 ಜಾಗತಿಕ ಸಾಮರ್ಥ್ಯ ಕೇಂದ್ರ | ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು

ಸಾಮಾಜಿಕ ಪರಿವರ್ತನೆಗೆ ಶಿಕ್ಷಣವೇ ಶಕ್ತಿ

ಬೆಂಗಳೂರು: ಕೃತಕ ಬುದ್ಧಿಮತ್ತೆ (ಎಐ), ಜೈವಿಕ ತಂತ್ರಜ್ಞಾನ, ಅರೆವಾಹಕ ಉತ್ಪಾದನೆ, ಹವಾಮಾನ ತಂತ್ರಜ್ಞಾನ ಹಾಗೂ ಡಿಜಿಟಲ್ ಪರಿವರ್ತನೆಯ ಯುಗದಲ್ಲಿ ವಿದ್ಯಾರ್ಥಿಗಳನ್ನು ಭವಿಷ್ಯದ ಸವಾಲುಗಳಿಗೆ ಸಿದ್ಧಗೊಳಿಸುವುದು ಅತ್ಯಗತ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಉನ್ನತ ಶಿಕ್ಷಣ ಇಲಾಖೆಯ ನೇತೃತ್ವದಲ್ಲಿ ವಿವಿಧ ಇಲಾಖೆಯಗಳ ಸಹಯೋಗದೊಂದಿಗೆ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿರುವ ಕ್ಯಾಂಪಸ್ ಟು ಕೆರಿಯರ್ (ಸಿಟುಸಿ) ಕಾರ್ಯಕ್ರಮವನ್ನು ಅವರು ಉದ್ಘಾಟಿಸಿದರು.

ಶಿಕ್ಷಣವು ಕೇವಲ ಪದವಿ ನೀಡುವ ಪ್ರಕ್ರಿಯೆಯಲ್ಲ. ಶಿಕ್ಷಣವು ಸಾಮಾಜಿಕ ಪರಿವರ್ತನೆಗೆ ಅತ್ಯಂತ ಶಕ್ತಿಯುತ ಸಾಧನವಾಗಿದೆ. ಜ್ಞಾನ, ಕೌಶಲ ಅಭಿವೃದ್ಧಿ, ನಾವೀನ್ಯತೆ ಮತ್ತು ಎಲ್ಲರನ್ನೂ ಒಳಗೊಂಡ ಬೆಳವಣಿಗೆಗೆ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಸಮಾನ, ಪ್ರಗತಿಪರ ಮತ್ತು ಸದೃಢ ಸಮಾಜವನ್ನು ರೂಪಿಸುವಲ್ಲಿ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ ಎಂದು ರಾಜ್ಯ ಸರ್ಕಾರ ನಂಬಿದೆ. ಪ್ರತಿ ಪದವೀಧರನು ಉದ್ಯೋಗಕ್ಕೆ ಸಿದ್ಧನಾಗಿರುವ ಹಾಗೂ ಪ್ರತಿ ಶಿಕ್ಷಣ ಸಂಸ್ಥೆಯೂ ಭವಿಷ್ಯಮುಖಿಯಾಗಿರುವ ಕರ್ನಾಟಕ ನಿರ್ಮಾಣವೇ ಸರ್ಕಾರದ ಗುರಿ ಎಂದರು.



ಕರ್ನಾಟಕ ಇಂದು 30.7 ಲಕ್ಷ ಕೋಟಿ ರೂ. ಜಿಎಸ್‌ಡಿಪಿ ಹೊಂದಿರುವ ದೇಶದ ಪ್ರಮುಖ ಆರ್ಥಿಕ ರಾಜ್ಯಗಳಲ್ಲಿ ಒಂದಾಗಿದೆ. ಬೆಂಗಳೂರು 875 ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು ಹೊಂದುವ ಮೂಲಕ ವಿಶ್ವದ ಪ್ರಮುಖ ತಾಂತ್ರಿಕ ಕೇಂದ್ರವಾಗಿ ಬೆಳೆದಿದೆ. ರಾಜ್ಯವು ದೇಶದ ಅತ್ಯಂತ ಕ್ರಿಯಾತ್ಮಕ ಆರ್ಥಿಕತೆಗಳಲ್ಲಿ ಒಂದಾಗಿ ಪರಿವರ್ತನೆಯಾಗಲು ದಶಕಗಳ ಕಾಲ ಶಿಕ್ಷಣ, ಸಂಸ್ಥೆಗಳ ನಿರ್ಮಾಣ ಮತ್ತು ಮಾನವ ಬಂಡವಾಳದಲ್ಲಿ ಹೂಡಿಕೆ ಮಾಡಿರುವುದರಿಂದ ದೊರೆತಿರುವ ನೇರ ಲಾಭಾಂಶ ಇದಾಗಿದೆ. ರಾಜ್ಯದಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ 66 ಕಾಲೇಜುಗಳಿದ್ದು, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿಯಲ್ಲಿದೆ ಎಂದು ತಿಳಿಸಿದರು.

ಶಿಕ್ಷಣವು ವಿದ್ಯಾರ್ಥಿಗಳಿಗೆ ಉದ್ಯೋಗ, ಉದ್ಯಮಶೀಲತೆ ಮತ್ತು ನಾಯಕತ್ವದ ಅವಕಾಶಗಳನ್ನು ಒದಗಿಸಬೇಕು. ಶಿಕ್ಷಣವು ಪದವಿಗಳನ್ನು ನೀಡುವುದಕ್ಕಿಂತ ಹೆಚ್ಚಿನದನ್ನು ನೀಡಬೇಕು. ಕುತೂಹಲ, ಸೃಜನಶೀಲತೆ, ಸಾಮರ್ಥ್ಯ ಮತ್ತು ವ್ಯಕ್ತಿತ್ವವನ್ನು ಪೋಷಿಸಬೇಕು ಎಂದರು.

ಇದೇ ವೇಳೆ ಉನ್ನತ ಶಿಕ್ಷಣ ಇಲಾಖೆಯು 6 ಭಾಗೀದಾರರೊಂದಿಗೆ ವಿವಿಧ ಸಹಭಾಗಿತ್ವದ ಕಾರ್ಯಕ್ರಮಗಳ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿತು. ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್, ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಖುಷ್ಬೂ ಚೌಧರಿ ಮತ್ತಿತರರಿದ್ದರು.

20 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ

ರಾಜ್ಯದ ಮಹತ್ವಾಕಾಂಕ್ಷಿ ಯುವ ನಿಧಿ ಯೋಜನೆಯ ಮೂಲಕ ಪದವೀಧರರ ಕೌಶಲ ಹಾಗೂ ಆತ್ಮವಿಶ್ವಾಸ ವೃದ್ಧಿಗೆ ಸರ್ಕಾರ ಸಹಕಾರ ನೀಡುತ್ತಿದೆ. ಜೊತೆಗೆ ಕೈಗಾರಿಕಾ ನೀತಿಯ ಮೂಲಕ ಉತ್ಪಾದನೆ, ಸೇವೆ, ಶುದ್ಧ ತಂತ್ರಜ್ಞಾನ ಹಾಗೂ ಉದಯೋನ್ಮುಖ ವಲಯಗಳಲ್ಲಿ 20 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ ಹೊಂದಿದೆ. ನಮ್ಮ ಮಹತ್ವಾಕಾಂಕ್ಷಿ ಕ್ವಿನ್ ಸಿಟಿ ಕಾರ್ಯಕ್ರಮವು ಮುಂದಿನ ಪೀಳಿಗೆಯ ಜ್ಞಾನ, ಸ್ವಾಸ್ಥ್ಯ, ನಾವೀನ್ಯತೆ ಮತ್ತು ಉದ್ಯಮವು ಒಮ್ಮುಖವಾಗಿ ಭವಿಷ್ಯದ ಪೀಳಿಗೆಗೆ ಅವಕಾಶಗಳನ್ನು ಸೃಷ್ಟಿಸುತ್ತದೆ. ಆದ್ದರಿಂದ ಸರ್ಕಾರ, ಶಿಕ್ಷಣ ಕ್ಷೇತ್ರ ಮತ್ತು ಉದ್ಯಮದ ನಡುವೆ ಬಲವಾದ ಸಹಯೋಗ ಮುಖ್ಯ ಎಂದು ಸಿದ್ದರಾಮಯ್ಯ ಹೇಳಿದರು.

> ನಮ್ಮ ವಿಶ್ವವಿದ್ಯಾಲಯಗಳು ಕೇವಲ ಪದವಿ ನೀಡುವುದಕ್ಕೆ ಸೀಮಿತವಾಗದೇ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕೌಶಲಗಳು, ನಾವೀನ್ಯತೆ ಸಾಮರ್ಥ್ಯ ಮತ್ತು ನೈಜ ಪ್ರಪಂಚದ ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸ ನೀಡಬೇಕು.
> ■ **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಉತ್ಖನನದಲ್ಲಿ ಆನೆಯ ಶಿಲ್ಪ ಪತ್ತೆ

ವಿಜಯನರ: ವಿಶ್ವವಿಖ್ಯಾತ ಹಂಪಿಯ ಹಜಾರರಾಮ ದೇವಸ್ಥಾನ ಸಮೀಪ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ (ಎಎಸ್ ಐ) ನಡೆಸುತ್ತಿರುವ ಉತ್ಖನನದ ವೇಳೆ ವಿಜಯನಗರ ಕಾಲದ ಅಪರೂಪದ ಆನೆಯ ಕಲಾಕೃತಿಯ ಹುಬ್ಬು ಶಿಲೆ ಪತ್ತೆಯಾಗಿದೆ.

ಹಜಾರರಾಮ ದೇವಸ್ಥಾನದ ದಕ್ಷಿಣ ದ್ವಾರದ ಗೋಡೆಯ ಭಾಗದಲ್ಲಿ ಜೀರ್ಣೋದ್ಧಾರ ಕೆಲಸ ನಡೆಯುತ್ತಿದ್ದು, ಈ ಸುಂದರ ಶಿಲ್ಪ ಬೆಳಕಿಗೆ ಬಂದಿದೆ. 1565ರ ಯುದ್ಧದ ಸಮಯದಲ್ಲಿ ಹಾನಿಗೊಳಗಾಗಿದ್ದ ಅನೇಕ ಸ್ಮಾರಕಗಳ ಅವಶೇಷಗಳು ಈಗ ಒಂದೊಂದಾಗಿ ಲಭ್ಯವಾಗುತ್ತಿದ್ದು, ಅಂದಿನ ಕಾಲದ ಶ್ರೀಮಂತ ಕಲೆಗೆ ಸಾಕ್ಷಿಯಾಗಿವೆ. ಸುದ್ದಿ ತಿಳಿಯುತ್ತಿದ್ದಂತೆಯೇ ಪುರಾತತ್ವ ಅಧೀಕ್ಷಕ ಕೆ.ರಾಮಕೃಷ್ಣ ರೆಡ್ಡಿ ಅವರು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

> ಹಜಾರರಾಮ ದೇವಸ್ಥಾನದ ಬಳಿ ಆನೆಯ ಉಬ್ಬು ಶಿಲ್ಪಕಲಾಕೃತಿಯೊಂದು ಪತ್ತೆಯಾಗಿದೆ. ಅದು ವಿಜಯನಗರ ಕಾಲಕ್ಕೆ ಸೇರಿದ್ದು ಎಂದು ಅಂದಾಜಿಸಲಾಗಿದೆ.
> ■ **ಕೆ.ರಾಮಕೃಷ್ಣರೆಡ್ಡಿ,** ಪುರಾತತ್ವ ಇಲಾಖೆ ಅಧೀಕ್ಷಕ



> ವಿಶ್ವ ಪ್ರಸಿದ್ಧ ಐತಿಹಾಸಿಕ ಹಂಪಿಯಲ್ಲಿ ಪ್ರಸ್ತುತ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಕೈಗೊಂಡಿರುವ ಉತ್ಕನನ ಮತ್ತು ಜೀರ್ಣೋದ್ಧಾರ ಕಾರ್ಯವು ವೈಜ್ಞಾನಿಕ ಮತ್ತು ವ್ಯವಸ್ಥಿತವಾಗಿ ನಡೆಯುತ್ತಿದ್ದು, ಮಣ್ಣಿನಲ್ಲಿ ಅಡಗಿರುವ ಐತಿಹಾಸಿಕ ಸ್ಮಾರಕಗಳು ಬೆಳಕಿಗೆ ಬರುತ್ತಿವೆ. ಇದರಿಂದ ವಿಜಯನಗರ ಸಾಮ್ರಾಜ್ಯದ ಗತ ವೈಭವದ ಪುಟಗಳು ಮತ್ತೆ ತೆರೆದುಕೊಳ್ಳಲಿವೆ.
> ■ **ವಿರೂಪಾಕ್ಷಿ ವಿ ಹಂಪಿ,** ರಾಜ್ಯ ಪ್ರವಾಸಿ ಮಾರ್ಗದರ್ಶಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ

ಶೇ.90ಕ್ಕೂ ಹೆಚ್ಚು ತಕರಾರು ಕೇಸ್ ಇತ್ಯರ್ಥ

ಬೆಂಗಳೂರು: ಹತ್ತಾರು ವರ್ಷಗಳ ದುರಾಡಳಿತದ ಬಳುವಳಿಯಾಗಿದ್ದ ಉಪ ವಿಭಾಗಾಧಿಕಾರಿಗಳ (ಎಸಿ) ನ್ಯಾಯಾಲಯ ಬಾಕಿ ತಕರಾರು ಪ್ರಕರಣಗಳ ಪೈಕಿ ಶೇ.90ಕ್ಕೂ ಹೆಚ್ಚು ಪ್ರಕರಣಗಳನ್ನು ಕಳೆದ ಮೂರು ವರ್ಷಗಳಲ್ಲಿ ಇತ್ಯರ್ಥಪಡಿಸಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಮೆಚ್ಚುಗೆ ವ್ಯಕ್ತಪಡಿಸಿದರು.

ಗುರುವಾರ ವಿಕಾಸಸೌಧದಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳ ಜೊತೆ ಅವರು ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. 3 ವರ್ಷದ ಹಿಂದೆ ನಾವು ಕಂದಾಯ ಇಲಾಖೆ ಜವಾಬ್ದಾರಿ ಸ್ವೀಕರಿಸಿದ್ದಾಗ ರಾಜ್ಯಾದ್ಯಂತ ಅವಧಿ ಮೀರಿದ 73,624 ತಕರಾರು ಪ್ರಕರಣಗಳು ಬಾಕಿಯಿದ್ದವು. ಆ ಸಂಖ್ಯೆಯನ್ನು ಇದೀಗ 7,490ಕ್ಕೆ ಇಳಿಸಿದಂತಾಗಿದೆ. ಮುಂದಿನ ದಿನಗಳಲ್ಲಿ ಈ ಪ್ರಕರಣಗಳನ್ನೂ ಶೀಘ್ರ ಇತ್ಯರ್ಥಪಡಿಸಬೇಕು ಎಂದು ಸೂಚಿಸಿದರು.

ಅತಿ ಹೆಚ್ಚು ಪ್ರಕರಣಗಳು ಬಾಕಿ ಇದ್ದ ತುಮಕೂರು, ದೊಡ್ಡಬಳ್ಳಾಪುರ, ತರೀಕೆರೆ, ಕೋಲಾರ ಸೇರಿದಂತೆ ಹಲವು ಎಸಿ ವಲಯಗಳು ಪ್ರಸ್ತುತ ಸುಧಾರಣೆ ಕಂಡಿವೆ. ಆದರೆ, ಸ್ವತಃ ನಾನು ಪ್ರತಿನಿಧಿಸುವ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಸಾಕಷ್ಟು ಪ್ರಕರಣಗಳು ಬಾಕಿಯಿವೆ ಎಂದು ಸಚಿವ ಕೃಷ್ಣ ಬೈರೇಗೌಡ ಅಸಮಾಧಾನ ಹೊರಹಾಕಿದರು.

ಉತ್ತರ ಜಿಲ್ಲೆಯ ವಿಶೇಷ ಉಪ ವಿಭಾಗಾಧಿಕಾರಿಗಳು ನಿಜಕ್ಕೂ ತಮಗೆ ನೀಡಿದ ಜವಾಬ್ದಾರಿಯನ್ನು ಅತ್ಯುತ್ತಮವಾಗಿ ನಿರ್ವಹಿಸುತ್ತಿದ್ದಾರೆ.




ಆದರೆ, ರೆಗ್ಯುಲರ್ ಉಪ ವಿಭಾಗಾಧಿಕಾರಿಗಳು ಆದೇಶಕ್ಕಾಗಿ ಕಾಯ್ದಿರಿಸಿದ ಪ್ರಕರಣಗಳನ್ನೂ ವಿಲೇ ಮಾಡುತ್ತಿಲ್ಲ. ಪರಿಣಾಮ ಜನ ಸಾಮಾನ್ಯರು ಪ್ರತಿನಿತ್ಯ ನನ್ನ ಗೃಹ ಕಚೇರಿಗೆ ಆಗಮಿಸಿ ನನ್ನನ್ನು ಪ್ರಶ್ನಿಸುತ್ತಿದ್ದಾರೆ. ಯಾರೋ ಒಬ್ಬ ಅಧಿಕಾರಿ ಮಾಡುವ ತಪ್ಪಿಗೆ ಜನರ ಎದುರು ನಾನು ತಲೆ ತಗ್ಗಿಸುವಂತಾಗಿದೆ ಎಂದರು.

ಅಧಿಕಾರಿಗಳ ಸಹಕಾರದಿಂದಾಗಿ ಕಳೆದ ಮೂರು ವರ್ಷಗಳಲ್ಲಿ ಕೋರ್ಟ್ ಕೇಸ್, ಪೌತಿಖಾತೆ, ಪೋಡಿ ದುರಸ್ತಿ, ಆಧಾರ್ ಸೀಡಿಂಗ್, ಇ-ಆಫೀಸ್ ಸೇರಿದಂತೆ ಕಂದಾಯ ಇಲಾಖೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಆದರೆ, ಆಗಬೇಕಾದ ಕೆಲಸ ಇನ್ನಷ್ಟು ಬಾಕಿ ಇದೆ. ಹೀಗಾಗಿ ಅಧಿಕಾರಿಗಳು ಮತ್ತಷ್ಟು ಜನಪರವಾಗಿ ಕೆಲಸ ನಿರ್ವಹಿಸಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಛಾವಣಿ ಕುಸಿದು ನಾಲ್ವರು ಜೀವಂತ ಸಮಾಧಿ

ವಿಜಯಪುರ: ಜೋರಾದ ಮಳೆ, ಗಾಳಿಗೆ ಮನೆ ಮೇಲ್ಛಾವಣಿ ಕುಸಿದು ಇಬ್ಬರು ಪುಟ್ಟ ಮಕ್ಕಳು, ಪತಿ, ಪತ್ನಿ ಸೇರಿ ಒಂದೇ ಕುಟುಂಬದ ನಾಲ್ವರು ಜೀವಂತ ಸಮಾಧಿಯಾಗಿರುವ ಹೃದಯ ವಿದ್ರಾವಕ ಘಟನೆ ಜಿಲ್ಲೆಯ ಆಲಮೇಲ ತಾಲೂಕಿನ ಮೋರಟಗಿ ಗ್ರಾಮದಲ್ಲಿ ನಡೆದಿದೆ.

ಗುರುನಾಥ ಬಡಿಗೇರ (35), ಪತ್ನಿ ಜ್ಯೋತಿ ಗುರುನಾಥ ಬಡಿಗೇರ (28), ಮಕ್ಕಳಾದ ಕಾಳಮ್ಮ (13), ಕೀರ್ತಿ (9) ಮೃತ ದುರ್ದೈವಿಗಳು. ಗುರುನಾಥ ಬಡಿಗೇರ ಕುಟುಂಬ ತಮ್ಮ ಸ್ವಂತ ಮನೆಯ ದುರಸ್ತಿ ಮಾಡುವ ಕಾರಣಕ್ಕೆ, ಊರಲ್ಲಿನ ಹಳೆಯ ಮನೆಯಲ್ಲಿ ಬಾಡಿಗೆಯಾಗಿ ವಾಸವಾಗಿದ್ದರು ಎಂದು ತಿಳಿದು ಬಂದಿದೆ. ಜೋರಾದ ಮಳೆ, ಗಾಳಿಗೆ ಹಳೇ ಮನೆಯ ಮೇಲ್ಛಾವಣಿ ಕುಸಿದಿದ್ದರಿಂದ ಈ ಅವಘಡ ಸಂಭವಿಸಿದೆ. ನಾಲ್ವರ ಮೃತ ದೇಹವನ್ನು ಹೊರ ತೆಗೆಯಲು ಅಗ್ನಿ ಶಾಮಕ ದಳ ಸಿಬ್ಬಂದಿ ಸತತ ಕಾರ್ಯಾಚರಣೆ ನಡೆಸಿದರು. ಘಟನಾ ಸ್ಥಳದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿತ್ತು. ಈ ದುರ್ಘಟನೆ ಸುದ್ದಿ ತಿಳಿಯುತ್ತಿದ್ದಂತೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಸ್ಥಳಕ್ಕೆ ಆಗಮಿಸಿ, ಸಂತ್ರಸ್ತ ಕುಟುಂಬದವರಿಗೆ ಸಾಂತ್ವನ ಹೇಳಿದರು.



ಸರ್ಕಾರದ ನಿರ್ಧಾರಕ್ಕೆ ವಿಹಿಂಪ ವಿರೋಧ

ಬೆಂಗಳೂರು: ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವ ಮೇಲಿನ ನಿರ್ಬಂಧವನ್ನು ಹಿಂಪಡೆಯುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ವಿಶ್ವ ಹಿಂದು ಪರಿಷತ್ ಕರ್ನಾಟಕ ದಕ್ಷಿಣ ತೀವ್ರ ವಿರೋಧ ವ್ಯಕ್ತಪಡಿಸಿದೆ.

2022ರ ಫೆ.5ರಂದು ಜಾರಿಗೊಂಡ ಸರ್ಕಾರದ ಆದೇಶವು ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಸೆಕ್ಷನ್ 133 (2) ಅಡಿಯಲ್ಲಿ ಹೊರಡಿಸಲ್ಪಟ್ಟಿದೆ. ಅದು ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು, ಏಕರೂಪತೆ ಮತ್ತು ಧರ್ಮನಿರಪೇಕ್ಷತೆಯನ್ನು ಕಾಪಾಡುವ ಉದ್ದೇಶ ಹೊಂದಿತ್ತು. ಆದರೆ, ಸರ್ಕಾರದ ಇತ್ತೀಚಿನ ನಿರ್ಧಾರವು ಶಿಕ್ಷಣ ಸಂಸ್ಥೆಗಳ ಸಮವಸ್ತ್ರ ನಿಯಮ ಜಾರಿಗೆ ಇರುವ ಅಧಿಕಾರವನ್ನು ದುರ್ಬಲಗೊಳಿಸುವುದರ ಜೊತೆಗೆ ಆಡಳಿತಾತ್ಮಕ ಗೊಂದಲಕ್ಕೂ ಕಾರಣವಾಗಬಹುದು ಎಂದು ಪರಿಷತ್ ಕಾರ್ಯದರ್ಶಿ ಬಿ.ಇ. ಸುರೇಶ್ ಹೇಳಿದ್ದಾರೆ.

ಹಿಜಾಬ್ ನಿಷೇಧ ಕುರಿತ ಹಿಂದಿನ ಸರ್ಕಾರದ ಆದೇಶವನ್ನು ಹೈಕೋರ್ಟ್ ಮಾನ್ಯಗೊಳಿಸಿತ್ತು. ಈ ತೀರ್ಪು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವ ಸಂದರ್ಭದಲ್ಲಿ ಹಿಜಾಬ್‌ಗೆ ಅವಕಾಶ ನೀಡಿ ಆದೇಶ ಹೊರಡಿಸಿರುವುದು ಸೂಕ್ತವಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಟಾಂಗ್

ಎಚ್‌ಡಿಕೆ ಟೀಕಿಸದೇ ಇದ್ದರೆ ಬದುಕಲ್ಲ

ಬೆಂಗಳೂರು: ಕುಮಾರಸ್ವಾಮಿ ಅವರು ನಮ್ಮ ಬಗ್ಗೆ ಟೀಕೆ ಮಾಡದಿದ್ದರೆ ರಾಜಕೀಯವಾಗಿ ಬದುಕಿರಲು ಆಗುವುದಿಲ್ಲ. ನಾವು ಒಳ್ಳೆಯ ಕೆಲಸ ಮಾಡುತ್ತೇವೆ, ಅವರು ವಿರೋಧ ಮಾಡುತ್ತಾರೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಡದಿ ಟೌನ್‌ಶಿಪ್ ಯೋಜನೆಯ ಬಗ್ಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಟೀಕೆಗೆ ಶುಕ್ರವಾರ ಮಾಧ್ಯಮಗಳಿಗೆ ಅವರು ಪ್ರತಿಕ್ರಿಯೆ ನೀಡಿದರು. ಕುಮಾರಸ್ವಾಮಿ ಅವರು ಮಾಡಿದ ಯೋಜನೆಯನ್ನೇ ನಾವು ಮುಂದುವರೆಸುತ್ತಿದ್ದೇವೆ. ನಾನು ರೈತರ ಬಳಿ ಮಾತ ನಾಡಲು ಸಮಯ, ದಿನಾಂಕ ನಿಗದಿ ಮಾಡಿಕೊಂಡು ಹೋಗುತ್ತೇನೆ. ರೈತರು ನನಗೆ ಎರಡೇಟು ಹೊಡೆಯ ಬಹುದು, ಅಷ್ಟೇ ತಾನೇ? ಬಟ್ಟೆ ಹರಿಯಬಹುದು, ಕಲ್ಲೆಸೆಬಹುದು, ಧಿಕ್ಕಾರ ಹಾಕಬಹುದು. ಅದಕ್ಕೆಲ್ಲ ಹೆದರಿಕೊಳ್ಳಲು ಆಗುತ್ತದೆಯೇ? ಮುಂದೆ ಅವರ ಭವಿಷ್ಯ, ಮಕ್ಕಳ ಹಾಗೂ ಆಸ್ತಿಗಳ ಭವಿಷ್ಯ ಮುಖ್ಯ. ಇವತ್ತಲ್ಲ ಮುಂದಿನ 20 ವರ್ಷಗಳ ನಂತರ ಬಿಡದಿ, ಬೆಂಗಳೂರು ದಕ್ಷಿಣದ ಜನರು ನನ್ನನ್ನು ನೆನಪಿಸಿಕೊಳ್ಳುತ್ತಾರೆ ಎಂದರು.

ಕುಮಾರಸ್ವಾಮಿ ಅವರೇ ಈ ಯೋಜನೆಯ ಭೂಮಿಯನ್ನು ಡಿನೋಟಿಫೈ ಮಾಡಬಹುದಿತ್ತಲ್ಲವೇ? ಯಾಕೆ ಮಾಡಲಿಲ್ಲ? ನಾನು ಡಿನೋಟಿಫೈ ಮಾಡಲು ತಯಾರಿಲ್ಲ. ಅವರು ಡಿನೋಟಿಫೈ ಮಾಡಿ ಎಷ್ಟು ಅನುಭವಿಸುತ್ತಿದ್ದಾರೆ ಎಂದು ಅವರಿಗೆ ಗೊತ್ತು. ಯಡಿಯೂರಪ್ಪ ಅವರಿಗೆ, ನನಗೂ ಗೊತ್ತಿದೆ ಎಂದು ತಿರುಗೇಟು ನೀಡಿದರು. ಎಸ್‌ಐಆರ್ ಬಗ್ಗೆ ನಮಗೂ ಅರಿವಿದೆ. ಪಕ್ಷದ ನಾಯಕರಿಗೆ ಇದರ ಬಗ್ಗೆ ತಿಳಿವಳಿಕೆ ಮೂಡಿಸಲಾಗಿದೆ. ಎಲ್ಲಾ ಪಕ್ಷಗಳು ಈ ಕೆಲಸ ಮಾಡುತ್ತಿವೆ. ಬಿಜೆಪಿ, ಜನತಾದಳ ಎಲ್ಲರೂ ಅವರವರ ಮತಗಳನ್ನು ರಕ್ಷಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಪ್ರಶ್ನೆಗೆ ಉತ್ತರಿಸಿದರು.

ಕೇರಳದ ನೂತನ ಮುಖ್ಯಮಂತ್ರಿಗೆ ಶುಭಕೋರುತ್ತೇನೆ



ಕೇರಳಕ್ಕೆ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಬಗ್ಗೆ ಕೇಳಿದಾಗ, ನಾನು ಅವರಿಗೆ ಶುಭಾಶಯ ಕೋರುತ್ತೇನೆ. ಪಕ್ಷದಲ್ಲಿ ಅರ್ಹತೆ ಇರುವ ಅನೇಕ ಹಿರಿಯ ನಾಯಕರಿದ್ದಾರೆ. ಪಕ್ಷದ ಹೈಕಮಾಂಡ್ ಸತೀಶನ್ ಅವರಿಗೆ ಅವಕಾಶ ನೀಡಿದೆ. ಅವರಿಗೆ ಮನಃಪೂರ್ವಕವಾಗಿ ಶುಭ ಕೋರುತ್ತೇನೆ. ಎಲ್ಲಾ ಮೈತ್ರಿ ಪಕ್ಷಗಳಿಗೆ ಧನ್ಯವಾದ ತಿಳಿಸುತ್ತೇನೆ. ಜನರ ಆಶೋತ್ತರಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತೇವೆ ಎಂದರು.

ಸಿಟಿಸಿ ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಸುಧಾಕರ್ ಇಂಗಿತ

ಶಿಕ್ಷಣದಲ್ಲಿ ಪಠ್ಯಕ್ರಮ ಬದಲಾವಣೆ ಅಗತ್ಯ

ಬೆಂಗಳೂರು: ತಾಂತ್ರಿಕ ಶಿಕ್ಷಣದಲ್ಲಿ ಪಠ್ಯಕ್ರಮ ಬದಲಾವಣೆಯ ಅಗತ್ಯವಿದೆ. ವಿಶೇಷವಾಗಿ ಇಂಜಿನಿಯರಿಂಗ್ ಶಿಕ್ಷಣ ಕ್ಷೇತ್ರದಲ್ಲಿ ಸುಮಾರು ಶೇ. 75ರಷ್ಟು ಬೋಧಕ ವೃಂದಕ್ಕೆ ಸಾಮರ್ಥ್ಯ ವೃದ್ಧಿ ಹಾಗೂ ತರಬೇತಿ ಕಾರ್ಯಕ್ರಮದ ಅಗತ್ಯವಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ ಸುಧಾಕರ್ ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಉನ್ನತ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿರುವ ಕ್ಯಾಂಪಸ್ ಟು ಕೆರಿಯರ್ (ಸಿಟಿಸಿ) ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅನುಭವಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ. ಇಂಜಿನಿಯರಿಂಗ್, ತಾಂತ್ರಿಕ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಹಾಗೂ ಸುರಕ್ಷತಾ ಕೋರ್ಸ್‌ಗಳಲ್ಲಿ ಸಮಗ್ರ ಬದಲಾವಣೆ ತರಬೇಕಾಗಿದೆ ಎಂದರು.

ಶಿಕ್ಷಣ ಇಲಾಖೆ ವಿದ್ಯಾರ್ಥಿ ಕೇಂದ್ರಿತ ಸಂಸ್ಥೆಯಾಗಿದೆ. ವಿವಿಧ ವಿಭಾಗಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಕೌಶಲಾಭಿವೃದ್ಧಿಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಆರಂಭಿಸಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ವೃತ್ತಿ ಅಭಿವೃದ್ಧಿಗೆ ಅಗತ್ಯವಾದ ತರಬೇತಿ ಮತ್ತು ಅನುಭವ ಒದಗಿಸುವತ್ತ ಉನ್ನತ ಶಿಕ್ಷಣ ಇಲಾಖೆ ಕಾರ್ಯನಿರ್ವಹಿಸುತ್ತಿದೆ ಎಂದು ವಿವರಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ಸಮಗ್ರ ಪರಿವರ್ತನೆ ತರಲು ಸರ್ಕಾರ ಹಾಗೂ ಶಿಕ್ಷಣ ಸಂಸ್ಥೆಗಳು ಹಲವು ಹೊಸ ಯೋಜನೆಗಳನ್ನು ರೂಪಿಸುತ್ತಿದೆ. ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಅವಕಾಶಗಳನ್ನು ಕಲ್ಪಿಸುವ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಹೊಸ ಆಲೋಚನೆಗಳು, ತಂತ್ರಜ್ಞಾನ ಆಧಾರಿತ ವ್ಯವಸ್ಥೆಗಳು ಹಾಗೂ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ ಎಂದು ಹೇಳಿದರು.

ಇಂಗ್ಲಿಷ್ ಸಂವಹನ ಕೌಶಲ ವೃದ್ಧಿಗೆ ಕಾರ್ಯಕ್ರಮ ನೆರವು




ಡಿಜಿಟಲ್ ಪರಿವರ್ತನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ಆನ್‌ಲೈನ್ ಸೇವೆಗಳ ಸುಧಾರಣೆ, ತಂತ್ರಜ್ಞಾನ ಆಧಾರಿತ ಬೆಂಬಲ ಹಾಗೂ ಶಿಕ್ಷಣದ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಜಾರಿಗೆ ತರಲು ಸಿದ್ಧತೆ ನಡೆದಿದೆ. ಜೊತೆಗೆ ಯುವಕರಿಗಾಗಿ ಬ್ರಿಟಿಷ್ ಕೌನ್ಸಿಲ್ ಸಹಯೋಗದಲ್ಲಿ ಇಂಗ್ಲಿಷ್ ಭಾಷಾ ಪರಿಣತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆರಂಭಿಸಲಾಗುತ್ತಿದೆ. ರಾಷ್ಟ್ರೀಯ ವಿಶ್ವವಿದ್ಯಾಲಯ ಹಾಗೂ ಇತರೆ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಸಂವಹನ ಕೌಶಲ ವೃದ್ಧಿಗೆ ಈ ಕಾರ್ಯಕ್ರಮ ನೆರವಾಗಲಿದೆ. ಬ್ರಿಟಿಷ್ ಕೌನ್ಸಿಲ್ ಹಾಗೂ ಇತರೆ ಸಂಸ್ಥೆಗಳ ಸಹಭಾಗಿತ್ವದಲ್ಲಿ ವ್ಯಾಪಕ ಇಂಗ್ಲಿಷ್ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಸಿಬ್ಬಂದಿ ಆಯ್ಕೆ ಪರೀಕ್ಷೆಗೆ ಪೂರಕ ಪಠ್ಯಕ್ರಮವನ್ನು ರೂಪಿಸುವ ಪ್ರಯತ್ನ ನಡೆಸುತ್ತಿದ್ದೇವೆ ಎಂದು ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.

ಸಂಪಾದಕೀಯ

ಭೋಜಶಾಲೆ ತೀರ್ಪು: ಇತಿಹಾಸಕ್ಕೆ ನ್ಯಾಯ

ಮಧ್ಯಪ್ರದೇಶ ಹೈಕೋರ್ಟ್‌ನ ಭೋಜಶಾಲೆ ಕುರಿತು ಬಂದಿರುವ ತೀರ್ಪು ಕೇವಲ ಒಂದು ಧಾರ್ಮಿಕ ವಿವಾದದ ಅಂತ್ಯವಲ್ಲ, ಅದು ಭಾರತದ ಸಂಸ್ಕೃತಿಯ ಸತ್ಯಾಂಶ, ಇತಿಹಾಸದ ದಾಖಲೆ ಮತ್ತು ನ್ಯಾಯಾಂಗದ ಸಮತೋಲನದ ಚಿಂತನೆಗೆ ದೊರೆತ ಮಹತ್ವದ ಮುದ್ರೆಯಾಗಿದೆ. ಧಾರ ಜಿಲ್ಲೆಯ ಭೋಜಶಾಲೆ ಸಮುಚ್ಚಯವು ಮೂಲತಃ ಸರಸ್ವತಿ ದೇವಿಗೆ ಸಮರ್ಪಿತ ದೇವಾಲಯವಾಗಿತ್ತು ಎಂಬುದನ್ನು ನ್ಯಾಯಾಲಯ ಸ್ಪಷ್ಟಪಡಿಸಿರುವುದು ಹಲವು ದಶಕಗಳಿಂದ ನಡೆಯುತ್ತಿದ್ದ ವಾದವಿವಾದಗಳಿಗೆ ದಿಕ್ಕು ತೋರಿಸಿದೆ.

ಭಾರತದ ಅನೇಕ ಐತಿಹಾಸಿಕ ತಾಣಗಳು ಶತಮಾನಗಳ ಆಕ್ರಮಣ, ಧ್ವಂಸ ಮತ್ತು ರೂಪಾಂತರಗಳ ಸಾಕ್ಷಿಗಳಾಗಿವೆ. ಭೋಜಶಾಲೆಯೂ ಅದಕ್ಕೆ ಹೊರತಲ್ಲ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವೈಜ್ಞಾನಿಕ ಸಮೀಕ್ಷೆಯಲ್ಲಿ ಪತ್ತೆಯಾದ ಶಿಲ್ಪಗಳು, ಶಾಸನಗಳು, ನಾಣ್ಯಗಳು ಮತ್ತು ದೇವಾಲಯದ ಅವಶೇಷಗಳು ಈ ತಾಣದ ಮೂಲ ಸ್ವರೂಪದ ಕುರಿತು ಗಂಭೀರ ಸಾಕ್ಷ್ಯ ಒದಗಿಸಿವೆ. ಸಾವಿರಾರು ಪುಟಗಳ ದಾಖಲೆ, ಹಲವು ಸಮುದಾಯಗಳ ವಾದ ಮತ್ತು ದೀರ್ಘ ವಿಚಾರಣೆಯ ನಂತರವೇ ನ್ಯಾಯಾಲಯ ಈ ತೀರ್ಪು



ನೀಡಿರುವುದು ಗಮನಾರ್ಹ. ಹೀಗಾಗಿ ಇದನ್ನು ಕೇವಲ ಭಾವನಾತ್ಮಕ ನಿರ್ಣಯ ಎಂದು ಕಾಣಲು ಸಾಧ್ಯವಿಲ್ಲ.

ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ, ನ್ಯಾಯಾಲಯ ತೀರ್ಪಿನ ಜೊತೆಗೆ ಮುಸ್ಲಿಂ ಸಮುದಾಯಕ್ಕೆ ಮಸೀದಿ ನಿರ್ಮಾಣಕ್ಕಾಗಿ ಪರ್ಯಾಯ ಭೂಮಿ ನೀಡುವ ಸಲಹೆಯನ್ನೂ ನೀಡಿದೆ. ಇದೇ ಭಾರತೀಯ ನ್ಯಾಯವ್ಯವಸ್ಥೆಯ ವೈಶಿಷ್ಟ್ಯ. ಇತಿಹಾಸದ ಸತ್ಯವನ್ನು ಒಪ್ಪಿಕೊಳ್ಳುವುದರ ಜೊತೆಗೆ ಸಾಮಾಜಿಕ ಸೌಹಾರ್ದ ಕದಡದಂತೆ ನೋಡಿಕೊಳ್ಳುವ ಪ್ರಯತ್ನವೂ ಇದರಲ್ಲಿ ಕಾಣಿಸುತ್ತದೆ. ನ್ಯಾಯ ಎಂದರೆ ಪ್ರತೀಕಾರವಲ್ಲ, ಸಮತೋಲನ ಸಾಧಿಸುವ ಜವಾಬ್ದಾರಿಯೂ ಹೌದು ಎಂಬ ಸಂದೇಶ ಇದರಲ್ಲಿ ಅಡಕವಾಗಿದೆ. ದೇಶದಲ್ಲಿ ಇಂತಹ ವಿಚಾರಗಳು ಚರ್ಚೆಗೆ ಬಂದಾಗ ಕೆಲವು ರಾಜಕೀಯ ವಲಯಗಳು ತಕ್ಷಣ ಧ್ರುವೀಕರಣದ ರಾಜಕಾರಣಕ್ಕೆ ಇಳಿಯುವುದು ದುರದೃಷ್ಟಕರ. ಆದರೆ ಸತ್ಯವನ್ನು ಸತ್ಯವೆಂದು ಒಪ್ಪಿಕೊಳ್ಳುವುದೇ ಸಮಾಜದ ಪ್ರೌಢಿಮೆ. ಶತಮಾನಗಳ ಹಿಂದಿನ ದುರಂತಗಳನ್ನು ಇಂದಿನ ಪೀಳಿಗೆಯ ಮೇಲೆ ಹೊರಿಸುವ ಮನೋಭಾವವೂ ಸರಿಯಲ್ಲ. ಹಾಗೆಯೇ ಇತಿಹಾಸವನ್ನು ಮರೆಮಾಚುವುದೂ ಸರಿಯಲ್ಲ. ಭೋಜಶಾಲೆ ತೀರ್ಪು ಈ ಎರಡರ ನಡುವಿನ ಸಮತೋಲನದ ಮಾರ್ಗವನ್ನು ತೋರಿಸಿದೆ. ಭಾರತದ ನಾಗರಿಕತೆ ಸಾವಿರಾರು ವರ್ಷಗಳ ಪಾರಂಪರ್ಯವನ್ನು ಹೊತ್ತಿದೆ. ಆ ಪಾರಂಪರ್ಯದ ಗುರುತುಗಳನ್ನು ರಾಜಕೀಯದ ಕಣ್ಣಿನಿಂದಲ್ಲ, ಸಾಂಸ್ಕೃತಿಕ ಸತ್ಯದ ಕಣ್ಣಿನಿಂದ ನೋಡುವ ಮನೋಭಾವ ಬೆಳೆಯಬೇಕು. ಭೋಜಶಾಲೆ ಕುರಿತು ಬಂದಿರುವ ತೀರ್ಪು ಅದಕ್ಕೆ ಹೊಸ ಅಧ್ಯಾಯ ಬರೆದಿದೆ.

ಸರ್ವತ್ರ ದೇವರಿದ್ದಾನೆ

ಅಗ್ನಿರ್ದೇವೋ ದ್ವಿಜಾತೀನಾಂ ಮುನೀನಾಂ ಹೃದಿ ದೈವತಮ್।
ಪ್ರತಿಮಾ ಸ್ವಲ್ಪ ಬುದ್ಧೀನಾಂ ಸರ್ವತ್ರವಿಧಿತಾತ್ಮನಾಮ್ ॥

ದ್ವಿಜರಿಗೆ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ) ಅಗ್ನಿಯಲ್ಲಿ ದೇವರುಂಟು. ಮುನಿಗಳಿಗೆ ತಮ್ಮ ಅಂತರಂಗದಲ್ಲಿಯೇ ದೇವರುಂಟು. ಸಾಮಾನ್ಯ ತಿಳಿವಳಿಕೆಯುಳ್ಳವರಿಗೆ ವಿಗ್ರಹಗಳಲ್ಲಿ ದೇವರುಂಟು. ಆತ್ಮತತ್ವವನ್ನು ಬಲ್ಲವರಿಗೆ ಸರ್ವತ್ರ ದೇವರುಂಟು – ಎಂಬುದು ಶ್ಲೋಕಾರ್ಥ.

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ದೇವರನ್ನು ಕಂಡವರು ಯಾರೂ ಇಲ್ಲ. ಕಂಡವರು ಹಿಂದೆ ಇದ್ದರು ಎಂಬುದನ್ನು ಗ್ರಂಥಗಳ ಮೂಲಕ ತಿಳಿದಿದ್ದೇವೆ. ಆದರೆ ಇಂದಿನ ಕಾಲದಲ್ಲಿ ಕಂಡವರು ಯಾರೂ ಇಲ್ಲ. ಯಾರೂ ಕಾಣದಿದ್ದರೂ ದೇವರಿದ್ದಾನೆ ಎಂದು ನಂಬಿಕೊಂಡು ಜೀವನ ನಡೆಸುತ್ತೇವೆ. ಭಗವಂತ ಸರ್ವಜ್ಞ, ಸರ್ವಶಕ್ತ, ಸರ್ವವ್ಯಾಪಿ ಎಂಬುದು ಶಾಸ್ತ್ರ ನಿರ್ವಚನ. ಭಗವಂತನಿದ್ದಾನೆ ಎಂಬ ನಂಬಿಕೆಯೇ ಬದುಕನ್ನು ಅರ್ಥಪೂರ್ಣಗೊಳಿಸುತ್ತದೆ. ಭಗವಂತ ಎಂಬುದು ಒಂದು ಅದ್ಭುತ ಶಕ್ತಿ. ಸಾಮಾನ್ಯರ ಕಣ್ಣಿಗೆ ಕಾಣಿಸದು. ಊಹಿಸಬಹುದಷ್ಟೇ.

ಸನಾತನ ಪರಂಪರೆಯಲ್ಲಿ ಅನೇಕರು ಅನೇಕ ಬಗೆಯಲ್ಲಿ ದೇವನಿದ್ದಾನೆ ಎಂದು ನಂಬಿ ಆರಾಧಿಸುತ್ತಾರೆ. ದೇವರನ್ನು ಕಾಣುವ ಪರಿ ಬೇರೆ ಬೇರೆ ಇರಬಹುದು.

'ಜನ್ಮನಾ ಜಾಯತೇ ಶೂದ್ರಃ ಕರ್ಮಣಾಜಾಯತೇ ದ್ವಿಜಃ' ಎಂಬ ಮಾತಿದೆ. ಹುಟ್ಟಿದಾಗ ಎಲ್ಲರೂ ಶೂದ್ರರೇ. ಅಲ್ಲಿ ಜಾತಿಯ ಅಥವಾ ವರ್ಣದ ಕಲ್ಪನೆಯಿಲ್ಲ. ತಾಯಿಯ ಗರ್ಭದಿಂದ ಹೊರಬರುವುದು ಮೊದಲ ಹುಟ್ಟಾದರೆ, ಹುಟ್ಟುವ ಮಗುವಿಗೆ ಸಂಸ್ಕಾರವಿತ್ತರೆ ದ್ವಿಜ ಎನಿಸಿಕೊಳ್ಳುತ್ತದೆ. ದ್ವಿಜ ಎಂದರೆ ಎರಡು ಬಾರಿ ಹುಟ್ಟಿದವರು ಎಂದರ್ಥ. ಎರಡು ಬಾರಿ ಹುಟ್ಟುವುದು ಎಂದರೇನು? ಹುಟ್ಟಿದ ಮಗುವಿಗೆ ಅನಂತರ ಸಂಸ್ಕಾರ ನೀಡಿ ಸುಸಂಸ್ಕೃತನ್ನಾಗಿಸುವ ಕರ್ಮವಿಧಾನವಿದೆ. ಪರತತ್ವವನ್ನು ತಿಳಿಯಲು ವಿಶೇಷ ಅಧ್ಯಯನಕ್ಕಾಗಿ ಉಪನಯನಾದಿ ಸಂಸ್ಕಾರ ನೀಡುವ ಪದ್ಧತಿಯಿದೆ. ಇದು ಬ್ರಾಹ್ಮಣ, ಕ್ಷತ್ರಿಯ ಹಾಗೂ ವೈಶ್ಯ ಕುಟುಂಬಗಳಲ್ಲಿವೆ. ಹಿಂದೆ ಸ್ತ್ರೀಯರಿಗೂ ಉಪನಯನ ಸಂಸ್ಕಾರವಿತ್ತು. ಕಾಲಕ್ರಮದಲ್ಲಿ ಸ್ತ್ರೀಯರಿಗೆ ಉಪನಯನ ಇಲ್ಲವಾಯಿತು. ಪುರುಷರಿಗೆ ಮಾತ್ರ ಉಳಿದುಕೊಂಡಿತು. ಉಪವೀತ ವಟು ಅಗ್ನಿ ಕಾರ್ಯ ಮಾಡಿ, ಆಹುತಿ ನೀಡಿ ಅನಂತರ ನಿತ್ಯಕರ್ಮದಲ್ಲಿ ಮುಂದುವರಿಯಬೇಕು. ಇದು ಮಾಡಲೇಬೇಕಾದ ನಿತ್ಯಕರ್ಮ. ಅಗ್ನಿಯನ್ನು ಆರಾಧಿಸಿ, ಆಹುತಿ ನೀಡಿ ಎಲ್ಲ ದೇತೆಗಳನ್ನೂ ಅಲ್ಲಿಯೇ ಕಾಣಬೇಕು. ಆದ್ದರಿಂದ ಈ ಮೂರು ವರ್ಣದವರಿಗೆ ಅಗ್ನಿಯೇ ದೇವರು. ಎಲ್ಲ ದೇವರ ಸಾನ್ನಿಧ್ಯ ಇಲ್ಲಿಯೇ ಉಂಟು. ಆದ್ದರಿಂದ ಅಗ್ನಿಯನ್ನು ಆರಾಧಿಸಿ ಅಲ್ಲಿಯೇ ದೇವತ್ವವನ್ನು ಕಾಣುತ್ತಾರೆ.

ಆ ಹಂತವನ್ನು ಮೀರಿ ಪರತತ್ತ್ವವನ್ನು ಕಾಣುವ ಉತ್ಕಟ ಇಚ್ಛೆಯಿಂದ ಕೂಡಿದ ಸಂತರು ತಮ್ಮ ಅಂತರಂಗದಲ್ಲಿಯೇ ದೇವರನ್ನು ಕಾಣಲು ಹಂಬಲಿಸುತ್ತಾರೆ. ಈ ಕುರಿತಾದ ಚಟುವಟಿಕೆಗಳಲ್ಲಿ ಇರುತ್ತಾರೆ. ಇವರಿಗೆ ದೇವನಿರುವುದು ಅಂತರಂಗದಲ್ಲಿ. ಈ ಎರಡೂ ಹಂತಕ್ಕೆ ಏರದವರು ಪ್ರತಿಮೆಗಳಲ್ಲಿ ದೇವರನ್ನು ಕಾಣಲು ಪ್ರಯತ್ನಿಸುತ್ತಾರೆ. ಪ್ರತಿಮೆಯಲ್ಲಿ ದೇವತೆಯ ಸಾನ್ನಿಧ್ಯವನ್ನು ಕಂಡು ಆರಾಧಿಸುತ್ತಾರೆ. 'ಅವರವರ ಭಾವಕ್ಕೆ ಅವರವರ ಭಕುತಿಗೆ' ಭಗವಂತ ಕಾಣಿಸಿಕೊಳ್ಳುತ್ತಾನೆ.

ಇವೆಲ್ಲ ಹಂತವನ್ನು ಮೀರಿ ನಿಂತವರು ಎಲ್ಲದರಲ್ಲಿಯೂ, ಎಲ್ಲರಲ್ಲಿಯೂ, ಅಂದರೆ ಸರ್ವತ್ರ ದೇವರನ್ನು ಕಂಡು ಆರಾಧಿಸುವವರು. ಇವರು ಅನುಭಾವಿಗಳು, ಆತ್ಮತತ್ತ್ವವನ್ನು ಕಾಣಲು ಹಂಬಲಿಸುವವರು.

ಸೂರ್ಯ ಶಕ್ತಿ ಮತ್ತು ನಾಡಿಗಳು


ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ನಿಮಗೆ ಈ ಹಿಂದೆ ಹೇಳಿರುವಂತೆ ಮೂರು ಮುಖ್ಯ ನಾಡಿಗಳಾದ ಇಡಾ, ಪಿಂಗಳ ಮತ್ತು ಸುಷುಮ್ನಾ ಇವುಗಳಲ್ಲಿ ಪಿಂಗಳ ನಾಡಿಯೇ ಸೂರ್ಯ ನಾಡಿ. ಇದು ನಿಮ್ಮ ಶಕ್ತಿಯನ್ನು, ಜಾಗೃತಿಯನ್ನು ಮತ್ತು ಭೌತಿಕ ಯಶಸ್ಸನ್ನು ನಿಯಂತ್ರಣ ಮಾಡುತ್ತದೆ. ನಿಮ್ಮ ಹಸ್ತದಲ್ಲಿ ಸೂರ್ಯ ರೇಖೆಯು ಹೇಗಿದೆ ಎನ್ನುವುದನ್ನು ನೋಡಿ ನಿಮ್ಮ ಶಕ್ತಿ, ಜಾಗೃತಿ ಮತ್ತು ಯಶಸ್ಸನ್ನು ಆಲೋಚಿಸಲು ಸಾಧ್ಯ. ಕುಂಡಲಿನಿಯು ಜಾಗೃತವಾದಾಗ ಅದು ಮೊದಲಿಗೆ ಇಡಾ ಮತ್ತು ಪಿಂಗಳ ನಾಡಿಗಳಲ್ಲೇ ಪ್ರವಹಿಸುತ್ತದೆ. ಮತ್ತು ಅವುಗಳನ್ನು ಸಮತೋಲನ ಮಾಡುತ್ತದೆ. ಅದು ಹೇಗೆಂದರೆ; ಒಮ್ಮೆ ಇಡಾ ಮತ್ತೊಮ್ಮೆ ಪಿಂಗಳ ಹೀಗೆ ಪ್ರವಹಿಸುವುದು ಸಾಮಾನ್ಯ. ಆದರೆ ಯಾವುದರ ಸಮತೋಲನ ತಪ್ಪಿದೆ ಎನ್ನುವುದನ್ನು ನಿರ್ಧಾರಿಸಿ ಪ್ರವಹಿಸುವುದು ಅಗತ್ಯ. ಇದು ಪ್ರವಹಿಸುವಾಗಲೇ ಆಗಬೇಕಾದ ನಿರ್ಣಯಗಳು. ಅದನ್ನು ಕುಂಡಲಿನಿ ತೀರ್ಮಾನಿಸುತ್ತದೆ ಮತ್ತು ಸೂರ್ಯರೇಖೆಯು ಕಾರ್ಯರೂಪಕ್ಕೆ ತರುತ್ತದೆ.

ಪಿಂಗಳ ನಾಡಿ

ಇಷ್ಟಾಗಿ ಇದೆಲ್ಲಾ ಆಗುವುದು ನಿಮ್ಮ ಉಸಿರಾಟದ ಬಲದಿಂದ. ಬಲ ಮೂಗು ಉಸಿರಾಡುವಾಗ ನಿಮ್ಮ ದೇಹವು ಉಷ್ಣದಿಂದ ಬಿಸಿಯಾಗುತ್ತಾ ಬರುತ್ತದೆ ಎನ್ನುವುದನ್ನು ನೀವು ಗಮನಿಸಿರಬಹುದು. ಜೊತೆಗೆ ಪುರುಷ ಶಕ್ತಿಯೂ ಹೆಚ್ಚುತ್ತದೆ. ದೇಹದ ಚಯಾಪಚಯ ಕ್ರಿಯೆ, ಜೀರ್ಣಕ್ರಿಯೆ ಮತ್ತು ದೈಹಿಕ ಚಟುವಟಿಕೆಗಳನ್ನು ಹೆಚ್ಚಿಸುತ್ತದೆ. ಬೆನ್ನೆಲುಬಿನ ಬಲಭಾಗದಲ್ಲಿ ಹರಿಯುವ ಈ ನಾಡಿಯನ್ನು ಉದ್ದೀಪನ ಮಾಡಿದಾಗ ನಿಮಗೆ ಎಂತಹಾ ಚಳಿಯಾಗುತ್ತಿದ್ದರೂ ಬೆವರು ಹರಿಯುತ್ತದೆ. ಈ ನಾಡಿಯು ಹಗಲಿನಲ್ಲಿ ಅಂದರೆ ಸೂರ್ಯನ ಇರುವಿಕೆಯ ಸಮಯದಲ್ಲಿ ಹೆಚ್ಚು ಚಲನಶೀಲವಾಗಿರುತ್ತದೆ. ಪಿಂಗಳ ನಾಡಿಯು ಸಕ್ರಿಯವಾಗಿದ್ದಾಗ ನಿಮ್ಮ ದೇಹದ ಎಡ ಮಿದುಳು ಚುರುಕಾಗುತ್ತದೆ. ಹೀಗಾಗಿ ನಿಮ್ಮಲ್ಲಿ ತರ್ಕ, ವಿಶ್ಲೇಷಣೆಗಳು ಹೆಚ್ಚುತ್ತವೆ. ಸತ್ಯ, ಪ್ರಾಮಾಣಿಕತೆ, ನೇರ ನಡೆ-ನುಡಿ, ಮಂದಹಾಸ, ಧೈರ್ಯ, ಸಾಹಸ ಮಾಡುವ ಪ್ರವೃತ್ತಿ, ಕೋಪ ಮತ್ತು ಹಸಿವನ್ನು ಸಹಾ ಹೆಚ್ಚಿಸುತ್ತದೆ. ನೀವು ಸದಾಚಾರಿಗಳಾಗಿರುವಂತೆ ನೋಡಿಕೊಳ್ಳುತ್ತದೆ.



ಇಡಾ ನಾಡಿ

ಇದು ಸೂರ್ಯನ ತೇಜಸ್ಸನ್ನು, ಪ್ರಖರತೆಯನ್ನು, ಶಾಖವನ್ನು ಹೀರಿಕೊಂಡು ತಂಪಾದ ಕಿರಣಗಳನ್ನು ನಿಮ್ಮ ಮೇಲೆ ಸುರಿಸುತ್ತದೆ. ನಿಮ್ಮ ದೇಹವು ಎಷ್ಟೇ ಬಿಸಿಯಾಗಿದ್ದರೂ ಬೆನ್ನೆಲುಬಿನ ಎಡ ಭಾಗದಲ್ಲಿರುವ ಈ ನಾಡಿಯನ್ನು ಉದ್ದೀಪನ ಮಾಡಿದರೆ, ನಿಮಗೆ ಇದ್ದಕ್ಕಿದ್ದಂತೆ ಚಳಿ ಪ್ರಾರಂಭವಾಗುತ್ತದೆ. ಇದು ಸ್ತ್ರೀ ಶಕ್ತಿ ಉತ್ತೇಜಕವೂ ಆಗಿದೆ. ಮನಸ್ಸನ್ನು ಶಾಂತಗೊಳಿಸಿ ನಿಮ್ಮ ಸೃಜನಶೀಲತೆಯನ್ನು ಹೆಚ್ಚಿಸುತ್ತದೆ. ಇದು ರಾತ್ರಿಯ ಚಂದ್ರನ ಇರುವಿಕೆಯಲ್ಲಿ ಹೆಚ್ಚು ಕಾರ್ಯಶೀಲವಾಗಿರುತ್ತದೆ. ನಿಮಗೆ ಸುಖವಾದ ನಿದ್ರೆಯನ್ನು ಕೊಡುವುದು ಇಡಾ ನಾಡಿ. ನಿಮ್ಮ ಕಲ್ಪನೆಯನ್ನು ಗರಿಗೆದರಿಸುವುದು ಇಡಾ ನಾಡಿ. ನಿಮ್ಮೊಳಗಿನ ಇಚ್ಛಾ ಶಕ್ತಿಯನ್ನು, ಆಸೆಗಳನ್ನು, ಕಾಮವನ್ನು ಹೆಚ್ಚಿಸುವುದು ಇಡಾ ನಾಡಿ. ಅಷ್ಟೇ ಅಲ್ಲ; ನಿಮ್ಮೊಳಗಿನ ಕ್ರೂರತೆಯನ್ನು, ಬೇಟೆಗಾರನನ್ನು, ಸಂಚು ಮಾಡುವುದನ್ನು, ಯೋಜನೆ ರೂಪಿಸುವುದನ್ನು, ಕೊಲೆಗಾರನನ್ನು ಹೀಗೆ ಎಲ್ಲಾ ವಾಮ ಕ್ರಿಯೆಗಳನ್ನೂ ಸಹಾ ಇಡಾ ನಾಡಿ ಉತ್ತೇಜಿಸಬಲ್ಲದು. ಒಟ್ಟಾರೆ ದೇಹದ ಸಮತೋಲನಕ್ಕೆ ಎರಡೂ ನಾಡಿಗಳ ನಡುವಿನ ಹೊಂದಾಣಿಕೆ ಮುಖ್ಯ.

ಸುಷುಮ್ನಾ ನಾಡಿ

ಹೀಗೆ ಎರಡೂ ನಾಡಿಗಳು ಸಮತೋಲನಕ್ಕೆ ಬಂದಾಗ ಸುಷುಮ್ನಾ ನಾಡಿಯಲ್ಲಿ ಶಕ್ತಿಯ ಪ್ರವಾಹ ಹರಿಯತೊಡಗುತ್ತದೆ. ನಿಮ್ಮೊಳಗೆ ಆಧ್ಯಾತ್ಮಿಕ ಜಾಗೃತಿ ಉಂಟಾಗುತ್ತದೆ. ಅದಕ್ಕಾಗಿಯೇ ಯೋಗದಲ್ಲಿ ಪ್ರಾಣಾಯಾಮಕ್ಕೆ ತುಂಬಾ ಮಹತ್ವ ಇರುವುದು. ನಾಡಿಶೋಧನಾ ಕ್ರಿಯೆ ಅಥವಾ ಅನುಲೋಮ ಮತ್ತು ವಿಲೋಮಗಳ ಮೂಲಕ ಪಿಂಗಳಾ ಮತ್ತು ಇಡಾ ಎರಡೂ ನಾಡಿಗಳನ್ನು ಶುದ್ಧೀಕರಿಸಬಹುದು. ಹೀಗೆ ದಿನಾಲೂ ಶುದ್ಧೀಕರಿಸುವುದರ ಮೂಲಕ ನಿಮ್ಮನ್ನು ಸದಾ ಸಮತೋಲನದಲ್ಲಿ ಇಟ್ಟುಕೊಳ್ಳಲು ಸಾಧ್ಯ. ಸೂರ್ಯ ನಾಡಿ ಅಂದರೆ ಪಿಂಗಳ ನಾಡಿಯು ಅತಿಯಾಗಿ ಕೆಲಸ ಮಾಡಲು ತೊಡಗಿದರೆ, ದೇಹದ ಉಷ್ಣಾಂಶದ ಜೊತೆಗೆ ಆತಂಕವೂ ಉಂಟಾಗುತ್ತದೆ. ಅದೇ ಚಂದ್ರ ನಾಡಿ ಅಂದರೆ ಇಡಾ ಸಹಾ ಅತಿಯಾಗಿ ಸಕ್ರಿಯವಾದರೆ ಆಲಸ್ಯ ಉಂಟಾಗುತ್ತದೆ.

ಸುಷುಮ್ನಾ ನಾಡಿಯು ಬೆನ್ನೆಲುಬಿನ ಒಳಗೆ ಸೂಕ್ಷ್ಮವಾಗಿ ನೆಲೆಸಿದೆ. ನಿಮ್ಮ ಕುಂಡಲಿನಿ ಶಕ್ತಿಯು ಜಾಗೃತವಾದಂತೆ ಅದು ಇನ್ನಷ್ಟು ಶಕ್ತಿಶಾಲಿಯಾಗುತ್ತದೆ. ಕುಂಡಲಿನಿಯ ಜೊತೆ ಮೂಲಾಧಾರದಿಂದ ಸಹಸ್ರಾರದವರೆಗೂ ಇದು ಹರಿಯುತ್ತದೆ. ಇಡಾ ಮತ್ತು ಪಿಂಗಳ ನಾಡಿಗಳು ನಿಮ್ಮ ಭೌತಿಕ ಮತ್ತು ಲೌಕಿಕ ಚಟುವಟಿಕೆಗಳನ್ನು ನಿಯಂತ್ರಿಸಿದರೆ, ಸುಷುಮ್ನಾ ನಾಡಿಯು ನಿಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಉತ್ತೇಜನಗೊಳಿಸುತ್ತದೆ. ಅದಕ್ಕಾಗಿಯೇ ಇಡಾ ಮತ್ತು ಪಿಂಗಳ ನಾಡಿಗಳು ಸಮತೋಲನದಲ್ಲಿ ಇರಬೇಕು. ಆಗ ಮಾತ್ರ ಸುಷುಮ್ನಾ ನಾಡಿಯು ಸಕ್ರಿಯವಾಗುತ್ತದೆ. ನಿಮಗೆ ಏಕಾಗ್ರತೆ ಉಂಟಾಗಬೇಕಿದ್ದರೆ ಸುಷುಮ್ನಾದಿಂದ ಮಾತ್ರ ಸಾಧ್ಯ. ಕುಂಡಲಿನಿಯು ಮೇಲ್ಮುಖವಾಗಿ ಹರಿಯುವಾಗ ಸುಷುಮ್ನಾ ನಾಡಿಯೊಂದಿಗೇ ಹರಿಯಬೇಕು. ಹಾಗೆ ಆದಾಗ ನಿಮ್ಮ ಮನಸ್ಸು ಪರಮ ಶಾಂತಿಯನ್ನು ಪಡೆಯುತ್ತದೆ. ಮುಕ್ತಿ ಮಾರ್ಗವು ಗೋಚರಿಸುತ್ತದೆ.

ಅಂಗಾದಿತ್ಯ ಎಂದರೆ ಈಗಾಗಲೇ ಹೇಳಿರುವಂತೆ ಸೂರ್ಯನ ತೇಜಸ್ಸು ನಿಮ್ಮ ಯಾವ ಅಂಗದಲ್ಲಿ ಹರಿಯುತ್ತಿದೆ ಎನ್ನುವ ತಿಳಿವಳಿಕೆ. ಅದು ಜೈವಿಕ ಅಗ್ನಿ. ಸೂರ್ಯ ಯಾವ ಅಂಗದಲ್ಲಿ ತೇಜಸ್ಸನ್ನು ಹರಿಸುತ್ತಿದ್ದಾನೋ ಅದನ್ನು ಪ್ರಾಣಶಕ್ತಿ ಎನ್ನಲಾಗುತ್ತದೆ. ಆ ಮೂಲಕ ಸೂರ್ಯನು ಇಡೀ ದೇಹಕ್ಕೆ ಚೈತನ್ಯವನ್ನು ನೀಡುತ್ತಿರುತ್ತಾನೆ. ಸುಷುಮ್ನಾ ನಾಡಿಯು ಆ ಚೈತನ್ಯವನ್ನು ದಿವ್ಯ ಜ್ಞಾನವನ್ನಾಗಿ ಪರಿವರ್ತಿಸುತ್ತದೆ. ಸುಷುಮ್ನಾದ ಒಳಗೆ ಮೂರು ಪದರಗಳಿವೆ. ವಜ್ರಿಣಿ, ಚಿತ್ರಿಣಿ ಮತ್ತು ಬ್ರಹ್ಮ ನಾಡಿ. ಇವುಗಳಲ್ಲಿ ಅಗ್ನಿ ಮತ್ತು ಸೂರ್ಯನ ತೇಜಸ್ಸು ಅಡಕವಾಗಿವೆ. ಪಿಂಗಳ ನಾಡಿಯು ಸೂರ್ಯನ ತೇಜಸ್ಸನ್ನು ನಿರ್ದಿಷ್ಟವಾಗಿ, ಸೂಕ್ತ ಕ್ರಮದಲ್ಲಿ ಸುಷುಮ್ನಾ ನಾಡಿಗೆ ತಲುಪಿಸಿದರೆ, ಅಂತಹಾ ವ್ಯಕ್ತಿಗೆ ಯಾವುದೇ ರೋಗಗಳೇ ಬಾಧಿಸದು. ಅಷ್ಟೇ ಅಲ್ಲ ಆತ ದಿವ್ಯವಾದ ತೇಜಸ್ಸನ್ನು ಪಡೆಯುತ್ತಾನೆ. ಅಂದರೆ ಸೂರ್ಯನ ತೇಜಸ್ಸು; ಸುಷುಮ್ನಾದಲ್ಲಿ ಕುಂಡಲಿನಿಯೊಂದಿಗೆ ಸೇರಿ ಪ್ರಕಾಶಮಾನವಾಗಿ ಬೆಳಗುತ್ತದೆ. ಅದೇ ಆತ್ಮ ಜ್ಞಾನೋದಯ.

ಅಂಗಾದಿತ್ಯ...ನಾಡಿ... ಜಾತಕ

ಅಂಗಾದಿತ್ಯದಲ್ಲಿ ಸೂರ್ಯನು ನಿಮ್ಮ ದೇಹದ ಭೌತಿಕ ಅಂಗಗಳ ಮೇಲೆ ಪ್ರವಹಿಸುತ್ತಾನೆ. ನಾಡಿಯು ಅದರಿಂದ ಪ್ರೇರೇಪಿತವಾಗಿ ಮಾನಸಿಕ ಸ್ಥಿತಿಯ ಸುಧಾರಣೆ ಮಾಡುತ್ತದೆ. ಜಾತಕವು ಅದಕ್ಕೆ ಒಂದು ಮಾರ್ಗದರ್ಶಕ. ಅದರ ಮೂಲಕ ನಿಮ್ಮ ಸ್ಥಿತಿಯನ್ನು ಅಂದಾಜಿಸಬಹುದು. ಅದರಲ್ಲಿರುವ ಗ್ರಹಗಳ ಮೂಲಕ ನಿಮ್ಮ ಇಂದಿನ ಸ್ಥಿತಿಯನ್ನು ಗ್ರಹಿಸಿ ಸೂಕ್ತವಾದ ಪರಿಹಾರವನ್ನು ಹೊಂದ ಬಹುದು. ಇವೆಲ್ಲದರಿಂದ ನಿಮ್ಮ ಪ್ರಾರಬ್ಧವನ್ನು ಶಮನ ಮಾಡಬಹುದು. ಜಾತಕದಲ್ಲಿ ಸೂರ್ಯನು ಆತ್ಮಕಾರಕ. ಅದೇ ಅಂಗಾದಿತ್ಯ ಎಂದರೆ ನಿಮ್ಮ ದೇಹದ ಪ್ರತಿಯೊಂದು ಅಂಗದಲ್ಲಿ ನೆಲೆಸಿರುವ ಸೂರ್ಯನ ಅಂಶ ಅಥವಾ ಪ್ರಮಾಣ. ವ್ಯಕ್ತಿಯ ಹುಟ್ಟಿನ ಸಮಯದಲ್ಲಿ ಸೂರ್ಯನು ಯಾವ ರಾಶಿ ಮತ್ತು ನಕ್ಷತ್ರದಲ್ಲಿ ಇದ್ದಾನೋ ಎನ್ನುವ ಆಧಾರದಲ್ಲಿ ಆ ವ್ಯಕ್ತಿಯ ಆರೋಗ್ಯ ಮತ್ತು ಭವಿಷ್ಯ ನಿರ್ಧಾರವಾಗುತ್ತದೆ. ಸೂರ್ಯ ಮತ್ತು ಚಂದ್ರರು ಜಾತಕನಲ್ಲಿ ಯಾವ ನಕ್ಷತ್ರಗಳಲ್ಲಿ ಇದ್ದಾರೆ ಎನ್ನುವ ಆಧಾರದ ಮೇಲೆ ಅಂಗಾದಿತ್ಯ ಯಾವ ಅಂಗದಲ್ಲಿ ನೆಲೆಸಿದ್ದಾನೆ, ಯಾವೆಲ್ಲಾ ಅಂಗಗಳನ್ನು ಬೆಳಗುತ್ತಿದ್ದಾನೆ ಎನ್ನುವುದನ್ನು ನಿರ್ಧರಿಸಲಾಗುತ್ತದೆ. ಜಾತಕದಲ್ಲಿ ಸೂರ್ಯನು ಪ್ರಬಲ, ಉಚ್ಚ, ಪ್ರಕಾಶಮಾನವಾಗಿದ್ದರೆ ಅಂತಹಾ ವ್ಯಕ್ತಿಗಳಲ್ಲಿ ಅಂಗಾದಿತ್ಯ ಶಕ್ತಿಯೂ ಹೆಚ್ಚಿರುತ್ತದೆ. ಆತ ರೋಗನಿರೋಧಕ ಶಕ್ತಿ ಪಡೆದಿರುತ್ತಾನೆ ಮತ್ತು ಆತ್ಮವಿಶ್ವಾಸ ಹೊಂದಿದವನಾಗಿರುತ್ತಾನೆ.

ಜಾತಕದಲ್ಲಿನ ಗ್ರಹಗಳ ದೆಸೆ ಮತ್ತು ಗೋಚಾರವು ದೇಹದ ಎಲ್ಲಾ ನಾಡಿಗಳ ಮೇಲೆ ಪ್ರಭಾವ ಬೀರುತ್ತಿರುತ್ತದೆ. ಅದರಲ್ಲೂ ಮೂರು ಮುಖ್ಯ ನಾಡಿಗಳಾದ ಪಿಂಗಳ, ಇಡಾ ಮತ್ತು ಸುಷುಮ್ನಾಗಳು ಅತ್ಯಂತ ಸೂಕ್ಷ್ಮವಾಗಿರುವ ಕಾರಣ ಬಲು ಬೇಗ ಪ್ರತಿಕ್ರಿಯಿಸುತ್ತವೆ. ಉದಾಹರಣೆಗೆ ಜಾತಕದಲ್ಲಿ ಮಂಗಳ ಅಥವಾ ಸೂರ್ಯನ ಪ್ರಭಾವ ಹೆಚ್ಚಾದಾಗ ಪಿಂಗಳ ನಾಡಿಯು ಹೆಚ್ಚು ಸಕ್ರಿಯವಾಗುತ್ತದೆ. ಅದರಿಂದಾಗಿ ದೇಹದಲ್ಲಿ ಉಷ್ಣತೆ ಹೆಚ್ಚುತ್ತದೆ. ವ್ಯಕ್ತಿಯು ಪಿತ್ಥ ಪ್ರಕೋಪಕ್ಕೆ ಒಳಗಾಗುತ್ತಾನೆ.

ಜಾತಕವೆನ್ನುವ ಭೂಪಟ

ಜಾತಕವು ಪಾರಬ್ಧ ಕರ್ಮವನ್ನು ಮತ್ತು ವಿಧಿಯ ನಿಯಮಗಳನ್ನು ಪ್ರತಿನಿಧಿಸುತ್ತದೆ. ಒಂದು ರೀತಿಯಲ್ಲಿ ಜೀವನದ ಏರಿಳಿತಗಳು ಮತ್ತು ಸಂಚಿತ ಕರ್ಮವನ್ನು ತೋರಿಸುತ್ತದೆ. ಆದರೆ ಅದರಲ್ಲಿ ಪರಿಹಾರವಿಲ್ಲ. ಕಾರಣ ಯಾವುದೇ ಸಂಗತಿಗಳೂ ಆಗುವುದಾದರೆ ಆಗಿಹೋಗುವುದು ವಿಧಿ ನಿಯಮ. ಅದನ್ನು ಆಗದಂತೆ ಮಾಡುವುದು ಅಸಾಧ್ಯ. ಆದರೆ ಪ್ರಾರ್ಥನೆ ಮತ್ತು ಪ್ರಯತ್ನಗಳು ವಿಧಿಯ ನಿಯಮಗಳನ್ನು ಸಹಾ ಬದಲಿಸುತ್ತವೆ. ಹಾಗೇ ನಾಡಿಗಳು ದೇಹ ಮತ್ತು ಮನಸ್ಸಿನ ನಡುವಿನ ಸಂಪರ್ಕ ಸೇತುವೆ. ಅಂಗಾದಿತ್ಯ ಸೂರ್ಯ ತೇಜಸ್ಸಿನ ಮೂಲಕವೂ ಸಹಾ ಮುಂಬರುವ ಕಷ್ಟಗಳನ್ನು ಸಮತೋಲನ ಮಾಡಬಹುದು. ಎದುರಿಸಬಹುದು. ನಿಯಂತ್ರಣ ಮಾಡಿಕೊಳ್ಳಬಹುದು. ಅಂದರೆ ನಿಮ್ಮ ದೇಹದಲ್ಲಿರುವ ಸೂರ್ಯ ಶಕ್ತಿಯನ್ನು ಬಳಸಿಕೊಳ್ಳುವುದರ ಮೂಲಕ ದೇಹವನ್ನು, ಮನಸ್ಸನ್ನು, ಆರೋಗ್ಯವನ್ನು, ಆರ್ಥಿಕ ಸ್ಥಿತಿಯನ್ನು, ಸಂಬಂಧಗಳನ್ನು, ಹೀಗೆ ಎಲ್ಲವನ್ನು ಸಹಾ ಸರಿ ಮಾಡಿಕೊಳ್ಳಬಹುದು.

ಖಗೋಳ ವಿಜ್ಞಾನ ಮತ್ತು ಅಧಿಕಮಾಸ

ಒಳನೋಟ
• ಹೆ.ಬಾ. ಮಲ್ಯ



ಈ ಬಾರಿ ಚಾಂದ್ರಮಾನದ ಜ್ಯೇಷ್ಠ ಮಾಸ ಅಧಿಕ ಮಾಸವಾಗಿ ಬಂದಿದೆ. ಈ ಬಾರಿ ಚಾಂದ್ರಮಾನದಲ್ಲಿ 12ರ ಬದಲಾಗಿ 13 ತಿಂಗಳು ಬರುತ್ತವೆ. ಇಂದು ವೈಶಾಖ ಕೃಷ್ಣ ಅಮಾವಾಸ್ಯೆ. ನಾಳೆ ಅಧಿಕ ಜ್ಯೇಷ್ಠ ಮಾಸ ಪ್ರಾರಂಭ. ನಂತರ ಪುನಃ ಒಂದು ತಿಂಗಳು ನಿಜ ಜ್ಯೇಷ್ಠ ಮಾಸ. ಹೀಗೆ ಜ್ಯೇಷ್ಠ ಮಾಸ ಎರಡು ಬಾರಿ ಬರುತ್ತದೆ. ಸೌರಮಾನ ಹಾಗೂ ಗ್ರೆಗೋರಿಯನ್ ಇಂಗ್ಲಿಷ್ ಕ್ಯಾಲೆಂಡರ್‌ಗಳಲ್ಲಿ ಅಧಿಕಮಾಸ ಎಂಬುದಿಲ್ಲ. ಕೇವಲ ಚಾಂದ್ರಮಾನದಲ್ಲಿ ಅಧಿಕಮಾಸದ ವ್ಯವಸ್ಥೆ ಇದೆ. ಹಾಗಂತ ಕೇವಲ ಚಾಂದ್ರಮಾನವನ್ನೇ ಅನುಸರಿಸುತ್ತಾ ಹೋದರೆ ಅಧಿಕಮಾಸದ ಅಗತ್ಯವಿರುತ್ತಿರಲಿಲ್ಲ. ಆದರೆ ನಾವು ಚಾಂದ್ರಮಾನದಲ್ಲಿ ಬಳಸುವ ಋತುಮಾನ ವ್ಯತ್ಯಾಸವಾಗುತ್ತದೆ. ಋತುಮಾನ ಬದಲಾಗುವುದು ಸೂರ್ಯನ ಚಲನೆಯಲ್ಲಾಗುತ್ತಿರುವ ಬದಲಾವಣೆಯಿಂದ. ನಾವು ಚಿಕ್ಕವರಿದ್ದಾಗ ಪ್ರಾಥಮಿಕ ಶಾಲೆಗಳಲ್ಲಿ ಮಗ್ಗಿ ಪುಸ್ತಕ (Tables) ಇತ್ತು. ಮಗ್ಗಿಯ ಜೊತೆಗೆ ಚಾಂದ್ರಮಾನ ಸೌರಮಾನ ಮಾಸಗಳು, 27 ನಕ್ಷತ್ರಗಳು, ಪಕ್ಷಗಳು, ಆಯನ, ಸಂವತ್ಸರ ಇತ್ಯಾದಿಗಳ ಹೆಸರನ್ನು ಬಾಯಿ ಪಾಠ ಮಾಡುವುದು ಕಡ್ಡಾಯವಾಗಿತ್ತು. ಚೈತ್ರ-ವೈಶಾಖ, ವಸಂತ ಋತು.... ಇತ್ಯಾದಿ. ಆದರೆ ಈಗಾಗಲೇ ಮೇಲೆ ಹೇಳಿದಂತೆ ಚಾಂದ್ರಮಾನಕ್ಕೂ ಋತುಮಾನ ಬದಲಾವಣೆಗೂ ಸಂಬಂಧವೇ ಇಲ್ಲ. ಋತುಮಾನ ಸೌರಮಾನಕ್ಕೆ ಸಂಬಂಧಪಟ್ಟದ್ದು. ಹಾಗಾಗಿ ಚಾಂದ್ರಮಾನ -ಋತುಗಳು ಹಾಗೂ ಸೌರಮಾನಗಳಲ್ಲಿ ಹೊಂದಾಣಿಕೆ ಮಾಡುವ ಅನಿವಾರ್ಯತೆ ಉಂಟಾಯಿತು.

ಗಣಿತ, ಖಗೋಳ ವಿಜ್ಞಾನ ಇತ್ಯಾದಿಗಳನ್ನು ನಮ್ಮ ಪ್ರಾಚೀನ ಋಷಿಮುನಿಗಳು ಸಂಶೋಧನೆ ಮಾಡಿ ಕಾಲಗಣನ ವಿಜ್ಞಾನವನ್ನು ರೂಪಿಸಿ, ಜಗತ್ತಿಗೆ ನೀಡಿದರು. ಅವರು ಚಾಂದ್ರಮಾನ- ಸೌರಮಾನಗಳು ಮಾತ್ರವಲ್ಲದೆ, ಸಾವನಮಾನ, ನಕ್ಷತ್ರಮಾನ, ಪಿತೃಮಾನ, ದೇವಮಾನ, ಪ್ರಾಜಾಪತ್ಯ ಮಾನ, ಬಾರ್ಹಸ್ಪತ್ಯ ಮಾನ, ಬ್ರಾಹ್ಮ ಮಾನ ಎಂಬ 9 ಬಗೆಯ ಕಾಲಮಾನಗಳನ್ನು ರಚಿಸಿದರು. ಈಗ ಚಂದ್ರಮಾನ- ಸೌರಮಾನಗಳು ಮಾತ್ರ ನಿತ್ಯ ಬಳಕೆಯಲ್ಲಿವೆ. ಈ ಅದ್ಭುತ ಜ್ಞಾನ -ವಿಜ್ಞಾನ ಪರಂಪರೆಯ ಹಿಂದಿರುವ ಗಣಿತ, ಖಗೋಳ ವಿಜ್ಞಾನ, ಕಾಲಗಣನ ವಿಜ್ಞಾನವನ್ನು ಇಂದು ಭಾರತೀಯರೇ ಮರೆತಿದ್ದಾರೆ. ಕೇವಲ ಧಾರ್ಮಿಕ ಕಾರ್ಯಕ್ರಮಗಳಿಗೆ ಹಾಗೂ ಮದುವೆ, ಮುಂಜಿ, ಗೃಹಪ್ರವೇಶ, ಹೋಮ ಹವನ, ಪೂಜೆ, ಸಂಧ್ಯಾವಂದನೆಗಳಿಗಷ್ಟೇ ಪಂಚಾಂಗ ಸೀಮಿತವಾಗಿಬಿಟ್ಟಿದೆ. ಅನೇಕ ಆಚರಣೆಗಳು, ನಂಬಿಕೆಗಳು ಉಳಿದುಕೊಂಡು ಬಂದಿರುವುದರಿಂದ ಧಾರ್ಮಿಕ ಶ್ರದ್ಧೆ ಇನ್ನೂ ಉಳಿದುಕೊಂಡು ಬಂದಿದೆ. ಅದರ ಜೊತೆಗೆ, ಅರ್ಥ ಗೊತ್ತಿಲ್ಲದಿದ್ದರೂ ಈ ವಿಜ್ಞಾನವೂ ಸಾವಿರಾರು ವರ್ಷಗಳಿಂದ ಉಳಿದುಕೊಂಡು ಬಂದಿದೆ.

ಈಗ ಅಧಿಕಮಾಸ ಎಂಬ ವಿಶೇಷತೆ ಬಗ್ಗೆ ಚಿಂತಿಸುವ. ಚಂದ್ರನ ಚಲನೆ ಹಾಗೂ ಸೂರ್ಯನ ಚಲನೆಗಳಲ್ಲಿ ವ್ಯತ್ಯಾಸವಿದೆ. ಕ್ರಾಂತಿವೃತ್ತದಲ್ಲಿ ಸೂರ್ಯನು 365.2422 ದಿನಗಳಲ್ಲಿ ಒಂದು ಸುತ್ತು ಬಂದು ವರ್ಷ ಪೂರೈಸುತ್ತಾನೆ. ಚಂದ್ರನ ಚಲನೆಯ ವೇಗ ಹೆಚ್ಚು. ಭೂಮಿಯೊಡನೆ ಚಂದ್ರ 354.3 ದಿನಗಳಲ್ಲಿ ಸೂರ್ಯನಿಗೆ ಒಂದು ಸುತ್ತು ಬರುತ್ತಾನೆ. ಹೀಗೆ ಪ್ರತಿ ವರ್ಷ ಚಾಂದ್ರಮಾನ ಮತ್ತು ಸೌರಮಾನಗಳೊಳಗೆ 10.8422 ದಿವಸಗಳ ಅಂತರ ಏರ್ಪಡುತ್ತದೆ. ಚಾಂದ್ರಮಾನದ ಚೈತ್ರ- ವೈಶಾಖ- ವಸಂತ ಋತು ಇತ್ಯಾದಿ ಋತುಮಾನವನ್ನು ಸೌರಮಾನದೊಂದಿಗೆ ಸಮೀಕರಿಸಬೇಕಾದರೆ ಎರಡು ಕಾಲಮಾನಗಳೊಳಗೆ ಒಂದು ಹೊಂದಾಣಿಕೆ ಮಾಡಬೇಕಾಗುತ್ತದೆ. ಇದನ್ನು ಸರಿದೂಗಿಸಲು ಚಾಂದ್ರಮಾನ ವರ್ಷಕ್ಕೆ ಒಂದು ತಿಂಗಳು ಹೆಚ್ಚುವರಿ ಮಾಸವನ್ನು ಹೆಚ್ಚುವರಿಯಾಗಿ ಸೇರಿಸುವ ವ್ಯವಸ್ಥೆ ಮಾಡಿದರು. ಸರಿಯಾಗಿ 2 ವರ್ಷ ಎಂಟು ತಿಂಗಳು, 16 ತಿಥಿ, ನಾಲ್ಕು ಗಳಿಗೆಗಳು ಸಂದಾಗ 30 ದಿನಗಳ ವ್ಯತ್ಯಾಸವಾಗುತ್ತದೆ. ಈ ಅವಧಿ ಮುಗಿದಾಕ್ಷಣ 30 ದಿನಗಳ ಒಂದು ತಿಂಗಳನ್ನು ಆ ವರ್ಷದ ಚಾಂದ್ರ ಮಾಸಗಳೊಂದಿಗೆ ಜೋಡಿಸುತ್ತಾರೆ. ಹಾಗೆ ಜೋಡಿಸುವಾಗ ಯಾವ ಚಾಂದ್ರಮಾಸ ಪ್ರಾರಂಭವಾಗುತ್ತದೋ ಅದು ಅಧಿಕಮಾಸ ಎನಿಸಿಕೊಳ್ಳುತ್ತದೆ. ಈ ಬಾರಿ ಜ್ಯೇಷ್ಠ ಮಾಸ ಅಧಿಕಮಾಸವಾಗಿ ಬಂದಿದೆ. ಆ ಜೋಡಿಸಿದ ಕ್ಷಣದಿಂದ ಚಾಂದ್ರಮಾನ ಮತ್ತು ಸೌರಮಾನ ಕಾಲ ಒಂದೇ ಆಗಿರುತ್ತದೆ. ಈ ವರ್ಷದ ಪಂಚಾಂಗ ನೋಡಿದಾಗ ಇದು ಸ್ಪಷ್ಟವಾಗುತ್ತದೆ. ಈಗಿನ ವೈಶಾಖ ಮಾಸ ಇಂದು ಅಮಾವಾಸ್ಯೆಯೊಂದಿಗೆ ಮುಗಿಯುತ್ತಿದೆ. ನಾಳೆ ಅಂದರೆ 17 ಭಾನುವಾರ ಜ್ಯೇಷ್ಠ ಶುಕ್ಲ ಪಾಡ್ಯ. ಅದು ಅಧಿಕ ಜ್ಯೇಷ್ಠ ಪ್ರಾರಂಭದ ದಿನ.ಅಮಾವಾಸ್ಯೆ ಮೇ 16ರ ರಾತ್ರಿ ಅಂದರೆ 17ರ ಬೆಳಿಗ್ಗೆ 3.30 ಗಂಟೆಗೆ ಮುಗಿದು ಜ್ಯೇಷ್ಠ ಶುಕ್ಲ ಪಾಡ್ಯ ಪ್ರಾರಂಭವಾಗುತ್ತದೆ. ಅದೇ ಹೊತ್ತಿಗೆ ಸೌರ ವೃಷಭ ಮಾಸದ ಮೊದಲ ದಿನ ಪ್ರಾರಂಭವಾಗುತ್ತದೆ. ಆಗ ಅಧಿಕ ಜ್ಯೇಷ್ಠದ ಮೊದಲ ತಿಥಿ ಹಾಗೂ ಸೌರ ವೃಷಭ ಮಾಸದ ಮೊದಲ ದಿನ ಒಂದೇ ಆಗುತ್ತವೆ. ಕ್ರಮೇಣ ವ್ಯತ್ಯಾಸವಾಗುತ್ತಾ ಮುಂದಿನ 2 ವರ್ಷ 8 ತಿಂಗಳು 16 ತಿಥಿ ಕಳೆಯುವ ಹೊತ್ತಿಗೆ 30 ದಿನಗಳ ವ್ಯತ್ಯಾಸವಾಗುತ್ತದೆ. ಆಗ ಮತ್ತೆ ಒಂದು ತಿಂಗಳು ಅಧಿಕಮಾಸವಾಗಿ ಚಾಂದ್ರಮಾನಕ್ಕೆ ಸೇರಿಸಲಾಗುತ್ತದೆ. ಹೀಗೆ ಚಾಂದ್ರಮಾನ- ಸೌರಮಾನಗಳೊಳಗಿನ ಹೊಂದಾಣಿಕೆ ಕಾಯ್ದುಕೊಳ್ಳಲಾಗುತ್ತದೆ. ಈ 2 ವರ್ಷ 8 ತಿಂಗಳ ನಡುವಣ ಅವಧಿಯಲ್ಲಿ ತಿಥಿಗೂ-ತಾರೀಕಿಗೂ ವ್ಯತ್ಯಾಸ ಬರುತ್ತದೆ. ಕ್ಯಾಲೆಂಡರ್ ಕಾಲಮಾನ ಮತ್ತು ಸೌರಮಾನ ಸುಮಾರಾಗಿ ಹೊಂದಾಣಿಕೆಯಾಗುತ್ತವೆ. ಹಾಗಾಗಿಯೇ ಸೌರ ಮಕರ ಸಂಕ್ರಾಂತಿಯು ಪ್ರತಿ ಕ್ಯಾಲೆಂಡರ್ ವರ್ಷ ಜನವರಿ 14ರಂದೇ ಬರುತ್ತದೆ. ಸಂಪ್ರದಾಯ ಅನುಸರಿಸುವವರು ಜನ್ಮ ತಿಥಿಯಂದೇ ಹುಟ್ಟುಹಬ್ಬ ಆಚರಿಸುತ್ತಾರೆ. ಅದೇ ರೀತಿ ಚಾಂದ್ರಮಾನ ಮಾಸ ಹಾಗೂ ತಿಥಿಯ ದಿನಗಳಂದೇ ಎಲ್ಲಾ ಧಾರ್ಮಿಕ ಹಬ್ಬಗಳನ್ನು ಆಚರಿಸುತ್ತಾರೆ. ಹಬ್ಬಗಳು ಪ್ರತಿ ವರ್ಷ ಬೇರೆ ಬೇರೆ ತಾರೀಕಿನಂದು ಬರಲು ಚಾಂದ್ರಮಾನ- ಸೌರಮಾನ- ಕ್ಯಾಲೆಂಡರ್ ಮಾನಗಳೊಳಗಣ ವ್ಯತ್ಯಾಸವೇ ಕಾರಣ. ಈಗ ಆಧುನಿಕರು ಮಕ್ಕಳ ಹುಟ್ಟು ಹಬ್ಬವನ್ನು ಕ್ಯಾಲೆಂಡರ್ ತಾರೀಕಿಗೆ ಅನುಸಾರವಾಗಿ ಆಚರಿಸುವ ರೂಢಿ ಬಂದಿದೆ. ಹಬ್ಬಗಳೆಲ್ಲ ನಿಜ ಜ್ಯೇಷ್ಠ ಮಾಸಕ್ಕೆ ಮುಂದಕ್ಕೇ ಹೋಗಿವೆ.

ನಿಜವಾಗಿ ಖಗೋಳ ವಿಜ್ಞಾನದಲ್ಲಿ ಇದೊಂದು ವಿಶೇಷವಾದ ವ್ಯವಸ್ಥೆ. ಹಬ್ಬ ಹರಿದಿನಗಳ ಆಚರಣೆ, ನಂಬಿಕೆಗಳು ಏನೇ ಇರಲಿ, ಅಧಿಕಮಾಸ ಎಂಬುದು ಗಣಿತ, ಖಗೋಳ ವಿಜ್ಞಾನವನ್ನಾಧರಿಸಿದ ಒಂದು ವ್ಯವಸ್ಥೆ. ಇದರ ಉದ್ದೇಶ ಮತ್ತು ಅವಶ್ಯಕತೆಗಳ ಬಗ್ಗೆ ಮೇಲೆ ವಿವರವಾಗಿ ಹೇಳಲಾಗಿದೆ.

ಇನ್ನು ಪ್ರತಿ ಬಾರಿ ಜ್ಯೇಷ್ಠವೇ ಅಧಿಕಮಾಸ ಆಗಬೇಕೆಂದೇನಿಲ್ಲ. ಆದರೆ ಕಾರ್ತಿಕ, ಪುಷ್ಯ, ಮಾಘ ಈ ಮೂರು ಚಾಂದ್ರ ಮಾಸಗಳು ಎಂದೂ ಅಧಿಕಮಾಸವಾಗಿ ಬರುವುದಿಲ್ಲ. ಇದಕ್ಕೂ ಕಾರಣವಿದೆ. ಇಲ್ಲಿ ಒಂದು ಕುತೂಹಲಕಾರಿ ಗಣಿತವನ್ನು ಗಮನಿಸಬೇಕು. ಸೌರ ಮಾಸಗಳಾದ ವೃಶ್ಚಿಕ, ಧನು, ಮಕರ ಈ ಮೂರು ಮಾಸಗಳು ಚಾಂದ್ರ ಮಾಸಗಳಿಗಿಂತ ಚಿಕ್ಕವು. ಆ ಕಾರಣದಿಂದಾಗಿ ಈ ಮೂರು ಸೌರ ಮಾಸಗಳೊಂದಿಗೆ ಬರುವ ಕಾರ್ತಿಕ, ಪುಷ್ಯ, ಮಾಘ ಚಂದ್ರಮಾನ ಮಾಸಗಳು ಸೌರ ಮಾಸಗಳಿಗಿಂತ ಚಿಕ್ಕವಾದ್ದರಿಂದ ಎಂದೂ ಅಧಿಕಮಾಸವಾಗಿ ಬರುವುದಿಲ್ಲ. ಅಧಿಕಮಾಸಕ್ಕೆ ಇನ್ನೂ ಒಂದು ಸೂತ್ರವಿದೆ. ಅಧಿಕಮಾಸದಲ್ಲಿ ಸೌರ ಸಂಕ್ರಾಂತಿ ಬರುವುದಿಲ್ಲ. ಯಾವ ಚಾಂದ್ರ ಮಾಸದಲ್ಲಿ ಸಂಕ್ರಾಂತಿಯೇ ಬರುವುದಿಲ್ಲವೋ ಅದು ಅಧಿಕಮಾಸವೆಂದು ತಿಳಿಯಬೇಕು. ಇದಕ್ಕೂ ಗಣಿತ ಲೆಕ್ಕಾಚಾರವಿದೆ. ಪ್ರತಿ ಸೌರ ಮಾಸದ ಕಾಲಾವಧಿ ಸರಾಸರಿ 30 ದಿವಸ 10 ಗಂಟೆಗಳು. ಆದರೆ ಭೂಮಿಯ ಅಂಡಾಕಾರದ ಚಲನೆಯ ಕಾರಣ, ಚಲನೆಯ ಗತಿಯಲ್ಲಿ ಹೆಚ್ಚು ಕಡಿಮೆಯಾಗುತ್ತದೆ. ಬೇಸಿಗೆಯಲ್ಲಿ ಸೂರ್ಯನ ಮಿಥುನ ಮಾಸದ ಅವಧಿ 31.65 ದಿವಸಗಳಾದರೆ, ಚಳಿಗಾಲದ ಧನುರ್ಮಾಸದ ಅವಧಿ 29.32 ದಿವಸಗಳು. ವೃಶ್ಚಿಕ, ಧನು ಕುಂಭ ಈ ತಿಂಗಳ ಅವಧಿ ದೊಡ್ಡದು. ಈ ಸಮಯದಲ್ಲಿ ಬರುವ ಚಾಂದ್ರ ಮಾಸಗಳ ಅವಧಿ ಚಿಕ್ಕದು. ಸೌರ-ಚಾಂದ್ರಮಾಸಗಳೊಳಗಿನ ಗತಿಯ ವ್ಯತ್ಯಾಸದ ಕಾರಣ ಪ್ರತಿಮಾಸದಲ್ಲಿ ಒಂದು ತಿಥಿ ಮುಂದೆ ಹೋಗಿರುತ್ತದೆ. ಹೀಗೆ ಆಗುತ್ತಾ ಒಂದು ಚಾಂದ್ರ ಮಾಸದ ಅವಧಿಯನ್ನೇ ದಾಟಿ ಮುಂದಕ್ಕೆ ಹೋಗಿಬಿಡುತ್ತದೆ. ಆಗ ಆ ಚಾಂದ್ರ ಮಾಸದ ಅವಧಿಯಲ್ಲಿ ಸಂಕ್ರಾಂತಿ ಇರುವುದಿಲ್ಲ. ಯಾವ ಚಾಂದ್ರ ಮಾಸದಲ್ಲಿ ಸಂಕ್ರಾಂತಿ ಇರುವುದಿಲ್ಲವೋ ಆ ಮಾಸವನ್ನು ಅಧಿಕಮಾಸವೆಂದು ಪರಿಗಣಿಸಿ ಆ ಚಾಂದ್ರ ವರ್ಷಕ್ಕೆ ಒಂದು ಹೆಚ್ಚುವರಿ ಮಾಸವನ್ನು ಸೇರಿಸಬೇಕೆಂಬ ನಿಯಮವನ್ನು ಮಾಡಲಾಯಿತು. ಅದನ್ನು ಮಲ ಮಾಸವೆಂದೂ, ಪುರುಷೋತ್ತಮ ಮಾಸವೆಂದೂ ಕರೆಯಲಾಗುತ್ತದೆ.

ಗೃಹಸ್ಥರ ಜೀವನದಲ್ಲಿ 60 ವಯಸ್ಸಿಗೆ ಉಗ್ರ ರಥಶಾಂತಿ, 70ರ ವಯಸ್ಸಿಗೆ ಭೀಮರಥ ಶಾಂತಿ ಆಚರಿಸುವುದರ ಜೊತೆಗೆ ಸಹಸ್ರ ಚಂದ್ರ ದರ್ಶನ ಕಾರ್ಯಕ್ರಮವನ್ನು ಆಚರಿಸುವುದುಂಟು. ವ್ಯಕ್ತಿಯ ಬದುಕಿನಲ್ಲಿ 1000 ಹುಣ್ಣಿಮೆ ಚಂದ್ರ ಕಳೆದಾಗ ಈ ಕಾರ್ಯಕ್ರಮ ಆಚರಿಸುತ್ತಾರೆ. ತಿಂಗಳಿನಲ್ಲೊಂದು ಬಾರಿ ಹುಣ್ಣಿಮೆ ಬರುತ್ತದೆ. 80ರ ವಯಸ್ಸಿಗೆ ವರ್ಷಕ್ಕೆ 12ರಂತೆ 960 ಹುಣ್ಣಿಮೆಗಳಾಗುತ್ತವೆ. ಆದರೆ ಈಗಾಗಲೇ ಹೇಳಿದಂತೆ ಪ್ರತಿ 2 ವರ್ಷ 8 ತಿಂಗಳು 16 ದಿನಗಳಿಗೊಮ್ಮೆ ಒಂದು ಅಧಿಕಮಾಸ ಬಂದಿರುತ್ತದೆ. 80 ವರ್ಷದಲ್ಲಿ ಸುಮಾರು 30 ಹುಣ್ಣಿಮೆಗಳು ಬಂದು ಹೋಗಿರುತ್ತವೆ. ಅಲ್ಲಿಗೆ 990 ಹುಣ್ಣಿಮೆ ಆಯಿತು. 80 ವರ್ಷ 10 ತಿಂಗಳಿಗೆ 1000 ಹುಣ್ಣಿಮೆಗಳಾಗುತ್ತವೆ. ಅದಕ್ಕೆ ಸಹಸ್ರ ಚಂದ್ರ ದರ್ಶನ ಎನ್ನುತ್ತಾರೆ. ಮಕ್ಕಳು ತಂದೆಗೆ ಆ ವಯಸ್ಸಿನಲ್ಲಿ, ನೆಂಟರಿಷ್ಟರನ್ನು ಕರೆದು ಆ ಕಾರ್ಯಕ್ರಮ ಇಟ್ಟುಕೊಳ್ಳುವುದು ರೂಢಿ. ತಂದೆ ಸ್ವತಹ ಮಾಡಿಕೊಳ್ಳುವ ಕ್ರಮವಿಲ್ಲ. ಇದರಲ್ಲೂ ಗಣಿತ -ಖಗೋಳಶಾಸ್ತ್ರಗಳ ಲೆಕ್ಕಾಚಾರವಿದೆ.

ಇದಿಷ್ಟು ಅಧಿಕಮಾಸದ ಕಥೆ. ಪ್ರತಿ ಭಾರತೀಯರೂ ಇದರ ಹಿಂದಿರುವ ಗಣಿತ -ಖಗೋಳ ವಿಜ್ಞಾನವನ್ನು ತಿಳಿದುಕೊಳ್ಳುವುದು ಆವಶ್ಯಕ.

ವೋಟ್ ಬ್ಯಾಂಕ್: ಮುಸ್ಲಿಮರು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ...

▸ ಮಜುಂದಾರ್

ಈ ವರ್ಷ ಐದು ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯ ಒಟ್ಟು 515 ಸ್ಥಾನಗಳಲ್ಲಿ ಬಿಜೆಪಿ ಒಬ್ಬನೇ ಒಬ್ಬ ಮುಸ್ಲಿಂ ಅಭ್ಯರ್ಥಿಯನ್ನು ನಿಲ್ಲಿಸಲಿಲ್ಲ. ಬಿಜೆಪಿಯು ದೇಶದ ಎರಡನೇ ಅತೀ ದೊಡ್ಡ ಸಮುದಾಯವಾದ ಮುಸ್ಲಿಮರಿಗೆ ಸರಿಯಾದ ಪ್ರಾತಿನಿಧ್ಯ ನೀಡಲು ವಿಫಲವಾದುದರ ಸಂಕೇತವಿದು ಎಂದು ಕೆಲವರು ವಾದಿಸುವುದಿದೆ. ಆದರೆ ನಿಜವಾಗಿ ಇದು ಮುಸ್ಲಿಂ ಸಮುದಾಯಕ್ಕೆ ಬಿಜೆಪಿಯ ಒಂದು ದಿಟ್ಟ ಸಂದೇಶವಾಗಿದೆ. ಚುನಾವಣೆಯಿಂದ ಚುನಾವಣೆಗೆ ಮುಸ್ಲಿಮರೆಲ್ಲರೂ ಬಿಜೆಪಿಯನ್ನು ಸೋಲಿಸುವ ಏಕೈಕ ಉದ್ದೇಶದಿಂದ ಸಾಮೂಹಿಕವಾಗಿ ಮತ ಚಲಾಯಿಸುವುದಾದರೆ ನಿಮ್ಮನ್ನು ನಮ್ಮ ಜತೆಗೆ ಕರೆದೊಯ್ಯಲು ನಮಗೂ ಯಾವುದೇ ಬದ್ಧತೆ ಇಲ್ಲ ಎಂಬ ಸಂದೇಶವನ್ನು ಬಿಜೆಪಿ ಸಾರುತ್ತಿದೆ.

ಹಾಗೆಂದು ಬಿಜೆಪಿ ಸರಕಾರಗಳು ಮುಸ್ಲಿಮರಿಗೆ ದೊರಕುತ್ತಿರುವ ಸೌಲಭ್ಯಗಳಲ್ಲೇನೂ ಕಡಿತ ಮಾಡಿಲ್ಲ. ಇತರ ಸಮುದಾಯಗಳವರಿಗೆ ಸಿಗುವಂತಹ ಆರೋಗ್ಯ ವಿಮೆ, ಎಲ್‌ಪಿಜಿ ಸೌಕರ್ಯ, ಉಚಿತ ಪಡಿತರ, ಶೌಚಾಲಯ ಯೋಜನೆ ಮೊದಲಾದವೆಲ್ಲಾ ಮುಸ್ಲಿಮರಿಗೂ ಸಿಗುತ್ತಿವೆ. ಆದರೆ ಮುಸ್ಲಿಮರ ಓಟಿಗಾಗಿ ತಾನು ದುಂಬಾಲು ಬೀಳುವುದಿಲ್ಲ ಎಂದು ಬಿಜೆಪಿ ಸ್ಪಷ್ಟಪಡಿಸುತ್ತಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಶೇ. 8 ಮುಸ್ಲಿಮರು ಬಿಜೆಪಿಗೆ ಮತ ಹಾಕಿದ್ದರೆಂದು ಸಮೀಕ್ಷೆಯೊಂದು ತಿಳಿಸಿತ್ತು. ಶೇ. 6ರಿಂದ 9 ಮುಸ್ಲಿಮರ ಮತ ಬಿಜೆಪಿಗೆ ಬಿದ್ದಿತ್ತೆಂದು ಮತ್ತೊಂದು ಸಮೀಕ್ಷೆ ಹೇಳಿತ್ತು. ಆದರೆ ಬಿಜೆಪಿ ಲೆಕ್ಕಾಚಾರದ ಪ್ರಕಾರ ಕೇವಲ 1-4 ಶೇಕಡಾ ಮುಸ್ಲಿಮರ ಮತ ಮಾತ್ರ ಅದಕ್ಕೆ ಬಿದ್ದಿದೆ. ಹೆಚ್ಚಿನೆಲ್ಲಾ ಚುನಾವಣೆಗಳಲ್ಲಿ ಮುಸ್ಲಿಮರು ಬಿಜೆಪಿಯನ್ನು ಸೋಲಿಸಬಲ್ಲಂತಹ ಅಭ್ಯರ್ಥಿಗೆ ಮತ ಹಾಕುವಂತಹ ವ್ಯೂಹಾತ್ಮಕ ತಂತ್ರವನ್ನು ಪ್ರಯೋಗಿಸಿದ್ದಾರೆ.

ರಾಜಕೀಯ ವಿಶ್ಲೇಷಕ ಸುನಂದಾ ವಶಿಷ್ಠ್ ಬರೆಯುತ್ತಾರೆ "ಯೆಹೂದಿಗಳು ಅಮೆರಿಕದಲ್ಲಿ ಹೇಗಿದ್ದಾರೆಂದು ನೋಡಿ. ಅವರು ಎರಡೂ ಪಕ್ಷಗಳಲ್ಲಿ ಇದ್ದಾರೆ. ಒಂದೇ ಪಕ್ಷಕ್ಕೆ ಸಾಮೂಹಿಕ ಮತ ಹಾಕುವ ಯೋಚನೆ ಅವರದಲ್ಲ. ರಾಜಕೀಯದ ಎಲ್ಲಾ ವಿಧಗಳಲ್ಲೂ ಪ್ರಾತಿನಿಧ್ಯ ಪಡೆಯಲು ಯತ್ನಿಸುತ್ತಿದ್ದಾರೆ. ಭಾರತದಲ್ಲಿ ಮುಸ್ಲಿಮರೂ ಇದೇ ರೀತಿ ವರ್ತಿಸಬಾರದೇಕೆ? ಕೇವಲ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಬೇಕು ಎಂಬ ರೀತಿಯಲ್ಲಿ ಏಕಪ್ರಕಾರವಾಗಿ ಮತ ಚಲಾಯಿಸುವುದೇಕೆ? ಬಿಜೆಪಿಯನ್ನು ಸೋಲಿಸಲಷ್ಟೇ ಅವರು ಮತ ಚಲಾಯಿಸುವುದಾದರೆ ಬಿಜೆಪಿ ಕೂಡಾ ಮುಸ್ಲಿಮರನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ಇತರರ ಬೆಂಬಲದಿಂದ ಜಯ ಸಾಧಿಸಲು ತನ್ನದೇ ಆದ ರಣತಂತ್ರ ರೂಪಿಸಬಲ್ಲುದು.'' ಸಾಮಾಜಿಕ ಕಾರ್ಯಕರ್ತ ಜಾಫರ್ ಸರೇಶ್‌ವಾಲಾ ಕೂಡಾ ಮುಸ್ಲಿಮರು ಈ ರೀತಿ ಬಿಜೆಪಿ ಸೋಲಿಸಲು ಮತ ಚಲಾಯಿಸುವುದರಿಂದ ಅವರಿಗೆ ಒಳಿತಿಗಿಂತ ಹಾನಿಯೇ ಹೆಚ್ಚಾಗಿದೆ ಎಂದು ಹೇಳುತ್ತಾರೆ.

ಬಿಜೆಪಿ ಕುರಿತಾದ ಮುಸ್ಲಿಮರ ನಿಲುವು ಅದಕ್ಕೇ ಹಾನಿ ತಂದಿರುವುದು ನಿಜ. ಬಿಜೆಪಿ ಮುಸ್ಲಿಮರಿಗೆ ಟಿಕೆಟ್ ನೀಡಲು ಮುತುವರ್ಜಿ ತೋರುತ್ತಿಲ್ಲ. ಆದರೆ ಇದೇವೇಳೆ, ಇತರ ಸಣ್ಣ ಸಣ್ಣ ಸಮುದಾಯಕ್ಕೂ ಟಿಕೆಟ್ ಹಂಚುವಲ್ಲಿ ಅಥವಾ ತನ್ನ ಸರಕಾರದಲ್ಲಿ ಸಚಿವ ಸ್ಥಾನ ನೀಡುವುದರಲ್ಲೇ ಹಿಂದೆ ಬಿದ್ದಿಲ್ಲ. ಸಣ್ಣ ಜಾತಿ, ಪಂಗಡವನ್ನೂ ಗುರುತಿಸಿ ಅದಕ್ಕೆ ಸೂಕ್ತ ಪ್ರಾತಿನಿಧ್ಯ ನೀಡುವುದರಲ್ಲಿ ಬಿಜೆಪಿ ಉಳಿದೆಲ್ಲಾ ಪಕ್ಷಗಳಿಗಿಂತ ಮುಂದಿದೆ.ತಮ್ಮ ಪಕ್ಷಕ್ಕೆ ಬೆಂಬಲ ಸೂಚಿಸುವ ಅಥವಾ ಬೆಂಬಲಿಸುವ ಸಂಕೇತ ತೋರುವ ಜಾತಿಗಳಿಗೆ, ಉಪಜಾತಿಗಳಿಗೆ, ಸಣ್ಣ ಪುಟ್ಟ ಪಂಗಡಗಳಿಗೆ ಬಿಜೆಪಿ ಚುನಾವಣೆಯಲ್ಲಿ ಮತ್ತು ಸರಕಾರ ರಚನೆಯಲ್ಲಿ ಪ್ರಾತಿನಿಧ್ಯ ಕಲ್ಪಿಸಿದೆ. ಉತ್ತರ ಪ್ರದೇಶದಲ್ಲಿ ಯಾದವೇತರ ಇತರ ಹಿಂದುಳಿದ ವರ್ಗದವರಿಗೆ, ದಲಿತರಿಗೆ, ಸಣ್ಣ ಪುಟ್ಟ ಜಾತಿಗಳಾದ ನಿಷಾದ್, ಕುರ್ಮಿ, ಗುಜ್ಜಾರ್, ಜಾಟ್ ಮೊದಲಾದವರಿಗೂ ಸಚಿವ ಸ್ಥಾನ ನೀಡಲಾಗಿದೆ. ಮಹಾರಾಷ್ಟ್ರದಲ್ಲಿ ಕೂಡಾ ಇದೇ ರೀತಿ ಅಲ್ಲಿನ ಸಣ್ಣ ಸಮುದಾಯಗಳು, ಜಾತಿಗಳು, ಪಂಗಡಗಳು ಸಂಪುಟದಲ್ಲಿ ಪ್ರಾತಿನಿಧ್ಯ ಗಳಿಸಿದೆ.

ಈಗ ಪಶ್ಚಿಮ ಬಂಗಾಳದಲ್ಲಿ ಕೂಡಾ ಸುವೇಂದು ಅಧಿಕಾರಿಯ ಸಂಪುಟದಲ್ಲಿ ಇತರ ಹಿಂದುಳಿದ ವರ್ಗದ ದಿಲೀಪ್ ಘೋಷ್ ಇದ್ದಾರೆ. ಪರಿಶಿಷ್ಟ ಮತುವಾ ಸಮುದಾಯದ ಅಶೋಕ್ ಕೀರ್ತಾನಿಯಾ ಇದ್ದಾರೆ. ರಾಜಭನ್ಶಿ ಸಮಾಜದ ನಿಶೀಶ್ ಪ್ರಮಾಣಿಕ್, ಆದಿವಾಸಿ ಪಂಗಡದ ಜಂಗಲ್‌ಮಹಲ್, ಕಾಯಸ್ಥ ಸಮಾಜದ ಅಗ್ನಿಮಿತ್ರ ಪೌಲ್ ಇದ್ದಾರೆ. ಸುವೇಂದು ಕೂಡ ಹಿಂದುಳಿದ ಮಾಹಿಶ್ಯ ಸಮುದಾಯದವರು.

ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ 68 ಮೀಸಲು ಸ್ಥಾನಗಳಲ್ಲಿ 51ನ್ನು ಬಿಜೆಪಿ ಗೆದ್ದುಕೊಂಡಿದೆ.ಪರಿಶಿಷ್ಟ ಪಂಗಡದ ಎಲ್ಲಾ 16 ಸ್ಥಾನಗಳೂ ಬಿಜೆಪಿ ಪಾಲಾಗಿವೆ.

ಆದರೆ ಮುಸ್ಲಿಮರು ಮಾತ್ರ ಈಗಲೂ ಖಂಡತುಂಡವಾಗಿ ಬಿಜೆಪಿಯನ್ನು ವಿರೋಧಿಸುತ್ತಿದ್ದಾರೆ. ಬಿಜೆಪಿಯ ಲೆಕ್ಕಾಚಾರದಲ್ಲಿ ಮುಸ್ಲಿಮರು ಸ್ಥಾನ ಪಡೆಯಬೇಕಾದರೆ ಅವರು ಬಿಜೆಪಿಯೆಡೆಗೆ ಮುಕ್ತ ಮನಸ್ಸು ಹೊಂದಿರಬೇಕು. ಸದಾ ಬಿಜೆಪಿಯನ್ನು ವಿರೋಧಿಸುವುದು ಸಲ್ಲದು. ಕೇಂದ್ರ ಸರಕಾರ ಮತ್ತು ರಾಜ್ಯ ಬಿಜೆಪಿ ಸರಕಾರಗಳು ಮುಸ್ಲಿಮರಿಗೆ ಸರಕಾರಿ ಸೌಲಭ್ಯಗಳನ್ನು ವಿಸ್ತರಿಸುವಲ್ಲಿ ಯಾವುದೇ ತಾರತಮ್ಯ ತೋರದಿದ್ದರೂ ಬಿಜೆಪಿಯನ್ನು ಕುರುಡಾಗಿ ದ್ವೇಷಿಸುವುದು ಮುಸ್ಲಿಮರಿಗೇ ಪ್ರತಿಕೂಲವಾದೀತು.

ಕೆಲವು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಮುಸ್ಲಿಮರು, ಅದರಲ್ಲಿಯೂ ಮುಖ್ಯವಾಗಿ ಮುಸ್ಲಿಂ ಮಹಿಳೆಯರು ಕಾನೂನು ಪರಿಸ್ಥಿತಿ, ಕಲ್ಯಾಣ ಕಾರ್ಯಕ್ರಮಗಳು ಮತ್ತು ಮೂಲಭೂತ ಸೌಕರ್ಯಗಳ ಕುರಿತಂತೆ ಮೆಚ್ಚುಗೆ ಸೂಚಿಸುತ್ತಾರಾದರೂ ಮತ ಚಲಾಯಿಸುವಾಗ ಸಾಮೂಹಿಕವಾಗಿ ಬಿಜೆಪಿ ವಿರೋಧಿಗಳಂತೆಯೇ ವರ್ತಿಸುತ್ತಾರೆ. ಮುಖ್ಯವಾಗಿ ಮುಸ್ಲಿಮರ ಧರ್ಮಗುರುಗಳು ಮತ್ತು ತಥಾಕಥಿತ ಜಾತ್ಯತೀತ ಮುಖಂಡರು ಮುಸ್ಲಿಮರಲ್ಲಿ ಬಿಜೆಪಿ ಕುರಿತಂತೆ ಭೀತಿಯನ್ನು ಸೃಷ್ಟಿಸುತ್ತಾರೆ.

ಮುಸ್ಲಿಮ್ ಧರ್ಮಗುರುಗಳು ಸಮಾನತೆ ಬಯಸುತ್ತಿರುವುದಲ್ಲ. ಅವರು ರಾಜಕೀಯದಲ್ಲಿ ಮುಸ್ಲಿಮರನ್ನು ಇತರರಿಗಿಂತ ಮೇಲಿನ ಸ್ತರದಲ್ಲಿ ಇಡಬೇಕು ಎಂಬಂತೆ ಮಾತನಾಡುತ್ತಾರೆ. ಜಾತ್ಯತೀತತೆ ಎಂಬುದು ಒನ್‌ವೇ ರಸ್ತೆ, ಹಿಂದುಗಳು ಯಾವಾಗಲೂ ಕಾಂಪ್ರಮೈಸ್ ಮಾಡಿಕೊಳ್ಳಬೇಕು ಎಂಬಂತೆ ವಾದಿಸುತ್ತಾರೆ.

ಭಾರತದ ರಾಜಕೀಯ ಈಗ ಬದಲಾಗಿದೆ. ಮುಸ್ಲಿಮರು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಕಾಲ ಬಂದಿದೆ. ಎಲ್ಲದಕ್ಕೂ ಬೇರೆಯವರನ್ನು ದೂರುವ ಬದಲಾಗಿ ಅದಕ್ಕೆ ತಾವೆಷ್ಟು ಕಾರಣರು ಎಂದು ಯೋಚಿಸಬೇಕಾಗಿದೆ.

ಕಿರುಸುದ್ದಿ

ಉಪಮುಖ್ಯಮಂತ್ರಿ ಜನುಮದಿನ : ಆಶ್ರಮಕ್ಕೆ ಹಣ್ಣು ಹಂಪಲು ವಿತರಣೆ

ಮೂಡುಬಿದಿರೆ: ಕೆಪಿಸಿಸಿ ಅಧ್ಯಕ್ಷ, ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜನ್ಮದಿನದ ಅಂಗವಾಗಿ ಕಾಂಗ್ರೆಸ್ ಕಾನೂನು ವಿಭಾಗದಿಂದ ಆಲಂಗಾರು ಮೌಂಟ್ ರೋಸರಿ ಆಶ್ರಮಕ್ಕೆ ಹಣ್ಣು ಹಂಪಲು ವಿತರಿಸಲಾಯಿತು. ಈ ಸಂದರ್ಭ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ ಮಾತನಾಡಿ, ಅವರು ಜಿಲ್ಲೆಯಲ್ಲಿ ನಿಸ್ವಾರ್ಥವಾದ ಸೇವೆ ನೀಡುವ ಸಂಸ್ಥೆಯಿದ್ದರೆ ಅದು ಆಲಂಗಾರಿನ ಮೌಂಟ್ ರೋಸರಿ ಆಶ್ರಮ. ಇಂದು ಉಪ ಮುಖ್ಯಮಂತ್ರಿ ಡಿಕೆಸಿ ಅವರ ಜನುಮದಿನವಾಗಿದ್ದು ಅವರಿಗೆ ಉತ್ತಮ ಆರೋಗ್ಯ, ರಾಜಕೀಯ ಜೀವನದಲ್ಲಿ ಉತ್ತುಂಗ ಶಿಖರಕ್ಕೆ ಹೋಗುವಂತಹ ಭಾಗ್ಯವನ್ನು ಕರುಣಿಸಲು ಹಿರಿಯರ ಆಶೀರ್ವಾದ ಮುಖ್ಯ. ಮುಂಬರುವ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿ ಹುದ್ದೆಯನ್ನು ಅಲಂಕರಿಸಲು ನಿಮ್ಮೆಲ್ಲರ ಹಾರೈಕೆಯಿರಲಿ ಎಂದರು. ಕೆಪಿಸಿಸಿ ವಕ್ತಾರ ಪದ್ಮಪ್ರಸಾದ್ ಜೈನ್, ಸಿಸ್ಟರ್ ಪ್ರೆಸಿಲ್ಲ, ಬ್ಲಾಕ್ ವಕ್ತಾರ ರಾಜೇಶ್ ಕಡಲಕೆರೆ, ಪುರಸಭೆಯ ಮಾಜಿ ಸದಸ್ಯರಾದ ಪಿ.ಕೆ. ಥೋಮಸ್, ಪುರಂದರ ದೇವಾಡಿಗ, ಜೋಸ್ಸಿ ಮಿನೆಜಸ್, ಇಕ್ಬಾಲ್ ಕರೀಮ್, ಕಾಂಗ್ರೆಸ್ ಪದಾಧಿಕಾರಿಗಳಾದ, ಮರ್ವಿನ್ ಲೋಬೊ, ಅನೀಶ್ ಡಿಸೋಜ, ಪ್ರವೀಣ್ ಕುಮಾರ್, ಪ್ರವೀಣ್ ಪೂಜಾರಿ, ಚಂದ್ರಹಾಸ ಸನಿಲ್, ಶೇಖರ್ ಪೂಜಾರಿ, ಸಂತೋಷ ಶೆಟ್ಟಿ ಮತ್ತಿತರರು ಈ ಸಂದರ್ಭದಲ್ಲಿದ್ದರು.

ಪ್ರತ್ಯೇಕ ವಿಧಾನಸಭೆ, ಲೋಕಸಭಾ ಕ್ಷೇತ್ರಕ್ಕೆ ಆಗ್ರಹ: ಸತ್ಯಾಗ್ರಹ ಆರಂಭ

ಮಡಿಕೇರಿ: ಕ್ಷೇತ್ರ ಪುನರ್ ವಿಂಗಡಣೆಯ ಸಂದರ್ಭ ಕೊಡವರಿಗೆ ಪ್ರತ್ಯೇಕ ವಿಧಾನಸಭೆ ಮತ್ತು ಲೋಕಸಭಾ ಕ್ಷೇತ್ರವನ್ನು ರಚಿಸಬೇಕೆಂದು ಆಗ್ರಹಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ 48 ಗಂಟೆಗಳ ಅಹೋರಾತ್ರಿ ಸತ್ಯಾಗ್ರಹವನ್ನು ಮೇ 14ರಂದು ಮಡಿಕೇರಿ ನಗರದ 'ಕೊಡವ ಮಂದ್'ನಲ್ಲಿ ಆರಂಭಿಸಿತು. ಕೊಡವ ಮಂದ್‌ನಲ್ಲಿ ಸಾಂಪ್ರದಾಯಿಕ ಪ್ರಾರ್ಥನೆ ಸಲ್ಲಿಸಿ ಮೂರು ಬಾರಿ ಕುಶಲತೋಪು ಹಾರಿಸುವ ಮೂಲಕ ಶಾಂತಿಯುತ ಸತ್ಯಾಗ್ರಹ ಆರಂಭಿಸಲಾಯಿತು. ಸತ್ಯಾಗ್ರಹದಲ್ಲಿ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಿ, ಕೊಡವರಿಗೆ ಪ್ರತ್ಯೇಕ ವಿಧಾನಸಭೆ ಮತ್ತು ಲೋಕಸಭಾ ಕ್ಷೇತ್ರ ನೀಡಬೇಕೆಂದು ಆಗ್ರಹಿಸಿರುವ ಮನವಿ ಪತ್ರವನ್ನು ಭಾರತದ ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು ಹಾಗೂ ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದರು. ಅಪ್ಪಾರಂಡ ನಂದಿನಿ ನಂಜಪ್ಪ, ಆರೆಯಡ ಸವಿತಾ ತಿಮ್ಮಯ್ಯ, ಅಳ್ಮಂಡ ಜೈ ಗಣಪತಿ, ನಂದೇಟಿರ ರವಿ ಸುಬ್ಬಯ್ಯ, ಪಟ್ಟಮಡ ಕುಶ, ಆರೆಯಡ ಗಿರೀಶ್ ತಿಮ್ಮಯ್ಯ, ಪುದಿಯೊಕ್ಕಡ ಕಾಶಿ ಕರುಂಬಯ್ಯ, ಕಿರಿಯಮಾಡ ಶೆರಿನ್, ಮಂದಪಂಡ ಮನೋಜ್ ಮಂದಣ್ಣ, ಬಡುವಂಡ ವಿಜಯ, ಮಂದಪಂಡ ಸೂರಜ್, ಚೋಳಪಂಡ ನಾಣಯ್ಯ, ನಂದಿನೆರವಂಡ ವಿಜು, ಪುದಿಯೊಕ್ಕಡ ಪೃಥ್ವಿ, ನಂದಿನೆರವಂಡ ಅಯ್ಯಣ್ಣ, ಕೊಟ್ಟುಕತ್ತಿರ ಬಾಬಿ ಪಳಂಗಪ್ಪ, ಐಲಪಂಡ ಮಿಟ್ಟು, ಚಂಡಿರ ರಾಜ ತಿಮ್ಮಯ್ಯ, ಪಾಲೇಕಂಡ ಪ್ರಧಾನ್ ಪೂಣಚ್ಚ, ಸಾದೇರ ರಮೇಶ್ ಹಾಗೂ ಮಡಿಕೇರಿ ಕೊಡವ ಸಮಾಜದ ನಿರ್ದೇಶಕ ನಂದಿನೆರವಂಡ ದಿನೇಶ್ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಸುಕುಮಾರ್ ಶೆಟ್ಟಿ, ನಟಬೆಟ್ಟು ಹೌಸ್, ಅರಳ, ಬಂಟ್ವಾಳ (ತಾ) – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
2. ದಿ। ನರಸಿಂಹ ಭಟ್ ಸ್ಮರಣಾರ್ಥ ಮನೆಯವರು, ಶರ್ಮಾ ಕಂಪೌಂಡು, ಹಾರಾಡಿ, ಪುತ್ತೂರು.
3. ಕು। ಅನನ್ಯ ಶೆಟ್ಟಿ, ಸಂಪಿಲ ಮನೆ, ಇರಾ ಶ್ರೀ ಸೋಮನಾಥೇಶ್ವರ ದೇವಸ್ಥಾನ ವಠಾರದಲ್ಲಿ.
4. ದೀಕ್ಷಿತ್ ಶೆಟ್ಟಿ, ಮರಿಯಡ್ಕ ಮನೆ, ಮಿಜಾರು – ಶ್ರೀ ವಿಷ್ಣುಮೂರ್ತಿ ದೇವಸ್ಥಾನ ವಠಾರದಲ್ಲಿ.
5. ದಿ। ಶ್ರೀಧರ ರಾವ್, ದಿ। ದೇವಿ ಅಮ್ಮನವರ ಸ್ಮರಣಾರ್ಥ ಮಕ್ಕಳ ಸೇವೆ, ಅಂಬಿಕಾನಗರ, ಕಾವೂರು – ಕಾವೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವಠಾರ.
6. ಚಂದ್ರಶೇಖರ್ ಆರ್. ಶೆಟ್ಟಿ, ತೆಂಕಾರಗುತ್ತು, ಪಾದೂರು, ಚಂದ್ರನಗರ, ಕಾಪು (ತಾ).
7. ರಾಘವೇಂದ್ರ ಆಚಾರ್ಯ ಮತ್ತು ಮನೆಯವರು, 'ಶಾಂತಿ ಭವನ', ಬಜಪೆ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.

ಶ್ರೀ ಧರ್ಮಸ್ಥಳ ಮೇಳ
ಕಾಲ್ತೋಡುನಲ್ಲಿ
ಶ್ರೀ ಗೋವಿಂದ ಶೆಟ್ಟಿ ಮತ್ತು ಮನೆಯವರು, ಕುರ್ಸಿ, ದೊಡ್ಡನೆ

ಶ್ರೀ ಪೆರ್ಡೂರು ಮೇಳ
ಕುಂದಾಪುರದಲ್ಲಿ ಜೋಡಾಟ

ಶ್ರೀ ಹನುಮಗಿರಿ ಮೇಳ
ಉಜಿರೆಯಲ್ಲಿ

ಶ್ರೀ ಪಾವಂಜೆ ಮೇಳ
ಕೊಲ್ಯ ಸೋಮೇಶ್ವರ ಕುಲಾಲ ಮಂದಿರದ ಎದುರು 'ಆದಿಯ' ಮನೆಯ ಬಳಿ
ಶ್ರೀ ದೇವಿ ಮಹಾತ್ಮೆ



ಗರ್ಭಕೋಶದ ಸಮಸ್ಯೆಯಿಂದ ಬಳಲುತ್ತಿದ್ದ ಬೆಳ್ತಂಗಡಿ ತಾಲೂಕಿನ ಇಂದಬೆಟ್ಟು ನಿವಾಸಿ ಸರಸ್ವತಿ (52) ಎಂಬ ಮಹಿಳೆಗೆ ಬೆಳ್ತಂಗಡಿ ಸರಕಾರಿ ಆಸ್ಪತ್ರೆಯಲ್ಲಿ ಖ್ಯಾತ ಸ್ತ್ರೀ ರೋಗ ತಜ್ಞರಾದ ಡಾ.ವೆಂಕಟಸ್ವಾಮಿಯವರ ಮಾರ್ಗದರ್ಶನದಲ್ಲಿ ಖ್ಯಾತ ಸ್ತ್ರೀ ರೋಗ ಹಾಗೂ ಪ್ರಸೂತಿ ತಜ್ಞೆ ಡಾ.ರಶ್ಮಿ ಹಾಗೂ ಖ್ಯಾತ ಶಸ್ತ್ರಚಿಕಿತ್ಸಕರಾದ ಡಾ.ರಾಘವೇಂದ್ರ, ಡಾ ಶಶಾಂಕ್, ಶುಶ್ರೂಶಕಾಧಿಕಾರಿ ರತ್ನಾ, ಪೂರ್ಣಿಮಾ ಅವರ ತಂಡದಿಂದ ವಿಶೇಷ ಶಸ್ತ್ರ ಚಿಕಿತ್ಸೆ ಉಚಿತವಾಗಿ ನಡೆದಿದೆ.

ಮೇ 17-18ರಂದು 'ವಿಶ್ವ ಕೊಂಕಣಿ ಸಮಾರೋಹ 2026'; ವಿವಿಧ ಗೋಷ್ಠಿಗಳು

ಮಂಗಳೂರು: ಇಲ್ಲಿನ ಶಕ್ತಿನಗರದ ವಿಶ್ವ ಕೊಂಕಣಿ ಕೇಂದ್ರದಲ್ಲಿ ಮೇ 17 ಮತ್ತು 18ರಂದು ವಿಶ್ವ ಕೊಂಕಣಿ ಸಮಾರೋಹ ಸಮಾರಂಭ ಜರುಗಲಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಎಂದು ವಿಶ್ವ ಕೊಂಕಣಿ ಕೇಂದ್ರದ ಅಧ್ಯಕ್ಷ ಸಿಎ ನಂದಗೋಪಾಲ್ ಶೆಣೈ ಅವರು, ಮೇ 17ರಂದು ಬೆಳಗ್ಗೆ 9ಕ್ಕೆ ಶಿಕ್ಷಣ ತಜ್ಞರಾದ ಸುಲಕ್ಷಣಾ ಸಾವಂತ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಕೊಂಕಣಿ ಸಲಹಾ ಮಂಡಳಿ ಮೆಲ್ವಿನ್ ರೊಡ್ರಿಗಸ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಕೊಂಕಣಿ ಸಲಹಾ ಮಂಡಳಿ ಸದಸ್ಯ ಎಚ್.ಎಂ. ಪೆರ್ನಾಳ್ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ವಿಶ್ವ ಕೊಂಕಣಿ ಕೇಂದ್ರದ ಉಪಾಧ್ಯಕ್ಷರಾದ ಡಾ.ಕಿರಣ್ ಬುಡಕುಳೆ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದವರು ತಿಳಿಸಿದರು.

ಉಳಿದಂತೆ ಎರಡು ದಿನಗಳ ಕಾಲ ನಾನಾ ವಿಚಾರಗಳಲ್ಲಿ ಗೋಷ್ಠಿಗಳನ್ನು ಸಂಪನ್ಮೂಲ ವ್ಯಕ್ತಿಗಳು ನಡೆಸಿಕೊಡಲಿದ್ದಾರೆ. ಮೇ 18ರಂದು ಸಂಜೆ 3.30ರಿಂದ ನಡೆಯುವ ಸಮಾರೋಪದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ್ ಕಾಮತ್ ಭಾಗವಹಿಸಲಿದ್ದಾರೆ. ವಿಶ್ವ ಕೊಂಕಣಿ ಕೇಂದ್ರ ಅಧ್ಯಕ್ಷ ಸಿಎ ನಂದಗೋಪಾಲ್ ಶೆಣೈ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ವಕೀಲ ಕೆ ಜಗದೀಶ್ ಕಾಮತ್ ಭಾರತದ ಸಂವಿಧಾನದಲ್ಲಿ ಭಾಷಾ ಅಲ್ಪಸಂಖ್ಯಾತರಿಗೆ ಲಭ್ಯವಿರುವ ಅವಕಾಶಗಳು ಎಂಬ ವಿಷಯ ಬಗ್ಗೆ ಮಾತನಾಡಲಿದ್ದಾರೆ. ಎರಡೂ ದಿವಸಗಳ ಕಾರ್ಯಕ್ರಮಕ್ಕೆ ಮಹಾರಾಷ್ಟ್ರ, ಗೋವಾ ಹಾಗೂ ಕೇರಳ ರಾಜ್ಯಗಳಿಂದಲೂ ಮಾತೃಭಾಷಾಭಿಮಾನಿಗಳು, ಸಾಹಿತ್ಯಾಸಕ್ತರು ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿಶ್ವ ಕೊಂಕಣಿ ಕೇಂದ್ರದ ಉಪಾಧ್ಯಕ್ಷರ ಡಿ.ರಮೇಶ ನಾಯಕ್, ಕೋಶಾಧಿಕಾರಿ ಬಿ.ಆರ್. ಭಟ್, ಕವಿ ಮೆಲ್ವಿನ್ ರಾಡ್ರಿಗಸ್, ಕೊಂಕಣಿ ಕೇಂದ್ರದ ಸದಸ್ಯರಾದ ಎಂ.ಆರ್.ಕಾಮತ್, ಗೋವಿಂದರಾಯ ಪ್ರಭು, ಸಿಇಒ ಡಾ.ದೇವದಾಸ ಪೈ ಉಪಸ್ಥಿತರಿದ್ದರು.

ಪೆರ್ಲ ಸಮೀಪದ ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಶೃಂಗೇರಿ ಜಗದ್ಗುರುಗಳ ಭೇಟಿ

ದೇವತಾರಾಧನೆ ಆಧ್ಯಾತ್ಮಿಕ ಶಕ್ತಿಯ ಮೂಲ

ಪೆರ್ಲ : ದೇವರ ಆರಾಧನೆ ಕೇವಲ ಧಾರ್ಮಿಕ ಆಚರಣೆಯಲ್ಲ, ಬದಲಾಗಿ ಮಾನಸಿಕ ಮತ್ತು ಆಧ್ಯಾತ್ಮಿಕ ಶಕ್ತಿಯ ಮೂಲವಾಗಿದೆ. ದೇವರ ಆರಾಧನೆ ನಮ್ಮ ಬಲ ಎಂಬ ನಂಬಿಕೆ ಅತ್ಯಂತ ಶಕ್ತಿಶಾಲಿ ಸೂತ್ರವಾಗಿದೆ. ದೇವಾಲಯಗಳು ನಮ್ಮಲ್ಲಿ ಸಕಾರಾತ್ಮಕ ಶಕ್ತಿಯನ್ನು ತುಂಬುವ ಪವಿತ್ರ ಕೇಂದ್ರಗಳು ಎಂದು ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತಿ ಮಹಾ ಸ್ವಾಮೀಜಿ ಹೇಳಿದ್ದಾರೆ.

ಪೆರ್ಲ ಸಮೀಪದ ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಭೇಟಿ ನೀಡಿದ ಅವರು ದೇವರ ದರ್ಶನ ಪಡೆದು ಫಲಪುಷ್ಪ, ಸ್ಮರಣಿಕೆ ಸ್ವೀಕರಿಸಿ ಆಶೀರ್ವಚನ ನೀಡಿದರು.

ರಾಜ, ಮಹಾರಾಜರುಗಳ ಚರಿತ್ರೆಯನ್ನು ಅವಲೋಕನ ಮಾಡಿದರೆ, ಅನೇಕ ದೇವಾಲಯಗಳ ಜೀರ್ಣೋದ್ಧಾರ, ಬ್ರಹ್ಮಕಲಶ ಮಾಡಿಸಿದ್ದನ್ನು ತಿಳಿಯಬಹುದು. ಭಕ್ತಿ ಮತ್ತು ಸೇವಾ ಮಾರ್ಗದಿಂದ ಭಗವಂತನ ಅನುಗ್ರಹವನ್ನು ಪಡೆದು ಅನೇಕ ಪ್ರಭಾವಶಾಲಿಗಳು, ಮಹಾತ್ಮರು ತಮ್ಮ ಆಂತರಿಕ ಶಕ್ತಿ ಮತ್ತು ಜ್ಞಾನವನ್ನು ವೃದ್ಧಿಸಿಕೊಂಡಿದ್ದಾರೆ. ಭಗವತ್ ಅನುಗ್ರಹದಿಂದ ಮಾತ್ರ ಸಫಲತೆ ಎಂಬುದು ಭಾರತೀಯ ಸಂಸ್ಕೃತಿ ಮತ್ತು ದರ್ಶನಶಾಸ್ತ್ರದಲ್ಲಿನ ಆಳವಾದ ನಂಬಿಕೆಯಾಗಿದೆ. ನಾನೇ ಮಾಡಿದ್ದು ಎಂಬ ಅಹಂಕಾರವನ್ನು ತೊರೆದು, ಎಲ್ಲವೂ ದೇವರ ಇಚ್ಛೆ ಎಂದು ಭಗವಂತನಿಗೆ ಶರಣಾದಾಗ ಸಫಲತೆ ಮತ್ತು ಶಾಂತಿ ದೊರೆಯುವುದು.



> ಭಗವತ್ ಅನುಗ್ರಹದಿಂದ ಮಾತ್ರ ಸಫಲತೆ ಎಂಬುದು ಭಾರತೀಯ ಸಂಸ್ಕೃತಿ

ಇಂತಹ ಪವಿತ್ರವಾದ ಕ್ಷೇತ್ರಕ್ಕೆ ಮಕ್ಕಳನ್ನು ಕರೆತರುವುದರಿಂದ ಅವರಲ್ಲಿ ಧಾರ್ಮಿಕ ಪ್ರಜ್ಞೆ ಮೂಡುತ್ತದೆ ಎಂದರು.

ಸಾಹಿತಿ, ಚಿಂತಕ, ಶಿಕ್ಷಣ ತಜ್ಞರು. ಬೆಟ್ಟಂಪಾಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ.ವರದರಾಜ ಚಂದ್ರಗಿರಿ ಸ್ವಾಮೀಜಿಗಳನ್ನು ಗೌರವಿಸಿ ಮಾತನಾಡಿ, ನಾವೆಲ್ಲಾ ಶಂಕರಾಚಾರ್ಯ ಪರಂಪರೆಯ ಭಕ್ತರು. ಆದಿ ಶಂಕರಾಚಾರ್ಯರು ಹಿಂದೂ ಧರ್ಮದ ರಕ್ಷಣೆ ಮತ್ತು ಪ್ರಚಾರಕ್ಕಾಗಿ ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಅದ್ವೈತ ವೇದಾಂತ ಪೀಠಗಳನ್ನು ಸ್ಥಾಪಿಸಿದ್ದಾರೆ. 1200 ವರ್ಷ ಇತಿಹಾಸದ ಶೃಂಗೇರಿ ಪೀಠವು ಅದ್ವೈತ ವೇದಾಂತ ತತ್ವವನ್ನು ಸಂರಕ್ಷಿಸುವ ಮತ್ತು ಪ್ರಚಾರ ಮಾಡುವ ಪ್ರಮುಖ ಕೇಂದ್ರವಾಗಿದೆ. ಶೃಂಗೇರಿ ಜಗದ್ಗುರುಗಳು ಶಂಕರಾಚಾರ್ಯರ ಪರಂಪರೆಯನ್ನು ಮುನ್ನಡೆಸುತ್ತಿದ್ದಾರೆ. ಶೃಂಗೇರಿ ಶಾರದಾ ಪೀಠವು ಆಧ್ಯಾತ್ಮಿಕತೆಯ ಜೊತೆಗೆ ಬಲವಾದ ಸಾಮಾಜಿಕ ಬದ್ಧತೆಯನ್ನು ಹೊಂದಿದೆ. ದೇಶ ಕಾಯುವ ಸೈನಿಕರಿಗೆ ಗುರುಪೀಠವು ಅನೇಕ ಸಂದರ್ಭಗಳಲ್ಲಿ ಸಾಂತ್ವನ ನೀಡಿದೆ. ಸೈನಿಕರು ಗಾಯಗೊಂಡಾಗ ತೀವ್ರ ರಕ್ತಸ್ರಾವವನ್ನು ತಡೆಗಟ್ಟಲು ಮತ್ತು ತ್ವರಿತವಾಗಿ ರಕ್ತ ಹೆಪ್ಪುಗಟ್ಟುವಂತೆ ಮಾಡುವ ತಂತ್ರಜ್ಞಾನದ ಸಂಶೋಧನೆಗೆ ಪೀಠವು 30 ಕೋಟಿ ರೂ. ನೆರವು ನೀಡಿದೆ. ಹಿಂದೂ ಧರ್ಮದ ರಕ್ಷಣೆಗಾಗಿ ಕೇರಳದಿಂದ ಕಾಶ್ಮೀರದ ವರೆಗೆ ಉಪಕ್ರಮಗಳನ್ನು ನೀಡಿದೆ. ಸ್ಪಿರಿಚ್ಯುವಲ್ ಇಂಡಿಯಾ ಪರಿಕಲ್ಪನೆಗೆ ಶೃಂಗೇರಿ ಮಠ ಒತ್ತು ನೀಡಿದೆ ಎಂದರು.

ನಿವೃತ್ತ ಶಿಕ್ಷಕ ಡಾ.ಸತೀಶ್ ಪುಣಿಂಚಿತ್ತಾಯ ಸ್ವಾಗತಿಸಿದರು. ಸುರೇಶ್ ನೆಲ್ಲಿಕುಂಜೆ ನಿರೂಪಿಸಿದರು.

ಸನಾತನ ಧರ್ಮವೇ ಜಗತ್ತಿನ ಮೂಲ

ಸುಳ್ಯ: ಧರ್ಮದ ಬಗ್ಗೆ ಆಳವಾಗಿ ಅಧ್ಯಯನ ನಡೆಸಿ ಇನ್ನೊಬ್ಬರಿಗೆ ಮಾರ್ಗದರ್ಶನ ಮಾಡಬೇಕು ಹೊರತು ಅಲ್ಪ ಜ್ಞಾನಿಗಳಾಗಿ ತಾವು ಹೇಳಿದ್ದೇ ಧರ್ಮ ಎಂದು ಬಿಂಬಿಸಿಕೊಂಡು ತಪ್ಪು ದಾರಿಗೆ ಎಳೆಯುವುದು ಸನಾತನ ಧರ್ಮವಲ್ಲ, ಸನಾತನದ ಮೂಲವನ್ನು ಅರಿತು ಬಾಳುವುದೇ ಸನಾತನ ಧರ್ಮವಾಗಿದ್ದು ಆರಂಭ ಮತ್ತು ಅಂತ್ಯವಿಲ್ಲದೇ ಹರಿಯುವ ನೀರಟಗಿರುವ ಸನಾತನ ಧರ್ಮವೇ ಜಗತ್ತಿನ ಮೂಲ ಎಂದು ಶೃಂಗೇರಿ ಶ್ರೀ ಶಾರಾದಾಪೀಠಾಧೀಶ್ವರ ಶ್ರೀ ವಿಧುಶೇಖರ ಭಾರತೀ ಹೇಳಿದರು.



ಸಭಾಭವನ ಉದ್ಘಾಟನೆ

ಸುಳ್ಯ ತಾಲೂಕು ಅಜ್ಜಾವರ ಗ್ರಾಮದ ದೇವಸ್ಥಾನದಲ್ಲಿ ಶ್ರೀ ವಿಧುಶೇಖರ ಭಾರತೀ ಅವರು ನೂತನ ಶ್ರೀಮಾತಾ ಸಭಾಭವನ ಉದ್ಘಾಟಿಸಿ ಆಶೀರ್ವಚನಗೈದರು. ಮನುಷ್ಯ ಯಾವುದನ್ನು ಬಯಸಿ ಪೂರೈಸಿಕೊಳ್ಳಲು ಆಧಾರವಾಗಿದೆಯೋ ಅದುವೇ ಸನಾತನ ವಾಗಿದೆ. ಮನುಷ್ಯರು ಇನ್ನೊಬ್ಬರಿಗೆ ಕೆಟ್ಟದ್ದು ಬಯಸದೇ ಒಳಿತನ್ನೇ ಮಾಡಿಕೊಂಡು ಸಜ್ಜನರಾಗಿ ಬಾಳಿದರೆ ಆತನು ನಿಜವಾದ ಧರ್ಮ ಪಾಲಕನಾಗುತ್ತಾನೆ. ಇಂದು ಸುಳ್ಳುಗಳನ್ನೇ ಬಿತ್ತಿಕೊಂಡು ಸಾಗುತ್ತಿದ್ದು ಇದನ್ನು ತಡೆಯಲು ಪಾಂಡಿತ್ಯ ಹೊಂದಿದವರಿಂದ ಸಾಧ್ಯವಾಗಿದ್ದು, ಗುಣಗಳನ್ನು ಮೆಚ್ಚಲು ಗುಣವಂತನೇ ಆಗಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ದಕ್ಷಿಣ ಕನ್ನಡ ಲೋಕಸಭಾ ಸದಸ್ಯ ಕ್ಯಾ. ಬ್ರಿಜೇಶ್ ಚೌಟ ಮಾತನಾಡಿ, ಗುರುಗಳ ಆಶೀರ್ವಾದ ಹಾಗೂ ದೈವ ದೇವರುಗಳ ಜೊತೆಗೆ ಜನರ ಆಶೀರ್ವಾದದಿಂದ ಇಂದು ಇಲ್ಲಿಗೆ ಬರುವಂತಾಗಿದ್ದು ಗುರುಪೀಠದ ಆಶೀರ್ವಾದ ಸದಾ ನಮ್ಮ ಮೇಲಿರಲಿದೆ ಎಂದು ಹೇಳಿದರು.

ಒಗ್ಗಟ್ಟಿನ ಕೆಲಸ

ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, ಒಗ್ಗಟ್ಟಿನ ಮೂಲಕ ಎಲ್ಲಾ ಕೆಲಸಗಳನ್ನು ಮಾಡಲು ಶಕ್ತರಾಗಿದ್ದು ತಾಯಿ ಮಹಿಷಾರ್ಮನಿ ಸರ್ವರಿಗೂ ಒಳಿತನ್ನು ಮಾಡಲಿ ಎಂದು ಆಶಿಸಿದರು. ಮಾಜಿ ಮುಖ್ಯಮಂತ್ರಿ ಬಿಎಸ್‌ವೈ ಪರವಾಗಿ ಪುತ್ರಿ ಉಮಾದೇವಿ ಮಾತನಾಡಿ, ತಂದೆಯ ಬಗ್ಗೆ ಜನರಿಗೆ ಇರುವ ಪ್ರೀತಿ ಇಲ್ಲಿರುವ ಜನತೆಯನ್ನು ಕಂಡಾಗ ಅರಿವಾಗುತ್ತಿದ್ದು ಅವರಿಗೆ ನೀಡಿದ ಪ್ರೀತಿಗೆ ಸದಾ ಋಣಿಗಳು ಎಂದು ಹೇಳಿದರು.

ಕರ್ನಾಟಕ ಬ್ಯಾಂಕ್ ಅಧ್ಯಕ್ಷ ಪ್ರದೀಪ್ ಕುಮಾರ್ ಪಂಜ, ಬಿಎಸ್‌ವೈ ಅಳಿಯ ಸುಹಾನ್ ಕುಮಾರ್, ಪ್ರಧಾನ ಸಂಚಾಲಕ ಸುಬೋದ್ ಶೆಟ್ಟಿ ಮೇನಾಲ, ವಿಕ್ರಂ ಅಡ್ಪಂಗಾಯ, ಸವೇರಾ ರೈ, ಬಾಲಚಂದ್ರ ಮುಡೂರು, ಶಶ್ರಿ ಭಟ್ ಅಜ್ಜಾವರ, ಸತ್ಯವತಿ ಬಸವನಪಾದೆ, ಚನಿಯ ಕಲ್ತಡ್ಕ, ನಾರಾಯಣ ಬಂಟ್ರಬೈಲು, ಸೀತಾರಾಮ ಶಾಂತಿಮಜಲು ಸೇರಿದಂತೆ ಸಮಿತಿ ಪ್ರಮುಖರು, ಭಕ್ತರು ಉಪಸ್ಥಿತರಿದ್ದರು.

ಮೂಡಬಿದ್ರೆ-ಬಂಟ್ವಾಳ ರಾಜ್ಯ ಹೆದ್ದಾರಿಯ ತಿರುವುಗಳಲ್ಲಿರುವ ಮರ, ಬಳ್ಳಿಗಳನ್ನು ತೆರವುಗೊಳಿಸಿ



ಬಂಟ್ವಾಳ: ಮೂಡಬಿದ್ರೆ-ಬಂಟ್ವಾಳ ಲೋಕೋಪಯೋಗಿ ರಾಜ್ಯ ಹೆದ್ದಾರಿಯ ತಿರುವುಗಳಲ್ಲಿರುವ ಮರದ ರೆಂಬೆ ಹಾಗೂ ಬಳ್ಳಿಗಳನ್ನು ತೆರವುಗೊಳಿಸಿ, ರಸ್ತೆ ಬದಿಯ ಚರಂಡಿ ರಿಪೇರಿ ಮಾಡುವಂತೆ ಬಂಟ್ವಾಳ ಉಪವಿಭಾಗ ಲೋಕೋಪಯೋಗಿ ಇಲಾಖೆಗೆ ರೋಟರಿ ಕ್ಲಬ್ ಲೋರೆಟ್ಟೋ ಹಿಲ್ಸ್ ವತಿಯಿಂದ ಮನವಿ ನೀಡಲಾಯಿತು.

ಬಂಟ್ವಾಳ -ಮೂಡಬಿದ್ರೆ ರಸ್ತೆಯಲ್ಲಿ ದಿನಂಪ್ರತಿ ಸಾವಿರಾರು ವಾಹನಗಳು ಓಡಾಟ ನಡೆಸುತ್ತಿವೆ. ಈ ರಸ್ತೆಯು ಕೆಲವು ತಿರುವುಗಳನ್ನು ಹೊಂದಿದ್ದು ಹಲವು ಕಡೆಗಳಲ್ಲಿ ಮರದ ಕೊಂಬೆಗಳು, ಬಳ್ಳಿಗಳು ರಸ್ತೆಗೆ ಬಾಗಿಕೊಂಡಿದ್ದು ಎದುರಿನಿಂದ ಬರುವ ವಾಹನಗಳು ಒಂದಕ್ಕೊಂದು ಕಾಣದಂತೆ ಇದೆ. ರಸ್ತೆಯ ಎರಡು ಬದಿಯಲ್ಲಿರುವ ಚರಂಡಿಗಳಲ್ಲಿ ಮಣ್ಣು ಮತ್ತು ಕಸಕಡ್ಡಿಗಳು ತುಂಬಿ ಕೊಂಡಿದ್ದು ಮಳೆ ನೀರು ರಸ್ತೆಯಲ್ಲಿಯೇ ಹರಿದು ಹೋಗುತ್ತಿದೆ.

ಮಳೆಗಾಲ ಸಮಯದಲ್ಲಿ ಚರಂಡಿಯ ಮಣ್ಣು ತೆಗೆದು ಅಲ್ಲೇ ರಸ್ತೆಯ ಮೇಲೆ ಹಾಕುತ್ತಿರುವುದರಿಂದ ಮತ್ತೇ ಆ ಮಣ್ಣು ಮಳೆಯ ನೀರಿಗೆ ಚರಂಡಿ ಸೇರುತ್ತಿದೆ. ಆದುದರಿಂದ ಮಳೆಗಾಲ ಪ್ರಾರಂಭ ಮುಂಚೆಯೇ ರಸ್ತೆ ತಿರುವುಗಳಲ್ಲಿರುವ ಮರದ ಕೊಂಬೆ, ಬಳ್ಳಿಗಳನ್ನು ಕಡಿದು, ಚರಂಡಿ ರಿಪೇರಿ ಮಾಡಿ ವಾಹನ ಸವಾರರಿಗೆ ಸುಗಮವಾಗಿ ಹಾಗೂ ನಿರ್ಭಯವಾಗಿ ಸಂಚಾರ ಮಾಡುವರೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದೂ ಮನವಿಯಲ್ಲಿ ತಿಳಿಸಲಾಗಿದೆ.

ರೋಟರಿ ಕ್ಲಬ್ ಬಂಟ್ವಾಳ ಲೋರೆಟ್ಟೋ ಹಿಲ್ಸ್ ಅಧ್ಯಕ್ಷ ವಿಜಯ ಫೆರ್ನಾಂಡೀಸ್, ನಿಕಟ ಪೂರ್ವ ಅಧ್ಯಕ್ಷರಾದ ಸುರೇಶ ಶೆಟ್ಟಿ ಸಿದ್ದಕಟ್ಟೆ, ರಾಮಚಂದ್ರ ಶೆಟ್ಟಿಗಾರ್, ಆಂಟನಿ ಸಿಕ್ವೇರಾ, ಐವನ್ ಮೆನೇಜಸ್, ಪ್ರೀತಮ್ ರೋಡ್ರಿಗಸ್, ರುಡಾಲ್ಪ್ ದೇವಾನಂದ ಮತ್ತಿತರರು ಉಪಸ್ಥಿತರಿದ್ದರು.

ಫಿಲೋಮಿನಾದಲ್ಲಿ ಕ್ವಾಂಟಾ-2ಕೆ26 ಭೌತಶಾಸ್ತ್ರ ಉತ್ಸವ

ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ ಚಿಂತನೆಗಳ ವೃದ್ಧಿ

ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ(ಸ್ವಾಯತ್ತ) ಭೌತಶಾಸ್ತ್ರ ವಿಭಾಗದ ವತಿಯಿಂದ 'ಕ್ವಾಂಟಾ 2ಕೆ26' ಅಂತರ್‌ವಿಭಾಗೀಯ ಭೌತಶಾಸ್ತ್ರ ಉತ್ಸವ ಕಾಲೇಜಿನ ಎಸ್‌ಜೆಎಂ ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಬಂಟ್ವಾಳದ ಶ್ರೀ ವೆಂಕಟರಮಣ ಸ್ವಾಮಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು ಮತ್ತು ಸಸ್ಯಶಾಸ್ತ್ರ ವಿಭಾಗ ಮುಖ್ಯಸ್ಥ ಡಾ. ವಿನಾಯಕ ಕೆ.ಎಸ್., ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ ಚಿಂತನೆ ಬೆಳೆಸುವ ಉದ್ದೇಶದಿಂದ ಈ ಉತ್ಸವವನ್ನು ಆಯೋಜಿಸಿರುವುದು ಶ್ಲಾಘನೀಯ. ಇಂತಹ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಉಪಪ್ರಾಂಶುಪಾಲ ಡಾ. ವಿಜಯ ಕುಮಾರ್ ಎಂ., ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಸಾಧನೆಗೆ ಮಾತ್ರ ಸೀಮಿತವಾಗದೆ, ಇಂತಹ ಉತ್ಸವಗಳಲ್ಲಿ ಆಯೋಜಿಸಲಾದ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಕೌಶಲ್ಯಾಭಿವೃದ್ಧಿಯನ್ನು ಸಾಧಿಸಬೇಕು ಎಂದರು.



> ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ ಚಿಂತನೆ ಬೆಳೆಸುವ ಉದ್ದೇಶದಿಂದ ಈ ಉತ್ಸವವನ್ನು ಆಯೋಜಿಸಿರುವುದು ಶ್ಲಾಘನೀಯ

ಉತ್ಸವದ ಅಂಗವಾಗಿ ಆಯೋಜಿಸಲಾದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ನಡೆಯಿತು. ಸಂಯೋಜಕರಾದ ಪ್ರಾಧ್ಯಾಪಕಿ ಪೂಜಾಶ್ರೀ ವಿ. ರೈ ಹಾಗೂ ವಿಜ್ಞಾನ ವಿಭಾಗದ ಉಪನ್ಯಾಸಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದ್ವಿತೀಯ ಬಿಎಸ್ಸಿ ವಿದ್ಯಾರ್ಥಿನಿ ಮಾನಸಾ ಹಾಗೂ ತಂಡ ಪ್ರಾರ್ಥಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ. ಚಂದ್ರಶೇಖರ್ ಪ್ರಾಸ್ತಾವಿಸಿದರು. ವಿದ್ಯಾರ್ಥಿ ಸಂಯೋಜಕರಾದ ಮನೀಶ್ ಬಿ.ಪಿ. ಅತಿಥಿಗಳನ್ನು ಪರಿಚಯಿಸಿದರು. ಎ.ಜೆ. ಆಯಿಷತ್ ಜಬೀನಾ ಸ್ವಾಗತಿಸಿ, ಅಶ್ವಿನಿ ಎನ್. ವಂದಿಸಿದರು. ಸುಷ್ಮಾ ವಾಗ್ಲೆ ಕಾರ್ಯಕ್ರಮ ನಿರ್ವಹಿಸಿದರು.


ಮರಳು ಅಭಾವದಿಂದ ಅರ್ಧಕ್ಕೆ ನಿಂತ ಅಜ್ಜಾವರದ ಗ್ರಾಮೀಣ ರಸ್ತೆ ಕಾಮಗಾರಿ

15 ದಿನಗಳಲ್ಲಿ ಮುಗಿಸಿ: ಮುಖ್ಯಮಂತ್ರಿ ಕಚೇರಿ ಸೂಚನೆ

ಸುಳ್ಯ: ಮರಳು ಅಭಾವದಿಂದ ಅರ್ಧಕ್ಕೆ ನಿಂತ ಅಜ್ಜಾವರದ ಗ್ರಾಮೀಣ ರಸ್ತೆ ಕಾಮಗಾರಿಯನ್ನು 15 ದಿನಗಳಲ್ಲಿ ಕಾಮಗಾರಿ ಮುಕ್ತಾಯಗೊಳಿಸಿ ನೀಡುವಂತೆ ಗುತ್ತಿಗೆದಾರರಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸೂಚನೆ ನೀಡಿದ್ದಾರೆ.

'ಮರಳು ಅಭಾವದಿಂದ ಅರ್ಧಕ್ಕೆ ನಿಂತ ಅಜ್ಜಾವರದ ಗ್ರಾಮೀಣ ರಸ್ತೆ ಕಾಮಗಾರಿ' ಎಂಬ ಶೀರ್ಷಿಕೆಯಡಿ 'ಹೊಸ ದಿಗಂತ' ದಿನಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿದ್ದು, ಈ ಕುರಿತು ಮುಖ್ಯಮಂತ್ರಿ ಕಚೇರಿ ತುರ್ತಾಗಿ ಸ್ಪಂದಿಸಿ ಸರ್ಕಾರದ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ನೋಟೀಸ್ ನೀಡುತ್ತಿದ್ದಂತೆ 15 ದಿನಗಳಲ್ಲಿ ಕಾಮಗಾರಿ ಮುಕ್ತಾಯಗೊಳಿಸುವಂತೆ ಪಂಚಾಯತ್ ಗುತ್ತಿಗೆದಾರರಿಗೆ ನೊಟೀಸ್ ನೀಡಿದೆ.

ಪಡ್ಡಂಬೈಲು–ಕರ್ಲಪ್ಪಾಡಿ ಸಂಪರ್ಕ ರಸ್ತೆ ಕಾಮಗಾರಿಯು ನನೆಗುದಿಗೆ ಬಿದ್ದಿದ್ದು, ಇದರ ಪರಿಣಾಮ ಮಳೆಗೆ ರಸ್ತೆ ಸಂಪೂರ್ಣ ಕೆಸರಿನಿಂದ ಅಸ್ತವ್ಯಸ್ತಗೊಂಡಿದ್ದು, ವಾಹನ ಸವಾರರು



ಪರದಾಡುವಂತಾಗಿದೆ. 2024–25ನೇ ಆರ್ಥಿಕ ವರ್ಷದಲ್ಲಿ ಗ್ರಾ.ಪಂ. ರಸ್ತೆಗೆ ರೂ.1.45 ಲಕ್ಷ ಮೊತ್ತದಲ್ಲಿ ಈ ಕಾಂಕ್ರೀಟೀಕರಣಕ್ಕೆ ಅನುದಾನವಿರಿಸಿ ಆ ಬಳಿಕ ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಳಿಸಿತ್ತು. ಈ ನಡುವೆ ಗುತ್ತಿಗೆದಾರರು ಸ್ಥಳೀಯರು ಕೆಂಪು ಕಲ್ಲುಗಳನ್ನು ಹಾಕಿ ಸಿದ್ಧಗೊಳಿಸಿದ್ದ ರಸ್ತೆಯನ್ನು ತೆರವುಗೊಳಿಸಿ ಕೇವಲ ಜಲ್ಲಿಗಳನ್ನು ತಂದು ಸುರಿದಿದ್ದರು. ಇದೀಗ ಆ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಲು ಮರಳು ಅಭಾವ ಎಂಬ ಕಾರಣ ನೀಡಿ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಲಾಗಿತ್ತು. ಮೇ 8ರ ಹೊಸ ದಿಗಂತ ದಿನಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿದ್ದು, ಸದರಿ ವಿಷಯದ ವಾಸ್ತವಾಂಶದ ಬಗ್ಗೆ ಆದ್ಯತೆಯ ಮೇರೆಗೆ ನಿಯಾಮಾನುಸಾರ ಪರಿಶೀಲಿಸಿ ತಕ್ಷಣವೇ ಅಗತ್ಯ ಕ್ರಮ ಕೈಗೊಂಡು, ಅನುಪಾಲನಾ ವರದಿಯನ್ನು ಕೂಡಲೇ ಸಲ್ಲಿಸುವಂತೆ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿ ಡಾ.ಕೆ. ವೈಷ್ಣವಿ ಸೂಚನೆ ಬೆನ್ನಲ್ಲೇ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗುತ್ತಿಗೆದಾರರಿಗೆ ನೊಟೀಸ್ ಜಾರಿ ಮಾಡಿದ್ದಾರೆ.

ಈ ನೋಟಿಸ್ ಸ್ವೀಕರಿಸಿದ 7 ದಿನದೊಳಗಾಗಿ ರಸ್ತೆ ಕಾಮಗಾರಿ ಪೂರ್ಣಗೊಳಿಸತಕ್ಕದ್ದು. ಇಲ್ಲದಿದ್ದಲ್ಲಿ ತಮಗೆ ಗ್ರಾಮ ಪಂಚಾಯತ್‌ನಿಂದ ನೀಡಲಾದ ಕಾಮಗಾರಿ ಆದೇಶ ಹಾಗೂ ಅಗ್ರಿಮೆಂಟ್ ಎಂಬುದಾಗಿ ತಮಗೆ ಅಂತಿಮ ನೊಟೀಸ್ ಜಾರಿಗೊಳಿಸಲಾಗಿದೆ. ಕಾಮಗಾರಿಯನ್ನು 15 ದಿನಗಳ ಒಳಗಾಗಿ ಮುಕ್ತಾಯಗೊಳಿಸತಕ್ಕದ್ದು ಎಂದು ತಿಳಿಸಿದೆ.

ಶ್ರೀಗಳ ಉಪಸ್ಥಿತಿಯಲ್ಲಿ ಶ್ರೀ ವೆಂಕಟರಮಣ ದೇವರಿಗೆ ಶ್ರೀಗಂಧ ಲೇಪನ ಸೇವೆ

ಕುಂದಾಪುರ : ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಅಧಿಕ ಮಾಸದ ಅಂಗವಾಗಿ ಮಾಸಾವಧಿ ಅಖಂಡ ಭಜನಾ ಮಹೋತ್ಸವ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವ ಆಶೀರ್ವಾದಾನುಸಾರ, ಶ್ರೀಗಳ ಉಪಸ್ಥಿತಿಯಲ್ಲಿ ಶ್ರೀ ವೆಂಕಟರಮಣ ದೇವರಿಗೆ ಗಂಧ ಲೇಪನ ಸೇವೆ ಶುಕ್ರವಾರ ನಡೆಯಿತು.

ಗಂಧ ಲೇಪನದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ದೇವಳದ ಪ್ರಧಾನ ಅರ್ಚಕ ಎಸ್.ವೆಂಕಟರಮಣ ಆಚಾರ್ಯ ನೇತೃತ್ವದಲ್ಲಿ ಶಾಸ್ತ್ರೋಕ್ತವಾಗಿ ಸಂಪನ್ನಗೊಂಡಿತು. ಮಧ್ಯಾಹ್ನ ಉಭಯ ದೇವರಿಗೆ ಮಹಾಪೂಜೆ, ಮಹಾಸಮಾರಾಧನೆ, ಸಂಜೆ ಉಭಯ ದೇವರಿಗೆ ರಾತ್ರಿ ಪೂಜೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು. ಗಂಗೊಳ್ಳಿ ವೈದಿಕ ವೃಂದದವರು ಗಂಧಲೇಪನದ ಸೇವಾದಾರರಾಗಿ ಸೇವೆ ಸಮರ್ಪಿಸಿದರು.



ದೇವಳದ ಆಡಳಿತ ಮೊಕ್ತೇಸರ ಎನ್. ಸದಾಶಿವ ನಾಯಕ್, ಜಿ.ವೆಂಕಟೇಶ ನಾಯಕ್, ಆಡಳಿತ ಮಂಡಳಿ ಸದಸ್ಯರು, ವೈದಿಕರು, ಪುರೋಹಿತರು, ಊರಿನ ಹತ್ತು ಸಮಸ್ತರು, ಸಮಾಜ ಬಾಂಧವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಲಕ್ಕಿಡಿಪ್ ಡ್ರಾ ಫಲಿತಾಂಶ

ಕಿರೋಡಿಯನ್ ತರವಾಡು ಮನೆ, ಶ್ರೀ ಧೂಮಾವತಿ, ಬಂಟ ಮತ್ತು ಪರಿವಾರ ದೈವಗಳು,
ಲಕ್ಷ್ಮೀ ಮುಂಡಪ್ಪ ಪೂಜಾರಿ ಕಂಪೌಂಡ್, ಅಸೈಗೋಳಿ

ಕಿರೋಡಿಯನ್ ತರವಾಡು ಮನೆಯ ಪುನರ್‌ಪ್ರತಿಷ್ಠಾಪನೆಯ ಅಂಗವಾಗಿ ನಡೆದ ಲಕ್ಕಿಡಿಪ್ ಡ್ರಾ ಫಲಿತಾಂಶ.

ಪ್ರಥಮ ಬಹುಮಾನ :001309
ದ್ವಿತೀಯ ಬಹುಮಾನ:000845
ತೃತೀಯ ಬಹುಮಾನ :001253

ಮಂಗಳೂರು ಮಹಾನಗರಪಾಲಿಕೆ

DMA/2026-27/WORK INDENT NO.58145, 58107 ದಿನಾಂಕ: 14-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ: **DMA/2026-27/WORK INDENT NO.58145, 58107** ರಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. 2 ಕಾಮಗಾರಿಗಳ ಒಟ್ಟು ಮೊತ್ತ **ರೂಪಾಯಿ 70.80 ಲಕ್ಷಗಳಾಗಿರುತ್ತದೆ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 25–05–2026 ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಂಗಳೂರು ಮಹಾನಗರಪಾಲಿಕೆ

DIPR/DK/KSMCA/209/26-27 dt: 15.05.2026

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್/ಸಿಆರ್–01/2026–27 ದಿನಾಂಕ:13.05.2026

ಅಲ್ಪಾವದಿ ಇ–ಟೆಂಡರ್ ಪ್ರಕಟಣೆ.
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026–27 ನೇ ಸಾಲಿಗೆ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ "ನೆಡುತೋಪು ರಚನೆ, ನೆಡುತೋಪು ನಿರ್ವಹಣೆ ಮತ್ತು ವಿವಿಧ ಅಳತೆಯ ಸಸಿಗಳ ನಿರ್ವಹಣೆ" ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2026–27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿ:20.05.2026 ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp. karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/26–27/60/05/228

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರಾದ ಬಂಟ್ವಾಳ ತಾಲೂಕು ಬಡಗ ಕಜೆಕಾರು ಗ್ರಾಮದ ಶ್ರೀಮತಿ ಕಮಲರ ಪತಿ ದಿ. ಚೆನ್ನಪ್ಪ ಪೂಜಾರಿಯವರಿಗೆ ಬಂಟ್ವಾಳ ತಾಲೂಕು ಕಚೇರಿಯಿಂದ ತಾರೀಕು: 03.07.2007 ರಲ್ಲು ದೊರೆತಿರುವ ಸಾಗುವಳಿ ಚೀಟು ನಂಬ್ರ ADis.NCRSR: 138/1991-92 (ನಂಬ್ರ116/07-08) ಮೂಲಸಾಗುವಳಿ ಚೀಟು ಮೂಲ ಹಕ್ಕು ಪತ್ರ ಮತ್ತು ಇತರ ದಾಖಲೆಗಳು ಕಳೆದುಹೋಗಿರುತ್ತವೆ. ಈ ಬಗ್ಗೆ ಯಾರದ್ದಾದರೂ ಕ್ಲೈಮುಗಳಿದ್ದಲ್ಲಿ ಇಂದಿನಿಂದ 15 ದಿನಗಳ ಒಳಗಾಗಿ ನನಗೆ ತಿಳಿಸತಕ್ಕದ್ದು. ನಂತರ ಬಂದ ಕ್ಲೈಮುಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ರಾಘವೇಂದ್ರ ಕೆ. ಪಿ
ಮೊದಲ ಮಹಡಿ, ಎನ್. ಕೆ. ಕಾಂಪ್ಲೆಕ್ಸ್,
ಮುಖ್ಯ ರಸ್ತೆ, ಬಿ. ಸಿ. ರೋಡು
ಫೋನ್: 08255–232844

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರಾದ ಬಂಟ್ವಾಳ ತಾಲೂಕು ತೆಂಕಕಜೆಕಾರು ಗ್ರಾಮದ ಸುವಾಸಿನಿಯವರ ತಂದೆ ದಿ. ವಿಶ್ವನಾಥ ಪೂಜಾರಿಯವರಿಗೆ ಬಂಟ್ವಾಳ ತಾಲೂಕು ಕಚೇರಿಯಿಂದ ತಾರೀಕು: 03.05.2006 ರಲ್ಲು ದೊರೆತಿರುವ ಸಾಗುವಳಿ ಚೀಟು ನಂಬ್ರ ADis.NCRSR: 192/1998-99 (ಸಾಗುವಳಿ ಚೀಟು ನಂಬ್ರ 14/06-07) ಸಾಗುವಳಿಚೀಟುಮೂಲಹಕ್ಕುಪತ್ರಮತ್ತು ಇತರದಾಖಲೆಗಳುಕಳೆದುಹೋಗಿರುತ್ತವೆ. ಈ ಬಗ್ಗೆ ಯಾರದ್ದಾದರೂ ಕ್ಲೈಮುಗಳಿದ್ದಲ್ಲಿ ಇಂದಿನಿಂದ 15 ದಿನಗಳ ಒಳಗಾಗಿ ನನಗೆ ತಿಳಿಸತಕ್ಕದ್ದು. ನಂತರ ಬಂದ ಕ್ಲೈಮುಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ರಾಘವೇಂದ್ರ ಕೆ. ಪಿ
ಮೊದಲ ಮಹಡಿ, ಎನ್. ಕೆ. ಕಾಂಪ್ಲೆಕ್ಸ್,
ಮುಖ್ಯ ರಸ್ತೆ, ಬಿ. ಸಿ. ರೋಡು
ಫೋನ್: 08255–232844

ಪುತ್ತೂರು ಮಾರುಕಟ್ಟೆ ಧಾರಣೆ

15-05-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 440 - 470
ಚೋಲ್ ಅಡಿಕೆ	: 520 - 540
ಡಬಲ್ ಚೋಲ್	: 520 - 540
ಹೊಸ ಪಟೋರ	: 355 - 405
ಹಳೆ ಪಟೋರ	: 375 - 405
ಹೊಸ ಉಳ್ಳಿ	: 140 - 300
ಹಳೆ ಉಳ್ಳಿ	: 130 - 300
ಹೊಸ ಕೋಕಾ	: 325 - 345
ಹಳೆ ಕೋಕಾ	: 325 - 345
ಹೊಸ ಕರಿಗೋಟು	: 265 - 295
ಹಳೆ ಕರಿಗೋಟು	: 265 - 295
ಹಸಿ ಕೊಕ್ಕೋ	: 70 - 105
ಒಣ ಕೊಕ್ಕೋ	: 270 - 320
ಕಾಳುಮೆಣಸು ಧಾರಣೆ	
ಕಾಳುಮೆಣಸು	: 450 - 690
ರಬ್ಬರ್ ಧಾರಣೆ : ಗ್ರೇಡ್	
ಆರ್‌ಎಸ್‌ಎಸ್ 1	- 258.00
ಆರ್‌ಎಸ್‌ಎಸ್ 2	- 211.00
ಸ್ಕ್ರಾಪ್ 1	- 152.00
ಸ್ಕ್ರಾಪ್ 2	- 140.00

ಕರ್ನಾಟಕ ಸರಕಾರ

ತೋಟಗಾರಿಕೆ ಜಂಟಿ ನಿರ್ದೇಶಕರು, ಜಿಲ್ಲಾಪಂಚಾಯತ, ಜಿಲ್ಲಾ ಆಡಳಿತ ಭವನ, ನವನಗರ , ಬಾಗಲಕೋಟೆ

E-mail: jdhzpbgk@gmail.com Phone No: 9448999233

ಸಂ: ತೋಜಂನಿ/ಜಿಪಂ/ಬಾ/ವಿನಿ–1/e-proc/2026–27 ದಿನಾಂಕ: 15.05.2026

ಪತ್ರಿಕಾ ಪ್ರಕಟಣೆ

ತೋಟಗಾರಿಕೆ ಜಂಟಿ ನಿರ್ದೇಶಕರು, (ಜಿ.ಪಂ) ಬಾಗಲಕೋಟೆ ಇವರು ಕೆಪಿಪಿಪಿ ಪೋರ್ಟಲ್ ಮೂಲಕ ಅರ್ಹ ಮಾನವ ಸಂಪನ್ಮೂಲ ಸೇವೆ ಪೂರೈಸುವ ಸರ್ಕಾರ/ಸರ್ಕಾರೇತರ ಏಜೆನ್ಸಿ/ಸಂಸ್ಥೆಗಳಿಂದ **ರೂ.8.93** ಲಕ್ಷ ಒಂದು ವರ್ಷದ ಅವಧಿಗೆ ಬಾಹ್ಯ ಮೂಲದಿಂದ ಗಣಕಯಂತ್ರ ನಿರ್ವಾಹಕರು, ವಾಹನ ಚಾಲಕ, ಹಾಗೂ ಅಟೆಂಡರ್ ಹುದ್ದೆಗಳ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆದುಕೊಳ್ಳಲು ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದ್ದು (ಟೆಂಡರ್ ಸಂಖ್ಯೆ: KSHD/2026-27/SEO561), ಅಲ್ಪಾವಧಿ ಇ–ಟೆಂಡರ್ ಮೂಲಕ ಬಿಡ್‌ದಾರರು ಅರ್ಜಿಗಳನ್ನು ಅಪಲೋಡ್ ಮಾಡಲು **ದಿನಾಂಕ: 26–05–2026 ಮಧ್ಯಾಹ್ನ 12.00 ಗಂಟೆವರೆಗೆ** ಕಾಲಾವಕಾಶವಿದ್ದು, ಹೆಚ್ಚಿನ ವಿವರಗಳನ್ನು https://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆಯಬಹುದು.

ತೋಟಗಾರಿಕೆ ಜಂಟಿ ನಿರ್ದೇಶಕರು
(ಜಿಪಂ) ಬಾಗಲಕೋಟೆ

ವಾ.ಸಾ.ಸಂ.ಇ/ಬಾಗಲಕೋಟೆ/44/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 04/2026–27 ದಿನಾಂಕ: 12.05.2026 (2ನೇ ಕರೆ)
ಉಲ್ಲೇಖ: ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 37/2025–26 ದಿನಾಂಕ: 25.02.2026
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ **KPWD Class-III & above** ದರ್ಜೆಯ ಗುತ್ತಿಗೆದಾರರಿಂದ (ಕ್ರಮ ಸಂಖ್ಯೆ 01 ಮತ್ತು 02 ರ ಕಾಮಗಾರಿಗಳಿಗೆ **SC Category,** ಕ್ರಮ ಸಂಖ್ಯೆ 03 ಮತ್ತು 04 ರ ಕಾಮಗಾರಿಗಳಿಗೆ **ST Category,** ಕ್ರಮ ಸಂಖ್ಯೆ 05 ರಿಂದ 10 ರ ವರೆಗಿನ ಕಾಮಗಾರಿಗಳಿಗೆ **Category IIA** ಹಾಗೂ ಕ್ರಮ ಸಂಖ್ಯೆ 11 ರಿಂದ 13 ರ ವರೆಗಿನ ಕಾಮಗಾರಿಗಳಿಗೆ **Category I** ಗುತ್ತಿಗೆದಾರರು ಮಾತ್ರ ಭಾಗವಹಿಸತಕ್ಕದ್ದು) ಕೆ.ಪಿ.ಪಿ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ವ್ಯಾಪ್ತಿಯಲ್ಲಿ ಕಾಲು ಸಂಕ (Foot Bridge) ಅಭಿವೃದ್ಧಿ ಕಾಮಗಾರಿಗಳ (13 ಸಂಖ್ಯೆ) ಟೆಂಡರಿಗಿಟ್ಟ ಮೊತ್ತ ರೂ. 9.95 ಲಕ್ಷಗಳಿಂದ ರೂ. 49.96 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 0.11 ಲಕ್ಷಗಳಿಂದ ರೂ. 0.42 ಲಕ್ಷಗಳು.

1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ:15.05.2026 ರಿಂದ 22.05.2026 ಸಂಜೆ 5.30 ರವರೆಗೆ 2) ಟೆಂಡರ್ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 21.05.2026 ಸಂಜೆ 5.30 ಗಂಟೆಗೆ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:25.05.2026 ಬೆಳಿಗ್ಗೆ 11.00 ಗಂಟೆಗೆ 4) ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ **(www.kppp.karnataka.gov.in)** ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ.

ವಾ.ಸಾ.ಸಂ.ಇ/ಶಿ/ನಂ. 61–05/ ಝೇಂಕಾರ್/2026–27

ಪುರಸಭೆ ಕಾರ್ಯಾಲಯ, ಕಾಪು
ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್ ಮೆಂಟ್ ಮೂಲಕ ಮಾತ್ರ)

ಪುಸಕಾ/ಇಎಸ್.ಟಿ/ಸಿಆರ್/155/2026-27 ದಿನಾಂಕ : 14-05-2026

ಕಾಪು ಪುರಸಭೆ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ಪುರಸಭಾ ನಿಧಿಯಡಿ ಅಂದಾಜು ಮೊತ್ತ ರೂ. 26.97 ಲಕ್ಷಮೊತ್ತದಲ್ಲಿನೀರು ಸರಬರಾಜು ಹೆಲ್ಪರ್‌ನೇ ವಾಲ್ವ್‌ಮ್ಯಾನ್ 6 ಹುದ್ದೆ1 ಅಟೆಂಡರ್ ಹುದ್ದೆ ಹಾಗೂ ಜ್ಯೂನಿಯರ್ ಪ್ರೋಗ್ರಾಮರ್ 1 ಹುದ್ದೆ ಅಕೌಂಟೆಂಟ್ 1 ಹುದ್ದೆಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ಒದಗಿಸಲು ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್ ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಸಲ್ಲಿಸಲು ಕೊನೆ ದಿನಾಂಕ:25–05–2026 ಇತರ ಷರತ್ತು & ವಿವರಗಳಿಗೆ ಟೆಂಡರ್ ಕೆ.ಡಬ್ಲ್ಯೂ.1ರ ನಮೂನೆಯಲ್ಲಿ, www.kauptown.mrc.gov.in ವೆಬ್‌ಸೈಟ್‌ನಲ್ಲಿ ಮತ್ತು https://eproc.karnataka.gov.inನಲ್ಲಿ ಪಡೆಯಬಹುದಾಗಿದೆ. ಅಲ್ಲದೇ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ಕಾಪು ಪುರಸಭೆಗೆ ನೀರು ಸರಬರಾಜು ವಿಭಾಗಕ್ಕೆ ಹೆಲ್ಪರ್/ವಾಲ್ವೆಮನ್ (06) ಹುದ್ದೆಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಿಸಿಕೊಳ್ಳುವುದು.	ರೂ. 17.65
2	ಕಾಪು ಪುರಸಭೆಗೆ ಅಟೆಂಡರ್ (01) ಹುದ್ದೆಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಿಸಿಕೊಳ್ಳುವುದು	ರೂ. 2.90
3	ಕಾಪು ಪುರಸಭೆಗೆ ಜ್ಯೂನಿಯರ್ ಪ್ರೋಗ್ರಾಮರ್ (01) ಹಾಗೂ ಲೆಕ್ಕ ಸಹಾಯಕ (ಅಕೌಂಟೆಂಟ್) (01) ನೇಮಿಸಿಕೊಳ್ಳುವುದು	ರೂ. 6.42
ಒಟ್ಟು		26.97

ಸಹಿ/– ಮುಖ್ಯಾಧಿಕಾರಿ,
ಪುರಸಭೆ, ಕಾಪು, ಉಡುಪಿ ಜಿಲ್ಲೆ

ಕರ್ನಾಟಕ ಸರ್ಕಾರ

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾಧಿಕಾರಿಗಳ ಕಾರ್ಯಾಲಯ

ಕೊಠಡಿ ಸಂಖ್ಯೆ–001, ಕಾರವಾರ, ಉತ್ತರ ಕನ್ನಡ, ಫೋನ್: 08382–226588, 226589

ಇ–ಮೇಲ್: dobcmuttarakannada@gmail.com & dobcw-karwar@kar.gov.in

ಸಂಖ್ಯೆ: ಬಿಸಿಡಬ್ಲ್ಯೂಡಿ/ಲೆಕ್ಕಪತ್ರ/ಸಿಆರ್–01/2026–27 ದಿನಾಂಕ: 13–05–2026

ಇ–ಟೆಂಡರ್ ಪ್ರಕಟಣೆ

ಜುಲೈ–2026 ರಿಂದ ಜೂನ–2027 ಅಥವಾ ಮುಂದಿನ ಆದೇಶದವರೆಗೆ ಉತ್ತರಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿರುವ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿನಿಲಯಗಳ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು ಹಾಗೂ ಕಛೇರಿಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್ ಟೈಪಿಸ್ಟ್, ಜವಾನ ಹಾಗೂ ವಾಹನ ಚಾಲಕ ಹುದ್ದೆಗಳ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯಲು ಇ–ಟೆಂಡರ್ ಕರೆಯಲಾಗಿದ್ದು, ಆಸಕ್ತ ಟೆಂಡರ್‌ದಾರರು ಕೊನೆಯ ದಿನಾಂಕ: 12–06–2026 ರ ಸಂಜೆ 4.00 ಗಂಟೆಯೊಳಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರಮೆಂಟ್ ವಿಳಾಸ: kppp.karnataka.gov.inನಲ್ಲಿ ಪಡೆಯಬಹುದಾಗಿದೆ.

ವೇಳಾಪಟ್ಟಿ (Calender of Events): (1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಸಂ/ಬಿಸಿಡಬ್ಲ್ಯೂ/ಲೆಕ್ಕಪತ್ರ/ಟೆಂಡರ್/ಸಿಆರ್–01/2026–27 ದಿನಾಂಕ: (2) ಟೆಂಡರ್‌ಗಿಟ್ಟ ಅಂದಾಜು ಮೊತ್ತ: ರೂ. 823.25 ಲಕ್ಷ (3) ಇಎಂಡಿ ಮೊತ್ತ ರೂ. 8,23,248/– (4) ಟೆಂಡರ್ ಫಾರ್ಮ ಅಪ್‌ಲೋಡ ಮಾಡಲು ಪ್ರಾರಂಭಿಸುವ ದಿನಾಂಕ: ದಿ: 13–05–2026 (5) ಪೂರ್ವಭಾವಿ ಸಭೆ ದಿನಾಂಕ ಮತ್ತು ಸ್ಥಳ ದಿ: 20–05–2026 ರ ಸಂಜೆ 4.00, ಸ್ಥಳ: ಜಿಲ್ಲಾ ಅಧಿಕಾರಿಗಳ ಕಛೇರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಡಿ.ಸಿ. ಆಫೀಸ್ ಕಾಂಪ್ಲೆಕ್ಸ್, ರೂಂ. ನಂ.–1, ಕಾರವಾರ, ಉತ್ತರ ಕನ್ನಡ. ದೂರವಾಣಿ ಸಂಖ್ಯೆ: 226589 (6) ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ. ದಿ: 12–06–2026 ರ ಸಂಜೆ 4.00 ಗಂಟೆಯೊಳಗೆ. (7) ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ ದಿ: 15–06–2026 ಬೆಳಿಗ್ಗೆ 11.00 ಗಂಟೆ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) (8) ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ ದಿ: 18–06–2026 ರ ಬೆಳಿಗ್ಗೆ 11.00 ಗಂಟೆ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) (9) ಹೆಚ್ಚಿನ ಮಾಹಿತಿ ಹಾಗೂ ನಿಗದಿತ ಅರ್ಜಿ ನಮೂನೆಗಳಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: kppp.karnataka.gov.in ಅಥವಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉತ್ತರ ಕನ್ನಡ, ಕಾರವಾರ, ಡಿ.ಸಿ. ಆಫೀಸ್ ಕಾಂಪ್ಲೆಕ್ಸ್, ರೂಂ. ನಂ.–1, ಕಾರವಾರ, ಉತ್ತರ ಕನ್ನಡ, ದೂರವಾಣಿ ಸಂಖ್ಯೆ: 226589

ಸಹಿ/– ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉತ್ತರ ಕನ್ನಡ

DIPR/KWR/KSMCA/130/ 26-27 Dt. 14.05.2026

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ವಿಭಾಗ ಕಾರ್ಯಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ–581301.
ದೂರವಾಣಿ: 08382–228935 ಫ್ಯಾಕ್ಸ್: 229735 E-mail: eerdwsd.uk@gmail.com

ನಂ: ಕಾ.ನಿ.ಇಂ/ಗ್ರಾ.ಕು.ನೀ.&ನೈ.ವಿ.ಕಾ/JJM/ಟೆಂಡರ್ ಪ್ರಕಟಣೆ/2026–27/141 ದಿನಾಂಕ: 14/05/2026

ಕೆ.ಪಿ.ಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಉತ್ತರ ಕನ್ನಡ ಜಿಲ್ಲೆ ಇವರಿಂದ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಅರ್ಹ ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.

ಕಾಮಗಾರಿ ಹೆಸರು: RWSSD/2025-26/WS/WORK_INDENT9716/CALL-3

(1) ಟೆಂಡರ್ ದಾಖಲಾತಿಗಳನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ: 15/05/2026 ರಿಂದ 22/05/2026 ರ 16.30 ಘಂಟೆವರೆಗೆ (2) ಟೆಂಡರುಗಳನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 22/05/2026 ರ 16.30 ಗಂಟೆವರೆಗೆ (3) ಟೆಂಡರಗಳನ್ನು ತೆರೆಯುವ ದಿನಾಂಕ: 25/05/2026 ರಂದು 17:00 ಘಂಟೆಯ ನಂತರ. ಉಳಿದ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಕಾರವಾರ (ಉ. ಕ. ಜಿಲ್ಲೆ).

DIPR/KWR/KSMCA/133/ 26-27 dt.14.05.2026

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2026–27/196
ದಿನಾಂಕ 13–05–2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025–26 ನೇ ಸಾಲಿನ ಕೆ.ಕೆ.ಆರ್.ಡಿ.ಪಿ ಯೋಜನೆ, 2025–26 ನೇ ಸಾಲಿನ ಸಿ.ಐ.ಡಿ.ಎಮ್.ಪಿ ಮತ್ತು 2025–26 ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ ಒಟ್ಟು 04 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ–
1.RDPR/2026-27/BD/WORK_INDENT26708
2.RDPR/2026-27/BD/WORK_INDENT26706
3.RDPR/2026-27/BD/WORK_INDENT26705
4.RDPR/2025-26/RD/WORK_INDENT25450/CALL-2

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 14–05–2026** ರಿಂದ **ದಿನಾಂಕ 21–05–2026** ರಂದು **ಸಂಜೆ 4.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 21–05–2026 ರ 16.30** ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 22–05–2026** ರಂದು **17.30** ಗಂಟೆ ನಂತರ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/144

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ

ದೂರವಾಣಿ: 08384–226381 ಇ–ಮೇಲ್: ee_zpedsirsi@yahoo.co.in

ಕ್ರಸಂ: ಪಂ.ರಾ.ಇಂ:ವಿಶಿ:ಉಗ್ರಾಣ/ಯಂತ್ರೋಪಕರಣ/ಟೆಂಡರ್–2/2026–27/287 ದಿನಾಂಕ: 14–05–2026

ಅಲ್ಪಾವಧಿ ಟೆಂಡರ ಪ್ರಕಟಣೆ–2/2026–27

ವಿಷಯ: 2024–25 ನೇ ಸಾಲಿನ ಮಾನ್ಯ ಯಲ್ಲಾಪುರ ವಿಧಾನ ಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಶಿರಸಿ ತಾ. ಬನವಾಸಿ ಗ್ರಾ. ಪಂ. ಬನವಾಸಿ ಗ್ರಾಮದ ಪದವಿಪೂರ್ವ ಕಾಲೇಜಿಗೆ ಕಂಪ್ಯೂಟರ ಹಾಗೂ ಪಿಠೋಪಕರಣ ಖರೀದಿ ಕುರಿತು.

ಮೇಲಿನ ವಿಷಯಕ್ಕೆ ಅನುಸಾರವಾಗಿ ಲೆಕ್ಕಶೀರ್ಷಿಕೆ 2024–25 ನೇ ಸಾಲಿನ ಮಾನ್ಯ ಯಲ್ಲಾಪುರ ವಿಧಾನ ಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ವ್ಯಾಪ್ತಿಯ ಶಿರಸಿ ತಾ. ಬನವಾಸಿ ಗ್ರಾ. ಪಂ. ಬನವಾಸಿ ಗ್ರಾಮದ ಪದವಿಪೂರ್ವ ಕಾಲೇಜಿಗೆ ಕಂಪ್ಯೂಟರ ಹಾಗೂ ಪಿಠೋಪಕರಣ ಖರೀದಿ ಬಗ್ಗೆ ದರವನ್ನು ಎಲ್ಲಾ ದಾಖಲೆ ಪ್ರತಿಯೊಂದಿಗೆ ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ "ಶಿರಸಿ ತಾ. ಬನವಾಸಿ ಗ್ರಾ. ಪಂ. ಬನವಾಸಿ ಗ್ರಾಮದ ಪದವಿಪೂರ್ವ ಕಾಲೇಜಿಗೆ ಕಂಪ್ಯೂಟರ ಹಾಗೂ ಪಿಠೋಪಕರಣ ಖರೀದಿ ಬಗ್ಗೆ. ಎಂದು ನಮೂದಿಸಿ ಈ ಕಚೇರಿಗೆ ದಿನಾಂಕ: 22–05–2026 ಸಾಯಂಕಾಲ 5.00 ಗಂಟೆಯೊಳಗೆ ಭರ್ತಿ ಮಾಡಿದ ಟೆಂಡರ್ ಸಲ್ಲಿಸುವುದು. ಟೆಂಡರ್ ಸಲ್ಲಿಸುವವರು ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಅಥವಾ ನೋಟಿಸ್ ಬೋರ್ಡ್‌ದಿಂದ ಪಡೆಯಬಹುದು. ದೂರವಾಣಿ ಸಂಖ್ಯೆ: 08384–226381. ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: ಲೆಕ್ಕಶೀರ್ಷಿಕೆ: 2024–25 ನೇ ಸಾಲಿನ ಮಾನ್ಯ ಯಲ್ಲಾಪುರ ವಿಧಾನ ಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ (1) ಶಿರಸಿ ತಾ. ಬನವಾಸಿ ಗ್ರಾ. ಪಂ. ಬನವಾಸಿ ಗ್ರಾಮದ ಪದವಿಪೂರ್ವ ಕಾಲೇಜಿಗೆ ಕಂಪ್ಯೂಟರ ಹಾಗೂ ಪಿಠೋಪಕರಣ ಖರೀದಿ, ಅಂದಾಜು ಮೊತ್ತ: 2.00 ಲಕ್ಷ, ನಿಗದಿಪಡಿಸಿದ ಕಾಲಮಿತಿ/ರಜಾ ದಿನ ಹೊರತು ಪಡಿಸಿ: 8 ದಿನಗಳು, ಟೆಂಡರ್ ಫಾರ್ಮ ಮೊತ್ತ (ಡಿ.ಡಿ. ಮುಖಾಂತರ ಮಾತ್ರ): 500.00, ಮುಂಗಡ ಶೇವಣಿ (ಡಿ.ಡಿ. ಮುಖಾಂತರ ಮಾತ್ರ): 5000.00

(1) ಟೆಂಡರ್ ಫಾರ್ಮಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 19–05–2026 ಸಾಯಂಕಾಲ 4.00 ಗಂಟೆವರೆಗೆ (ಡಿ.ಡಿ. ಮುಖಾಂತರ ರೂ. 500.00 ಅರ್ಜಿ ಫಾರ್ಮ ಹಣ ಹಿಂದಿರುಗಿಸಲಾಗುವುದಿಲ್ಲ.) (ರಜಾ ದಿನಗಳನ್ನು ಹೊರತುಪಡಿಸಿ) (2) ಟೆಂಡರ್ ಫಾರ್ಮಗಳನ್ನು ಈ ಕಛೇರಿಯಿಂದ ವಿತರಿಸುವ ಕೊನೆಯ ದಿನಾಂಕ: 20–05–2026 ರಂದು ಮುಂಜಾನೆ 11.00 ರಿಂದ ದಿ: 22–05–2026 ರ ಮುಂಜಾನೆ 11.00 ಗಂಟೆವರೆಗೆ (ರಜಾ ದಿನಗಳನ್ನು ಹೊರತುಪಡಿಸಿ) (3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 22–05–2026 ಸಾಯಂಕಾಲ 5.00 ಗಂಟೆವರೆಗೆ (ರಜಾ ದಿನಗಳನ್ನು ಹೊರತುಪಡಿಸಿ) (4) ಟೆಂಡರ್ ತೆರೆಯುವ ದಿನಾಂಕ: 22–05–2026 ಸಾಯಂಕಾಲ 5.00 ಗಂಟೆ ನಂತರ (ಸಾಧ್ಯವಾದಲ್ಲಿ)

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ.
ಉತ್ತರ ಕನ್ನಡ ಜಿಲ್ಲೆ.

DIPR/KWR/KSMCA/136/26-27 dt.15.05.2026

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರರು, ಪಂಚಾಯತ್ ರಾಜ್ ಇಂಜನೀಯಿರಿಂಗ್ ವಿಭಾಗ, ಧಾರವಾಡ.

ಕ್ರ.ಸಂ.ಪಂ.ರಾ.ಇಂವಿ.ಧಾ/ಸ.ಇಂ.–2/2026–2027/418 ದಿನಾಂಕ: 14.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ – 01/2026–27 (ಇ–ಪ್ರೊಕ್ಯೂರಮೆಂಟ್ ಮುಖಾಂತರ)

ಕರ್ನಾಟಕ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನೀಯರ್, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರಿ ಆದೇಶ ಸಂಖ್ಯೆ: **No.FD 876 Exp-12/2017, Bangalore, date: 15-09-2017** ರನ್ವಯ ವಿವಿಧ ಯೋಜನೆಯಡಿ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಲೋಕೋಪಯೋಗಿ/ ಪಂ.ರಾ.ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ **KW-1, KW-2** ಮತ್ತು **KW-3** ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ–ಪ್ರೊಕ್ಯೂರಮೆಂಟ್‌ನ **https://kppp.karnataka.gov.in/** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent Numbers: General : 26430, 26529, 26530, 26433, 26434, 26435, 26526, 26438, 26445,26420, 24812, 24801, 25384, 25388, 25375, 25386, 26253, 26335, 24379/Call-2, 24430/Call-2, 18445/Call-4, 26428, 26570.

CAT-1 : 26436,
CAT-II (A) : 26432, 26525, 26528, 25380, 25382, 25377, 26062,
SC Category : 26531, 26427, 25381, 24112,
ST Category : 24348, 26563

ಕ್ಯಾಲೆಂಡರ್ ಆಫ್ ಇವೆಂಟ್ಸ್:

1) ಟೆಂಡರ್ ದಾಖಲೆಗಳನ್ನು **ದಿನಾಂಕ: 18–05–2026** ರಿಂದ ಡೌನಲೋಡ್ ಮಾಡಿಕೊಂಡು **ದಿನಾಂಕ: 26–05–2026 ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದು.
2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27–05–2026 ರ ಸಾಯಂಕಾಲ 4.30 ಗಂಟೆಗೆ.** ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.
3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 01–06–2026 ರ ಬೆಳಿಗ್ಗೆ 11.00 ಗಂಟೆಗೆ.** ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/EMD ಮೊತ್ತ ಇತ್ಯಾದಿ ವಿವರಗಳಿಗೆ **https://kppp.karnataka.gov.in/** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ಬಿ.ಎಸ್.ಗೌಡರ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.

ವಾ.ಸಾ.ಸಂ.ಇ/ಧಾರವಾಡ/178/ದೇಶಪಾಂಡೆಪಬ್ಲಿಸಿಟಿ/2026–27

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಕಚೇರಿ, ಹುಬ್ಬಳ್ಳಿ
e-mail Id: projecthdmc1@gmail.com

ನಂ. ಎಚ್.ಡಿ.ಎಂ.ಸಿ/100/01/work/ಟೆಂ.ಪ್ರ./2026–27 ದಿನಾಂಕ: 15–05–2026

ಇ-ಟೆಂಡರ್ ಅಧಿಸೂಚನೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (kppp) ಮುಖಾಂತರ ಮಾತ್ರ)

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ನಿಯಮಗಳನ್ವಯ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಇಚ್ಛೆಯುಳ್ಳ ಸರ್ಕಾರಿ ಇಲಾಖೆಯಲ್ಲಿ (KPWD/ಇತರೆ) ನೊಂದಾಯಿತರಾದ ಅರ್ಹ ಗುತ್ತಿಗೆದಾರರು/ಸಂಸ್ಥೆಯವರಿಂದ Work ಟೆಂಡರ್‌ನ್ನು, ಏಕ–ವಿದ್ಯುನ್ಮಾನ ಮತ್ತು ದ್ವಿ–ವಿದ್ಯುನ್ಮಾನ ಟೆಂಡರ್ ಪದ್ಧತಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (kppp) ಮುಖಾಂತರ ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್‌ನ ಸಂಪೂರ್ಣ ವಿವರಗಳಿಗಾಗಿ / ದಾಖಲೆಗಳಿಗಾಗಿ ಅಂತರ್‌ಜಾಲ ವಿಳಾಸ http://www.kppp.karnataka.gov.in ದಲ್ಲಿ ದಿನಾಂಕ: 18–05–2026 ರಿಂದ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ವಿಭಾಗ ಕಚೇರಿಗೆ ಕಚೇರಿ ವೇಳೆಯಲ್ಲಿ ಭೇಟಿ ನೀಡಿ ಪಡೆಯಬಹುದು.

Sl.No	Indent No	Category
1	DMA/2026-27/OW/WORK_INDENT57801	Others
2	DMA/2026-27/OW/WORK_INDENT57802	Others
3	DMA/2026-27/OW/WORK_INDENT57803	Others
4	DMA/2026-27/OW/WORK_INDENT57805	Others
5	DMA/2026-27/OW/WORK_INDENT57806	CAT-II(A)
6	DMA/2026-27/OW/WORK_INDENT57807	Others
7	DMA/2026-27/OW/WORK_INDENT57808	SC
8	DMA/2026-27/OW/WORK_INDENT57839	Others
9	DMA/2025-26/RD/WORK_INDENT55084	Others
10	DMA/2024-25/OW/WORK_INDENT37827/CALL-5	Others
11	DMA/2026-27/OW/WORK_INDENT57840	Others
12	DMA/2026-27/IND6272	Others
13	DMA/2024-25/RD/WORK_INDENT31334/CALL-4	Others
14	DMA/2026-27/OW/WORK_INDENT57838	Others
15	DMA/2025-26/OW/WORK_INDENT55087	CAT-II(A)
16	DMA/2025-26/RD/WORK_INDENT56159	Others
17	DMA/2025-26/RD/WORK_INDENT54919	Others
18	DMA/2026-27/BD/WORK_INDENT58027	Others
19	DMA/2025-26/OW/WORK_INDENT54166	Others
20	DMA/2026-27/IND6264	Others
21	DMA/2026-27/IND6267	Others

ಕಾಮಗಾರಿಗಳ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 04–06–2026 ರಂದು 16.00.00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05–06–2026 ರಂದು ಅಪರಾಹ್ನ 16.30.00 ಗಂಟೆಯ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 06–06–2026 ರಂದು ತೆರೆಯಲಾಗುವುದು ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25–05–2026 ರಂದು 16.00.00 ಗಂಟೆವರೆಗೆ, ಸಂಭಾವ್ಯ ಬಿಡ್‌ದಾರರ ಪೂರ್ವಭಾವಿ ಸಭೆಯನ್ನು ದಿನಾಂಕ: 22–05–2026 ರಂದು 11.00.00 ಗಂಟೆಗೆ, ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಹು.ಧಾ.ಮ.ಪಾ ಸರ್. ಸಿದ್ದಪ್ಪ ಕಂಬಳಿ ರಸ್ತೆ, ಹುಬ್ಬಳ್ಳಿ ಇವರ ಕಚೇರಿಯಲ್ಲಿ ನಡೆಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ಡಿಐಪಿಆರ್/ಧಾರವಾಡ/176/ ಮಣಿಪಾಲ್/2026–27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-52) ಡ್ರಾ ಮೇ 15ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RR 281074 (KATTAPPANA)

Consolation Prize Rs.5,000/-
RN 281074 RO 281074 RP 281074 RS 281074
RT 281074 RU 281074 RV 281074 RW 281074
RX 281074 RY 281074 RZ 281074

2nd Prize Rs.30,00,000/- [30 Lakhs]
RN 323012 (IRINJALAKUDA)

3rd Prize Rs.5,00,000/- [5 Lakhs]
RZ 440438 (MALAPPURAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0810 1086 2961 3013 3504 4766 5289 5303 5438 5468
5619 6555 6646 7342 8370 9015 9252 9411 9792

5th Prize Rs.2,000/-
0352 1140 3275 5229 6016 7283

6th Prize Rs.1,000/-
0514 0902 1061 1212 1280 2069 2528 2630 3381 3489
3725 3947 4085 4420 4443 4944 5670 6826 6843 7042
7675 7733 8350 8814 9572

7th Prize Rs.500/-
0045 0158 0206 0362 0561 0610 0661 0669 1035 1150
1294 1306 1419 1487 1574 1575 1592 1710 1725 1782
2107 2210 2211 2286 2782 3348 3359 3395 3499 3510
3536 3699 3826 3879 3929 3966 4424 4656 4854 5036
5128 5355 5454 5525 5883 6072 6145 6687 6759 6776
6859 7146 7247 7447 7701 7743 7815 7836 8019 8153
8289 8351 8384 8797 8938 9024 9348 9423 9461 9506
9559 9603 9663 9786 9812 9828

8th Prize Rs.200/-
0050 0101 0137 0359 0413 0584 0925 0942 1036 1083
1142 1179 1210 1334 1355 1480 1519 1815 1966 2258
2418 2552 2575 2742 2826 2833 3191 3286 3341 3399
3437 3599 3606 3615 3632 3697 3952 3994 4063 4140
4164 4191 4239 4445 4449 4514 4535 4675 4887 4999
5020 5049 5099 5231 5295 5607 5821 5832 5900 6018
6240 6329 6351 6421 6569 6579 6969 7009 7401 7411
7527 7730 7927 7961 7984 8206 8367 8409 8502 8639
8737 8738 8810 9061 9186 9310 9466 9574 9683 9699
9710 9753

9th Prize Rs.100/-
0129 0274 0497 0630 0684 0693 0717 0757 0771 0820
0844 0857 0952 1025 1094 1102 1167 1236 1244 1270
1297 1350 1360 1387 1476 1776 1978 2122 2143 2156
2183 2232 2290 2318 2376 2476 2615 2724 3203 3243
3329 3370 3410 3512 3572 3685 3687 3717 3799 3867
3920 3938 4038 4086 4114 4310 4346 4401 4474 4479
4503 4743 4785 4865 4914 4925 4926 4969 4974 5064
5102 5106 5151 5263 5337 5441 5446 5497 5581 5583
5723 5741 5799 5884 5894 6000 6089 6219 6272 6301
6310 6336 6379 6585 6705 7006 7094 7149 7242 7305
7344 7490 7617 7618 7686 7698 7710 7773 7810 7849
7887 7919 7925 8097 8130 8150 8277 8290 8381 8444
8473 8485 8499 8584 8635 8643 8731 8827 8829 8902
8981 9026 9052 9089 9202 9215 9254 9279 9607 9658
9838 9871 9949 9982

ಗ್ರಾಮೀಣ ವಿದ್ಯಾರ್ಥಿಗಳ ಆಶಾಕಿರಣ ಕಾಣಿಯೂರಿನ ಪ್ರಗತಿ ವಿದ್ಯಾಸಂಸ್ಥೆ

ಪುತ್ತೂರು: ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಒಂದಾಗಿ ಗುರುತಿಸಲ್ಪಟ್ಟ ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ಕ್ಷೇತ್ರಗಳಲ್ಲಿ ತನ್ನದೇ ಛಾಪನ್ನು ಮೂಡಿಸುತ್ತಿರುವ ಕಾಣಿಯೂರಿನ ಪ್ರಗತಿ ವಿದ್ಯಾ ಸಂಸ್ಥೆ ಗ್ರಾಮೀಣ ಭಾಗದಲ್ಲಿ ಹೊಸ ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿದೆ.

ಕಡಬ ತಾಲೂಕಿನ ಪುತ್ತೂರು- ಸುಬ್ರಹ್ಮಣ್ಯ ಹೆದ್ದಾರಿಯ ಮಧ್ಯೆ ಕಾಣಿಯೂರಿನಲ್ಲಿ ಸುಂದರ ಸೊಬಗಿನ ಪ್ರಕೃತಿಯ ಮಡಿಲಲ್ಲಿ ಇರುವ ವಿದ್ಯಾ ದೇಗುಲವೇ ಪ್ರಗತಿ ವಿದ್ಯಾಸಂಸ್ಥೆ. ಇತಿಹಾಸ ಪ್ರಸಿದ್ಧ ಕಾಣಿಯೂರು ಶ್ರೀ ರಾಮತೀರ್ಥ ಮಠದ ಸನಿಹದಲ್ಲಿಯೇ ಇರುವ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಪ್ರಶಾಂತವಾದ ವಾತಾವರಣವಿರುವ ಪ್ರದೇಶದಲ್ಲಿ ಅತ್ಯಾಧುನಿಕ ಹಾಗೂ ಸುಸಜ್ಜಿತವಾದ ಕಟ್ಟಡ ಹಾಗೂ ಮೂಲ ಸೌಕರ್ಯಗಳನ್ನು ಹೊಂದಿರುವ ಪ್ರಗತಿ ವಿದ್ಯಾ ಸಂಸ್ಥೆ ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಆಂಗ್ಲ ಮಾಧ್ಯಮ ವಿಭಾಗದಲ್ಲಿ ಸತತವಾಗಿ 24ನೇ ಬಾರಿಗೆ ಶೇ.100 ಫಲಿತಾಂಶ ಹಾಗೂ ಕನ್ನಡ ಮಾಧ್ಯಮದಲ್ಲಿ 16ನೇ ಬಾರಿ ಶೇ.100 ಫಲಿತಾಂಶ ಪಡೆಯುವುದರೊಂದಿಗೆ ರಾಜ್ಯದಲ್ಲಿಯೇ ವಿಶೇಷ ಸಾಧನೆ ಮಾಡಿರುವ ವಿದ್ಯಾ ಸಂಸ್ಥೆಯಾಗಿ ಮೂಡಿ ಬಂದಿದೆ.

ಜಯಸೂರ್ಯ ರೈ ಮಾದೋಡಿ ಅವರ ಕನಸಿನ ಕೂಸಾದ ಪ್ರಗತಿ ವಿದ್ಯಾ ಸಂಸ್ಥೆಯು 1993ರಲ್ಲಿ ಸ್ಥಾಪನೆಗೊಂಡಿತು. 3 ದಶಕಗಳ ಹಿಂದೆ ಈ ಗ್ರಾಮೀಣ ಪ್ರದೇಶದಲ್ಲಿ ಪ್ರಾರಂಭವಾದ ಪ್ರಗತಿ ವಿದ್ಯಾ ಸಂಸ್ಥೆ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡು ಪ್ರಗತಿಯ ಪಥದಲ್ಲಿ ಸಾಗುತ್ತಿದೆ. ಕೆಲವೇ ಕೆಲವು ವಿದ್ಯಾರ್ಥಿಗಳೊಂದಿಗೆ ಪ್ರಾರಂಭಗೊಂಡ ಈ ವಿದ್ಯಾ ಸಂಸ್ಥೆಯಲ್ಲಿ ಇಂದು ಒಂದು ಸಾವಿರಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳು ವಿದ್ಯಾರ್ಜನೆಗೈಯುತ್ತಿರುವುದು ಸಂಸ್ಥೆಯ ಜನಪ್ರಿಯತೆಗೆ ಸಾಕ್ಷಿಯಾಗಿದೆ. ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ, ಬೇರೆ ಬೇರೆ ಕಡೆಗಳಿಂದ ಬರುವ ವಿದ್ಯಾರ್ಥಿಗಳಿಗಾಗಿ ಶಾಲಾ ವಾಹನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪಠ್ಯದ ಜೊತೆಗೆ ಕಲೆ, ಸಂಸ್ಕೃತಿ, ಸಾಹಿತ್ಯ, ಕ್ರೀಡೆ ಮೊದಲಾದ ಪಠ್ಯೇತರ ಚಟುವಟಿಕೆಗಳಿಗೂ ಸಂಸ್ಥೆಯಲ್ಲಿ ವಿಶೇಷ ಆದ್ಯತೆಯನ್ನು ನೀಡಲಾಗುತ್ತದೆ. ಯೋಗ, ಯಕ್ಷಗಾನ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಭರತನಾಟ್ಯ, ನೃತ್ಯ, ಕರಾಟೆ, ಚಿತ್ರಕಲೆ ಹೀಗೆ ವಿವಿಧ ಚಟುವಟಿಕೆಗಳಿಗೆ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲಾಗುತ್ತಿದ್ದು, ಸ್ಕೌಟ್ ಮತ್ತು ಗೈಡ್ಸ್ ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಆಂಗ್ಲಮಾಧ್ಯಮದಲ್ಲಿ ಪ್ರೀ ಕೆಜಿಯಿಂದ 10ನೇ ತರಗತಿಯವರೆಗೆ, ಕನ್ನಡ ಮಾಧ್ಯಮದಲ್ಲಿ 8ರಿಂದ 10ನೇ ತರಗತಿಯವರೆಗೆ ಶಿಕ್ಷಣ ನೀಡುತ್ತಿರುವ ಪ್ರಗತಿ ವಿದ್ಯಾ ಸಂಸ್ಥೆಯಲ್ಲಿ ಸುಸಜ್ಜಿತವಾದ ತರಗತಿ ಕೊಠಡಿಗಳು, ವಿಜ್ಞಾನ ಪ್ರಯೋಗಾಲಯ, ಕಂಪ್ಯೂಟರ್ ಶಿಕ್ಷಣ, ಗ್ರಂಥಾಲಯ, ಮಧ್ಯಾಹ್ನದ ಬಿಸಿಯೂಟ, ಕ್ರೀಡಾ ತರಬೇತಿ ಮತ್ತಿತರ ಹಲವು ಸೌಲಭ್ಯಗಳು ಲಭ್ಯವಿದೆ.

ಸಂಚಾಲಕ ಜಯಸೂರ್ಯ ರೈ ಮಾದೋಡಿಯವರ ಮುಂದಾಳತ್ವದಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಪ್ರಗತಿ ವಿದ್ಯಾ ಸಂಸ್ಥೆಯು ಅಧ್ಯಕ್ಷ ಜಗನ್ನಾಥ ರೈ ನುಳಿಯಾಲು, ಉಪಾಧ್ಯಕ್ಷ ವಿಶ್ವನಾಥ ರೈ ಮಾದೋಡಿ, ಕೋಶಾಕಾರಿ ಉದಯ ರೈ ಮಾದೋಡಿ, ಟ್ರಸ್ಟಿಗಳಾದ ವೃಂದಾ ಜೆ. ರೈ ಮಾದೋಡಿ, ಚಂದ್ರಹಾಸ ರೈ ಆಗಲ್ವಾಡಿ, ನಾಗೇಶ್ ರೈ ಮಾಳ, ದೇವಿಕಿರಣ್ ರೈ ಮಾದೋಡಿ, ಹರಿಚರಣ್ ರೈ ಮಾದೋಡಿ ಇವರ ಮಾರ್ಗದರ್ಶನದಲ್ಲಿ ಪ್ರಗತಿಯ ಪಥದಲ್ಲಿ ಸಾಗುತ್ತಿದೆ. ಸಂಸ್ಥೆಯ ಆಡಳಿತಾಕಾರಿ ವಸಂತ ರೈ ಕಾರ್ಕಳ, ಸಹ ಆಡಳಿತಾಕಾರಿ ಹೇಮಾ ನಾಗೇಶ್ ರೈ, ಆಂಗ್ಲ ಮಾಧ್ಯಮ ವಿಭಾಗದ ಮುಖ್ಯಗುರು ನಾರಾಯಣ ಭಟ್, ಕನ್ನಡ ಮಾಧ್ಯಮ ವಿಭಾಗದ ಮುಖ್ಯ ಗುರು ವಿನಯ ವಿ. ಶೆಟ್ಟಿ, ಆಂಗ್ಲ ಮಾಧ್ಯಮದ ಸಹ ಮುಖ್ಯೋಪಾಧ್ಯಾಯಿನಿ ಅನಿತಾ ಜೆ. ರೈ, ಪ್ರಾಥಮಿಕ ವಿಭಾಗದ ಉಸ್ತುವಾರಿ ಸವಿತ ಕೆ. ಹಾಗೂ ನುರಿತ ಅಧ್ಯಾಪಕ ವೃಂದದೊಂದಿಗೆ ಪರಿಸರದ ಮುಂಚೂಣಿ ಶಿಕ್ಷಣ ಸಂಸ್ಥೆಯಾಗಿ ಹೊರ ಹೊಮ್ಮಿರುವುದು ಪ್ರಗತಿ ವಿದ್ಯಾ ಸಂಸ್ಥೆಯ ವೈಶಿಷ್ಟ್ಯವಾಗಿದೆ.





> **ಮೌಲ್ಯಯುತ ಶಿಕ್ಷಣ**
> ಗ್ರಾಮೀಣ ವಿದ್ಯಾರ್ಥಿಗಳ ಭರವಸೆಯ ಆಶಾಕಿರಣವಾಗಿ ಮೂಡಿ ಬಂದಿರುವ ಪ್ರಗತಿ ವಿದ್ಯಾ ಸಂಸ್ಥೆಯು ಮೌಲ್ಯಯುತ ಶಿಕ್ಷಣ ನೀಡುವ ಮೂಲಕ ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಿದೆ. 1993ರಲ್ಲಿ ಪ್ರಾರಂಭಗೊಂಡ ಪ್ರಗತಿ ವಿದ್ಯಾಸಂಸ್ಥೆಯು ಹೆಜ್ಜೆ ಹೆಜ್ಜೆಗಳನ್ನು ಇಡುತ್ತಾ ಬೆಳ್ಳಿ ಹಬ್ಬದ ಸಂಭ್ರಮವನ್ನು ಯಶಸ್ವಿಯಾಗಿ ಆಚರಿಸಿಕೊಂಡಿದೆ. ಎಲ್ಲಾ ವಿದ್ಯಾರ್ಥಿಗಳನ್ನ, ಶಿಕ್ಷಕರನ್ನು, ಪ್ರೋತ್ಸಾಹಿಸಿದ ಪೋಷಕರನ್ನು, ಹಿತೈಷಿಗಳನ್ನು, ಹಿರಿಯ ವಿದ್ಯಾರ್ಥಿಗಳನ್ನು ಪ್ರೀತಿಯಿಂದ ಸ್ಮರಿಸಿಕೊಳ್ಳುತ್ತಿದ್ದೇವೆ.
> ■ ಜಯಸೂರ್ಯ ರೈ ಮಾದೋಡಿ, ಸಂಚಾಲಕರು, ಪ್ರಗತಿ ವಿದ್ಯಾ ಸಂಸ್ಥೆ ಕಾಣಿಯೂರು

ದಾಖಲೆಯ ಫಲಿತಾಂಶ

ಪ್ರಗತಿ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಸತತ 24 ವರ್ಷಗಳಿಂದ ಶೇ.100 ಫಲಿತಾಂಶದ ಜೊತೆಗೆ ಅತ್ಯುತ್ತಮ ಅಂಕ ಗಳಿಕೆಯೊಂದಿಗೆ ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಉತ್ತಮ ಸ್ಥಾನ ಗಳಿಸುವ ಮೂಲಕ ಗಮನ ಸೆಳೆಯುತ್ತಿದ್ದಾರೆ. ಕನ್ನಡ ಮಾಧ್ಯಮ ವಿಭಾಗದಲ್ಲೂ 16 ಬಾರಿ ಶೇ.100 ಫಲಿತಾಂಶ ನಡೆದು ಈ ಸಂಸ್ಥೆಯು ಹೆಗ್ಗಳಿಕೆಗೆ ಪಾತ್ರವಾಗಿದೆ. ಯೋಗ, ಕ್ರೀಡೆ, ಪ್ರತಿಭಾ ಕಾರಂಜಿಯಂತಹ ಸ್ಪರ್ಧೆಗಳಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಮಿಂಚುತ್ತಿರುವ ಹಲವು ವಿದ್ಯಾರ್ಥಿಗಳಿಂದ ಪ್ರಗತಿ ವಿದ್ಯಾ ಸಂಸ್ಥೆಯ ಕೀರ್ತಿ ಎಲ್ಲೆಡೆ ಹರಡಿದೆ.

ಕೋಡಿಜಾಲ್ ಮನೆಯಲ್ಲಿ ಮಕ್ಕಳ ಶಿಬಿರ



ಕೊಣಾಜೆ: ಕೊಣಾಜೆ ಗ್ರಾ.ಪಂ. ವ್ಯಾಪ್ತಿಯ ಕೋಡಿಜಾಲ್ ಮಹಮ್ಮದ್ ಹಾಜಿಯವರ ಮನೆಯಲ್ಲಿ ಮಕ್ಕಳ ಜೀವನ ಕೌಶಲ ಶಿಬಿರ ನಡೆಯಿತು.

ಜನ ಶಿಕ್ಷಣ ಟ್ರಸ್ಟ್, ಕೊಣಾಜೆ ಪದವು ಶಾಲಾಭಿವೃದ್ಧಿ ಸಮಿತಿ ಸಹಯೋಗದಲ್ಲಿ ಇಂಗ್ಲಿಷ್ ಸಂವಹನ- ಜೀವನ ಕೌಶಲ ವಿಶೇಷ ಕಲಿಕಾ ತರಗತಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ ಸಮುದಾಯ ಆಧಾರಿತ ಜನ- ಮನೆ- ಮನೆ ಸಂಪರ್ಕ ಶಿಬಿರದಲ್ಲಿ ಮಕ್ಕಳಲ್ಲಿ ಕಲಿಕಾ ಆಸಕ್ತಿ ವೃದ್ಧಿಸಿ ಸ್ವಯಂ ಅರಿವು ನೊಂದಿಗೆ ಸುಪ್ತ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಪರಿಸರ ಶಿಕ್ಷಣ, ಸ್ವಚ್ಛತೆ , ಸೌಹಾರ್ದತೆ ಸಂದೇಶ ಸಾರುವ ಚಟುವಟಿಕೆಗಳನ್ನು ನಡೆಸಲಾಯಿತು. ನರೇಗಾ ಮಾಜಿ ಒಂಬುಡ್ಸ್ ಮೆನ್ ಶೀನ ಶೆಟ್ಟಿ ಮಕ್ಕಳು ಮತ್ತು ಪೋಷಕರೊಂದಿಗೆ ಮುಕ್ತ ಮಾತುಕತೆ ಅನುಭವ ವಿನಿಮಯ ಸಂವಾದ ನಡೆಸಿದರು.

ಟ್ರಸ್ಟ್ ನಿರ್ದೇಶಕರು, ಎಸ್‌ಡಿಎಮ್‌ಸಿ ಅಧ್ಯಕ್ಷ ಅಬ್ದುಲ್ ಲತೀಫ್, ಜಮಿಯ್ಯತುಲ್ ಫಲಾಹ್ ಅಧ್ಯಕ್ಷ ಅಬ್ದುಲ್ ರಹಿಮಾನ್ ಉಪಾಧ್ಯಕ್ಷ ಅಬ್ದುಲ್ ರಹಿಮಾನ್, ಹಸನ್ ಕುಂಞಿ, ಇಬ್ರಾಹಿಂ, ವೇದಾವತಿ ಗಟ್ಟಿ, ಸಫೀನಾ, ಶಶಿಕಾಂತ್, ರೇಣುಕಾ ಶಿಬಿರದಲ್ಲಿ ಭಾಗವಹಿಸಿ ಮಕ್ಕಳಿಗೆ ಪ್ರೋತ್ಸಾಹಿಸಿದರು. 87ರ ಹರೆಯದ ಕಾಯಕ ಯೋಗಿ ಮಹಮ್ಮದ್ ಹಾಜಿಯವರು ಸ್ವತ ಮನೆ ವಠಾರದಲ್ಲಿ ಬೆಳೆದ ವಿವಿಧ ಸಾವಯವ ತರಕಾರಿ ಕೃಷಿ, ನಿರ್ಮಿಸಿದ ಶುದ್ಧ ಕುಡಿಯುವ ನೀರಿನ ಬಾವಿ, ಕಟ್ಟಿದ ದನದ ಹಟ್ಟಿ, ವರ್ಷಪೂರ್ತಿ ತೋಟಕ್ಕೆ ಹರಿದು ಬರುತ್ತಿರುವ ವರತೆ ನೀರನ್ನು ವೀಕ್ಷಿಸಲಾಯಿತು. ಸರಳ ಸಹಜ ಬದುಕಿನ ಬಗ್ಗೆ ತಿಳಿದು ಕೈಗೊಳ್ಳಲಾಯಿತು.

ಮಂಗಳೂರು ವಿವಿ; ನವೀಕೃತ ಕ್ಯಾಂಟೀನ್ ಕಟ್ಟಡ ಉದ್ಘಾಟನೆ



ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಮಂಗಳೂರಿನ ಎನ್‌ಎಂಪಿಎ ಸಂಸ್ಥೆಯ ಸಿಎಸ್‌ಆರ್ ಅನುದಾನದಲ್ಲಿ ನವೀಕೃತಗೊಂಡಿರುವ 'ಮಂಗಳ' ಕ್ಯಾಂಟೀನ್ ಕಟ್ಟಡದ ಉದ್ಘಾಟನಾ ಸಮಾರಂಭ ಬುಧವಾರ ನಡೆಯಿತು.

ನವೀಕೃತ ಕಟ್ಟಡವನ್ನು ಎನ್ ಎಂಪಿಎ ಸಂಸ್ಥೆಯ ಉಪಾಧ್ಯಕ್ಷರಾದ ಎಸ್ .ಶಾಂತಿ ಅವರು ಉದ್ಘಾಟಿಸಿ, ಉತ್ತಮ ಸೌಲಭ್ಯದೊಂದಿಗೆ ನವೀಕೃತಗೊಂಡಿರುವ ಈ ಕ್ಯಾಂಟೀನ್ ಮೂಲಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ನಮ್ಮ ಸಂಸ್ಥೆಯು ವಿದ್ಯಾರ್ಥಿ ಕೇಂದ್ರಿತ ಕಾರ್ಯ ಯೋಜನೆಗಳಿಗೆ ಹೆಚ್ಚಿನ ಸಿಎಸ್‌ಆರ್ ಅನುದಾನವನ್ನು ನೀಡುತ್ತಾ ಬಂದಿದೆ. ಉತ್ತಮ ಗುಣಮಟ್ಟದ ಆಹಾರ, ಶುಚಿತ್ವ ಮೊದಲಾದ ವ್ಯವಸ್ಥೆಯೊಂದಿಗೆ ಈ ಉಪಹಾರ ಗೃಹವು ಮುನ್ನಡೆಯಲಿ ಎಂದು ಶುಭಹಾರೈಸಿದರು.

ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ ಮಂಗಳೂರು ವಿಶ್ವವಿದ್ಯಾನಿಲಯದ ಪ್ರೊ.ಪಿ.ಎಲ್ . ಧರ್ಮ ಅವರು ಮಾತನಾಡಿ, ಈ ನವೀಕೃತ ಕ್ಯಾಂಟಿನ್‌ನಲ್ಲಿ ವಿದ್ಯಾರ್ಥಿಗಳಿಗೆ ಕಡಿಮೆ ಖರ್ಚಿನಲ್ಲಿ ಉತ್ತಮ ಗುಣಮಟ್ಟದ ಆಹಾರವನ್ನು ಒದಗಿಸುವ ಕಾರ್ಯಕ್ಕೆ ಆದ್ಯತೆ ನೀಡಲಾಗುತ್ತದೆ ಎಂದ ಅವರು ಅನುದಾನವನ್ನು ಒದಗಿಸಿದ ಎನ್ ಎಂಪಿಎ ಸಂಸ್ಥೆಗೆ ಕೃತಜ್ಞತೆಯನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕುಲಸಚಿವ ಪ್ರೊ.ಗಣೇಶ್ ಸಂಜೀವ್, ಕಾರ್ಯಕಾರಿ ಅಭಿಯಂತರರಾದ ಸಂತೋಷ್ ಕುಮಾರ್ ಶೆಟ್ಟಿ ಹಾಗೂ ವಿವಿ ಪ್ರಾಧ್ಯಾಪಕರು, ಸಿಬ್ಬಂದಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಂದಳಿಕೆಯಲ್ಲಿ 'ಎನ್. ಸುಬ್ಬ ರಾವ್ - ಡಾ. ಎನ್. ವಿ. ರಾವ್ ಮಾರ್ಗ' ಉದ್ಘಾಟನೆ



ಮಂಗಳೂರು: ಅಗಲಿದ ನಂದಳಿಕೆ ಬಾಲಚಂದ್ರ ರಾವ್ ಅವರ ಕನಸಿನಂತೆ ಶ್ರೀ ನಂದಳಿಕೆ ಮಹಾಲಿಂಗೇಶ್ವರ ದೇವಸ್ಥಾನದಿಂದ - ಶ್ರೀ ನಂದಳಿಕೆ ಆದಿಲಕ್ಷ್ಮಿ ದೇವಸ್ಥಾನದವರೆಗಿನ ಮಾರ್ಗಕ್ಕೆ ನಂದಳಿಕೆ ಮೂಡುಮನೆಯ 'ಎನ್. ಸುಬ್ಬ. ರಾವ್ - ಡಾ. ಎನ್. ವಿ. ರಾವ್ ಮಾರ್ಗ' ಎಂದು ಹೆಸರಿಸಲಾಗಿದ್ದು, ಇತ್ತೀಚೆಗೆ ನಾಮಫಲಕ ಅನಾವರಣ ಮಾಡಲಾಯಿತು.

ಇದನ್ನು ಎನ್. ಶ್ರೀಕಾಂತ ಭಟ್, ನಂದಳಿಕೆ ಚಾವಡಿ ಅರಮನೆಯ ಎನ್. ಸುಹಾಸ. ಹೆಗ್ಡೆ ಹಾಗೂ ಎನ್. ಶೋಭ.ಹೆಗ್ಡೆ ಅವರು ಜಂಟಿಯಾಗಿ ಅನಾವರಣಗೊಳಿಸಿ, ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ನಂದಳಿಕೆ ಮೂಡುಮನೆಯ ಕುಟುಂಬಸ್ಥರು, ಬಂಧು-ಮಿತ್ರರು ಹಾಗೂ ಸ್ಥಳೀಯ ಪ್ರಮುಖರು ಉಪಸ್ಥಿತರಿದ್ದರು.



ಲೋಕಸಭಾ ಸದಸ್ಯ ಬ್ರಿಜೇಶ್ ಚೌಟ ಅವರನ್ನು ಸೇವಾಭಾರತಿ ತಂಡ ಮೇ 12 ರಂದು ಭೇಟಿ ನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ಕುರಿತು ಪ್ರಸ್ತಾಪಿಸಿ ಸಹಕರಿಸುವಂತೆ ಮನವಿ ನೀಡಿದರು. ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷ ಹಾಗೂ ಸೇವಾಧಾಮದ ಸಂಸ್ಥಾಪಕ ಕೆ ವಿನಾಯಕ ರಾವ್, ಖಜಾಂಚಿ ಜೈ ರಾಜ್ ಸಾಲ್ಯಾನ್ ಕಾನರ್ಪ, ಟ್ರಸ್ಟಿ ಪೃಥ್ವಿಶ್ ಹಾಗೂ ಕುವೆಟ್ಟು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಚಂದ್ರಕಾಂತ್ ನಿಡ್ಡಾಜೆ, ಸ್ವಯಂಸೇವಕ ಜಯರಾಜ್ ಇದ್ದರು.

ದಾದಿಯರ ದಿನಾಚರಣೆ-ಸಾಧಕರಿಗೆ ಗೌರವ

ಮುಲ್ಕಿ: ಕಾರ್ನಾಡ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಿಶ್ವ ದಾದಿಯರ ದಿನಾಚರಣೆ ಹಾಗೂ ಸಾಧಕರಿಗೆ ಗೌರವಾರ್ಪಣೆ ಕಾರ್ಯಕ್ರಮ ನಡೆಯಿತು.

ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಸುನಿಲ್ ಜತ್ತನ್ನ ಮಾತನಾಡಿ ಆರೋಗ್ಯ ಕ್ಷೇತ್ರದಲ್ಲಿ ರೋಗಿಗಳ ಆರೈಕೆಯಲ್ಲಿ ದಾದಿಯರ ನಿಸ್ವಾರ್ಥ ಸೇವೆ, ಮಾನವೀಯ ಮೌಲ್ಯಗಳನ್ನು ತೋರಿಸುತ್ತದೆ ಎಂದರು.

ರೋಗಿಗಳಿಗೆ ಚಿಕಿತ್ಸೆನೀಡುವುದರ ಜತೆಗೆ ಮಾನವೀಯತೆ, ತಾಳ್ಮೆ ಮತ್ತು ಆರೈಕೆಯ ಗುಣಗಳನ್ನು ದಾದಿಯರು ಅಳವಡಿಸಿಕೊಳ್ಳಬೇಕು. ದಾದಿಯರು ರೋಗಿಗಳಿಗೆ ತಾಯಿಯಂತೆ ಸೇವೆ ಸಲ್ಲಿಸುವ ಮೂಲಕ ಆಸ್ಪತ್ರೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತಾರೆ ಎಂದರು.

ನಿವೃತ್ತ ದಾದಿ ಲಕ್ಷ್ಮೀ ಮಾತನಾಡಿ, ವೈದ್ಯಕೀಯ ಕ್ಷೇತ್ರದಲ್ಲಿ ದಾದಿಯರ ಪಾತ್ರ ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಿದೆ. ಕೇವಲ ಸೇವಾ ಮನೋಭಾವ ಮಾತ್ರವಲ್ಲದೆ ವೃತ್ತಿಪರ ನೈಪುಣ್ಯತೆ, ತಾಂತ್ರಿಕ ಜ್ಞಾನ ಹಾಗೂ ನಿರಂತರ ಅಧ್ಯಯನದ ಮೂಲಕ ತಮ್ಮನ್ನು ತಾವು ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಇಂದಿನ ದಿನಗಳಲ್ಲಿ ದಾದಿಯರಿಗೆ ಉನ್ನತ ಶಿಕ್ಷಣ, ವಿಶೇಷ ತರಬೇತಿ, ವಿದೇಶಗಳಲ್ಲಿ ಉದ್ಯೋಗ ಸೇರಿದಂತೆ ಹಲವು ಅವಕಾಶಗಳಿದ್ದು, ಪಿಎಚ್‌ಡಿ ಮಟ್ಟದ ವಿದ್ಯಾಭ್ಯಾಸಕ್ಕೂ ಅವಕಾಶವಿದೆ ಎಂದರು.

ನಿವೃತ್ತ ದಾದಿ ತಾರಾ ಮಾತನಾಡಿ, ಆರೋಗ್ಯ ಸೇವೆಯಲ್ಲಿ ದಾದಿಯರ ತಾಳ್ಮೆ ಸಮಯಪ್ರಜ್ಞೆ ಹಾಗೂ ಮಾನವೀಯತೆ ಅತ್ಯಂತ ಪ್ರಮುಖವಾಗಿದೆ. ಪ್ರತಿಯೊಬ್ಬ ಸಮಾಜದ ಆರೋಗ್ಯ ಸುಧಾರಣೆಗೆ ತನ್ನದೇ ಆದ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ ಎಂದರು.

ಸಮಾಜ ಸೇವಕಿ ಮೀರಾ ಕಾಮತ್ ಉಪಸ್ಥಿತರಿದ್ದು ದಾದಿಯರ ಸೇವೆಯನ್ನು ಸ್ಮರಿಸಿದರು ಸಮಾಲೋಚಕ ಶಿವಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು. ಡಾ। ವೇಣುಗೋಪಾಲ್ ಧನ್ಯವಾದ ಅರ್ಪಿಸಿದರು.

ಕಾರ್ಯಕ್ರಮದಲ್ಲಿ ಆರೋಗ್ಯ ಕೇಂದ್ರದಲ್ಲಿ ಕಳೆದ 25 ವರ್ಷಗಳ ಕಾಲ ಸೇವೆ ಸಲ್ಲಿಸಿ ವರ್ಗಾವಣೆಯಾದ ದಾದಿ ವಾರಿಜಾ ರವರನ್ನು ಗೌರವಿಸಲಾಯಿತು.

ಅಪ್ರೆಂಟಿಸ್ ನೇಮಕಾತಿ

ಕಾಸರಗೋಡು: ಕೇರಳ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾಸರಗೋಡು ಜಿಲ್ಲಾ ಕಚೇರಿಗೆ ಒಂದು ವರ್ಷದ ಅವಧಿಗೆ ಪದವೀಧರ ಇಂಜಿನಿಯರಿಂಗ್ ಅಪ್ರೆಂಟಿಸ್‌ಗಳ ನೇಮಕಾತಿಗಾಗಿ ಸಂದರ್ಶನವು ಜೂನ್ 1 ರಂದು ಬೆಳಗ್ಗೆ 11 ಗಂಟೆಗೆ ಕಾಞಂಗಾಡಿನಲ್ಲಿರುವ ಜಿಲ್ಲಾ ಕಚೇರಿಯಲ್ಲಿ ನಡೆಯಲಿದೆ. ವಯಸ್ಸಿನ ಮಿತಿ 28 ವರ್ಷವಾಗಿದ್ದು, ಬಿ.ಟೆಕ್ (ಸಿವಿಲ್/ ರಾಸಾಯನಿಕ/ ಪರಿಸರ) ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 0467 2201180 ಸಂಪರ್ಕಿಸಬಹುದು.

ಬೀಚ್ ರನ್ 2026

ಕಾಸರಗೋಡು: ಕಾಸರಗೋಡು ನಗರಸಭೆ ಮತ್ತು ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿ ಜಂಟಿಯಾಗಿ ಕಾಸರಗೋಡು ಬೀಚ್ ರನ್ 2026 ಕಾರ್ಯಕ್ರಮವನ್ನು ನೆಲ್ಲಿಕುಂಜೆ ಬೀಚ್‌ನಲ್ಲಿ ಮೇ 24 ರಂದು ಬೆಳಗ್ಗೆ 6.30ಕ್ಕೆ ಆಯೋಜಿಸಲಾಗಿದೆ. ಈ ನಿಟ್ಟಿನಲ್ಲಿ ವಿವಿಧ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

ಕಿರುಸುದ್ದಿ


ಜೆ.ಟಿ.ಟಿ.ಸಿ: ಡಿಪ್ಲೋಮಾ ಕೋರ್ಸ್‌ಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮಂಗಳೂರು: ಮಂಗಳೂರಿನ ಬೈಕಂಪಾಡಿಯಲ್ಲಿರುವ ಜೆ.ಟಿ.ಟಿ.ಸಿ ಡಿಪ್ಲೋಮಾ ಕಾಲೇಜಿನಲ್ಲಿ 2026–27ನೇ ಡಿಪ್ಲೋಮಾ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಲು ಮೇ 20 ರವರೆಗೆ ಅವಧಿ ವಿಸ್ತರಿಸಲಾಗಿದೆ. ಪ್ರಸ್ತುತ ಜೆ.ಟಿ.ಟಿ.ಸಿ ಕೇಂದ್ರದಲ್ಲಿ ಡಿಪ್ಲೋಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೋಮಾ ಇನ್ ಪ್ರಿಸಿಷನ್ ಮ್ಯಾನ್ಯುಫ್ಯಾಕ್ಚರಿಂಗ್ ಹಾಗೂ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಅಂಡ್ ಮೆಷಿನ್ ಲರ್ನಿಂಗ್ ಕೋರ್ಸುಗಳಿರುತ್ತವೆ. ಮೊದಲ ಎರಡು ಕೋರ್ಸುಗಳು ಮೆಕ್ಯಾನಿಕಲ್ ಇಂಜಿನಿಯರಿಂಗ್ ಮತ್ತು ಮೂರನೆಯದು ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್‌ಗೆ ಸಂಬಂಧಿಸಿದ್ದಾಗಿರುತ್ತದೆ.

ಈ ಎಲ್ಲಾ ಕೋರ್ಸ್‌ಗಳಿಗೆ ಸೇರಬಯಸುವ ವಿದ್ಯಾರ್ಥಿಗಳ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಪಾಸ್ ಆಗಿರಬೇಕು. ಈ ಕೋರ್ಸುಗಳ ಅವಧಿ 4 ವರ್ಷಗಳಾಗಿದ್ದು, 4 ನೇ ವರ್ಷದಲ್ಲಿ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಕೈಗಾರಿಕೆಗಳಿಗೆ ಒಂದು ವರ್ಷದ ಕಡ್ಡಾಯ ಇಂಟರ್ನ್‌ಶಿಪ್‌ಗೆ ಕಳಿಸಲಾಗುತ್ತದೆ. ಈ ಸಮಯದಲ್ಲಿ ವಿದ್ಯಾರ್ಥಿಗಳು ಪ್ರತಿ ತಿಂಗಳು ರೂ.18 ಸಾವಿರದಿಂದ 23 ಸಾವಿರದವರೆಗೆ ಸ್ಟೈಪೆಂಡ್ ಪಡೆಯುತ್ತಾರೆ.

ನಿಧನ ಸುದ್ದಿ

ಗೋಪಾಲ ಕೃಷ್ಣ ನಾಯಕ್



ಮಂಗಳೂರು: ಅಜೀರು ಗೋಪಾಲ ಕೃಷ್ಣ ನಾಯಕ್ (ಎ.ಜಿ.ಕೆ. ನಾಯಕ್) ಸ್ವಲ್ಪಕಾಲದ ಅನಾರೋಗ್ಯದ ನಂತರ ಮೇ 14ರಂದು ನಿಧನರಾದರು. ಅವರಿಗೆ 82 ವರ್ಷ ಪ್ರಾಯವಾಗಿತ್ತು. ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಕಾರ್ಯಕರ್ತರಾಗಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ಗ್ರಾಹಕಪ್ರೊಟೆಕ್ಷನ್ ಸಂಸ್ಥೆಯಲ್ಲಿಯೂ ಸೇವೆ ಸಲ್ಲಿಸಿದ್ದರು. ಅವರು ರಾಜಾಪುರ ಸಾರಸ್ವತ ಸಮಾಜ, ಬೆಂಗಳೂರು ಇದರ ಕಾರ್ಯದರ್ಶಿಯಾಗಿ ಹಾಗೂ ಶ್ರೀಗಣೇಶ ಶ್ರೀ ಮಹಾಲಕ್ಷ್ಮೀ ದೇವಸ್ಥಾನ, ಬೆಂಗಳೂರು ಇದರ ಸಾರಸ್ವತ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿಯಾಗಿಯೂ ಅಮೂಲ್ಯ ಸೇವೆಯನ್ನು ಸಮಾಜಕ್ಕೆ ಸಲ್ಲಿಸಿದ್ದರು.

ಎನ್. ಕೆ. ರಾಮಚಂದ್ರ



ಕೈಕಂಬ: ಗ್ರಾಮ ಕರಣಿಕರಾಗಿ (ವಿಎ) ಸುಮಾರು 35 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದ, ಉಪ್ಪಿನಂಗಡಿ ಮೂಲದ ಗುರುಪುರ ಕೈಕಂಬ ರೋಸಾ ಮಿಸ್ತಿಕ ಶಾಲಾ ಬಳಿಯ ನಿವಾಸಿ ಎನ್. ಕೆ. ರಾಮಚಂದ್ರ (84) ಅವರು ವಯೋಸಹಜ ಅಸೌಖ್ಯದಿಂದ ಸ್ವಗೃಹದಲ್ಲಿ ಮಂಗಳವಾರ ನಿಧನ ಹೊಂದಿದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ನಳಿನಿ ಶೆಟ್ಟಿಗಾರ್



ಮುಲ್ಕಿ: ಇಲ್ಲಿಗೆ ಸಮೀಪದ ಪಡುಪಣಂಬೂರು ಬೆಳ್ಳಾಯರು ನಿವಾಸಿ ನಳಿನಿ ಶೆಟ್ಟಿಗಾರ್ (82) ಗುರುವಾರ ಸ್ವಗೃಹದಲ್ಲಿ ನಿಧನರಾದರು. ಅವರು ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರನನ್ನು ಅಗಲಿದ್ದಾರೆ.

ಗಿರಿಜ ಹೆಗ್ಡೆ



ಮೂಡುಬಿದಿರೆ: ನಿವೃತ್ತ ಮುಖ್ಯೋಪಾಧ್ಯಾಯಿನಿ, ಹೊಸಬೆಟ್ಟು ಪಡದಬೆಟ್ಟು ದಿ.ಶೀನಪ್ಪ ಹೆಗ್ಡೆ ಅವರ ಪತ್ನಿ, ಕಾರ್ಕಳ ಆಜೆಕಾರು ಹಲ್ಲೆಟ್ಟು ಗಿರಿಜಾ ಎಸ್. ಹೆಗ್ಡೆ (88) ಅಲ್ಪಕಾಲದ ಅನಾರೋಗ್ಯದಿಂದ ಬುಧವಾರ ನಿಧನರಾದರು. ಕಾರ್ಕಳ ಕಾಬೆಟ್ಟು ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ವೃತ್ತಿ ಆರಂಭಿಸಿದ್ದ ಅವರು ಇಂದಿರಾನಗರ, ನೀರೆಬೈಲೂರು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕಿಯಾಗಿ ನಂತರ ಕಲಂಬಾಡಿ ಪದವು ಶಾಲೆಯಲ್ಲಿ ಸ್ಪೆಷಲ್ ಗ್ರೇಡ್ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಅವರು ಸುಮಾರು 40 ವರ್ಷ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ಅವರಿಗೆ ಓರ್ವ ಗಂಡು ಹಾಗೂ ಇಬ್ಬರು ಹೆಣ್ಣುಮಕ್ಕಳಿದ್ದಾರೆ.

ಅಮ್ಮು ಅರ್ಬಿಗುಡ್ಡೆ



ಬಂಟ್ವಾಳ: ಹಿರಿಯ ಕಾಂಗ್ರೆಸ್ ಮುಖಂಡ, ಬಂಟ್ವಾಳ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ನಿರ್ದೇಶಕರಾದ ಅಮ್ಮು ಅರ್ಬಿಗುಡ್ಡೆ (62) ಅವರು ಅಲ್ಪಕಾಲದ ಅನಾರೋಗ್ಯದಿಂದ ಬಂಟ್ವಾಳದ ಸ್ವಗೃಹದಲ್ಲಿ ನಿಧನರಾದ್ದಾರೆ. ಮಾಜಿ ಸಚಿವ ಬಿ. ರಮಾನಾಥ ರೈ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಇವರು, ಬಂಟ್ವಾಳ ಬ್ಲಾಕ್ ಕಾಂಗ್ರೆಸ್ ಎಸ್ಸಿ–ಎಸ್ಟಿ ಘಟಕದ ಉಪಾಧ್ಯಕ್ಷರಾಗಿದ್ದರು. ಬಂಟ್ವಾಳ ನಂದನಹಿತ್ತು ಶ್ರೀ ವೈದ್ಯನಾಥ ದೈವಸ್ಥಾನದ ಧಾರ್ಮಿಕ ವಿಧಿವಿಧಾನದ ಪರಿಚಾರಕರಾಗಿ ಸುಮಾರು 20 ವರ್ಷಗಳಿಂದ ಸೇವೆ ಸಲ್ಲಿಸಿದ್ದರು. ಸ್ಥಳೀಯವಾಗಿ ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಚಿರಪರಿಚಿತರಾಗಿದ್ದರು. ಮೃತರು ಓರ್ವ ಪುತ್ರ, ಓರ್ವ ಪುತ್ರಿ ಸಹಿತ ಬಂಧು-ಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಮಾಜಿ ಸಚಿವ ಬಿ. ರಮಾನಾಥ ರೈ ಸೇರಿದಂತೆ ಪಕ್ಷದ ಹಲವಾರು ಮುಖಂಡರು ಸಂತಾಪ ಸೂಚಿಸಿದ್ದಾರೆ.

ಪ್ರೇಮಲತಾ

ಬದಿಯಡ್ಕ: ಪೆರಡಾಲ ಪ್ರಶಾಂತಿ ನಿಲಯದ ಪ್ರೇಮಲತಾ (60) ನಿಧನ ಹೊಂದಿದರು. ಅಸೌಖ್ಯ ಬಾಧಿಸಿದ್ದ ಅವರು ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರು ಪತಿ ಕೃಷ್ಣಪ್ರಸಾದ್ ರೈ, ಪುತ್ರಿ ಪ್ರಜ್ಞಾ ಅವರನ್ನು ಅಗಲಿದ್ದಾರೆ.

ಸುರೇಶ್

ಉಪ್ಪಳ: ಬಂದ್ಯೋಡು ಅಡ್ಕ ಭಗವತೀ ನಗರ ನಿವಾಸಿ ದಿ.ಕುಂಞರಾಮ ಎಂಬವರ ಪುತ್ರ, ಕೂಲಿ ಕಾರ್ಮಿಕರಾಗಿದ್ದ ಸುರೇಶ್ (48) ಹೃದಯಾಘಾತದಿಂದ ನಿಧನರಾದರು. ಮೃತರು ತಾಯಿ ಯಮುನಾ, ಸಹೋದರ – ಸಹೋದರಿಯರಾದ ಗೀತಾ, ಶಶಿಕಲಾ, ಸಂತೋಷ್, ಸುಮಿತ್ರಾ, ಸುನಿಲ್, ಹರೀಶ್ ಅವರನ್ನು ಅಗಲಿದ್ದಾರೆ.

ಚಂದು ಬೆಳ್ಚಪ್ಪಾಡ

ಮುಳ್ಳೇರಿಯ: ಕುಂಬ್ಡಾಜೆ ಉಬ್ರಂಗಳ ನಿವಾಸಿ ಚಂದು ಬೆಳ್ಚಪ್ಪಾಡ (87) ನಿಧನರಾದರು. ಮೃತರು ಪತ್ನಿ ಶಾರದಾ, ಮಕ್ಕಳಾದ ಸುರೇಶ್, ರಮೇಶ್, ಸುಜಾತ, ಚಂದ್ರಶೇಖರ್ ಅವರನ್ನು ಅಗಲಿದ್ದಾರೆ.



ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ಖಂಡಿಸಿ ಹಾಗೂ ಕೇಂದ್ರ ಬಿಜೆಪಿ ಸರ್ಕಾರದ ವೈಫಲ್ಯದ ವಿರುದ್ಧ ದ.ಕ.ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ಶುಕ್ರವಾರ ನಗರದ ಕದ್ರಿ ಸರ್ಕಲ್‌ನಲ್ಲಿ ನಡೆಯಿತು. ಈ ಸಂದರ್ಭ ದ.ಕ. ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಇಬ್ರಾಹೀಂ ನವಾಝ್, ಮಾಜಿ ಸಚಿವ ಬಿ.ರಮಾನಾಥ ರೈ, ದ.ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ.ಹರೀಶ್ ಕುಮಾರ್, ಜಿಲ್ಲಾ ಮುಂಚೂಣಿ ಘಟಕಾಧ್ಯಕ್ಷರಾದ ಅಪ್ಪಿ, ಲಾರೆನ್ಸ್ ಡಿಸೋಜಾ, ಸುಹಾನ್ ಆಳ್ವ ಮೊದಲಾದವರು ಪಾಲ್ಗೊಂಡಿದ್ದರು.

ಮೇ 24ರಂದು ಏಳು ತುಳುನಾಡಿನ ಸಾಧಕಿಯರಿಗೆ 'ತುಳುಅಪ್ಪೆ ಸಿರಿ ಪ್ರಶಸ್ತಿ'

ಮುಲ್ಕಿ: ತುಳುನಾಡಿನ ಮಾತೃಮೂಲ ಸಂಸ್ಕೃತಿ, ಮಹಿಳಾ ಶಕ್ತಿ, ಸಮಾಜಮುಖಿ ಸೇವೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆಗೈದ ಮಹಿಳೆಯರನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ 'ಅಪ್ಪೆ ಬೇರ್ ದ ತುಳುನಾಡ್ – ರಾಷ್ಟ್ರೀಯ ತುಳು ವಿಚಾರಗೋಷ್ಠಿ' ಕಾರ್ಯಕ್ರಮದ ಅಂಗವಾಗಿ ಏಳು ಮಂದಿ ಸಾಧಕರಿಗೆ 'ತುಳುಅಪ್ಪೆ ಸಿರಿ ಪ್ರಶಸ್ತಿ' ಪ್ರದಾನ ಮಾಡಲಾಗುವುದು. ಮೇ 24ರಂದು ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವಠಾರದಲ್ಲಿ ನಡೆಯಲಿರುವ ಈ ಕಾರ್ಯಕ್ರಮವು ತುಳುನಾಡಿನ ಮಾತೃಮೂಲ ಸಂಸ್ಕೃತಿ, ತುಳು ಭಾಷೆ, ಪರಂಪರೆ, ಮಹಿಳಾ ನಾಯಕತ್ವ ಹಾಗೂ ಸಾಮಾಜಿಕ ಏಕತೆಯ ಸಂದೇಶವನ್ನು ಸಾರುವ ವಿಶಿಷ್ಟ ವೇದಿಕೆಯಾಗಲಿದೆ.

ಕಾರ್ಯಕ್ರಮದ ಅಂಗವಾಗಿ ಮಾತೃಮೂಲ ಸಂಸ್ಕೃತಿ, ತಾಯಿ ಮೂಲದ ತತ್ವ ಅಲಿಯಸಂತಾನ ಪದ್ಧತಿ, ತುಳು ಭಾಷೆಯ ಭವಿಷ್ಯ, ಮಹಿಳಾ ನಾಯಕತ್ವ ಹಾಗೂ ತುಳುನಾಡಿನ ಸಾಂಸ್ಕೃತಿಕ ಪುನರುಜ್ಜೀವನ ಕುರಿತ ರಾಷ್ಟ್ರೀಯ ಮಟ್ಟದ ವಿಚಾರಗೋಷ್ಠಿ ಮತ್ತು ವಿಶೇಷ ಪ್ರಬಂಧ ಮಂಡನೆ ನಡೆಯಲಿದ್ದು, ವಿವಿಧ ಕ್ಷೇತ್ರಗಳ ಗಣ್ಯರು, ಸಂಶೋಧಕರು, ಸಾಹಿತಿಗಳು, ಕಲಾವಿದರು ಹಾಗೂ ಸಮಾಜಮುಖಿ ನಾಯಕರು ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ 'ತುಳುಅಪ್ಪೆ ಸಿರಿ ಪ್ರಶಸ್ತಿ'ಗೆ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಸಾಧನೆ ಹಾಗೂ ಸಮಾಜಮುಖಿ ಸೇವೆ ಸಲ್ಲಿಸಿರುವ ಏಳು ಗಣ್ಯ ಮಹಿಳೆಯರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಗೆ ವಿವಿಧ ಕ್ಷೇತ್ರದ ಸಾಧಕರಾದ ಚಂದ್ರಿಕಾ ಹರೀಶ್ ಶೆಟ್ಟಿ, ಸಿಂಧು ಗುಜರನ್, ಸರೋಜಿನಿ ಸುವರ್ಣ, ಜಯಂತಿ ಬಂಗೇರ, ಸಾವಿತ್ರಿ ಶೆಟ್ಟಿ, ಕಸ್ತೂರಿ ಪಂಜ, ಸುನಂದ ಎಂ. ಅಮೀನ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಘಟಕಿ ಭಾನುಮತಿ ಶೆಟ್ಟಿ ಕಕ್ವಗುತ್ತು ತಿಳಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ತುಳುನಾಡಿನ ವಿವಿಧ ಸಮುದಾಯಗಳ ಮುಖಂಡರು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಮಹಿಳಾ ಪ್ರತಿನಿಧಿಗಳು ಹಾಗೂ ದೇಶ–ವಿದೇಶಗಳಲ್ಲಿ ನೆಲೆಸಿರುವ ತುಳುವರು ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಕೃಷಿ ಮೇಳ, ಅಂತರ ಜಿಲ್ಲಾ ಭಜನಾ ಸ್ಪರ್ಧೆ, ಗ್ರಾಮೀಣ ಕ್ರೀಡಾ ಸ್ಪರ್ಧೆ, ಮಾತೃವಂದನ ಕಾರ್ಯಕ್ರಮ 'ಶ್ರೀಆನಂದ ಶರಧಿ'

ಜ್ಞಾನಕೇಂದ್ರವನ್ನಾಗಿಸುವ ಯೋಜನೆ

ಉಡುಪಿ: ಮಧ್ವರಿಗೆ ಕೃಷ್ಣ ಲಭಿಸಿದ ಈ ತಾಣವಾದ ಆನಂದ ಶರಧಿಯನ್ನು ವ್ಯಕ್ತಿ–ವ್ಯಕ್ತಿಯಲ್ಲಿ ಕೃಷ್ಣಪ್ರಜ್ಞೆ ಮೂಡಿಸುವ, ಜ್ಞಾನ ಕೇಂದ್ರವಾಗಿಸಲು ಯೋಜಿಸಲಾಗಿದೆ. ಈ ಕಾರ್ಯ ಭಜನೆಯ ಮೂಲಕ ನಡೆಯಬೇಕು ಎಂದು ಆಶಿಸಲಾಗಿದೆ ಎಂದು ಅದಮಾರು ಕಿರಿಯ ಮಠಾಧೀಶ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು ನುಡಿದರು.



ಮಲ್ಪೆ ಶ್ರೀಕೃಷ್ಣ ಪರಿಸರ ಪ್ರತಿಷ್ಠಾನ ಆಶ್ರಯದಲ್ಲಿ ಮಲ್ಪೆ ಸಮುದ್ರತೀರದ ಆನಂದ ಶರಧಿ ನಿವೇಶನದಲ್ಲಿ ಮೇ 31ರ ವರೆಗೆ ನಡೆಯಲಿರುವ ಕೃಷಿ ಮೇಳ, ಅಂತರ ಜಿಲ್ಲಾ ಭಜನಾ ಸ್ಪರ್ಧೆ, ಗ್ರಾಮೀಣ ಕ್ರೀಡಾ ಸ್ಪರ್ಧೆ, ಮಾತೃವಂದನ ಕಾರ್ಯಕ್ರಮ ಇತ್ಯಾದಿಗಳ ನ್ನೊಳಗೊಂಡ ಶ್ರೀ ಆನಂದ ಶರಧಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಆಶೀರ್ವಚನ ನೀಡಿದರು.

ಇದರ ಜೊತೆಗೆ ಯುವಜನತೆಗೆ ಕೃಷಿಯನ್ನು ಪರಿಚಯಿಸುವ, ಗುಡಿಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ ಎಂದರು.

ಮೇಳ ಉದ್ಘಾಟಿಸಿ ಪೇಜಾವರ ಮಠಾಧೀಶ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಆಶೀರ್ವಚನ ನೀಡಿ, ದ್ವೈತ ಮತ ಸಂಸ್ಥಾಪಕ ಆಚಾರ್ಯ ಮಧ್ವರ ಭಕ್ತಿಗೆ ಒಲಿದುಬಂದ ಕೃಷ್ಣನಿಂದಾಗಿ ಉಡುಪಿಗೆ ಹೆಸರು ಬಂತು. ದ್ವಾರಕೆಯಿಂದ ಹಡಗಿನ ಮೂಲಕ ಉಡುಪಿಗೆ ಬರುವ ಮುನ್ನ ನೆಲೆಯಾದ ಮಲ್ಪೆ ಕೂಡಾ ಪವಿತ್ರವಾಗಬೇಕು. ನಮ್ಮೆಲ್ಲರ ಬದುಕಿಗೆ ದೀಪಸ್ತಂಭವಾಗಬೇಕು ಎಂದರು.

ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಸೋದೆ ಮಠಾಧೀಶ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು, ಶ್ರೀಕೃಷ್ಣನಿಂದಾಗಿ ಉಡುಪಿ ಪ್ರಸಿದ್ಧ ಅವನು ಮೊದಲು ಹೆಜ್ಜೆ ಇಟ್ಟ ತಾಣ ಮಲ್ಪೆ. ಈ ನೆಲದಲ್ಲಿ ಸಂಸ್ಕೃತಿ, ಸಂಸ್ಕಾರಕ್ಕೆ ಪೂರಕವಾದ ಹಲವು ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸುವ ಆಶಯ ಹೊಂದಲಾಗಿದೆ.

ಕೃಷಿ ಪ್ರಧಾನವಾದ ನಾಡು ನಮ್ಮದು. ಹಸಿದು ಹಲಸು, ಉಂಡು ಮಾವು ಎಂಬ ಮಾತಿನಂತೆ ಬಡತನದ ಕಾಲದಲ್ಲಿ ಹಲಸಿನ ಹಣ್ಣು ತಿಂದು ಬದುಕು ಸಾಗಿಸಿದವರೂ ನಮ್ಮಲ್ಲಿದ್ದರು. ಇಂದು ಆಹಾರ ಪದ್ಧತಿ ಬದಲಾಗಿದೆ. ಆಹಾರಕ್ಕಿಂತ ಔಷಧ ಸೇವನೆ ಅತಿಯಾಗಿದೆ.

ನಮ್ಮ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಾವು ಮತ್ತು ಹಲಸು ಪ್ರಾಮುಖ್ಯತೆ ಪಡೆದಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ಹಲಸು, ಮಾವು ಸಸಿ ನೆಟ್ಟು ಪೋಷಿಸುವ ಸಂಕಲ್ಪ ಮಾಡಬೇಕು ಎಂದರು.

ಅಭ್ಯಾಗತರಾಗಿದ್ದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಕೃಷಿಕ ಸತ್ಯನಾರಾಯಣ ಬೆಳೇರಿ ಮಾತನಾಡಿ, ಇಂದಿನ ಶಿಕ್ಷಣ ಕ್ರಮ ಹಣ ಗಳಿಕೆಗೆ ಆದ್ಯತೆ ನೀಡುತ್ತಿದೆಯೇ ವಿನಾ ಅನ್ನ ಉತ್ಪಾದನೆಗಿಲ್ಲ. ಕೃಷಿ ಕ್ಷೇತ್ರಕ್ಕೆ ಯುವಜನತೆ ಆಸಕ್ತಿ ತೋರುತ್ತಿಲ್ಲ. ವಾಣಿಜ್ಯ ಬೆಳೆಗಳಿಗೆ ಕೃಷಿ ರಂಗ ಆಸಕ್ತಿ ತೋರುತ್ತಿದೆ ಎಂದು ವಿಷಾದಿಸಿದರು.

ಉದ್ಯಮಿ ಸಾಧು ಸಾಲ್ಯಾನ್, ಮಲ್ಪೆ ಮೀನುಗಾರರ ಸಂಘ ಅಧ್ಯಕ್ಷ ಕಿಶೋರ ಡಿ. ಸುವರ್ಣ, ಹಸಿಮೀನು ವ್ಯಾಪಾರಸ್ಥರ ಸಂಘ ಅಧ್ಯಕ್ಷೆ ಬೇಬಿ ಸಾಲ್ಯಾನ್, ಉಡುಪಿ ಜಿಲ್ಲಾ ನೇಕಾರರ ಸಂಘದ ಅಧ್ಯಕ್ಷ ರತ್ನಾಕರ ಇಂದ್ರಾಳಿ, ಉಡುಪಿ ಶ್ರೀಕೃಷ್ಣ ಮಠ ಪರಿಸರ ಪ್ರತಿಷ್ಠಾನ ಕಾರ್ಯದರ್ಶಿ ರತ್ನಕುಮಾರ್ ಮಾತನಾಡಿದರು.

ಶ್ರೀಕೃಷ್ಣ ಪರಿಸರ ಪ್ರತಿಷ್ಠಾನ ಮಲ್ಪೆ ಸಂಘಟನಾ ಕಾರ್ಯದರ್ಶಿ ವಿಜಯ ಕೊಡವೂರು ಸ್ವಾಗತಿಸಿ, ಪ್ರಸ್ತಾವನೆಗೈದರು. ಆಚಾರ್ಯ ಮಧ್ವರಿಗೆ ಕೃಷ್ಣ ಲಭಿಸಿದ ಮಲ್ಪೆಯ ಈ ಪರಿಸರ ಆಧ್ಯಾತ್ಮಿಕ ತಾಣವೂ ಆಗಬೇಕು. ಈ ನಿಟ್ಟಿನಲ್ಲಿ ಭಜನಾ ಸ್ಪರ್ಧೆ ಸಹಿತ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಡ್ರಗ್ಸ್, ಲವ್ ಜಿಹಾದ್ ಇತ್ಯಾದಿಗಳ ತಡೆಗೆ ಮನೆ ಮನೆಗಳಲ್ಲಿ ಧರ್ಮ ಶಿಕ್ಷಣ, ಧಾರ್ಮಿಕ ಪ್ರಜ್ಞೆ ಮೂಡಿಸಬೇಕು. ಗ್ರಾಮ ಗ್ರಾಮಗಳ ದೇವಾಲಯ, ಧಾರ್ಮಿಕ ಕೇಂದ್ರಗಳಲ್ಲಿ ಭಜನೆ ನಡೆಯಬೇಕು ಎಂಬುದು ಭಜನಾ ಸ್ಪರ್ಧೆಯ ಆಶಯ ಎಂದರು.

ಶರತ್ ಕುಮಾರ್ ಉಪಾಧ್ಯ ವೇದಘೋಷಗೈದರು. ವಿದ್ಯಾರ್ಥಿನಿ ಸಿಂಧು ಹೆಗಡೆ ಪ್ರಾರ್ಥಿಸಿದರು. ವಿದ್ವಾನ್ ಷಣ್ಮುಖ ಹೆಬ್ಬಾರ್ ನಿರೂಪಿಸಿದರು. ಸಂಘಟನಾ ಕಾರ್ಯದರ್ಶಿ ಗೋವಿಂದರಾಜ್ ವಂದಿಸಿದರು.

ಈ ಸಂದರ್ಭದಲ್ಲಿ ಹಲಸು– ಮಾವು ಮೇಳ, ಕರಕುಶಲ– ಕೈಮಗ್ಗ ಮೇಳ ನಡೆಯಿತು.

> **ಆಚಾರ್ಯ ಮಧ್ವರ ಮೂರ್ತಿ ಸ್ಥಾಪನೆ**
> ಮಲ್ಪೆಯನ್ನು ಭಕ್ತಿ- ಶ್ರದ್ಧೆಯ ಕೇಂದ್ರವಾಗಿಸಬೇಕು. ಈ ನಿಟ್ಟಿನಲ್ಲಿ ಅಲ್ಲಿ ಆಚಾರ್ಯ ಮಧ್ವರ ಮೂರ್ತಿ ಸ್ಥಾಪಿಸಬೇಕು ಎಂಬ ಆಶಯ ಹೊಂದಲಾಗಿದೆ
> ■ ಅದಮಾರು ಶ್ರೀ ಈಶಪ್ರಿಯತೀರ್ಥ ಶ್ರೀಪಾದರು

ಎಸ್.ಎಸ್.ಎಲ್.ಸಿ. ಪರೀಕ್ಷೆ-2: ನಿಷೇಧಾಜ್ಞೆ ಜಾರಿ

ಮಂಗಳೂರು: ಎಸ್.ಎಸ್.ಎಲ್.ಸಿ. ಪರೀಕ್ಷೆ–2 ನಡೆಯುವ ಪರೀಕ್ಷಾ ಕೇಂದ್ರಗಳಲ್ಲಿ ಕಾನೂನು ಬಾಹಿರ ಚಟುವಟಿಕೆ, ಅಹಿತಕರಘಟನೆಗಳು ನಡೆಯದಂತೆ ಮತ್ತು ಪರೀಕ್ಷೆಗಳನ್ನು ಶಾಂತಿಯುತವಾಗಿ, ಸುಸೂತ್ರವಾಗಿ ಹಾಗೂ ದೋಷರಹಿತವಾಗಿ ನಡೆಸುವ ನಿಟ್ಟಿನಲ್ಲಿ ಮೇ 18 ರಿಂದಮೇ 25 ರವರೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆ–2 ನಡೆಯುವ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವ್ಯಾಪ್ತಿಯ (ಮೊಡಂಕಾಪು ದೀಪಿಕಾ ಪ್ರೌಢಶಾಲೆ, ಬಂಟ್ವಾಳ ಎಸ್.ವಿ.ಎಸ್. ಪ್ರೌಢಶಾಲೆ, ಬೆಳ್ತಂಗಡಿ ವಾಣಿ ಆಂಗ್ಲ ಮಾಧ್ಯಮ ಶಾಲೆ, ಪುತ್ತೂರು ಕೊಂಬೆಟ್ಟು ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌ.ಶಾ. ವಿಭಾಗ), ಸುಳ್ಯ ಸರಕಾರಿ ಪದವಿ ಪೂರ್ವ ಕಾಲೇಜು) 5 ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ನಿಷೇಧಾಜ್ಞೆಯನ್ನು ವಿಧಿಸಿ ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ. ಆದೇಶಿಸಿದ್ದಾರೆ.

ಕೊಡವೂರು ಶಂಕರನಾರಾಯಣ ದೇವಸ್ಥಾನದಲ್ಲಿ ಮಹಾರುದ್ರ ಯಾಗದ ಧಾರ್ಮಿಕ ಸಭೆ

ಮಕ್ಕಳಿಗೆ ಶಿಸ್ತು ಕಲಿಸುವಲ್ಲಿ ತಾಯಿಯ ಪಾತ್ರ ದೊಡ್ಡದು

ಉಡುಪಿ: ನಮ್ಮ ಸಂಸ್ಕೃತಿಯನ್ನು ಮೊದಲು ನಾವು ಪಾಲಿಸಿದರೆ ಮಾತ್ರ ನಮ್ಮ ಮಕ್ಕಳು ಅದನ್ನು ಕಲಿಯಲು ಸಾಧ್ಯ. ಮಕ್ಕಳಿಗೆ ಶಿಸ್ತು, ಸಂಯಮ ಮತ್ತು ಹಿರಿಯರಿಗೆ ಗೌರವ ನೀಡುವ ಗುಣಗಳನ್ನು ತಾಯಿಯೇ ಕಲಿಸಬೇಕು ಎಂದು ಆನಂದ ಸಿದ್ಧಿ ಪೀಠಂ ಹಾಗೂ ಶ್ರೀ ಲಕ್ಷ್ಮೀ ಭೂ ವರಾಹ ಸಾಲಿಗ್ರಾಮ ಕ್ಷೇತ್ರದ ಸಂಸ್ಥಾಪಕ ಡಾ. ಮಹರ್ಷಿ ಆನಂದ ಗುರೂಜಿ ಹೇಳಿದರು.

ಕೊಡವೂರು ಶಂಕರನಾರಾಯಣ ದೇವಸ್ಥಾನದಲ್ಲಿ ಲೋಕಕಲ್ಯಾಣಾರ್ಥವಾಗಿ ಹಮ್ಮಿಕೊಳ್ಳಲಾಗಿರುವ ಮಹಾರುದ್ರ ಯಾಗದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು. ಮಕ್ಕಳನ್ನು ಉತ್ತಮ ಪ್ರಜೆಯಾಗಿ ಬೆಳೆಸುವಲ್ಲಿ ತಾಯಿಯೇ ಮೊದಲ ಗುರು ಎಂದು ಅವರು ಪ್ರತಿಪಾದಿಸಿದರು.

ರಾಮಲಿಂಗ ರೆಡ್ಡಿ ಅವರಿಂದ ಚಾಲನೆ

ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವ ರಾಮಲಿಂಗ ರೆಡ್ಡಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸುಮಾರು 75 ವರ್ಷಗಳ ನಂತರ ಈ ಭಾಗದಲ್ಲಿ ಮಹಾರುದ್ರಯಾಗ ನಡೆಯುತ್ತಿರುವುದು ಸಂತೋಷದ ವಿಷಯ. ಈ ಯಾಗದ ಪುಣ್ಯಫಲದಿಂದ ದೇಶ ಮತ್ತು ರಾಜ್ಯದ ಸಂಕಷ್ಟಗಳು ದೂರವಾಗಿ ನಾಡು ಸುಭಿಕ್ಷವಾಗಲಿ ಎಂದು ಹಾರೈಸಿದರು. ಇದೇ ವೇಳೆ ಹೆಚ್ಚುತ್ತಿರುವ ರಸ್ತೆ ಅಪಘಾತಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಚಿವರು, ದ್ವಿಚಕ್ರ ವಾಹನ ಸವಾರರು ಜಾಗರೂಕತೆಯಿಂದ ವಾಹನ ಚಲಾಯಿಸಬೇಕು ಎಂದು ಕಿವಿಮಾತು ಹೇಳಿದರು.



ರುದ್ರಯಾಗ ದೈವ ಪ್ರೇರಣೆ


ಯಾಗದ ಸಂಘಟಕ ಹಾಗೂ ಮಹಾ ರುದ್ರಯಾಗ ಸಮಿತಿಯ ಕಾರ್ಯಾಧ್ಯಕ್ಷ ಪ್ರಸಾದ್‌ರಾಜ್ ಕಾಂಚನ್ ಪ್ರಾಸ್ತಾವಿಕವಾಗಿ ಮಾತನಾಡಿ, ತೀರ್ಥಯಾತ್ರೆಯ ಸಂದರ್ಭದಲ್ಲಿ ಶಿವನ ದರ್ಶನ ಪಡೆದಾಗ ಈ ಯಾಗವನ್ನು ನಡೆಸಲು ದೈವ ಪ್ರೇರಣೆಯಾಯಿತು. ಸಾಮಾನ್ಯ ಭಕ್ತರೂ ಪಾಲ್ಗೊಂಡು ಕಣ್ತುಂಬಿಕೊಳ್ಳುವಂತೆ ಯಾಗ ನಡೆಸಬೇಕೆಂಬ ಹಂಬಲ ಇದೀಗ ಪವಾಡ ಸದೃಶವಾಗಿ ಸಾಕಾರಗೊಳ್ಳುತ್ತಿದೆ ಎಂದರು.

ಮಕ್ಕಳಿಗೆ ಹೆಲ್ಮೆಟ್ ವಿತರಣೆ

18 ವರ್ಷದೊಳಗಿನ ಮಕ್ಕಳು ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುವಾಗ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸಿರುವಹಿನ್ನೆಲೆಯಲ್ಲಿ, ಎಥರ್ ಕಂಪನಿಯ ವತಿಯಿಂದ ಮಕ್ಕಳಿಗೆ ಹೆಲ್ಮೆಟ್‌ಗಳನ್ನು ಸಾಂಕೇತಿಕವಾಗಿ ವಿತರಿಸಲಾಯಿತು. ಸಚಿವ ರಾಮಲಿಂಗ ರೆಡ್ಡಿ ಮತ್ತು ಆರ್‌ಟಿಒ ಅಧಿಕಾರಿ ಸಂತೋಷ್ ಶೆಟ್ಟಿ ಈ ಪ್ರಕ್ರಿಯೆಗೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ಅಭಯಚಂದ್ರ ಜೈನ್, ಪಟ್ಲ ಸತೀಶ್ ಶೆಟ್ಟಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

'ಶ್ರೀಮದ್ ಭಾಗವತ ಸಪ್ತಾಹ' ಪ್ರವಚನಮಾಲಿಕೆ 5ನೇ ದಿನದ ಕಾರ್ಯಕ್ರಮ

ಮಂಗಳೂರು: ನಗರದ ಕೊಡಿಯಾಲಬೈಲಿನ ಶಾರದಾ ವಿದ್ಯಾಲಯದ ಧ್ಯಾನಮಂದಿರದಲ್ಲಿ ಎಸ್.ಕೆ.ಡಿ.ಬಿ. ಅಸೋಸಿಯೇಶನ್ ಮತ್ತು ತುಳುನಾಡು ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ಹುಬ್ಬಳ್ಳಿಯ ವಿದ್ಯಾವಾರಿಧಿ ಡಾ. ಶ್ರೀಹರಿ ಆಚಾರ್ಯ ವಾಳ್ವೇಕರ್ ಅವರಿಂದ 'ಶ್ರೀಮದ್ ಭಾಗವತ ಸಪ್ತಾಹ' ಪ್ರವಚನಮಾಲಿಕೆಯ 5ನೇ ದಿನದ ಕಾರ್ಯಕ್ರಮವನ್ನು ಶ್ರೀ ಗುರುರಾಘವೇಂದ್ರ ಮಠದ ಪ್ರಧಾನಅರ್ಚಕರಾದ ವೇದಮೂರ್ತಿ ಅತ್ತೂರು ಜಯರಾಮ ಉಡುಪರು ನೆರವೇರಿಸಿದರು. ಸಂಘಟಕ ಸುಧಾಕರ ರಾವ್ ಪೇಜಾವರ ಸ್ವಾಗತಿಸಿದರು. ಶಾರದಾ ಸಮೂಹ ಸಂಸ್ಥೆಯ ಅಧ್ಯಕ್ಷ ಡಾ. ಎಂ.ಬಿ.ಪುರಾಣಿಕ್, ಎಸ್.ಕೆ.ಡಿ.ಬಿ. ಅಸೋಸಿಯೇಶನ್ನಿನ ಅಧ್ಯಕ್ಷ ಬಿ. ಸುಬ್ರಹ್ಮಣ್ಯರಾವ್, ಪ್ರದೀಪಕುಮಾರಕಲ್ಕೂರ, ಗುರುಪ್ರಸಾದ್ ಕಡಂಬಾರ್, ಡಾ. ಲೀಲಾ ಉಪಧ್ಯಾಯ, ಪ್ರಭಾಕರ ರಾವ್ ಪೇಜಾವರ, ರಮೇಶ್ ಎಲ್. ನಾವಡ, ಶಶಿಪ್ರಭಾ ಐತಾಳ್, ದಯಾನಂದ ಕಟೀಲ್ ಉಪಸ್ಥಿತರಿದ್ದರು.



ಝೇಂಕಾರ ಬಳಗದ ಮಾತೆಯರಿಂದ ಶ್ರೀಮದ್ ಭಗವನ್ನಾಮ ಸಂಕೀರ್ತನೆ ನೆರವೇರಿತು. ಸಂಜೆ 6ರಿಂದ 7.30ರ ತನಕ ಮೇ 16ರ ವರೆಗೆ ಈಉಪನ್ಯಾಸವು ಜರಗಲಿದೆ.

ಹಿಂದಿನ ಸರಕಾರದ ಹಿಜಾಬ್ ನಿಷೇಧ ಆದೇಶವನ್ನು ಹಿಂತೆಗೆದುಕೊಂಡ ಕಾಂಗ್ರೆಸ್ ಸರಕಾರ | ವ್ಯಾಪಕ ಆಕ್ರೋಶ

ರಾಜ್ಯ ಸರ್ಕಾರದ ನಿರ್ಧಾರಕ್ಕೆ ವಿಶ್ವಹಿಂದೂ ಪರಿಷತ್ ಖಂಡನೆ

ಮಂಗಳೂರು: ರಾಜ್ಯ ಸರ್ಕಾರ ಹಿಜಾಬ್ ಮೇಲಿನ ನಿಷೇಧವನ್ನು ಹಿಂಪಡೆಯುವ ಆದೇಶ ಖಂಡನೀಯ, ಶಾಲಾ ಕಾಲೇಜುಗಳು, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಸಮಾನತೆಯ ಕೇಂದ್ರ ಗಳಾಗಿರಬೇಕು, ಶಾಲಾ ಕಾಲೇಜುಗಳ ಪಾವಿತ್ರ್ಯತೆಯನ್ನು ಕಾಪಾಡಬೇಕಾದ ಸರ್ಕಾರವೇ ಮತಾಂಧತೆಯನ್ನು ಶಾಲಾ ಕಾಲೇಜುಗಳ ಒಳಗೆ ತರುತ್ತಿರುವುದು ಅಕ್ಷಮ್ಯ ಅಪರಾಧ ಎಂದು ವಿಶ್ವ ಹಿಂದೂ ಪರಿಷತ್ ಹೇಳಿದೆ.



ರಾಜ್ಯ ಸರ್ಕಾರ ಹಿಜಾಬ್ ಪ್ರೇಮಿಯಾಗಿದ್ದು, ಇದರ ವಿರುದ್ಧ ಯುವಶಕ್ತಿ ಬೀದಿಗಿಳಿದು ಹೋರಾಟ ಮಾಡಬೇಕಾಗಿದೆ ಎಂದು ವಿಶ್ವ ಹಿಂದೂ ಪರಿಷತ್ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದು ಕೇವಲ ಹಿಜಾಬ್‌ಗೆ ನೀಡಿದ ಆದೇಶವಲ್ಲ, ಬದಲಿಗೆ ಶಿಸ್ತುಬದ್ಧ ಶಿಕ್ಷಣ ವ್ಯವಸ್ಥೆಯನ್ನು ಅಂತ್ಯಗೊಳಿಸುವುದೇ ಸರಕಾರದ ಉದ್ದೇಶವಾಗಿದೆ ಎಂದವರು ಹೇಳಿದ್ದಾರೆ.

ಈ ತುಘಲಕ್ ಸರ್ಕಾರದ ವಿರುದ್ಧ ಹೋರಾಟ ನಡೆಸುವ ಯುವಶಕ್ತಿಗಳಿಗೆ ವಿಶ್ವ ಹಿಂದೂ ಪರಿಷದ್ ಮತ್ತು ಯುವವಿಭಾಗಗಳಾದ ಬಜರಂಗದಳ, ದುರ್ಗಾವಾಹಿನಿ ಸಂಪೂರ್ಣವಾಗಿ ಬೆಂಬಲಿಸಲಿದೆ ಎಂದು ವಿಶ್ವ ಹಿಂದೂ ಪರಿಷದ್ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ಪ್ರಕಟಣೆಯಲ್ಲಿ ತಿಳಿಸಿದರು.

ರಾಜಕೀಯ ಲಾಭಕ್ಕಾಗಿ ಮಾತ್ರ: ಶಿವಸೇನಾ



ಮಂಗಳೂರು: ರಾಜ್ಯ ಸರ್ಕಾರವು ಹಿಜಾಬ್ ನಿಷೇಧವನ್ನು ಹಿಂಪಡೆದದ್ದು ಕೇವಲ ರಾಜಕೀಯ ತೆವಲಿಗಾಗಿ ಮಾತ್ರ ಎಂದು ಶಿವಸೇನಾ ರಾಜ್ಯ ಉಪಾಧ್ಯಕ್ಷ ಆನಂದ್ ಶೆಟ್ಟಿ ಅಡ್ಯಾರ್ ತಿಳಿಸಿದ್ದಾರೆ. ಈ ನಿರ್ಧಾರವನ್ನು ಶಿವಸೇನೆ ಖಂಡಿಸುತ್ತದೆ. ಶಾಲಾ ಕಾಲೇಜುಗಳು ಎಂದಿಗೂ ಭವಿಷ್ಯ ರೂಪಿಸುವ ಎಲ್ಲರಿಗೂ ಸಮಾನತೆಯ ಪಾಠ ಹೇಳುವ ಕೇಂದ್ರಗಳಾಗಬೇಕು ಹೊರತು ವಿದ್ಯಾರ್ಥಿಗಳ ಜೀವನವನ್ನೇ ಹಾಳುಗೆಡವುವ ಮತಾಂಧತೆಯ ಕೇಂದ್ರ ಆಗಬಾರದು. ದೇಶದ ಶಿಕ್ಷಣ ವ್ಯವಸ್ಥೆಯನ್ನು ಬುಡಮೇಲು ಮಾಡುವ ಹೀನ ಉದ್ದೇಶ ಇದರಲ್ಲಿ ಅಡಗಿದೆ. ತಮ್ಮ ಓಟ್ ಬ್ಯಾಂಕ್ ರಾಜಕೀಯದಲ್ಲಿ ಮುಂದೆ ಭವಿಷ್ಯದ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇಲ್ಲದೇ ಇರುವುದು ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಈಗಾಗಲೇ ಇದ್ದ ಕಾನೂನನ್ನು ಯಾವುದೋ ಕಾರಣದ ನೆಪವೊಡ್ಡಿ ನಿಷೇಧ ಹಿಂಪಡೆದದ್ದು ಅಕ್ಷಮ್ಯ ಅಪರಾಧ, ಈ ನಿರ್ಧಾರವನ್ನು ಖಂಡಿಸಿ ಪ್ರತಿಭಟಿಸುವ ಪ್ರತಿಯೊಬ್ಬ ಯುವ ಜನತೆಯನ್ನು ಶಿವಸೇನೆಯು ಬೆಂಬಲಿಸಲಿದೆ. ಓಲೈಕೆ ರಾಜಕಾರಣ ಮತ್ತೆ ರಾಜ್ಯದಲ್ಲಿ ಆರಂಭವಾಗಿದೆ. ಜೊತೆಗೆ ನಿಷೇಧ ವಾಪಸ್‌ನಿಂದ ಮುಂದೆ ನಡೆಯುವ ಅನಗತ್ಯ ಅನಾಹುತಗಳಿಗೆ ಕಾರಣವಾಗಲಿದೆ ಎಂದು ಅವರು ತಿಳಿಸಿದ್ದಾರೆ.



ವಿಹಿಂಪ, ಪ್ರಮುಖರ ತೀವ್ರ ಖಂಡನೆ

ಪುತ್ತೂರು: ರಾಜ್ಯದ ಕಾಂಗ್ರೆಸ್ ಸರಕಾರ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸಲು ಆತುರಾತುರವಾಗಿ ಅವಕಾಶ ನೀಡಿರುವುದನ್ನು ವಿಶ್ವ ಹಿಂದೂ ಪರಿಷದ್ ತೀವ್ರವಾಗಿ ಖಂಡಿಸಿದೆ. 'ಮಾಡೋಕೆ ಕೆಲಸ ಇಲ್ಲದೆ, ಬೆಕ್ಕಿನ ಬಾಲ ಬೋಳಿಸಿದನಂತೆ' ಎಂಬ ಗಾದೆ ಮಾತು ಅಕ್ಷರಶಃ ರಾಜ್ಯ ಸರಕಾರದ ಶಿಕ್ಷಣ ಇಲಾಖೆಯ ವಿವೇಚನಾರಹಿತ ಸಚಿವರಿಗೆ ಹೇಳಿ ಮಾಡಿಸಿದಂತಿದೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಎದ್ದು ಕಾಣುತ್ತಿದೆ. ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಹಳ್ಳ ಹಿಡಿದಿದೆ. ನೂರಾರು ಆಕಾಂಕ್ಷಿಗಳು ಆಸೆಗಣ್ಣಿನಿಂದ ಕಾದು ಕುಳಿತಿದ್ದಾರೆ. ಆದರೆ, ನೇಮಕಾತಿಯ ಕುರಿತು ಯಾವುದೇ ನಿರ್ಧಾರ ಕೈಗೊಳ್ಳದೆ, ಹಿಜಾಬ್ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿದ್ದರೂ, ಹಿಜಾಬ್ ಧರಿಸಲು ಆತುರಾತುರವಾಗಿ ಅವಕಾಶ ನೀಡಿದ್ದಾರೆ ಎಂದು ವಿಶ್ವ ಹಿಂದೂ ಪರಿಷದ್‌ನ ಪುತ್ತೂರು ಜಿಲ್ಲಾಧ್ಯಕ್ಷ ಡಾ. ಕೃಷ್ಣಪ್ರಸನ್ನ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯ ಸರಕಾರ ಶಿಕ್ಷಣ ಇಲಾಖೆಯನ್ನು ಓಲೈಕೆ ರಾಜಕಾರಣಕ್ಕೆ ಬಳಸಿಕೊಂಡಿರುವುದು ತುಷ್ಟೀಕರಣದ ಕೆಟ್ಟ ನಿದರ್ಶನವಾಗಿದೆ. ಇಂಥ ನಿರ್ಧಾರಗಳಿಂದ ವಿದ್ಯಾರ್ಥಿಗಳಲ್ಲಿ ಒಡಕು ಮೂಡಿಸಿ ರಾಜ್ಯದಲ್ಲಿ ಶಿಕ್ಷಣವನ್ನು 'ಇಸ್ಲಾಮೀಕರಣ' ಮಾಡುವ ಹುನ್ನಾರವೇ ಎಂದು ಅನುಮಾನ ಮೂಡುತ್ತಿದೆ ಎಂದು ಅವರು ಸಂಶಯ ವ್ಯಕ್ತಪಡಿಸಿದ್ದಾರೆ.

ಭಾವನೆಗಳ ಮೇಲೆ ಚೆಲ್ಲಾಟ

ಯುವ ಜನಾಂಗವನ್ನು ಕೋಮು ಸಂಘರ್ಷಕ್ಕೆ ಪ್ರೇರೇಪಿಸುತ್ತಿರುವ ರಾಜ್ಯ ಕಾಂಗ್ರೆಸ್ ಸರಕಾರ ಬಹುಸಂಖ್ಯಾತ ಹಿಂದೂಗಳ ಧಾರ್ಮಿಕ ಭಾವನೆಗಳ ಮೇಲೆ ಚೆಲ್ಲಾಟ ಆಡುತ್ತಿದೆ ಎಂದು ಹಿಂದೂ ಮುಖಂಡ ಅರುಣ್ ಕುಮಾರ್ ಪುತ್ತಿಲ ಆರೋಪಿಸಿದ್ದಾರೆ.

ಪ್ರಸ್ತುತ ನ್ಯಾಯಾಲಯದಲ್ಲಿರುವ ಹಿಜಾಬ್ ವಿವಾದವನ್ನು ಮತ್ತೆ ಅನುಷ್ಠಾನಗೊಳಿಸಿ ಮುಸ್ಲಿಮರ ಓಲೈಕೆಗೆ ಕಾಂಗ್ರೆಸ್ ಸರಕಾರ ಮುಂದಾಗಿದೆ. ಈ ಪ್ರಕರಣ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವ ಹಂತದಲ್ಲಿ ಮತ್ತೆ ಸರಕಾರ ವಿವಾದವನ್ನು ಕೆದಕುವ ಕೆಲಸ ಮಾಡಿದೆ. ಮೊನ್ನೆ ನಡೆದ ಉಪ ಚುನಾವಣೆಯಲ್ಲಿ ಅಲ್ಪ ಸಂಖ್ಯಾತರ ಮತ ವಿಭಜನೆಯಾಗಿದ್ದು ಕಾಂಗ್ರೆಸ್ ಪಕ್ಷ ಈ ಘಟನೆ ಮುಂದಿನ ಚುನಾವಣೆಯಲ್ಲಿ ಮರುಕಳಿಸದಂತೆ ಈ ನಿರ್ಧಾರ ಕೈಗೊಂಡಿದೆ. ಜೊತೆಗೆ ಕೇಸರಿ ಶಾಲು ಹಾಕಲು ನಿರ್ಬಂಧ ಮಾಡಿರುವುದು ಬಹುಸಂಖ್ಯಾತ ಹಿಂದುಗಳ ಭಾವನೆಗಳಿಗೆ ನೋವು ತಂದಿದೆ. ಹಿಜಾಬ್ ಇಸ್ಲಾಂನ ಅವಿಭಾಜ್ಯ ಅಂಗ ಎಂದು ಎಲ್ಲಿಯೂ ಉಲ್ಲೇಖ ಇಲ್ಲ. ಆದರೆ ಹಿಂದೂಗಳಲ್ಲಿ ಜನಿವಾರ, ರುದ್ರಾಕ್ಷಿ ಮತ್ತು ಕೇಸರಿ ಶಾಲು ನಂಬಿಕೆಯ ಆಧಾರದಲ್ಲಿ ಅನುಷ್ಠಾನದಲ್ಲಿದೆ. ಸರಕಾರದ ಈ ಧೋರಣೆ ಮುಂದಿನ ದಿನಗಳಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಜೀವನದಲ್ಲಿ ಮಾರಕವಾಗಿ ಪರಿಣಾಮ ಬೀರಲಿದೆ. ಮತ್ತೆ ಸರಕಾರದ ಈ ನಡೆ ವಿವಾದವನ್ನು ಸೃಷ್ಟಿ ಮಾಡುವಲ್ಲಿ ಯಾವುದೇ ಸಂದೇಹ ಇಲ್ಲ. ಸರಕಾರ ಮತ್ತೆ ಈ ಆದೇಶವನ್ನು ಹಿಂತೆಗೆಯಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ನಡೆಯುವ ಎಲ್ಲಾ ವಿವಾದಗಳಿಗೆ ಸರಕಾರವೇ ನೇರ ಹೊಣೆಯಾಗುತ್ತದೆ ಎಂದು ಅರುಣ್ ಕುಮಾರ್ ಪುತ್ತಿಲ ಎಚ್ಚರಿಸಿದ್ದಾರೆ.

ಭೋಜಶಾಲೆ–ಕಮಾಲ್ ಮೌಲಾ ಸಮುಚ್ಚಯ ಪ್ರಕರಣ

ಹಿಂದುಪಕ್ಷದ ವಾದಗಳಿಗೆ ನ್ಯಾಯಾಲಯ ಮನ್ನಣೆ

ಭೋಪಾಲ್: ಹಲವು ದಶಕಗಳಿಂದ ರಾಷ್ಟ್ರ ಮಟ್ಟದಲ್ಲಿ ವಿವಾದಕ್ಕೆ ಕಾರಣವಾಗಿದ್ದ ಮಧ್ಯಪ್ರದೇಶದ ಧಾರ ಜಿಲ್ಲೆಯ ಭೋಜಶಾಲೆ–ಕಮಾಲ್ ಮೌಲಾ ಸಮುಚ್ಚಯದ ಕುರಿತಾಗಿ ಮಧ್ಯಪ್ರದೇಶ ಹೈಕೋರ್ಟ್‌ನಲ್ಲಿ ಹಿಂದುಪಕ್ಷದ ಪರ ವಕೀಲ ವಿಷ್ಣು ಶಂಕರ್ ಜೈನ್, 'ಭೋಜಶಾಲೆ ಮೂಲತಃ ಸರಸ್ವತಿ ದೇವಾಲಯ. ಇಲ್ಲಿ ಪೂಜೆ ಸಲ್ಲಿಸುವ ಮೂಲಭೂತ ಹಕ್ಕು ಹಿಂದೂಗಳಿಗೆ ಮಾತ್ರ ಸೇರಿದೆ' ಎಂದು ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದರು. ಅವರು ಸಂಸ್ಕೃತ ಮತ್ತು ಪಾಲಿ ಭಾಷೆಯ ಶಾಸನಗಳು, ದೇವಾಲಯದ ಕಂಬಗಳು, ಮಂಟಪದ ಅವಶೇಷಗಳು, ಮೂರ್ತಿಗಳ ಭಾಗಗಳು ಸೇರಿದಂತೆ ಹಲವು ಪುರಾತತ್ವ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ರಾಜಾ ಭೋಜನ ಕಾಲದಲ್ಲಿ ನಿರ್ಮಾಣಗೊಂಡ ಈ ವಿದ್ಯಾಕೇಂದ್ರವನ್ನು ನಂತರದ ಆಕ್ರಮಣಗಳ ಸಂದರ್ಭದಲ್ಲಿ ಧ್ವಂಸಗೊಳಿಸಿ ಅದರ ಅವಶೇಷಗಳನ್ನೇ ಬಳಸಿ ಮಸೀದಿ ರೂಪ ನೀಡಲಾಗಿದೆ ಎಂಬುದು ಹಿಂದೂ ಸಂಘಟನೆಗಳ ಪ್ರಮುಖ ವಾದವಾಗಿತ್ತು.

ಮುಸ್ಲಿಂಪಕ್ಷ ಎತ್ತಿದ್ದ ಪ್ರಶ್ನೆಗಳು: ಮುಸ್ಲಿಂ ಪಕ್ಷದ ಹಿರಿಯ ವಕೀಲ ಸಲ್ಮಾನ್ ಖುರ್ಷೀದ್, 'ಸರಸ್ವತಿ ದೇವಾಲಯವನ್ನು ಧ್ವಂಸ ಮಾಡಿ ಮಸೀದಿ ನಿರ್ಮಿಸಲಾಗಿದೆ ಎಂಬುದಕ್ಕೆ ನೇರ ಸಾಕ್ಷ್ಯ ಇಲ್ಲ' ಎಂದು ವಾದಿಸಿದ್ದರು. ಎಎಸ್‌ಐ ಸಮೀಕ್ಷೆಯ ಪ್ರಕ್ರಿಯೆಯ ಮೇಲೆಯೂ ಅವರು ಅನುಮಾನ ವ್ಯಕ್ತಪಡಿಸಿದ್ದರು. ಕಾರ್ಬನ್ ಡೇಟಿಂಗ್ ನಡೆಸದಿರುವುದು, ಪತ್ತೆಯಾದ ಪುರಾತತ್ವ ವಸ್ತುಗಳು ಅಸಾಮಾನ್ಯವಾಗಿ ಸ್ವಚ್ಛ ಸ್ಥಿತಿಯಲ್ಲಿ ದೊರೆತಿರುವುದು, ಸಮೀಕ್ಷೆ ವೇಳೆ ಕೆಲ ನಿರ್ಮಾಣ ಭಾಗಗಳನ್ನು ತೆರವುಗೊಳಿಸಿರುವುದು ಸೇರಿದಂತೆ ಹಲವು ಅಂಶಗಳನ್ನು ಅವರು ಪ್ರಶ್ನಿಸಿದ್ದರು. ಸರಸ್ವತಿ ಮೂರ್ತಿಗಳ ಅಸ್ತಿತ್ವವನ್ನೇ ದೇವಾಲಯದ ಅಂತಿಮ ಸಾಕ್ಷ್ಯವೆಂದು ಪರಿಗಣಿಸಲಾಗುವುದಿಲ್ಲ, ವಿದ್ಯಾಕೇಂದ್ರಗಳಲ್ಲಿಯೂ ಸರಸ್ವತಿ ಪ್ರತಿಮೆಗಳು ಸಾಮಾನ್ಯವಾಗಿವೆ ಎಂದೂ ಅವರು ವಾದಿಸಿದರು.

ರಾಜಾ ಭೋಜನ ಸಂಪರ್ಕವೇ ವಿವಾದದ ಕೇಂದ್ರಬಿಂದು

ಭೋಜಶಾಲೆ ಕುರಿತ ಹಿಂದೂಪಕ್ಷದ ಪ್ರಮುಖ ಆಧಾರ ರಾಜಾ ಭೋಜನ ಇತಿಹಾಸವಾಗಿದೆ. ಸುಮಾರು ಕ್ರಿ.ಶ. 1000ರಿಂದ 1055ರ ಅವಧಿಯಲ್ಲಿ ಆಡಳಿತ ನಡೆಸಿದ ಪರಮಾರ ರಾಜವಂಶದ ರಾಜಾ ಭೋಜರನ್ನು ಸಂಸ್ಕೃತ ವಿದ್ಯಾಭ್ಯಾಸ, ದೇವಾಲಯ ನಿರ್ಮಾಣ ಮತ್ತು ಜ್ಞಾನ ಪರಂಪರೆಯ ಮಹಾನ್ ಪೋಷಕರಾಗಿ ಪರಿಗಣಿಸಲಾಗುತ್ತದೆ. ಹಿಂದೂ ಸಂಘಟನೆಗಳ ಪ್ರಕಾರ ಭೋಜಶಾಲೆ ಕೇವಲ ದೇವಾಲಯವಾಗಿರಲಿಲ್ಲ, ಅದು ಸಂಸ್ಕೃತ ಅಧ್ಯಯನದ ಪ್ರಮುಖ ಪೀಠವಾಗಿತ್ತು. ವಾಗ್ದೇವಿ ಸರಸ್ವತಿಯ ಆರಾಧನೆ ಇಲ್ಲಿ ನಡೆಯುತ್ತಿತ್ತು ಎನ್ನುವುದು ಅವರ ವಾದ.



ಎಎಸ್‌ಐ ಸಮೀಕ್ಷೆ ಏನು ಹೇಳಿತ್ತು?

2024ರಲ್ಲಿ ಹೈಕೋರ್ಟ್ ಆದೇಶದ ಮೇರೆಗೆ ನಡೆದ ವೈಜ್ಞಾನಿಕ ಸಮೀಕ್ಷೆ ಈ ಪ್ರಕರಣದಲ್ಲಿ ನಿರ್ಣಾಯಕ ಹಂತವೆಂದು ಪರಿಗಣಿಸಲಾಯಿತು. ಸುಮಾರು 100 ದಿನಗಳ ಕಾಲ ನಡೆದ ಅಧ್ಯಯನದ ಬಳಿಕ 2,189 ಪುಟಗಳ ವರದಿಯನ್ನು ಎಎಸ್‌ಐ ನ್ಯಾಯಾಲಯಕ್ಕೆ ಸಲ್ಲಿಸಿತ್ತು. ಈ ಸಮೀಕ್ಷೆಯಲ್ಲಿ 1,700ಕ್ಕೂ ಹೆಚ್ಚು ಪುರಾತತ್ವ ವಸ್ತುಗಳು ಪತ್ತೆಯಾಗಿದ್ದವು. ಹಿಂದೂ ದೇವತೆಗಳ ಮೂರ್ತಿಗಳ ಅವಶೇಷಗಳು, 'ಶ್ರೀ ಸರಸ್ವತ್ಯೈ ನಮಃ' ಎಂಬ ಸಂಸ್ಕೃತ ಶಾಸನಗಳು, ದೇವಾಲಯ ಶೈಲಿಯ ಕಲ್ಲಿನ ಭಾಗಗಳು ಮತ್ತು ಹಿಂದಿನ ನಿರ್ಮಾಣದ ವಸ್ತುಗಳನ್ನು ಮರುಬಳಕೆ ಮಾಡಿರುವ ಗುರುತುಗಳು ಪತ್ತೆಯಾಗಿದ್ದವು. ಪರ್ಷಿಯನ್ ಹಾಗೂ ಅರೇಬಿಕ್ ಶಾಸನಗಳೂ ದೊರೆತಿದ್ದವು. 'ಈಗಿನ ಕಟ್ಟಡವು ಹಿಂದಿನ ದೇವಾಲಯದ ಭಾಗಗಳನ್ನು ಬಳಸಿ ನಿರ್ಮಿಸಲಾಗಿದೆ' ಎಂಬುದನ್ನು ಎಎಸ್‌ಐ ವರದಿ ಉಲ್ಲೇಖಿಸಿತ್ತು. ಆದರೆ ಮುಸ್ಲಿಂ ಪಕ್ಷ ಈ ವರದಿಯ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಿತ್ತು.

ಕಾಲರೇಖೆ

- **11ನೇ ಶತಮಾನ:** ರಾಜಾ ಭೋಜ ಸಂಸ್ಕೃತ ವಿದ್ಯಾಕೇಂದ್ರ ಸ್ಥಾಪನೆ
- **13ನೇ ಶತಮಾನ:** ಕಮಾಲುದ್ದೀನ್ ಚಿಶ್ತಿ ಧಾರಕ್ಕೆ ಆಗಮನ
- 1305: ಖಿಲ್ಜಿ ದಾಳಿಯ ಬಳಿಕ ದೇವಾಲಯ ಧ್ವಂಸ ಆರೋಪ
- 1902–03: ಸಂಸ್ಕೃತ ಶಾಸನಗಳ ಪತ್ತೆ
- 1951: ಎಎಸ್‌ಐ ರಾಷ್ಟ್ರೀಯ ಸ್ಮಾರಕ ಘೋಷಣೆ
- 1987: ನೆಲದ ದುರಸ್ತಿ ವೇಳೆ ಹಿಂದೂ ಮೂರ್ತಿಗಳ ಪತ್ತೆ
- 2003: ಮಂಗಳವಾರ ಪೂಜೆ, ಶುಕ್ರವಾರ ನಮಾಜ್ ವ್ಯವಸ್ಥೆ ಜಾರಿ
- 2024: ಹೈಕೋರ್ಟ್ ಆದೇಶದ ಮೇರೆಗೆ ವೈಜ್ಞಾನಿಕ ಸಮೀಕ್ಷೆ
- 2026: ಭೋಜಶಾಲೆ ದೇವಾಲಯವೆಂದು ಹೈಕೋರ್ಟ್ ಘೋಷಣೆ

ಸುಪ್ರೀಂ ಕೋರ್ಟ್‌ನಲ್ಲಿ ಹಿಂದು ಸಂಘಟನೆಗಳಿಂದ ಕೆವಿಯಟ್



ಹೊಸದಿಲ್ಲಿ: ಮಧ್ಯಪ್ರದೇಶದ ಧಾರ್ ಜಿಲ್ಲೆಯ ಐತಿಹಾಸಿಕ ಭೋಜಶಾಲೆ–ಕಮಾಲ್ ಮೌಲಾ ಮಸೀದಿ ವಿವಾದದಲ್ಲಿ ಮಧ್ಯಪ್ರದೇಶ ಹೈಕೋರ್ಟ್ ನೀಡಿರುವ ಮಹತ್ವದ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಕೆಯಾಗುವ ಸಾಧ್ಯತೆ ನಡುವೆಯೇ ಹಿಂದು ಪರದ ಅರ್ಜಿದಾರರು ಶುಕ್ರವಾರ ಕೆವಿಯಟ್ ಅರ್ಜಿ ಸಲ್ಲಿಸಿದ್ದಾರೆ. ಈ ಮೂಲಕ, ಹೈಕೋರ್ಟ್ ತೀರ್ಪು ಪ್ರಶ್ನಿಸಿ ಯಾವುದೇ ಅರ್ಜಿ ಬಂದಲ್ಲಿ ತಮ್ಮ ವಾದ ಆಲಿಸದೇ ಸುಪ್ರೀಂ ಕೋರ್ಟ್ ಯಾವುದೇ ಮಧ್ಯಂತರ ಆದೇಶ ನೀಡಬಾರದು ಎಂದು ಮನವಿ ಮಾಡಿದ್ದಾರೆ. ಅರ್ಜಿದಾರ ಜಿತೇಂದ್ರ ಸಿಂಗ್ ವಿಶೇನ್ ಪರ ವಕೀಲ ಬರೂಣ್ ಕುಮಾರ್ ಸಿನ್ಹಾ ಸುಪ್ರೀಂ ಕೋರ್ಟ್‌ನಲ್ಲಿ ಕೆವಿಯಟ್ ಸಲ್ಲಿಸಿದ್ದಾರೆ. 'ಈ ಪ್ರಕರಣದಲ್ಲಿ ನಮಗೆ ನೋಟಿಸ್ ನೀಡದೇ ಯಾವುದೇ ಆದೇಶ ಹೊರಡಿಸಬಾರದು' ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಸಂಸ್ಕೃತ ಅಧ್ಯಯನದ ಜಾಗತಿಕ ಕೇಂದ್ರವಾಗಲಿ

ಭೋಜಶಾಲೆ ಕೇವಲ ವಾಗ್ದೇವಿಯ ಆರಾಧನಾ ಸ್ಥಳವಾಗಿರದೇ, ಪ್ರಾಚೀನ



ಕಾಲದಂತೆ ಸಂಸ್ಕೃತ ಮತ್ತು ಧಾರ್ಮಿಕ ಗ್ರಂಥಗಳ ಅಧ್ಯಯನದ ಜಾಗತಿಕ ಕೇಂದ್ರವಾಗಿ ಮರುಸ್ಥಾಪನೆ ಯಾಗಬೇಕು ಎಂದು ಅಲೋಕ್ ಕುಮಾರ್ ಆಶಯ ವ್ಯಕ್ತಪಡಿಸಿದರು.'ಈ ಗುರಿ ಸಾಧನೆಗೆ ಸಮಾಜ ಮತ್ತು ಸರ್ಕಾರ ಒಟ್ಟಾಗಿ ಕೆಲಸ ಮಾಡಬೇಕು. ಈ ಪವಿತ್ರ ಕ್ಷೇತ್ರದ ಆಧ್ಯಾತ್ಮಿಕ ಶಕ್ತಿ ವಿಶ್ವದಾದ್ಯಂತ ದೈವಿಕ ಬೆಳಕನ್ನು ಹರಡಲಿದೆ ಎಂದು ಹೇಳಿದರು.

ಸರಸ್ವತಿ ವಿಗ್ರಹ ವಾಪಸ್ ತನ್ನಿ

ಭೋಜಶಾಲೆಯ ಮೂಲ ಸರಸ್ವತಿ ವಿಗ್ರಹವನ್ನು, ಪ್ರಸ್ತುತ ಬ್ರಿಟಿಷ್ ಮ್ಯೂಸಿಯಂನಲ್ಲಿ ಇರುವ ಮೂರ್ತಿಯನ್ನು ಭಾರತಕ್ಕೆ ಮರಳಿ ತರಬೇಕೆಂಬ ಮನವಿಯನ್ನು ಪರಿಗಣಿಸಬೇಕೆಂದು ನ್ಯಾಯಾಲಯ ನೀಡಿರುವ ಸೂಚನೆಯನ್ನು ಕೂಡ ವಿಹಿಂಪ ಸ್ವಾಗತಿಸಿದೆ. ಆ ವಿಗ್ರಹವು ಭಾರತದ ಸಾಂಸ್ಕೃತಿಕ ಆತ್ಮದ ಪ್ರತೀಕ. ಅದನ್ನು ಭೋಜಶಾಲೆಯ ಮೂಲಸ್ಥಳದಲ್ಲೇ ಮರುಸ್ಥಾಪಿಸಬೇಕು ಎಂದು ಆಲೋಕ್ ಕುಮಾರ್ ಒತ್ತಾಯಿಸಿದರು.

ಎಎಸ್‌ಐ ವರದಿಯಲ್ಲಿ ಏನಿತ್ತು?

ಹೈಕೋರ್ಟ್ ಆದೇಶದ ಮೇರೆಗೆ 2024ರಲ್ಲಿ ಎಎಸ್‌ಐ ವೈಜ್ಞಾನಿಕ ಸಮೀಕ್ಷೆ ನಡೆಸಿತ್ತು. ಸುಮಾರು 98 ದಿನಗಳ ಸಮೀಕ್ಷೆಯ ಬಳಿಕ 2,000ಕ್ಕೂ ಅಧಿಕ ಪುಟಗಳ ವರದಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಆ ವರದಿ ಪ್ರಕಾರ ಪರಮಾರ ರಾಜರ ಕಾಲದ ಭವ್ಯ ರಚನೆ ಮೊದಲು ಅಸ್ತಿತ್ವದಲ್ಲಿತ್ತು. ನಂತರದ ನಿರ್ಮಾಣದಲ್ಲಿ ದೇವಾಲಯದ ಅವಶೇಷಗಳನ್ನು ಮರುಬಳಕೆ ಮಾಡಲಾಗಿದೆ. ಸಂಸ್ಕೃತ ಶಿಕ್ಷಣ ಕೇಂದ್ರ ಹಾಗೂ ಸರಸ್ವತಿ ದೇವಿಯ ಆರಾಧನೆ ನಡೆದಿರುವ ಸೂಚನೆಗಳು ಕಂಡುಬಂದಿವೆ ಎಂದು ಉಲ್ಲೇಖಿಸಲಾಗಿತ್ತು. ಹಿಂದೂ ಪರ ವಕೀಲರು ಸಮೀಕ್ಷೆಯಲ್ಲಿ ಪತ್ತೆಯಾದ ನಾಣ್ಯಗಳು, ಶಿಲ್ಪಗಳು ಹಾಗೂ ಶಾಸನಗಳು ದೇವಾಲಯ ಅಸ್ತಿತ್ವವನ್ನು ಸಾಬೀತುಪಡಿಸುತ್ತವೆ ಎಂದು ವಾದಿಸಿತ್ತು.


ಭೋಜಶಾಲೆ ತೀರ್ಪು: ವಿಹಿಂಪ ಸ್ವಾಗತ

ಭೋಜಶಾಲೆ ಕುರಿತ ತೀರ್ಪನ್ನು ವಿಶ್ವ ಹಿಂದೂ ಪರಿಷತ್ (ವಿಹಿಂಪ) ಶುಕ್ರವಾರ ಸ್ವಾಗತಿಸಿದೆ. ಈ ತೀರ್ಪು ಭಾರತದ ಸಾಂಸ್ಕೃತಿಕ ಚೇತನ, ಸನಾತನ ಪರಂಪರೆ ಹಾಗೂ ಐತಿಹಾಸಿಕ ಸತ್ಯಕ್ಕೆ ದೊರೆತ ಮಹತ್ವದ ಮಾನ್ಯತೆ ಎಂದು ವಿಹಿಂಪ ಅಭಿಪ್ರಾಯಪಟ್ಟಿದೆ. ಭೋಜಶಾಲೆ ಸಂಕೀರ್ಣವು ದೇವಿ ಸರಸ್ವತಿಗೆ ಸಮರ್ಪಿತ ಹಿಂದೂ ದೇವಾಲಯ ಎಂಬುದಾಗಿ ಹೈಕೋರ್ಟ್ ಘೋಷಿಸಿರುವುದು ಹಿಂದೂಪಕ್ಷಕ್ಕೆ ದೊಡ್ಡ ಜಯವಾಗಿದೆ. ಅಲ್ಲದೆ ಕೇಂದ್ರ ಸರ್ಕಾರ ಹಾಗೂ ಭಾರತೀಯ ಪುರಾತತ್ವ ಸಮೀಕ್ಷಾ ಇಲಾಖೆ (ಎಎಸ್‌ಐ) ಇದರ ಆಡಳಿತ ಮತ್ತು ನಿರ್ವಹಣೆ ಕುರಿತು ತೀರ್ಮಾನ ಕೈಗೊಳ್ಳಬಹುದೆಂದೂ ನ್ಯಾಯಾಲಯ ಹೇಳಿದೆ. ಈ ಕುರಿತು ಪ್ರತಿಕ್ರಿಯಿಸಿದ ವಿಹಿಂಪ ಅಂತಾರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್, 'ಭೋಜಶಾಲೆಯಲ್ಲಿ ಹಿಂದೂಗಳಿಗೆ ನಿರಂತರ ಹಾಗೂ ಅಡೆತಡೆಯಿಲ್ಲದ ಪೂಜೆಗೆ ಹಕ್ಕು ದೊರೆತಿದೆ' ಎಂದು ಹೇಳಿದರು.

2003ರ ಎಎಸ್‌ಐ ಆದೇಶ ರದ್ದು



2003ರಲ್ಲಿ ಎಎಸ್‌ಐ ಹೊರಡಿಸಿದ್ದ ಆದೇಶದಂತೆ, ಮಂಗಳವಾರ ಹಿಂದೂಗಳಿಗೆ ಪೂಜೆ ಹಾಗೂ ಶುಕ್ರವಾರ ಮುಸ್ಲಿಮರಿಗೆ ನಮಾಜ್‌ಗೆ ಅವಕಾಶ ನೀಡಲಾಗುತ್ತಿತ್ತು. ಇದೀಗ ಆ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ಧಾರ್ ಜಿಲ್ಲೆಯ ಈ ಎಎಸ್‌ಐ ಸಂರಕ್ಷಿತ ಸ್ಮಾರಕದ ಧಾರ್ಮಿಕ ಸ್ವರೂಪ ಕುರಿತ ವಿವಾದ ಹಲವು ವರ್ಷಗಳಿಂದ ಮುಂದುವರಿದಿತ್ತು. ಹಿಂದೂಪಕ್ಷ ಇದನ್ನು ವಾಗ್ದೇವಿ ದೇವಾಲಯವೆಂದು ವಾದಿಸಿದ್ದರೆ, ಮುಸ್ಲಿಂಪಕ್ಷ ಕಮಾಲ್ ಮೌಲಾ ಮಸೀದಿ ಎಂದು ಹೇಳುತ್ತಿತ್ತು. ಜೈನ ಸಮುದಾಯದ ಅರ್ಜಿದಾರರು ಇದನ್ನು ಮಧ್ಯಯುಗೀನ ಜೈನ ದೇವಾಲಯ ಹಾಗೂ ಗುರುಕುಲ ಎಂದು ಪ್ರತಿಪಾದಿಸಿದ್ದರು.



ಚೆನ್ನೈ ಸೂಪರ್ ಕಿಂಗ್ಸ್ 187/5 | ವೇಗಿ ಆಕಾಶ್ ಸಿಂಗ್ ಆರ್ಭಟ

ಮಿಂಚಿದ ಕಾರ್ತಿಕ್ ಶರ್ಮಾ

ಲಖನೌ: ಕುಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಕಾರ್ತಿಕ್ ಶರ್ಮ ಆಸರೆಯಾಗಿದ್ದು, ಗೆಲ್ಲಲೇಬೇಕಿರುವ ಪಂದ್ಯದಲ್ಲಿ ಲಖನೌ ವಿರುದ್ಧ ಸ್ಪರ್ಧಾತ್ಮಕ ಗುರಿ ನಿರ್ಮಿಸಿದೆ. ಮೊದಲಿಗೆ ತೀವ್ರ ಕುಸಿತ ಕಂಡ ಚೆನ್ನೈ ಮಧ್ಯಮ ಓವರ್‌ಗಳಲ್ಲಿ ಚೇತರಿಸಿಕೊಂಡಿತು.

ಕಾರ್ತಿಕ್ ಶರ್ಮ 71 ರನ್‌ಗಳ ಮೂಲಕ ಮಿಂಚಿದರು. ಡೇವಾಲ್ಡ್ ಬ್ರೇವಿಸ್ ಕೂಡ ಒಂದಿಷ್ಟು ರನ್ ಜೋಡಿಸಿದರು. ಕೊನೆ ಓವರ್‌ಗಳಲ್ಲಿ ದುಬೆ(32★) ಉತ್ತಮ ಫಿನಿಶ್ ಕೊಟ್ಟ ನಂತರ ಚೆನ್ನೈ 20 ಓವರ್‌ಗಳಲ್ಲಿ 187 ರನ್ ಗಳಿಸಿದೆ. ಲಖನೌ 5 ವಿಕೆಟ್ ಪಡೆಯಿತು.

ಆಕಾಶ್ ಸಿಂಗ್ ಮಿಂಚಿನಾಟ: ಟಾಸ್ ಸೋತ ಚೆನ್ನೈ ಬ್ಯಾಟಿಂಗ್‌ಗಿಳಿಯಿತು. ಸಂಜು ದೊಡ್ಡ ಇನ್ನಿಂಗ್ಸ್ ಎಚ್ಚರಿಕೆ ನೀಡಿದರು. ಆದರೆ ಇದೇ ಪಂದ್ಯದ ಮೂಲಕ ಐಪಿಎಲ್‌ಗೆ ಪದಾರ್ಪಣೆ ಮಾಡಿದ ಆಕಾಶ್ ಸಿಂಗ್ ಕಡಿವಾಣ ಹಾಕಿದರು. 9 ರನ್ ಗಳಿಸಿದ್ದ ರುತುರಾಜ್ ವಿಕೆಟ್ ಒಪ್ಪಿಸಿದ ನಂತರ ಪಂದ್ಯದ ತಿರುವು ಬದಲಾಯಿತು. ಮೊದಲ ಬಾರಿಗೆ ಆಕಾಶ್ ಬರೆದು ತಂದಿದ್ದ ಚೀಟಿ ತೋರಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಉರ್ವಿಲ್ ಪಟೇಲ್ ಸ್ಟ್ರೈಕ್ ಪಡೆದು ಸೆಟ್ ಆಗುವ ಮುನ್ನವೇ 20 ಬಾಲ್‌ಗಳಲ್ಲಿ 20 ರನ್ ಗಳಿಸಿದ್ದ ಸಂಜು ಸ್ಯಾಮ್ಸನ್ ಔಟಾದರು. ಆಗ



ಎರಡನೇ ಬಾರಿ ಚೀಟಿ ಪ್ರದರ್ಶಿಸಿದರು. ನಾಲ್ಕನೇ ಕ್ರಮಾಂಕದಲ್ಲಿ ಬಂದ ಕಾರ್ತಿಕ್ ಶರ್ಮ ಸೆಟ್ ಆಗುವತ್ತ ಸಾಗಿದರು. ಚೆನ್ನೈ ಪವರ್‌ಪ್ಲೇನಲ್ಲಿ 37 ರನ್ ಗಳಿಸಿತು. ಮಧ್ಯಮ ಓವರ್ ಆರಂಭದಲ್ಲೇ ಉರ್ವಿಲ್ ಒಂದು ಬೌಂಡರಿ ಬಾರಿಸಿ ವಿಕೆಟ್ ಒಪ್ಪಿಸಿದರು. ಆಕಾಶ್ ಸಿಂಗ್ ತಮ್ಮ ಸ್ಪೆಲ್ ಮುಗಿಸುವಷ್ಟರಲ್ಲಿ 3 ವಿಕೆಟ್ ಪಡೆದ ಆಕಾಶ್ ಮೂರು ಬಾರಿ ಬೇರೆ ಬೇರೆ ಚೀಟಿಗಳನ್ನು ತೋರಿಸಿದರು. ಚೆನ್ನೈ ಆಟ ನಿಧಾನಗೊಂಡಿತು. ನಾಲ್ಕನೇ ವಿಕೆಟ್‌ಗೆ ಒಂದಾದ ಬ್ರೇವಿಸ್ ಮತ್ತು ಕಾರ್ತಿಕ್ ಶರ್ಮ ಉತ್ತಮ ಬ್ಯಾಟಿಂಗ್ ಮಾಡಿದರು. ಒಂದಿಷ್ಟು ಓವರ್‌ಗಳವರೆಗೂ ನಿಧಾನ ಆಟವಾಡಿದ ಈ ಜೋಡಿ ಆಲ್ಲಲ್ಲಿ ಬೌಂಡರಿಗಳನ್ನೂ ಬಾರಿಸಿತು.

ಕಾರ್ತಿಕ್ ಅಬ್ಬರ

ಕಾರ್ತಿಕ್ ಶರ್ಮ ಒಂದು ಹಂತದಲ್ಲಿ 25 ಬಾಲ್‌ಗಳಲ್ಲಿ 25 ರನ್ ಗಳಿಸಿದ್ದರು. ಮಧ್ಯಮ ಓವರ್‌ಗಳ ಅಂತ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 35 ಬಾಲ್‌ಗಳಲ್ಲಿ 50 ರನ್ ಪೂರೈಸಿದ ಕಾರ್ತಿಕ್ ಆಟದ ಶೈಲಿ ಬದಲಾಯಿಸಿದರು. ಬ್ರೇವಿಸ್ 16 ಬಾಲ್‌ಗಳಲ್ಲಿ 25 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅತ್ತ ಕಾರ್ತಿಕ್ ಮುಂದಿನ 5 ಬಾಲ್‌ಗಳಲ್ಲಿ 70ರ ಗಡಿ ದಾಟಿದರು. ಒಟ್ಟು 42 ಬಾಲ್ ಎದುರಿಸಿದ ಕಾರ್ತಿಕ್ 6 ಬೌಂಡರಿ, 5ಸಿಕ್ಸರ್‌ನೊಂದಿಗೆ 71 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಮಧ್ಯಮ ಓವರ್‌ಗಳಲ್ಲಿ ಚೆನ್ನೈ 3 ವಿಕೆಟ್ ಕಳೆದುಕೊಂಡು 105 ರನ್ ಗಳಿಸಿತು. ಬಳಿಕ ಬಂದ ಶಿವಂ ದುಬೆ ಕೊನೆ ಓವರ್‌ವರೆಗೂ ಕಾಯ್ದು ಕೊನೆಯ ಓವರ್‌ನಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಪ್ರಶಾಂತ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಡೆತ್ ಓವರ್‌ನಲ್ಲಿ ಚೆನ್ನೈ 45 ರನ್ ಗಳಿಸಿತು. ದುಬೆ 32 ರನ್ ಗಳಿಸಿದರು.

ವಿಶ್ವಕಪ್ ಆಡಲು ಸಿದ್ಧ: ವಿರಾಟ್ ಕೊಹ್ಲಿ

ಹೊಸದಿಲ್ಲಿ: ನನ್ನ ಸಾಮರ್ಥ್ಯವನ್ನು ನಾನು ಸಾಬೀತುಪಡಿಸಲ್ಲ. ನನಗೆ ಕ್ರಿಕೆಟ್ ಆಡುವುದೆಂದರೆ ಇಷ್ಟ, ಅದಕ್ಕಾಗೇ ಆಡುತ್ತೇನೆ. ಮುಂದಿನ ವರ್ಷದ ವಿಶ್ವಕಪ್‌ಗಾಗಿ ನಾನು ಸಿದ್ಧ ಎಂದು ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ತಿಳಿಸಿದರು.

ವಿಶ್ವಕಪ್‌ನಲ್ಲಿ ರೋಹಿತ್ ಹಾಗೂ ವಿರಾಟ್ ಆಡಲಿದ್ದಾರಾ ಎಂಬ ಪ್ರಶ್ನೆ ಮೂಡುತ್ತಿರುವ ಮಧ್ಯೆ ಇತ್ತೀಚೆಗೆ ನಡೆದ ಸಂದರ್ಶನವೊಂದರಲ್ಲಿ ವಿರಾಟ್ ಕೊಹ್ಲಿ ಆಡುವ ಆಸೆ ಬಗ್ಗೆ ವ್ಯಕ್ತಪಡಿಸಿದ್ದಾರೆ. ನಾನು ತಂಡಕ್ಕೆ ಏನಾದರೂ ಕೊಡಬಹುದಾದರೆ ಅದಕ್ಕೆ ಸಿದ್ಧ. ವಿಶ್ವಕಪ್ ಆಡುವುದು ವಿಶೇಷ. ಇಲ್ಲಿಯವರೆಗೂ ಯಾವುದೇ ಮಾತಿಗು ತಲೆ ಕೆಡಿಸಿಕೊಳ್ಳದೆ, ಶ್ರಮಿಸಿದ್ದೇನೆ. ನಾನು ನನ್ನ ಪರಿಶ್ರಮದ ಮೇಲೆ ಭರವಸೆ ಇಟ್ಟಿದ್ದೇನೆ. ಪಂದ್ಯವಾಡುವ ಮುನ್ನವೂ ನಾನು ಶ್ರಮಿಸುತ್ತೇನೆ, ಪಂದ್ಯದ ವೇಳೆಯೂ ಶ್ರಮಿಸುತ್ತೇನೆ. ಆಟ ನನಗೆ ಎಲ್ಲವನ್ನೂ ಕೊಟ್ಟಿದೆ. ನನಗೆ ಆಡುವುದೆಂದರೆ ಇಷ್ಟ. ಅದಕ್ಕಾಗೇ ನಾನು ಮೈದಾನಕ್ಕೆ ಹೋಗುವ ಮುನ್ನವೇ ಅಪ್ರೋಚ್ ಮತ್ತು ಬೇಕಾದ ಮನಸ್ಥಿತಿಯೊಂದಿಗೆ ಹೋಗುತ್ತೇನೆ. ಯಾರಿಗೂ ಸಾಬೀತು ಮಾಡಲು ಹೋಗಲ್ಲ. ವಿಶ್ವಕಪ್ ವಿಚಾರದಲ್ಲಿ ನಾನು ದೇಶಕ್ಕಾಗಿ ಆಡಲು ಸಿದ್ಧನಿದ್ದೇನೆ ಎಂದಿದ್ದಾರೆ.

ತಿಲಕ್ ಆಟಕ್ಕೆ ಪಂಜಾಬ್ ತತ್ತರ



ಧರ್ಮಶಾಲಾ: ಮೊದಲಾರ್ಧ ಐಪಿಎಲ್‌ನಲ್ಲಿ ಆರು ಸತತ ಗೆಲುವು ಸಾಧಿಸಿದ್ದ ಪಂಜಾಬ್ ಕಿಂಗ್ಸ್ ದ್ವಿತಿಯಾರ್ಧದಲ್ಲಿ ಸತತ ಐದನೇ ಸೋಲು ಕಂಡಿದೆ. ತಿಲಕ್ ವರ್ಮಾ, ವಿಲ್ ಜ್ಯಾಕ್ಸ್ ಅವರ ಬ್ಯಾಟಿಂಗ್ ನೆರವಿನೊಂದಿಗೆ ಪಂಜಾಬ್ ನೀಡಿದ್ದ 201 ರನ್ ಗುರಿಯನ್ನು ಪೇರಿಸಿತು. ಇದರೊಂದಿಗೆ ಪಂಜಾಬ್ ಕಿಂಗ್ಸ್ ಪ್ಲೇಆಫ್ ವಿಚಾರದಲ್ಲಿ ಹಿಂದೆ ಬಿದ್ದರೆ, ಚೆನ್ನೈ ಹಾಗೂ ರಾಜಸ್ಥಾನ ತಂಡಗಳಿಗೆ ಲಾಭ ಸಿಕ್ಕಿದೆ.

ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 200 ರನ್ ಗಳಿಸಿತು. ಪ್ರಭಸಿಮ್ರನ್ (57; 32ಎ, 6ಬೌ, 4ಸಿ) ಭದ್ರ ಬುನಾದಿ ಹಾಕಿಕೊಟ್ಟರು. ಮಧ್ಯಮ ಕ್ರಮಾಂಕದಲ್ಲಿ ಅಜ್ಮತುಲ್ಲಾ ಓಮರ್‌ಝೈ(38; 17ಎ, 2 ಬೌ, 4ಸಿ) ಸ್ಕೋರ್ ಹಿಗ್ಗಿಸಿದರು. ಶಾರ್ದೂಲ್ ಠಾಕೂರ್(4–0–39–4), ದೀಪಕ್ ಚಾಹರ್(4–0–36–2) ಮತ್ತು ಬಾಷ್, ಬಾವಾ ತಲಾ 1ರಂತೆ ಮುಂಬೈ 8 ವಿಕೆಟ್ ಪಡೆಯಿತು. ಗುರಿ ಬೆನ್ನತ್ತಿದ ಮುಂಬೈ 19.5 ಓವರ್‌ಗಳಲ್ಲಿ 205 ರನ್ ಗಳಿಸಿತು. ರೋಹಿತ್ ಶರ್ಮ(25, ರಯಾನ್ (48; 28ಎ, 4ಬೌ, 4ಸಿ) ಭದ್ರ ಬುನಾದಿ ಹಾಕಿಕೊಟ್ಟರೆ, ಮಧ್ಯಮ ಕ್ರಮಾಂಕದಲ್ಲಿ ತಿಲಕ್ ವರ್ಮಾ(75★; 33ಎ, 6ಬೌ, 3ಸಿ) ಆಟದೊಂದಿಗೆ ಪಂದ್ಯ ಗೆಲ್ಲಿಸಿದರು. ಅವರಿಗೆ ವಿಲ್ ಜ್ಯಾಕ್ಸ್(25★, 10ಎ, 2ಬೌ, 2ಸಿ) ಸಾಥ್ ಕೊಟ್ಟರು. ಪಂಜಾಬ್ ಪರ ಓಮರ್‌ಝೈ(4–0–36–2), ಚಾಹಲ್ ಮತ್ತು ಯಾನ್ಸನ್ ತಲಾ ಒಂದು ಸೇರಿ ಪಂಜಾಬ್ 4 ವಿಕೆಟ್ ಪಡೆಯಿತು.

ಇಂದು ಗುಜರಾತ್ ಕೆಕೆಆರ್ ಪಂದ್ಯ

ಕೋಲ್ಕತ್ತಾ: ಅಳಿವು–ಉಳಿವು ಪಂದ್ಯದಲ್ಲಿ ಕೆಕೆಆರ್ ತಂಡವು ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ. ಬೆಂಗಳೂರು ವಿರುದ್ಧದ ಪಂದ್ಯದಲ್ಲಿ ಸೋತ ನಂತರ ಕೆಕೆಆರ್ ಗೆಲುವುಗಳ ಸರಪಳಿಗೆ ಬ್ರೇಕ್ ಬಿದ್ದಿದೆ. ಇತ್ತ ಗುಜರಾತ್ ಟೈಟಾನ್ಸ್ ಗೆಲುವಿನ ನಾಗಾಲೋಟದೊಂದಿಗೆ ಎರಡನೇ ಸ್ಥಾನದಲ್ಲಿದ್ದು, ಪ್ಲೇಆಫ್ ಬಹುತೇಕ ಖಚಿತವಾದಂತಿದೆ. ಈ ಪಂದ್ಯ ಗೆದ್ದರೆ



ಗುಜರಾತ್ ನಾಲ್ಕರಲ್ಲಿ ಖಚಿತವಾಗಲಿದ್ದು, ಮೊದಲೆರಡರ ಸ್ಥಾನ ಭದ್ರವಾಗಿರಲಿದೆ.

ಬ್ಯಾಟಿಂಗ್ ಬಲ ಹೊಂದಿರುವ ಗುಜರಾತ್ ಅತ್ಯುತ್ತಮ ಬೌಲಿಂಗ್ ದಾಳಿಯನ್ನೂ ಹೊಂದಿದೆ. ಇತ್ತ ಕೆಕೆಆರ್ ಪರ ಸುನಿಲ್ ನರೈನ್, ಕಾರ್ತಿಕ್ ತ್ಯಾಗಿ ಲಯದಲ್ಲಿದ್ದರೆ ಬ್ಯಾಟಿಂಗ್‌ನಲ್ಲಿ ಆಲೆನ್, ರಘುವಂಶಿ, ರಿಂಕು ಸಿಂಗ್ ಸೇರಿದಂತೆ ಪ್ರಮುಖ ಬ್ಯಾಟಿಗರು ಮಿಂಚಿದ್ದಾರೆ. ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ಪಂದ್ಯ ನಡೆಯಲಿದೆ. ಬ್ಯಾಟರ್‌ಗಳಿಗೆ ಅನುವು ಮಾಡಿಕೊಡುವ ಪಿಚ್‌ನಲ್ಲಿ ಮಿಂಚುವವರ್‍ಯಾರು ಎಂಬ ಪ್ರಶ್ನೆ ಎಲ್ಲರಲ್ಲೂ ಮೂಡಿದೆ. ಕೆಕೆಆರ್ ಸೋತರೆ ಹೊರಬೀಳಲಿದ್ದು, ಗುಜರಾತ್ ಸೋತರೆ ಹಿನ್ನಡೆ ಅನುಭವಿಸಲಿದೆ.

ಸಾತ್ವಿಕ್–ಚಿರಾಗ್ ಸೆಮಿಗೆ, ಪಿ.ವಿ ಸಿಂಧುಗೆ ಸೋಲು

ಬ್ಯಾಂಕಾಕ್: ಭಾರತದ ಅಗ್ರ ಜೋಡಿ, ಪಂದ್ಯಾವಳಿಯ ಪ್ರಮುಖ ಆಟಗಾರರಾದ ಸಾತ್ವಿಕ್ ಸಾಯಿ ರಾಜ್ ಮತ್ತು ಚಿರಾಗ್ ಶೆಟ್ಟಿ ಇಲ್ಲಿ ನಡೆಯು ತ್ತಿರುವ ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್ ಸೂಪರ್ 500 ಪಂದ್ಯಾವಳಿಯ ಸೆಮಿಫೈನಲ್‌ಗೆ ಪ್ರವೇಶಿಸಿದ್ದಾರೆ. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜಪಾನ್‌ನ ಟಾಕುಮಿ ನುಮೊರಾ ಮತ್ತು ಯೂಚಿ ಶಿಮೊಗಾಮಿ ಅವರೊಂದಿಗೆ ಗೆದ್ದರು.

ಶುಕ್ರವಾರ ನಡೆದ ಪಂದ್ಯದಲ್ಲಿ 21–12, 21–13ರಿಂದ ಗೆದ್ದ ಈ ಜೋಡಿ ಪದಕ ಗೆಲ್ಲುವ ನಿರೀಕ್ಷೆಯಲ್ಲಿದೆ. ಮೊದಲನೇ ಸೆಟ್‌ನಿಂದ ಹಿಡಿದು ಪಂದ್ಯ ಗೆಲ್ಲುವ ತನಕ ಪಂದ್ಯದಲ್ಲಿ ಬಿಗಿ ಹಿಡಿತ ಸಾಧಿಸಿತ್ತು. ಆದರೆ ಮತ್ತೊಂದು ಪಂದ್ಯದಲ್ಲಿ ಭಾರತದ ಶಟ್ಲರ್ ಪಿ.ವಿ ಸಿಂಧು ಸೋಲಿನೊಂದಿಗೆ ಅಭಿಯಾನ ಮುಗಿಸಿದರು. ಹಿಂದಿನ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಕ್ವಾರ್ಟರ್‌ಗೇರಿದ್ದ ಸಿಂಧು ಟಾಪ್ ಸೀಡ್‌ನ ಯಮಾಗುಚಿ ವಿರುದ್ಧ 21–19,



18–21, 15–21ರೊಂದಿಗೆ ಸೋತರು. ಮೊದಲಿನಿಂದಲೂ ಮುನ್ನಡೆ ಸಾಧಿಸಿದ್ದ ಸಿಂಧು ಮೊದಲನೇ ಸೆಟ್‌ನಲ್ಲಿ ಗೆದ್ದರೂ ಎರಡನೇ ಹಾಗೂ ಮೂರನೇ ಸೆಟ್‌ನಲ್ಲಿ ಸೋತು ಹಿನ್ನಡೆ ಅನುಭವಿಸಿದರು. ಆದಾಗ್ಯೂ ಥೈಲ್ಯಾಂಡ್ ಓಪನ್‌ನಲ್ಲಿ ವಿವಿಧ ಭಾರತೀಯ ಶಟ್ಲರ್‌ಗಳು ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಲಕ್ಷ್ಯ ಸೇನ್ ಕೂಡ ಕ್ವಾರ್ಟರ್‌ನಲ್ಲಿ ಶನಿವಾರದಂದು ಸೆಣಸಾಟ ನಡೆಸಲಿದ್ದಾರೆ.

ಸೂಪರ್ ಚೆಸ್: ಪ್ರಜ್ಞಾನಂದ ಪಂದ್ಯ ಡ್ರಾ

ಹೊಸದಿಲ್ಲಿ: ರೊಮೇನಿಯಾದ ಬುಖಾರೆಸ್ಟ್‌ನಲ್ಲಿ ನಡೆಯುತ್ತಿರುವ ಗ್ರ್ಯಾಂಡ್ ಚೆಸ್ ಟೂರ್‌ನ ಮೊದಲ ಕ್ಲಾಸಿಕಲ್ ಟೂರ್ನಿಯಾದ ಸೂಪರ್ ಚೆಸ್ ಕ್ಲಾಸಿಕ್‌ನಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೆಝಾ ಫಿರೋಜ್ಜಾ ವಿರುದ್ಧ ಡ್ರಾ ಸಾಧಿಸಿದರು.

ಆರಂಭದಲ್ಲಿ ಸಾಮಾನ್ಯ ಕ್ವೀನ್ಸ್ ಗ್ಯಾಂಬಿಟ್ ಡಿಕ್ಲೈನ್ಡ್ ಓಪನಿಂಗ್‌ನಿಂದ ನಿಧಾನವಾಗಿ ಸಾಗಿದ ಪಂದ್ಯ, ಬಳಿಕ ರೋಚಕ ತಿರುವು ಪಡೆದುಕೊಂಡಿತು. ಪಂದ್ಯ ಸುಲಭ ಡ್ರಾಗೆ ಸಾಗುವಂತೆ ಕಂಡಿತ್ತು. ಆದರೆ ಪ್ರಜ್ಞಾನಂದ ಅಲ್ಪ ಮುನ್ನಡೆ ಸಾಧಿಸಿದರು. ಇರಾನ್ ಮೂಲದ ಫ್ರೆಂಚ್ ಆಟಗಾರ ಫಿರೋಜ್ಜಾ ಮಧ್ಯಭಾಗದಲ್ಲಿ ಅತ್ಯುತ್ತಮ ಮೂವ್‌ಗಳ ಮೂಲಕ ಕಿಂಗ್ ಸೈಡ್ ಮೇಲೆ ಭಾರೀ ಒತ್ತಡ ತಂದರು.

35ನೇ ಚಲನೆಯಲ್ಲಾದ ತಪ್ಪಿನ ಬಳಿಕ ಪಂದ್ಯ ಸಮಬಲದ ರೂಕ್ ಮತ್ತು ಪಾನ್ ಅಂತ್ಯಕ್ಕೆ ತಲುಪಿತು. ಪ್ರಜ್ಞಾನಂದ ಒಂದು ಪಾನ್ ಹಿಂದೆ ಇದ್ದರೂ ನಂತರ ಡ್ರಾ ಅನಿವಾರ್ಯವಾಯಿತು. ದಿನದ ಅತಿ ದೀರ್ಘ ಪಂದ್ಯವಾಗಿದ್ದ ಇದು 60 ಚಲನೆಗಳವರೆಗೆ ನಡೆಯಿತು. ಕೊನೆಯಲ್ಲಿ ಡ್ರಾದಲ್ಲಿ ಪಂದ್ಯ ಅಂತ್ಯವಾಯಿತು.

ಇನ್ನೊಂದು ಪ್ರಮುಖ ಪಂದ್ಯದಲ್ಲಿ ಫ್ರಾನ್ಸ್‌ನ ಮ್ಯಾಕ್ಸಿಮ್ ವಶಿಯರ್–ಲಾಗ್ರಾವ್ ಮತ್ತು ನೆದರ್‌ಲ್ಯಾಂಡ್ಸ್‌ನ ಅನಿಶ್ ಗಿರಿ ಡ್ರಾ ಮಾಡಿಕೊಂಡರು. ಕ್ಯಾಟಲನ್ ಓಪನಿಂಗ್‌ನಿಂದ ಆರಂಭವಾದ ಪಂದ್ಯದಲ್ಲಿ ಗಿರಿ ಕೆಲ ಹಂತಗಳಲ್ಲಿ ಸ್ವಲ್ಪ ಮೇಲುಗೈ ಸಾಧಿಸಿದ್ದರೂ, ಅವರು ಸುರಕ್ಷಿತ ಆಟವನ್ನೇ ಆಯ್ಕೆ ಮಾಡಿಕೊಂಡು 32ನೇ ಚಲನೆಯ ಬಳಿಕ ಪುನರಾವರ್ತನೆಯ ಮೂಲಕ ಡ್ರಾ ಒಪ್ಪಿಕೊಂಡರು. ವಿಶ್ವ ಚಾಂಪಿಯನ್‌ಶಿಪ್ ಕಂಟೆಂಡರ್ ಜಾವೋಖಿರ್ ಸಿಂದಾರೋವ್ ಕಪ್ಪು ಗೂಟಗಳೊಂದಿಗೆ ರೊಮೇನಿಯಾದ ಡಿಯಾಕ್ ಬೋಗ್ದಾನ್–ಡೇನಿಯಲ್ ವಿರುದ್ಧ ಡ್ರಾ ಮಾಡಿಕೊಂಡರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ

1	■	2			3	■	4	
5			■	■		■		■
■	■		■	6				7
8			■	■		■	■	
	■	■	9	■		■	■	
	■	■		■	■	10		
11	12				■		■	■
■		■		■	■	13		14
15		■	16				■	

5985

ಎಡದಿಂದ ಬಲಕ್ಕೆ
2.ಟಾರು ಬಳಿದ ಜಲನಿರೋಧಕ ಬಟ್ಟೆ (4)
4.ಹೃದಯಕ್ಕೆ ಹತ್ತಿರವಿರುವ ಭಾವನೆ (2)
5.ನೀರಾಗಿ ಕಲೆಸಿದ ಮಣ್ಣು (3)
6.ಕಟ್ಟಡಕ್ಕೆ ಅಡಿಗಲ್ಲನ್ನಿಡುವ ಸಾಂಪ್ರದಾಯಿಕ ವಿಧಿ (5)
8.ಬೀಳುತ್ತಿರುವ ಸಣ್ಣ–ಸಣ್ಣ ನೀರ ಹನಿ (3)
10.ಕಳಚು–ಸಡಿಲಿಸು ಎಂಬರ್ಥದ ಶಬ್ದ (3)
11.ದೈವಿಕ ವಂಶದಲ್ಲಿ ಹುಟ್ಟಿದವರು (5)
13.ದೇಹರಹಿತನಾದ ಮಾರ ತಿರುಗಿದ್ದಾನೆ (3)
15.ತನ್ನ ವಸ್ತುಗಳನ್ನು ಇತರರಿಗೆ ನೀಡುವವನು (2)
16.ತಮಾಷೆಗೀಡಾಗುವ ವ್ಯಕ್ತಿ (4)

ಮೇಲಿನಿಂದ ಕೆಳಕ್ಕೆ
1.ಗಣಿತದಲ್ಲಿ ಸಂಖ್ಯೆಯ ತೋರಿಸುವ ಚಿಹ್ನೆ (2)
2.ವ್ಯವಸ್ಥೆ ತಪ್ಪಿ ಗೊಂದಲವಾಗುವುದು (4)
3.ಯಾವ ಕಡೆಗೂ ಸೇರದ ಸ್ಥಿತಿ ಎಂಬರ್ಥದ ನುಡಿಗಟ್ಟು (5)
4.ಪದದ ನಡುವೆ ಇರುವ ವ್ಯಾಪಾರಿ ತಲೆಕೆಳಗಾಗಿದ್ದಾನೆ (3)
7.ಜ್ಞಾಪಕಕ್ಕೆ ಬರುವಂತೆ ಮಾಡು (4)
8.ಪಾಳೆಗಾರ–ಮಾಂಡಲಿಕನೀತ (4)
9.ಕೈಯಿಂದ ಹೊಡೆದ ಚಪ್ಪಾಳೆ (5)
10.ಬಿಡಿ, ಅವನದು ತಡೆಯಿಲ್ಲದ ಮಾತು (4)
12.ನಿಶೆ–ರಾತ್ರಿ ಎಂಬರ್ಥದ ಶಬ್ದ (3)
14.ತಂದೆ ಅಥವಾ ತಾಯಿಯ ತಾಯಿ (2)

5984 ಉತ್ತರ

ಎಡದಿಂದ ಬಲಕ್ಕೆ:
1.ತ್ರಿಪಿಟಕ 4.ಕದಮ
5.ತುಂಬುದಿಂಗಳು
7.ಪ್ರಪಾತ 8.ಕಚ್ಚು
9.ದೀಕ್ಷೆ 12.ಪಾತಕ
13.ಕಲೋಪಾಸಕ
16.ಧನಿಯ 17.ಕೆಳಮನೆ

ಮೇಲಿನಿಂದ ಕೆಳಕ್ಕೆ:
1.ತ್ರಿಮರಾಂತಕ
2.ಕಡುಬು 3.ಬಡಗ
5.ತುಂಡು 6.ಕರುಣಾಳು
7.ಪ್ರಯಾಣಿಕ
10.ದೀಪಾರಾಧನೆ
11.ಮಿಕ 14.ಲೋಲಾಕು
15.ಸಲಿಕೆ

ಕಿರುಸುದ್ದಿ

ಸಚಿವೆ ಹೆಬ್ಬಾಳಕರ್ ಇಂದು ಉಡುಪಿಗೆ

ಉಡುಪಿ: ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಆರ್. ಹೆಬ್ಬಾಳಕರ್ ಅವರು ಮೇ 16 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಅಂದು ಬೆಳಗ್ಗೆ 9.30 ಕ್ಕೆ ಬ್ರಹ್ಮಗಿರಿಯ ಬಾಲ ಭವನದಲ್ಲಿ ವಿಶೇಷ ಮಕ್ಕಳಿಗಾಗಿ ಸಾಮರ್ಥ್ಯ ವನ ಪಾರ್ಕ್ ಶಂಕುಸ್ಥಾಪನೆ ಕಾರ್ಯಕ್ರಮ, 10 ಗಂಟೆಗೆ ನಗರದ ಮಣಿಪಾಲ ರಜತಾದ್ರಿಯಾ ಜಿಲ್ಲಾ ಪಂಚಾಯತ್ ಡಾ. ವಿ. ಎಸ್. ಆಚಾರ್ಯ ಸಭಾಂಗಣದಲ್ಲಿ ಹಕ್ಕು ಪತ್ರ ವಿತರಣೆ ಹಾಗೂ 2025–26 ನೆ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ, 11 ಗಂಟೆಗೆ ಜಿಲ್ಲಾ ತ್ರೈಮಾಸಿಕ ಕೆ. ಡಿ. ಪಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಂಜೆ 4 ಗಂಟೆಗೆ ಮಲ್ಪೆ ಕೊಡವೂರಿನ ಮಹಾತೋಬಾರ ಶ್ರೀ ಶಂಕರ ನಾರಾಯಣ ದೇವಸ್ಥಾನಕ್ಕೆ ಭೇಟಿ ನೀಡಿ ನಂತರ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

ಹಿಜಾಬ್: ತಪ್ಪಿಲ್ಲ ಎಂದ ಸಚಿವ

ಉಡುಪಿ: ಮೊದಲಿನಿಂದಲೂ ಮುಸ್ಲಿಂ ಹೆಣ್ಣು ಮಕ್ಕಳು ಹಿಜಾಬ್ ಧರಿಸುತ್ತಿದ್ದರು. ಹಿಂದುಗಳು ಕೂಡ ಜನಿವಾರ ಧರಿಸುತ್ತಾರೆ ಮತ್ತು ಕುಂಕುಮ ಇಟ್ಟುಕೊಳ್ಳುತ್ತಾರೆ. ಅದರಲ್ಲಿ ತಪ್ಪೇನು ಇಲ್ಲ. ನ್ಯಾಯಾಲಯದಲ್ಲಿ ಯಾವುದೇ ತಡೆಯಾಜ್ಞೆ ಇಲ್ಲ. ತಡೆಯಾಜ್ಞೆ ಇಲ್ಲದೆ ಇರುವುದರಿಂದ ನ್ಯಾಯಾಲಯ ದಲ್ಲಿ ತೀರ್ಪು ಬರಲು 10–20 ವರ್ಷವೂ ಆಗಬಹುದು ಎಂದು ರಾಜ್ಯ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗ ರೆಡ್ಡಿ ಹೇಳಿದ್ದಾರೆ. ಉಡುಪಿಯಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವರು, ದಾವಣಗೆರೆ ಮುಸ್ಲಿಂ ಮುನಿಸಿಗೂ ಈ ಆದೇಶಕ್ಕೂ ಸಂಬಂಧ ಇಲ್ಲ. ದಾವಣಗೆರೆಯಲ್ಲಿ ಮುಸ್ಲಿಮರು ನಮಗೆ ಮತ ಹಾಕಿದ್ದಾರೆ. ಸ್ವಲ್ಪ ಮತಗಳು ಎಸ್‌ಡಿಪಿಐಗೆ ಹೋಗಿವೆ. ಮುಸ್ಲಿಮರು ಈಗಲೂ ನಮಗೆ ಸಾಕಷ್ಟು ಮತ ಹಾಕಿದ್ದಾರೆ. ಯಾವ ಸಮಯಕ್ಕೆ ಏನು ನಿರ್ಧಾರ ತೆಗೆದುಕೊಳ್ಳಬೇಕು ಅದನ್ನು ಸರಕಾರ ತೆಗೆದುಕೊಂಡಿದೆ. ಸುಳ್ಳು ಹೇಳುವುದು, ಜನರನ್ನು ಎತ್ತಿ ಕಟ್ಟುವುದೇ ಬಿಜೆಪಿಯವರ ಕಾಯಕವಾಗಿದೆ ಎಂದರು.

ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನ

ಮಂಗಳೂರು: ಪ್ರಕರಣವೊಂದಕ್ಕೆ ಸಂಬಂಧಿಸಿ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಕಾಟಿಪಳ್ಳ ನಿವಾಸಿ ರೆಹಮತುಲ್ಲಾ (52) ಬಂಧಿತ ಆರೋಪಿ. ಸುರತ್ಕಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ದೊಂಬಿ ಪ್ರಕರಣವೊಂದರಲ್ಲಿ ನ್ಯಾಯಾಲಯದಿಂದ ಜಾಮೀನು ಪಡೆದಿದ್ದ ಈತ ಬಳಿಕ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಇದೀಗ ಆರೋಪಿಯನ್ನು ಬಂಧಿಸಲಾಗಿದ್ದು, ಆತನ ವಿರುದ್ಧ ಜಾಮೀನು ಷರತ್ತು ಉಲ್ಲಂಘನೆ ಪ್ರಕರಣ ದಾಖಲಿಸಲಾಗಿದೆ. 2008ರ ಡಿ.17ರಂದು ನ್ಯಾಯಾಲಯದಿಂದ ಷರತ್ತುಬದ್ಧ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದ. ಅನಂತರ 2009ರ ಮಾ.2ರಂದು ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ನ್ಯಾಯಾಲಯ ಆತನ ವಿರುದ್ಧ ದಸ್ತಗಿರಿ ವಾರಂಟ್ ಹೊರಡಿಸಿತ್ತು. ಹಲವು ಬಾರಿ ವಾರಂಟ್ ಹೊರಡಿಸಿದರೂ ನ್ಯಾಯಾಲಯಕ್ಕೆ ಹಾಜರಾಗದ ಹಿನ್ನೆಲೆಯಲ್ಲಿ ಪ್ರಕರಣವನ್ನು ಎಲ್.ಪಿ.ಸಿ.ಗೆ ಪರಿವರ್ತಿಸಲಾಗಿತ್ತು. ಏ.8ರಂದು ಖಚಿತ ಮಾಹಿತಿ ಮೇರೆಗೆ ಆತನನ್ನು ಕಾಟಿಪಳ್ಳ 2ನೇ ಬ್ಲಾಕ್ ನಲ್ಲಿ ಬಂಧಿಸಲಾಗಿತ್ತು. ವಿಚಾರಣೆ ವೇಳೆ ಆತ ವಿಚಾರಣೆಗೆ ಹಾಜರಾಗದೆ ತಲೆ ಮರೆಸಿಕೊಂಡಿರುವ ಬಗ್ಗೆ ಒಪ್ಪಿಕೊಂಡಿದ್ದ. ನ್ಯಾಯಾಲಯಕ್ಕೆ ಆತನನ್ನು ಹಾಜರುಪಡಿಸಿದ್ದು, ಪ್ರಸ್ತುತ ಜಾಮೀನಿನಲ್ಲಿದ್ದಾನೆ. ನ್ಯಾಯಾಲಯದ ಜಾಮೀನು ಷರತ್ತುಗಳನ್ನು ಉಲ್ಲಂಘಿಸಿರುವುದರಿಂದ ಆರೋಪಿತನ ವಿರುದ್ಧ ಸುರತ್ಕಲ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಕ್ರಿಕೆಟ್ ಬೆಟ್ಟಿಂಗ್ ಪ್ರಕರಣದ ಆರೋಪಿಯ ಗಡಿಪಾರು

ಉಡುಪಿ: ಕ್ರಿಕೆಟ್ ಬೆಟ್ಟಿಂಗ್ ಪ್ರಕರಣದ ಆರೋಪಿ ಬ್ರಹ್ಮಾವರ ಮೂಡುಬಿರ್ತಿ ನಿವಾಸಿ ಭರತ್ ಜಯರಾಮ್ ದಾಸ್ (34) ಎಂಬಾತನನ್ನು ವಿಶೇಷ ಕಾರ್ಯಾಂಗ ದಂಡಾಧಿಕಾರಿಯಾಗಿರುವ ಉಡುಪಿ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್ ಮೇ 14ರಂದು ಗಡಿಪಾರು ಆದೇಶ ಹೊರಡಿಸಿದ್ದಾರೆ. ಭರತ್ ದಾಸ್ ವಿರುದ್ಧ ಕೋಟ ಮತ್ತು ಕುಂದಾಪುರ ಪೊಲೀಸ್ ಠಾಣೆಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ನಡೆಸಿರುವ ಬಗ್ಗೆ 3 ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಒಂದು ಪ್ರಕರಣದಲ್ಲಿ ಶಿಕ್ಷೆಯಾಗಿದ್ದು, ಉಳಿದ 2 ಪ್ರಕರಣಗಳು ತನಿಖೆಯಲ್ಲಿವೆ. ಈತನನ್ನು ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯ ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ ಎಂದು ಎಸ್ಪಿ ಹರಿರಾಂ ಶಂಕರ್ ತಿಳಿಸಿದ್ದಾರೆ.

ಕೇರಳ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟ: ಕಾಸರಗೋಡು ಜಿಲ್ಲೆಯಲ್ಲಿ 1,193 ವಿದ್ಯಾರ್ಥಿಗಳು ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಗಳಿಕೆ

ಶೇಕಡಾ 99.47ರಷ್ಟು ಮಂದಿ ಉತ್ತೀರ್ಣ

ಕಾಸರಗೋಡು: 2025–26ನೇ ಶೈಕ್ಷಣಿಕ ವರ್ಷದ ಕೇರಳ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಲಾಗಿದ್ದು, ಕಾಸರಗೋಡು ಜಿಲ್ಲೆಯಲ್ಲಿ ಶೇಕಡಾ 99.47 ರಷ್ಟು ಫಲಿತಾಂಶ ದಾಖಲಾಗಿದೆ.

ಪರೀಕ್ಷೆ ಬರೆದ 20,527 ವಿದ್ಯಾರ್ಥಿಗಳಲ್ಲಿ 20,418 ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕೆ ಅರ್ಹತೆ ಪಡೆದಿದ್ದಾರೆ. 10,624 ಬಾಲಕರು ಮತ್ತು 9,903 ಬಾಲಕಿಯರಲ್ಲಿ 10,547 ಬಾಲಕರು ಮತ್ತು 9,871 ಬಾಲಕಿಯರು ಉನ್ನತ ಶಿಕ್ಷಣಕ್ಕೆ ಅರ್ಹರಾಗಿದ್ದಾರೆ. ಜಿಲ್ಲೆಯ 123 ಶಾಲೆಗಳು ಶೇಕಡಾ 100 ರಷ್ಟು ಉತ್ತೀರ್ಣ ಸಾಧಿಸಿವೆ. ಇದರಲ್ಲಿ 73 ಸರಕಾರಿ ಶಾಲೆಗಳು, 24 ಅನುದಾನಿತ ಶಾಲೆಗಳು ಮತ್ತು 26 ಅನುದಾನರಹಿತ ಶಾಲೆಗಳು ಸೇರಿವೆ.

1,193 ಮಂದಿ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಗಳಿಸಿದ್ದಾರೆ. ಇದರಲ್ಲಿ 385 ಬಾಲಕರು ಮತ್ತು 808 ಬಾಲಕಿಯರು ಒಳಗೊಂಡಿದ್ದಾರೆ. ಜಿಲ್ಲೆಯಲ್ಲಿ ಪರೀಕ್ಷೆ ಬರೆದ ಪರಿಶಿಷ್ಟ ಜಾತಿ ವಿಭಾಗಕ್ಕೆ ಸೇರಿದ 759 ವಿದ್ಯಾರ್ಥಿಗಳಲ್ಲಿ 754 ವಿದ್ಯಾರ್ಥಿಗಳು ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ 1095 ವಿದ್ಯಾರ್ಥಿಗಳಲ್ಲಿ 1089 ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಅರ್ಹತೆ ಗಳಿಸಿದ್ದಾರೆ.

ಕಾಸರಗೋಡು ಜಿಲ್ಲೆಯಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದಿರುವುದು ನಾಯನ್ಮಾರಮೂಲೆ ಟಿಐಎಚ್‌ಎಸ್‌ಎಸ್‌ನಲ್ಲಿ ಆಗಿದ್ದು, ಈ ಶಾಲೆಯಲ್ಲಿ ಪರೀಕ್ಷೆಗೆ ಹಾಜರಾದ 785 ವಿದ್ಯಾರ್ಥಿಗಳ ಪೈಕಿ 781 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಮೂಲಕ ಶೇಕಡಾ 99.49ರಷ್ಟು ಫಲಿತಾಂಶ ದಾಖಲಾಗಿದೆ. ಚಾಯೋತ್ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳು ಪಾಸಾಗಿದ್ದು, ಶೇಕಡಾ 100ರಷ್ಟು ಯಶಸ್ಸನ್ನು ಸಾಧಿಸಲಾಗಿದೆ. ಈ ಶಾಲೆಯಲ್ಲಿ 359 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಎಡನೀರು ಶಾಲೆಯಲ್ಲಿ ಅತಿ ಕಡಿಮೆ ಅಂದರೆ 25 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಕಾಸರಗೋಡು ಶೈಕ್ಷಣಿಕ ಉಪ ಜಿಲ್ಲೆಯಲ್ಲಿ ಒಟ್ಟು 11,398 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 81 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. ಪರೀಕ್ಷೆ ಬರೆದವರಲ್ಲಿ 5,951 ಬಾಲಕರು ಮತ್ತು 5,447 ಬಾಲಕಿಯರು ಸೇರಿದ್ದಾರೆ. ಕಾಞಂಗಾಡು ಉಪ ಜಿಲ್ಲೆಯಲ್ಲಿ ಒಟ್ಟು 9,129 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಇವರಲ್ಲಿ 4,664 ಬಾಲಕರು ಮತ್ತು 4,450 ಬಾಲಕಿಯರು ಒಳಗೊಂಡಿದ್ದಾರೆ.

ರಾಜ್ಯದಲ್ಲಿ 30,514 ಮಂದಿ ಪೂರ್ಣ ಎ ಪ್ಲಸ್

ಕೇರಳ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶವನ್ನು ಘೋಷಿಸಲಾಗಿದ್ದು, ರಾಜ್ಯದಲ್ಲಿ ಉತ್ತೀರ್ಣತೆಯ ಶೇಕಡಾವಾರು 99.07 ಆಗಿದೆ. ಪರೀಕ್ಷೆಗೆ ಹಾಜರಾದ 4,14,290 ಮಂದಿ ವಿದ್ಯಾರ್ಥಿಗಳ ಪೈಕಿ 4,10,456 ಮಂದಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಅರ್ಹತೆ ಪಡೆದಿದ್ದಾರೆ. 30,514 ಮಂದಿ ವಿದ್ಯಾರ್ಥಿಗಳು ಪೂರ್ಣ ಎ ಪ್ಲಸ್ ಗಳಿಸಿದ್ದಾರೆ. ಅದರಲ್ಲಿ 9,743 ಮಂದಿ ಹುಡುಗರು ಮತ್ತು 20,771 ಹುಡುಗಿಯರು ಸೇರಿದ್ದಾರೆ. ಇನ್ನೊಂದೆಡೆ ಕಳೆದ ಬಾರಿಗಿಂತ ಪೂರ್ಣ ಎ ಪ್ಲಸ್ ಪಡೆದವರ ಸಂಖ್ಯೆಯಲ್ಲಿ ಗಮನಾರ್ಹ ಇಳಿಕೆಯಾಗಿದೆ. ಕಳೆದ ಬಾರಿ 61,449 ಮಂದಿ ವಿದ್ಯಾರ್ಥಿಗಳು ಎ ಪ್ಲಸ್ ಗಳಿಸಿದ್ದರು.

ಕೇರಳದ ವಿವಿಧ ಜಿಲ್ಲೆಗಳಲ್ಲಾಗಿ 767 ಸರಕಾರಿ ಶಾಲೆಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡಾ 100 ರಷ್ಟು ಸಾಧನೆ ಮಾಡಿವೆ. ಎಸ್‌ಎಸ್‌ಎಲ್‌ಸಿ ಫಲಿತಾಂಶವು ಈ ವರ್ಷದ 10ನೇ ತರಗತಿಯ ಬೋರ್ಡ್ ಫಲಿತಾಂಶದಲ್ಲಿ ರಾಜ್ಯದಾದ್ಯಂತ ಅತ್ಯುತ್ತಮ ಕಾರ್ಯಕ್ಷಮತೆಯನ್ನು ಎತ್ತಿ ತೋರಿಸುತ್ತದೆ. ಕೇರಳದಲ್ಲಿ ಒಟ್ಟು 2,105 ಶಾಲೆಗಳು ಶೇಕಡಾ 100 ರಷ್ಟು ಯಶಸ್ಸು ಸಾಧಿಸಿವೆ.

ಮಲಪ್ಪುರ ಜಿಲ್ಲೆಯ ಎಡರಿಕೋಡ್ ಪಿಕೆಎಂಎಚ್‌ಎಸ್‌ಎಸ್‌ನಲ್ಲಿ ಅತೀ ಹೆಚ್ಚು ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಈ ಶಾಲೆಯಲ್ಲಿ 2,030 ಮಂದಿ ಪರೀಕ್ಷೆ ಬರೆದಿದ್ದು, ಅವರಲ್ಲಿ 2,026 ಮಂದಿ ಉತ್ತೀರ್ಣರಾಗಿದ್ದಾರೆ. ಕೊಲ್ಲಂ ಜಿಲ್ಲೆಯು ಅತ್ಯಧಿಕ ಎ ಪ್ಲಸ್ ಪಡೆದ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಪೈಕಿ ಶೇಕಡಾ 11.60ರಷ್ಟು ವಿದ್ಯಾರ್ಥಿಗಳು ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ದಾಖಲಿಸಿದ್ದಾರೆ. ಈ ಮೂಲಕ ಕೊಲ್ಲಂ ಜಿಲ್ಲೆಯು 10ನೇ ತರಗತಿಯ ಫಲಿತಾಶದಲ್ಲಿ ಅತೀ ಹೆಚ್ಚು ಎ ಪ್ಲಸ್ ದಾಖಲಿಸಿದ ಜಿಲ್ಲೆಗಳಲ್ಲಿ ಪ್ರಥಮ ಸ್ಥಾನದಲ್ಲಿದೆ.

ಇತಿಹಾಸದಲ್ಲಿ ಮೊದಲ ಬಾರಿಗೆ ಪರೀಕ್ಷಾ ಮಂಡಳಿಯು ಫಲಿತಾಂಶಗಳನ್ನು ಘೋಷಿಸಿದೆ. ಈ ವರ್ಷ ಕೇರಳ, ಲಕ್ಷದ್ವೀಪ ಮತ್ತು ಗಲ್ಫ್ ಪ್ರದೇಶಗಳಲ್ಲಾಗಿ ಸಾವಿರಾರು ಕೇಂದ್ರಗಳಲ್ಲಿ ಸುಮಾರು 4.17 ಲಕ್ಷ ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಮಾರ್ಚ್ 5ರಿಂದ 30 ತನಕ ನಡೆದಿತ್ತು. ಪ್ಲಸ್ ವನ್ ಮತ್ತು ಇತರ ಉನ್ನತ ಮಟ್ಟದ ಕೋರ್ಸ್‌ಗಳಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಪ್ರಮುಖ ಆಧಾರವಾಗಿದೆ.

ನೀರ್ಚಾಲು ಶಾಲೆಗೆ ಶೇಕಡಾ 100 ಫಲಿತಾಂಶ: 12 ಮಂದಿಗೆ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್



ಬದಿಯಡ್ಕ: 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಪ್ರಕಟವಾಗಿದೆ. ನೀರ್ಚಾಲು ಮಹಾಜನ ಸಂಸ್ಕೃತ ಕಾಲೇಜು ಹೈಯರ್ ಸೆಕೆಂಡರಿ ಶಾಲೆಯಲ್ಲಿ 184 ಮಂದಿ ಪರೀಕ್ಷೆ ಬರೆದಿದ್ದು ಎಲ್ಲರೂ ಮುಂದಿನ ಹಂತಕ್ಕೆ ತೇರ್ಗಡೆ ಹೊಂದಿ ಶಾಲೆಗೆ ಶೇಕಡಾ 100 ರಷ್ಟು ಫಲಿತಾಂಶವನ್ನು ತಂದಿದ್ದಾರೆ. ಪ್ರಸ್ತುತ ಶಾಲೆಯಲ್ಲಿ 12 ಮಂದಿ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಗ್ರೇಡ್ ಪಡೆದಿದ್ದಾರೆ. ಈ ಶಾಲೆಯ ಅನಘ ಲಕ್ಷ್ಮಿ, ಅನನ್ಯ ಜಿ.ಭಟ್ ಕೆ., ಅಂಜನಾ ಎಸ್.ಆರ್., ಅವನಿ ಶೆಟ್ಟಿ, ಭೂಮಿಕಾ, ಜೆನಿಶ ಕ್ರಾಸ್ತಾ, ಪೂರ್ವಿ ಜೋಶಿ, ಸಾಹಿತ್ಯ ವಿ.ರೈ, ಶ್ರದ್ಧಾ ಕೆ.ಪಿ., ತಿಶಾ, ತೃಷಾ ಜಿ.ಆರ್., ತೃಷಾ ದಾಸ್ ಈ ಸಾಧನೆಗೈದಿದ್ದಾರೆ.

ಗ್ರಾಮೀಣ ಭಾಗದಲ್ಲಿ ಸರಕಾರಿ ಬಸ್ಸೇ ಇಲ್ಲ !

ಕೇರಳದಲ್ಲಿ ಉಚಿತ ಪ್ರಯಾಣ

ಕಾಸರಗೋಡು: ಕೇರಳದ ಎಲ್ಲಾ ಜಿಲ್ಲೆಗಳಲ್ಲಿ ಮಹಿಳೆಯರಿಗೆ ಉಚಿತ ಅಥವಾ ರಿಯಾಯಿತಿ ಬಸ್ ಪ್ರಯಾಣ ಯೋಜನೆಗಳು ಜಾರಿಗೆ ಬರುತ್ತಿರುವ ಸಂದರ್ಭದಲ್ಲಿ ಕಾಸರಗೋಡು ಜಿಲ್ಲೆಯ ಮಂಜೇಶ್ವರ, ಕಾಸರಗೋಡು ಸಹಿತ ವಿವಿಧ ತಾಲೂಕುಗಳ ಅನೇಕ ಗ್ರಾಮೀಣ ಪ್ರದೇಶಗಳ ಮಹಿಳೆಯರು ಈ ಸೌಲಭ್ಯದಿಂದ ವಂಚಿತರಾಗಲಿದ್ದಾರೆ. ಯಾಕೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳ ಓಡಾಟವೇ ಇಲ್ಲ.

ಕೇರಳದಲ್ಲಿ ಮಹಿಳೆಯರಿಗೆ ಉಚಿತ ಕೆಎಸ್‌ಆರ್‌ಟಿಸಿ ಪ್ರಯಾಣ ಸೌಲಭ್ಯ ಘೋಷಿಸಲಾದರೂ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಮಾತ್ರ ಕೆಎಸ್‌ಆರ್‌ಟಿಸಿ ಬಸ್‌ಗಳ ಓಡಾಟವಿದೆ. ಗ್ರಾಮೀಣ ರಸ್ತೆಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸೇವೆ ಇಲ್ಲದ ಕಾರಣ ಗ್ರಾಮೀಣ ಭಾಗದ ಮಹಿಳೆಯರು ಈ ಸೌಲಭ್ಯದಿಂದ ವಂಚಿತರಾಗಲಿದ್ದಾರೆ.

ಉಪ್ಪಳ, ಬಾಯಾರು, ಬೆರಿಪದವು, ಕುರುಡಪದವು ಮೊದಲಾದ ಮಾರ್ಗಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸೇವೆಯೇ ಇಲ್ಲದಿರುವುದು ಗ್ರಾಮೀಣ ಭಾಗದ ಜನರ ಪ್ರಮುಖ ಸಮಸ್ಯೆಯಾಗಿದೆ. ಅದೇ ರೀತಿ ಪೆರ್ಲ – ಕುಂಬಳೆ, ಮುಳ್ಳೇರಿಯ – ಕುಂಬಳೆ, ಬಂದ್ಯೋಡು – ಧರ್ಮತ್ತಡ್ಕ, ಹೊಸಂಗಡಿ – ಆನೆಕಲ್ಲು, ಹೊಸಂಗಡಿ – ಮೀಯಪದವು, ಮುಡಿಪು – ಕಾಸರಗೋಡು ಮೊದಲಾದ ರೂಟಗಳಲ್ಲಿಯೂ ಕೇರಳ ಸರಕಾರಿ ಬಸ್ ಸೇವೆಗಳ ಸೌಲಭ್ಯ ಇಲ್ಲ.



ಮಂಜೇಶ್ವರ, ಬಾಯಾರು, ಪೆರ್ಲ, ಪೈವಳಿಕೆ, ಕುಂಬಳೆ, ಎಣ್ಮಕಜೆ, ಬೆರಿಪದವು, ಮುಳ್ಳೇರಿಯ ಸೇರಿದಂತೆ ಹಲವು ಗ್ರಾಮೀಣ ಪ್ರದೇಶಗಳ ಜನರು ಸರಿಯಾದ ಸಾರ್ವಜನಿಕ ಸಾರಿಗೆ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಘೋಷಿಸಲಾದ ಉಚಿತ ಪ್ರಯಾಣ ಯೋಜನೆಯ ಪ್ರಯೋಜನ ಗ್ರಾಮೀಣ ಭಾಗದ ಜನರಿಗೆ ಸಮರ್ಪಕವಾಗಿ ದೊರಕದು.

» ರಾಜ್ಯ ಸರಕಾರ ತುರ್ತು ಕ್ರಮ ಕೈಗೊಳ್ಳಬೇಕೆಂಬ ಆಗ್ರಹ

ಬಸ್ ಸೌಲಭ್ಯಗಳ ಕೊರತೆಯಿಂದ ಮಹಿಳೆಯರು ಖಾಸಗಿ ಬಸ್‌ಗಳು ಅಥವಾ ದುಬಾರಿ ವಾಹನಗಳನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ವಿದ್ಯಾರ್ಥಿನಿಯರು, ಉದ್ಯೋಗಿಗಳು ಹಾಗೂ ಹಿರಿಯ ಮಹಿಳೆಯರು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ. ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈ ನಿಟ್ಟಿನಲ್ಲಿ ಗಮನ ಹರಿಸಬೇಕು. ಹೊಸ ಮಾರ್ಗಗಳಿಗೆ ಅನುಮತಿ ನೀಡಬೇಕು ಹಾಗೂ ಮಹಿಳೆಯರಿಗೆ ಘೋಷಿಸಲಾದ ಉಚಿತ ಪ್ರಯಾಣ ಯೋಜನೆ ನಿಜವಾದ ಅರ್ಥದಲ್ಲಿ ಗ್ರಾಮೀಣ ಭಾಗಕ್ಕೂ ತಲುಪುವಂತೆ ರಾಜ್ಯ ಸರಕಾರವು ತುರ್ತು ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ವ್ಯಾಪಕಗೊಂಡಿದೆ.

ಮೂಡುಬಿದಿರೆ ತಾಲೂಕಿನಲ್ಲಿ ಮಳೆ ಹಾನಿ



ಮೂಡುಬಿದಿರೆ: ತಾಲೂಕಿನ ನೆಲ್ಲಿಕಾರು ಮತ್ತು ಮಾಂಟ್ರಾಡಿ ಗ್ರಾಮಗಳಲ್ಲಿ ಬೀಸಿದ ಭಾರೀ ಗಾಳಿ ಮಳೆಗೆ ಎರಡು ಮನೆಗಳು ಜಖಂಗೊಂಡಿದ್ದು, ಎಂಟಕ್ಕೂ ಅಧಿಕ ಮರಗಳು ಧರೆಗುರುಳಿವೆ. ಮಾಂಟ್ರಾಡಿ ಗ್ರಾಮದ ಕೊಟ್ಟಿಬೆಟ್ಟು ನಿವಾಸಿ ವಿಜಯ ಎಂಬವರ ಮನೆಯ ಮೇಲ್ಛಾವಣಿಯ ಶೀಟ್ ಗಾಳಿಗೆ ಹಾರಿಹೋಗಿದ್ದು, ಮನೆಯ ಭಾಗಶಃ ಹಾನಿಯಾಗಿದೆ. ನೆಲ್ಲಿಕಾರು ಗ್ರಾಮದ ಅನ್ನು ಕೊರಗ ಅವರ ಮನೆಯ ಮೇಲೆ ಮರ ಬಿದ್ದ ಪರಿಣಾಮ ಮನೆ ಹಾಗೂ ಶೌಚಾಲಯ ಜಖಂಗೊಂಡಿದೆ.

ಬೋರುಗುಡ್ಡೆ ಬಳಿಯ ಪಿಡಬ್ಲ್ಯೂಡಿ ರಸ್ತೆಗೆ ಬೃಹತ್ ಬೋಗಿ ಮರ ಬಿದ್ದು ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಪಂಚಾಯತ್ ಕಚೇರಿ ಬಳಿಯ ನೆಡು ತೋಪು ಏಳು ಅಕೇಶಿಯ ಮರಗಳು ಬುಡಮೇಲಾಗಿವೆ.

ವಾಲ್ಪಾಡಿ ಗ್ರಾಮದಲ್ಲಿ ಗಾಳಿ ಮಳೆಯ ಅಬ್ಬರಕ್ಕೆ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಮನೆ ಹಾಗೂ ಕೃಷಿ ಭೂಮಿಗೆ ಹಾನಿಯಾದ ಘಟನೆ ಸಂಭವಿಸಿದೆ. ಶೇಖರ ಪೂಜಾರಿ ಪತ್ನಿ ಸುಂದರಿ ವಾಸವಿರುವ ಮನೆಗೆ ಮರ ಬಿದ್ದ ಪರಿಣಾಮ ಸುಂದರಿ ಗಾಯಗೊಂಡಿದ್ದಾರೆ. ಇದೇ ಗ್ರಾಮದ ರಾಜು ಎಂಬವರ ಮನೆಗೂ ಹಾನಿಯಾಗಿದ್ದು, ವಿದ್ಯುತ್ ಕಂಬಗಳು ತುಂಡಾಗಿ ಬಿದ್ದಿವೆ. ಮಳೆಯ ಆರ್ಭಟಕ್ಕೆ ಕೃಷಿ ತೋಟಗಳಿಗೂ ವ್ಯಾಪಕ ನಷ್ಟ ಉಂಟಾಗಿದೆ.

ಮೇ 17–18ರಂದು ಕದ್ರಿ ಉದ್ಯಾನವನದಲ್ಲಿ

ರಾಜ್ಯ ಮಟ್ಟದ ಗೇರು ಮೇಳ-ಕಾರ್ಯಾಗಾರ

ಮಂಗಳೂರು: ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಮತ್ತು ಅರಣ್ಯ ಇಲಾಖೆಯ ವತಿಯಿಂದ ಮೇ 17 ಮತ್ತು 18ರಂದು ಮಂಗಳೂರಿನ ಕದ್ರಿ ಉದ್ಯಾನವನದಲ್ಲಿ ರಾಜ್ಯಮಟ್ಟದ ಗೇರು ಮೇಳ ಮತ್ತು ಗೇರು ಕೃಷಿ ಕುರಿತು ಕಾರ್ಯಾಗಾರ ಆಯೋಜಿಸಲಾಗಿದೆ.



ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ನಿಗಮದ ಅಧ್ಯಕ್ಷೆ ಮಮತಾ ಡಿ.ಎಸ್. ಗಟ್ಟಿ, ಮೇ 17ರಂದು ಪೂರ್ವಾಹ್ನ 11 ಗಂಟೆಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ್ ಬಿ ಖಂಡ್ರೆ ಉದ್ಘಾಟನೆ ನೇರವೇರಿಸುವರು. ವಿಧಾನ ಸಭಾ ಅಧ್ಯಕ್ಷ ಯು.ಟಿ.ಖಾದರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಸೇರಿದಂತೆ ಹಲವು ಮಂದಿ ಗಣ್ಯರು ಪಾಲ್ಗೊಳ್ಳುವರು. ಶಾಸಕ ಡಿ. ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸುವರು ಎಂದರು.

ರೈತರ ಉತ್ಪನ್ನಗಳಿಗೆ ನೇರ ಮಾರುಕಟ್ಟೆ ಕಲ್ಪಿಸುವ ಉದ್ದೇಶದಿಂದ ಗೇರು ಉತ್ಪನಗಳ ಮಾರಾಟ ಮತ್ತು ಪ್ರದರ್ಶನಕ್ಕೆ ಉಚಿತ ಅವಕಾಶ ಕಲ್ಪಿಸಲಾಗಿದೆ. 70ಕ್ಕೂ ಅಧಿಕ ಮಳಿಗೆಗಳಿಗೆ ಉಚಿತ ಅವಕಾಶ ಕಲ್ಪಿಸಲಾಗಿದೆ. ಮೇಳದಲ್ಲಿ ತಜ್ಞರಿಂದ ಗೋಡಂಬಿ ಕೃಷಿಯ ಬಗ್ಗೆ ತಾಂತ್ರಿಕ ಕಾರ್ಯಾಗಾರ ನಡೆಯಲಿದೆ. ಅಲ್ಲದೆ ಗೇರು ಬೆಳೆ ಸಾಧಕರಿಗೆ ಸನ್ಮಾನ ನಡೆಯಲಿದೆ ಎಂದು ಅವರು ವಿವರ ನೀಡಿದರು.

ಅಲ್ಲದೆ ಗೇರು ಮತ್ತು ಪರಿಸರ ಜಾಗೃತಿ ಸ್ಪರ್ಧೆಗಳು ನಡೆಯಲಿವೆ. ವಿದ್ಯಾರ್ಥಿಗಳಿಗಾಗಿ ಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಗೇರುಮೇಳದ ವಿಶೇಷ ಆಕರ್ಷಣೆಯಾಗಿ ಮೇ.17ರಂದು ಬೆಳಿಗ್ಗೆ ಕದ್ರಿ ಪಾರ್ಕ್‌ನ ಜಿಂಕೆ ಉದ್ಯಾನವನದಲ್ಲಿ ಬೆಳಿಗ್ಗೆ 9 ಗಂಟೆಗೆ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ, ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ನಡೆಯಲಿದೆ. ಸ್ಥಳದಲ್ಲಿಯೇ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ.

ಸಂಜೆ 7 ಗಂಟೆಗೆ ದೇವದಾಸ್ ಕಾಪಿಕಾಡ್ ತಂಡದವರಿಂದ ತುಳು ನಾಟಕ ಪ್ರದರ್ಶನ ಗೊಳ್ಳಲಿದೆ ಹಾಗೂ ಇಂಚರ ಮೆಲೋಡೀಸ್ ತಂಡದಿಂದ ಮೇ 18ರಂದು 2 ಗಂಟೆಗೆ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಈ ಗೇರು ಮೇಳದಲ್ಲಿ ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ ಎಂದು ಮಮತಾ ಗಟ್ಟಿ ಮಾಹಿತಿ ನೀಡಿದರು.

ಪೊಲೀಸರ ಮನೆಗೇ ನುಗ್ಗಿ ನಗ-ನಗದು ಕಳವು

ಉಪ್ಪಿನಂಗಡಿ: ಪದ್ಮುಂಜ ಇಲ್ಲಿಯ ಗಾಡಕೋಡಿ ಎಂಬಲ್ಲಿಯ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ ಹೆಡ್‌ಕಾನ್‌ಸ್ಟೇಬಲ್ ಕರುಣಾಕರ ಗೌಡ ಎಂಬವರ ಮನೆಗೆ ಕಳ್ಳರು ನುಗ್ಗಿ ರೂ.15.80 ಲಕ್ಷ ಮೌಲ್ಯದ ನಗ ನಗದನ್ನು ಕದ್ದೊಯ್ದ ಘಟನೆ ಮೇ 14ರ ರಾತ್ರಿ ಘಟಿಸಿದೆ.



ಹಾಸನ ಜಿಲ್ಲೆಯ ರಾಜ್ಯ ಮೀಸಲು ಪೊಲೀಸ್ ಪಡೆಯಲ್ಲಿ ಗುಪ್ತವಾರ್ತೆ ಸಂಗ್ರಹದ ಕಾರ್ಯ ನಿರ್ವಹಿಸುತ್ತಿರುವ ಕರುಣಕಾರ ಗೌಡ ಪದ್ಮುಂಜ ಗ್ರಾಮದ ತನ್ನ ಮೂಲ ಮನೆಯಲ್ಲಿ ಒಬ್ಬರೇ ಇದ್ದು, ಪತ್ನಿ ಉದ್ಯೋಗ ನಿಮಿತ್ತ ಬೇರೆ ಊರಿನಲ್ಲಿರುವುದರಿಂದ ಮಕ್ಕಳು ಅವರ ಜೊತೆಗಿದ್ದಾರೆ. ಮನೆಯಲ್ಲಿ ಪತ್ನಿ ತನ್ನ ಕೊಠಡಿಯಲ್ಲಿ ಚಿನಾಭರಣವನ್ನು ಕಪಾಟಿನಲ್ಲಿರಿಸಿ ಅದಕ್ಕೆ ಬೀಗ ಹಾಕಿ ಬೀಗದ ಕೀಯನ್ನು ತನ್ನೊಂದಿಗೆ ಕೊಂಡೊಯ್ದಿದ್ದಾರೆ. ಗುರುವಾರ ರಾತ್ರಿ ಮನೆಯಲ್ಲಿ ಒಂಟಿಯಾಗಿದ್ದ ಕರುಣಾಕರ ಗೌಡ ಅವರು ಐಪಿಎಲ್ ಪಂದ್ಯಾಟವನ್ನು ವೀಕ್ಷಿಸಿ ಮಲಗಿದ್ದ ವರು ಬೆಳಗ್ಗೆ ಎದ್ದಾಗ ಪತ್ನಿಯ ಕೋಣೆಯ ಬೀಗ ಒಡೆದಿರುವುದು ಕಂಡು ಬಂದಿದೆ. ಪರಿಶೀಲಿಸಿದಾಗ ಕೋಣೆಯೊಳಗಿದ್ದ ಕಪಾಟಿನ ಬೀಗ ಮುರಿದು ಕಪಾಟಿನೊಳಗಿದ್ದ ರೂ.14 ಲಕ್ಷ ಮೌಲ್ಯದ 12.50 ಪವನ್ ತೂಕದ ಚಿನ್ನಾಭರಣಗಳನ್ನು, ರೂ.80 ಸಾವಿರ ಮೌಲ್ಯದ ವಜ್ರದ ಆಭರಣ ಹಾಗೂ ರೂ.1 ಲಕ್ಷ ನಗದು ಹಣವನ್ನು ಕದ್ದೊಯ್ದಿರುವುದು ಕಂಡು ಬಂದಿತ್ತು.

ಪೊಲೀಸ್ ಸಿಬ್ಬಂದಿಯೋರ್ವರು ಮನೆಯಲ್ಲಿ ಮಲಗಿದ್ದ ವೇಳೆಯೇ ಮನೆಯೊಳಗಿಂದ ಬೀಗ ಮುರಿದು ಕಳವು ನಡೆದಿರುವುದು ಆಶ್ಚರ್ಯಕರವೆನಿಸಿದೆ.

ಘಟನಾ ಸ್ಥಳಕ್ಕೆ ಶ್ವಾನ ದಳ, ಬೆರಳಚ್ಚು ತಜ್ಞರು ಭೇಟಿ ನೀಡಿ ತಪಾಸಣೆ ನಡೆಸಿದ್ದಾರೆ. ಸ್ಥಳಕ್ಕೆ ಬೆಳ್ತಂಗಡಿ ಉಪ ವಿಭಾಗಾಧಿಕಾರಿ ರೋಹಿಣಿ, ಠಾಣಾಧಿಕಾರಿ ಕೌಶಿಕ್ ಬಿ.ಸಿ., ಬೆಳ್ತಂಗಡಿ ವೃತ್ತ ನಿರೀಕ್ಷಕ ರವಿ ಬಿ.ಎಸ್. ಅವರು ಸ್ಥಳಕ್ಕೆ ಭೇಟಿ ತನಿಖೆ ನಡೆಸುತ್ತಿದ್ದಾರೆ.

ಉಳ್ಳಾಲದಲ್ಲಿ ಫಿಶ್ ಮೀಲ್ ಕ್ಯಾಂಟರ್ ಆಟಾಟೋಪ | ಕಠಿಣ ಕ್ರಮಕ್ಕೆ ಪೊಲೀಸ್ ಅಧಿಕಾರಿಗಳಿಗೆ ಸ್ಪೀಕರ್ ಸೂಚನೆ

ರಸ್ತೆಯುದ್ಧಕ್ಕೂ ಆಯಿಲ್ ಸೋರಿಕೆ: ಜಾರಿ ಬಿದ್ದ ಸವಾರರು; ಪ್ರತಿಭಟನೆ

ಉಳ್ಳಾಲ: ಉಳ್ಳಾಲ ಕೋಟೆಪುರದ ಫಿಶ್ ಮೀಲ್ ಫ್ಯಾಕ್ಟರಿಯಿಂದ ಮೀನಿನ ಎಣ್ಣೆಯನ್ನು ಹೊತ್ತೊಯ್ಯುತ್ತಿದ್ದ ಕ್ಯಾಂಟರ್‌ನಿಂದ ತಾಂತ್ರಿಕ ದೋಷದಿಂದ ಭಾರೀ ಪ್ರಮಾಣದ ಮೀನಿನ ಎಣ್ಣೆಯು ಉಳ್ಳಾಲದ ರಾಜ ರಸ್ತೆಯಲ್ಲೇ ಸೋರಿಕೆಯಾದ ಪರಿಣಾಮ ದ್ವಿಚಕ್ರ ವಾಹನ ಸವಾರರು ಜಾರಿ ಬಿದ್ದು ಗಾಯಗೊಂಡಿದ್ದು, ಉದ್ರಿಕ್ತ ಸ್ಥಳೀಯರು ಮೀನಿನ ಕ್ಯಾಂಟರನ್ನು ತಡೆದು ಪ್ರತಿಭಟನೆ ನಡೆಸಿದ ಘಟನೆ ಗುರುವಾರ ರಾತ್ರಿ ಉಳ್ಳಾಲಬೈಲಿನಲ್ಲಿ ನಡೆದಿದೆ.

ಉಳ್ಳಾಲ ಕೋಟೆಪುರದಲ್ಲಿ ನಾಯಿಕೊಡೆಗಳಂತೆ ಫಿಶ್ ಮೀಲ್ ಫ್ಯಾಕ್ಟರಿಗಳು ತಲೆ ಎತ್ತಿದ್ದು ಉಳ್ಳಾಲ ನಗರವನ್ನು ಅನಧಿಕೃತ ಕೈಗಾರಿಕಾ ಪ್ರದೇಶವನ್ನಾಗಿಸಿದೆ. ಗುರುವಾರ ರಾತ್ರಿ ಕೋಟೆಪುರದಿಂದ ಮಂಗಳೂರು ಬಂದರಿಗೆ ಫಿಶ್ ಮೀಲ್ ಆಯಿಲನ್ನು ಹೊತ್ತೊಯ್ಯುತ್ತಿದ್ದ ಬೃಹತ್ ಕ್ಯಾಂಟರ್ ಒಂದರಿಂದ ತಾಂತ್ರಿಕ ದೋಷದಿಂದ ಭಾರೀ ಪ್ರಮಾಣದ ಫಿಶ್ ಆಯಿಲ್ ರಸ್ತೆಯಲ್ಲೇ ಸೋರಿಕೆಯಾಗಿದೆ. ಉಳ್ಳಾಲ ಅಬ್ಬಕ್ಕ ಸರ್ಕಲ್ ನಿಂದ ಉಳ್ಳಾಲಬೈಲ್‌ವರೆಗೂ ಫಿಶ್ ಆಯಿಲ್ ಸೋರಿಕೆಯಾಗಿದ್ದು ದ್ವಿಚಕ್ರ ವಾಹನ ಸವಾರರು ರಸ್ತೆಯಲ್ಲಿ ಜಾರಿ ಬಿದ್ದು ಗಂಭೀರ ಗಾಯಗೊಂಡಿದ್ದಾರೆ.





ಘಟನೆಯಿಂದ ಉದ್ರಿಕ್ತಗೊಂಡ ಸ್ಥಳೀಯರು ಫಿಶ್ ಮೀಲ್ ಆಯಿಲ್ ಸಾಗಿಸುತ್ತಿದ್ದ ಕ್ಯಾಂಟರನ್ನು ಉಳ್ಳಾಲ ಬೈಲಿನಲ್ಲಿ ಅಡ್ಡ ಹಾಕಿ ತಡೆದು ನಿಲ್ಲಿಸಿ ಪ್ರತಿಭಟಿಸಿದ್ದಾರೆ. ಸುಮಾರು ನಲ್ವತ್ತು ಲಕ್ಷ ರೂಪಾಯಿ ಮೌಲ್ಯದ ಆಯಿಲ್ ಹೊತ್ತೊಯ್ಯುತ್ತಿದ್ದ ಕ್ಯಾಂಟರಿಂದ ಆಯಿಲ್ ಸೋರಿಕೆಯಾಗುತ್ತಲೇ ಇದ್ದು ಆಯಿಲನ್ನು ಬೇರೊಂದು ಕ್ಯಾಂಟರ್‌ಗೆ ತುಂಬಿಸಲಾಗಿದೆ.

ಘಟನೆಯಿಂದ ಉಳ್ಳಾಲ ಅಬ್ಬಕ್ಕ ಸರ್ಕಲ್ ನಿಂದ ಉಳ್ಳಾಲಬೈಲ್ ತನಕ ಏಕ ಮುಖ ರಸ್ತೆಯಲ್ಲಿ ವಾಹನ ಸಂಚಾರವನ್ನು ನಿರ್ಬಂಧಗೊಳಿಸಲಾಗಿದೆ. ರಸ್ತೆಯುದ್ದಕ್ಕೂ ಸೋರಿಕೆಯಾಗಿರುವ ಭಾರೀ ಜಿಡ್ಡಿನ ಫಿಶ್ ಆಯಿಲನ್ನು ಸ್ವಚ್ಚಗೊಳಿಸುವುದೇ ಸವಾಲಾಗಿದ್ದು, ಸ್ಥಳೀಯರು ಮರದ ಮಿಲ್‌ಗಳ ಗರಗಸದ ಹುಡಿಯನ್ನು ರಸ್ತೆಗೆ ಚೆಲ್ಲಿ ಮುಂಜಾಗ್ರತಾ ಕ್ರಮ ವಹಿಸಿದ್ದಾರೆ.

ಉಳ್ಳಾಲ ನಗರ ಪ್ರದೇಶದಲ್ಲಿ ತಲೆ ಎತ್ತಿರುವ ಅನಧಿಕೃತ ಫಿಶ್ ಮೀಲ್ ಫ್ಯಾಕ್ಟರಿಗಳಿಂದ ಇಲ್ಲಿನ ಜನರು ದಿನ ನಿತ್ಯವೂ ತೊಂದರೆ ಅನುಭವಿಸುತ್ತಿದ್ದಾರೆ. ಫ್ಯಾಕ್ಟರಿಗಳ ತ್ಯಾಜ್ಯ ಸಮುದ್ರಕ್ಕೆ ಬಿಡುವುದರಿಂದ ಜಲಚರಗಳ ಮಾರಣ ಹೋಮ ನಡೆಯುತ್ತಿರುವುದಲ್ಲದೆ, ಫ್ಯಾಕ್ಟರಿಗಳಿಗೆ ದಿನನಿತ್ಯಲೂ ಸಾಗುವ ವಾಹನಗಳು ರಸ್ತೆಗೆ ದುರ್ವಾಸನೆಯುಕ್ತ ಮೀನಿನ ತ್ಯಾಜ್ಯವನ್ನು ಸುರಿಸುತ್ತಿದೆ. ಫ್ಯಾಕ್ಟರಿಗಳಿಂದ ಹೊರ ಸೂಸುವ ದುರ್ನಾತವು ಉಳ್ಳಾಲ ಮಾತ್ರವಲ್ಲದೆ ಸಮೀಪದ ಮಂಗಳಾದೇವಿ ಪರಿಸರಕ್ಕೂ ವ್ಯಾಪಿಸಿದೆ. ಇದೀಗ ಭಾರೀ ಪ್ರಮಾಣದಲ್ಲಿ ರಸ್ತೆಯಲ್ಲಿ ಫಿಶ್ ಮೀಲ್ ಆಯಿಲ್ ಸೋರಿಕೆಯಾಗಿರುವುದರಿಂದ ಇಡೀ ಉಳ್ಳಾಲವೇ ಗಬ್ಬು ನಾರುವಂತಾಗಿದೆ.

ಸ್ಪೀಕರ್ ಯು.ಟಿ. ಖಾದರ್ ವಿಷಾದ

ಉಳ್ಳಾಲ ರಾಜ ರಸ್ತೆಯಲ್ಲಿ ಫಿಶ್ ಮೀಲ್ ಆಯಿಲ್ ಸೋರಿಕೆಯಾಗಿರುವುದರಿಂದ ದ್ವಿಚಕ್ರ ವಾಹನಗಳು ಜಾರಿ ಬಿದ್ದು ಹಲವರು ಗಾಯಗೊಂಡಿರುವುದಕ್ಕೆ ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ. ಖಾದರ್ ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ಇಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡು ಪ್ರಕರಣಕ್ಕೆ ಸಂಬಂಧಿಸಿದ ಕಂಟೈನರ್ ಹಾಗೂ ಫಿಶ್ ಮೀಲ್ ಫ್ಯಾಕ್ಟರಿ ಮಾಲಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ನಗರ ಪೊಲೀಸ್ ಕಮಿಷನರ್ ಅವರಿಗೆ ಸೂಚಿಸಿದ್ದಾರೆ. ಘಟನೆಯಿಂದ ಗಾಯಗೊಂಡವರ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಕಂಟೈನರ್‌ಗೆ ಸಂಬಂಧಿಸಿದ ಫ್ಯಾಕ್ಟರಿ ಮಾಲಕರು ಭರಿಸಬೇಕೆಂದು ಯು.ಟಿ.ಖಾದರ್ ಆದೇಶಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 31° 26° | ಉಡುಪಿ 33° 27°

ಹೊಸ ದಿಗಂತ ಸಂಗಮ

ರಾಷ್ಟ್ರ ಜಾಗೃತಿಯ ದೈನಿಕ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 16, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಮೀನು ಹಿಡಿಯುವ ಜಾತ್ರೆಗೆ ಕೊಳಚೆ ನೀರಿನ ಕಂಟಕ!

ಪುಟ 2



ಕಾಂಗ್ರೆಸ್ ನಾಯಕತ್ವದ ವಿರುದ್ಧ ಬಿಜೆಪಿಯಿಂದ ಬೃಹತ್ ಪ್ರತಿಭಟನೆ

ಪುಟ 5

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಕೃಷಿ ಮೇಳದಲ್ಲಿ ವಿವಿಧ ಮಳಿಗೆಗಳನ್ನು ವೀಕ್ಷಿಸಿದ ಶ್ರೀಗಳು





ಉಡುಪಿ ತಾಲೂಕಿನ ಮಲ್ಪೆ ಸಮುದ್ರತೀರದ ಆನಂದ ಶರಧಿ ನಿವೇಶನದಲ್ಲಿ ನಡೆಯುತ್ತಿರುವ ಕೃಷಿ ಮೇಳವು ಗ್ರಾಮೀಣ ಸೊಗಡನ್ನು ಮೇಳೈಸಿದೆ. ವಿವಿಧ ತಳಿಯ ಹಲಸು, ಮಾವು ಗ್ರಾಹಕರನ್ನು ಸೆಳೆಯುತ್ತಿದೆ. ಶುಕ್ರವಾರ ಪೇಜಾವರ ಮಠಾಧೀಶ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಮೇಳವನ್ನು ಉದ್ಘಾಟಿಸಿದರು. ಸೋದೆ ಮಠದ ಸ್ವಾಮೀಜಿ, ಅದಮಾರು ಸ್ವಾಮೀಜಿ ಜೊತೆಗಿದ್ದರು. ಬಳಿಕ ಶ್ರೀಗಳು ವಿವಿಧ ಮಳಿಗೆಗಳನ್ನು ವೀಕ್ಷಿಸಿದರು.

ಸುತ್ತ ಮುತ್ತ

ಕಾಸರಗೋಡು ಜಿಲ್ಲೆ: ಕೃಷಿ ಉಪಕರಣಗಳ ಬೆಲೆಯಲ್ಲಿ ಭಾರೀ ಏರಿಕೆ


ಕಾಸರಗೋಡು: ಜಿಲ್ಲೆಯಲ್ಲಿ ಕೃಷಿ ಉಪಕರಣಗಳ ಬೆಲೆ ಏರಿಕೆಯಾಗಿರುವುದು ಕೃಷಿಕರನ್ನು ಹಾಗೂ ಕಿರು ಕೈಗಾರಿಕಾ ವ್ಯಾಪಾರಿಗಳನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಪ್ಲಾಸ್ಟಿಕ್, ರಬ್ಬರ್ ಉತ್ಪನ್ನಗಳ ಬೆಲೆಯಲ್ಲಿ ಭಾರೀ ಹೆಚ್ಚಳವಾಗಿದೆ. ಮಳೆಗಾಲ ಆರಂಭವಾದ ಕೂಡಲೇ ರಬ್ಬರ್ ತೋಟಗಳಲ್ಲಿ ಟ್ಯಾಪಿಂಗ್ ಆರಂಭಗೊಳ್ಳಲಿದೆ. ಅದಕ್ಕಿಂತ ಮೊದಲು ಕೃಷಿಕರು ರಬ್ಬರ್‌ಮರಗ ಳಲ್ಲಿ ಮೊಳೆಗಾರ್ಡ್‌ಗಳನ್ನು ಅಳವಡಿಸುವ ತರಾತುರಿಯಲ್ಲಿದ್ದಾರೆ. ಆದರೆ ರಬ್ಬರ್ ಹಾಲು ಸಂಗ್ರಹಿಸುವ ಪ್ಲಾಸ್ಟಿಕ್ ಗೆರಟೆ, ಪಾಲಿತೀನ್ ಶೀಟ್‌ಗಳ ಬೆಲೆಯಲ್ಲಿ ಏರಿಕೆ ಕಂಡುಬಂದಿದೆ. ಕಚ್ಚಾತೈಲದಿಂದ ಬೇರ್ಪಡಿ ಸುವ ನಾಪ್ತಾಯಿಲ್‌ನಿಂದ ಪ್ಲಾಸ್ಟಿಕ್ ಸಾಮಗ್ರಿ ನಿರ್ಮಿಸುತ್ತಿರುವುದೇ ಬೆಲೆಯೇರಿಕೆಗೆ ಕಾರಣವಾಗಿದೆ. ತಿಂಗಳಿನಲ್ಲಿ ಶೇ.30ರಿಂದ 40ರ ವರೆಗೆ ದರ ಹೆಚ್ಚಳಗೊಂಡಿದೆ.

ಮಳೆಯಾರ್ಭಟಕ್ಕೆ ತತ್ತರಿಸಿದ ಉಡುಪಿ ಜಿಲ್ಲೆ

ಅಪಾರ ಆಸ್ತಿ ನಷ್ಟ

ಬಿರುಗಾಳಿಗೆ 8ಕ್ಕೂ ಅಧಿಕ ಮನೆಗಳಿಗೆ ಹಾನಿ

ಉಡುಪಿ: ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಮುಂಗಾರು ಪೂರ್ವ ಮಳೆ ಆರ್ಭಟ ಮುಂದುವರಿದಿದ್ದು, ಎಂಟಕ್ಕೂ ಅಧಿಕ ಮನೆಗಳಿಗೆ ಹಾನಿ ಉಂಟಾಗಿದೆ. ಜಿಲ್ಲೆಯಲ್ಲಿ ಸರಾಸರಿ 11.5 ಮಿ.ಮೀ. ಮಳೆ ದಾಖಲಾಗಿದೆ. ಮಳೆಯ ಬಿರುಸು ಕಡಿಮೆಯಿದ್ದರೂ, ಬಲವಾದ ಬಿರುಗಾಳಿ, ಸಿಡಿಲಿನ ಅಬ್ಬರಕ್ಕೆ ಜಿಲ್ಲೆಯಾದ್ಯಂತ ಭಾರಿ ಅನಾಹುತ ಸಂಭವಿಸಿವೆ.



ಮರ ಬಿದ್ದು ಮನೆಗಳಿಗೆ ಹಾನಿ

ಉಡುಪಿ ನಗರದ ಕಡೆಕಾರು, ಕೊರಂಗ್ರಪಾಡಿ, ಹೆರ್ಗ, ಕಾರ್ಕಳದ ಮರ್ಣೆ, ಸಾಣೂರು ಸೇರಿದಂತೆ ಹಲವೆಡೆ ಮನೆಗಳ ಮೇಲೆ ಮರಗಳು ಬಿದ್ದು ಭಾಗಶಃ ಹಾನಿಯುಂಟಾಗಿದೆ. ಜಿಲ್ಲೆಯಾದ್ಯಂತ 8 ಮನೆಗಳು ಜಖಂಗೊಂಡಿದ್ದು, ಅಪಾರ ನಷ್ಟವಾಗಿದೆ.

ಸಿಡಿಲಾರ್ಭಟಕ್ಕೆ ಬೆದರಿದ ಜನ

ಮಳೆಯೊಂದಿಗೆ ಸಿಡಿಲಾರ್ಭಟ ಜೋರಾಗಿದ್ದು, ಜನತೆಯನ್ನು ಬೆಚ್ಚಿಬೀಳಿಸಿದೆ. ಕಾರ್ಕಳ ತಾ.ಮುಂಡ್ಕೂರು ಗ್ರಾಮದಲ್ಲಿ ಜಯ ಸಾಲ್ಯಾನ್‌ರ ಮನೆಗೆ ಸಿಡಿಲು ಬಡಿದು, ಮನೆಗೋಡೆ, ವಿದ್ಯುತ್ ಉಪಕರಣಗಳು ಹಾನಿಗೀಡಾಗಿವೆ. »ಪುಟ 6

‘ಅಡಿಕೆ’ ಬೆಳೆಗೆ ಕಾಡಿದ ಎಲೆಚುಕ್ಕಿ ರೋಗ

20960 ಹೆಕ್ಟೇರ್‌ನಲ್ಲಿ ಹೆಚ್ಚಿದ ರೋಗ ಬಾಧೆ

ಪರ್ಯಾಯ ಬೆಳೆಗೆ ಸಿಗಲಿದೆ ನೆರವು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ ಕೃಷಿಕರನ್ನು ಎಲೆ ಚುಕ್ಕಿರೋಗ ಬಹುವಾಗಿ ಕಾಡುತ್ತಿದೆ.

ಕಳೆದ ಮೂರ್ನಾಲ್ಕು ವರ್ಷಗಳಿಂದ ಈ ರೋಗದ ತೀವ್ರತೆ ಹೆಚ್ಚಾಗಿದೆ. ಪ್ರಸ್ತುತ 20960 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಎಲೆಚುಕ್ಕಿ ರೋಗ ಬಾಧೆ ಇರುವುದಾಗಿ ತೋಟಗಾರಿಕಾ ಇಲಾಖಾ ಅಧಿಕಾರಿಗಳು ತಿಳಿಸಿದ್ದಾರೆ. ಅಡಿಕೆಗೆ ಪರ್ಯಾಯ ಬೆಳೆಗೆ ಸಂಬಂಧಿಸಿದಂತೆ, ತಾಳೆ ಬೆಳೆ, ಕಾಳುಮೆಣಸು, ಜಾಯಿಕಾಯಿ, ರಾಂಬೂಟನ್, ಮ್ಯಾಂಗೋಸ್ಟೀನ್ ಇತ್ಯಾದಿ ಬೆಳೆಗಳು ಜಿಲ್ಲೆಯ ಮಣ್ಣು ಹಾಗೂ ಹವಾಗುಣಕ್ಕೆ ಸೂಕ್ತ ಬೆಳೆಗಳಾಗಿದ್ದು, ಈ ಬೆಳೆಗಳನ್ನು ಅಡಿಕೆಗೆ ಪರ್ಯಾಯವಾಗಿ ಬೆಳೆಯಬಹುದಾಗಿದೆ. ಈ ಬೆಳೆಗಳ ಬೆಳೆಯಲು ರೈತರಿಗೆ ಸಹಾಯಧನವೂ ದೊರೆಯಲಿದೆ.



ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಶನಿವಾರ 16, ಮೇ 2026

ಸುತ್ತ ಮುತ್ತ

ಡಿಸಿಎಂ ಡಿಕೆಶಿ ಜನ್ಮದಿನ ಪ್ರಯುಕ್ತ ಕುಕ್ಕೆ ದೇವಳದಲ್ಲಿ ಪ್ರಾರ್ಥನೆ

ಸುಬ್ರಹ್ಮಣ್ಯ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜನ್ಮದಿನದ ಪ್ರಯುಕ್ತ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಪ್ರಾರ್ಥನೆ ನೆರವೇರಿತು. ಡಿ.ಕೆ. ಶಿವಕುಮಾರ್ ಅವರ ಆರೋಗ್ಯ, ದೀರ್ಘಾಯುಷ್ಯ, ರಾಜಕೀಯ ಉನ್ನತಿ, ರಾಜ್ಯದ ಅಭಿವೃದ್ಧಿ ಹಾಗೂ ಜನಸೇವೆಯಲ್ಲಿ ಇನ್ನಷ್ಟು ಯಶಸ್ಸು ಸಾಧಿಸಲಿ ಎಂದು ಕುಕ್ಕೆ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಬಳಿಕ ಹೊಸಳಿಗಮ್ಮ ಸನ್ನಿಧಿಯಲ್ಲಿ ಪ್ರಾರ್ಥನೆ ನೆರವೇರಿಸಲಾಯಿತು. ಈ ಸಂದರ್ಭ ಮಾತನಾಡಿದ ಹರೀಶ್ ಎಸ್. ಇಂಜಾಡಿ, ದೇವಳದ ಪ್ರಧಾನ ಅರ್ಚಕ ಮತ್ತು ವ್ಯವಸ್ಥಾಪನಾ ಸಮಿತಿ ಸದಸ್ಯ ವೇದಮೂರ್ತಿ ಸೀತಾರಾಮ ಎಡಪಡಿತ್ತಾಯ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ಡಾ. ರಘು, ಅಜಿತ್ ಪಾಲೇರಿ, ಪ್ರವೀಣಾ ರೈ ಮರುವಂಜ, ಸೌಮ್ಯ ಭರತ್, ಲೀಲಾ ಮನಮೋಹನ್, ಸಹಾಯಕ ಕಾರ್ಯನಿರ್ವಹಣಾಧಿಕಾರಿ ಎಸ್. ಜೆ. ಯೇಸುರಾಜ್ ಮತ್ತಿತರರು ಉಪಸ್ಥಿತರಿದ್ದರು.

ಪಂಜ: ಗರಡಿಬೈಲು ದೈವಸ್ಥಾನದಲ್ಲಿ ಸಾನಿಧ್ಯ ಕಲಶಾಭಿಷೇಕ

ಸುಬ್ರಹ್ಮಣ್ಯ: ಪಂಜ ಸೀಮೆಯ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದ ಗರಡಿಬೈಲು ಶ್ರೀ ಉಳ್ಳಾಕ್ಲು ಶ್ರೀ ಕಾಚು ಕುಜುಂಬ ದೈವಸ್ಥಾನದಲ್ಲಿ ಕಳೆದ ತಿಂಗಳು ನಡೆದ ಸ್ವರ್ಣ ಪ್ರಶ್ನೆ ಚಿಂತನೆಯಲ್ಲಿ ಕಂಡುಬಂದ ಪ್ರಕಾರ ಶುಕ್ರವಾರ ವಿವಿಧ ವೈದಿಕ ಕಾರ್ಯಕ್ರಮಗಳು ಕ್ಷೇತ್ರದ ತಂತ್ರಿ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ಜರುಗಿತು. ಸ್ವಸ್ತಿ ಪುಣ್ಯಾಹ ವಾಚನ,ಮಹಾಗಣಪತಿ ಹೋಮ, ಸಾನಿಧ್ಯ ಕಲಶಪೂಜೆ, ದೈವಸ್ಥಾನದಲ್ಲಿ ಹೊಸ ಮಂಚ ಪ್ರತಿಷ್ಠೆ ದೈವಗಳಿಗೆ ಸಾನಿಧ್ಯ ಕಲಶಾಭಿಷೇಕ, ತಂಬಿಲ ಸೇವೆ,ಸಂಕ್ರಮಣ ಪೂಜೆ, ಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭ ಪಂಜ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರ್, ಸದಸ್ಯ ಸತ್ಯನಾರಾಯಣ ಭಟ್ ಕಾಯಂಬಾಡಿ, ಸಂತೋಷ ಕುಮಾರ್ ರೈ ಪಲ್ಲತ್ತಡ್ಕ, ಧರ್ಮಪಾಲ ಮರಕ್ಕಡ, ಮಾಯಿಲಪ್ಪಗೌಡ ಎಣ್ಣೆಮಜಲು, ಧರ್ಮಣ್ಣ ನಾಯ್ಕ ಗರಡಿ, ಪವಿತ್ರ ಮಲ್ಲೆಟ್ಟಿ, ಮಾಲಿನಿ ಕುದ್ವ ಮತ್ತಿತರರು ಇದ್ದರು.

ಕುಕ್ಕೆ: ಹೊಸಳಿಗಮ್ಮ ದೈವಸ್ಥಾನದಲ್ಲಿ ಪ್ರತಿಷ್ಠಾ ವಾರ್ಷಿಕೋತ್ಸವ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಹೊರಾಂಗಣದಲ್ಲಿರುವ ಹೊಸೊಳಿಗಮ್ಮ ದೈವಸ್ಥಾನದಲ್ಲಿ ಶುಕ್ರವಾರ ಪ್ರತಿಷ್ಠಾ ವಾರ್ಷಿಕೋತ್ಸವವು ಶ್ರದ್ಧಾ ಭಕ್ತಿಯಿಂದ ನೆರವೇರಿತು. ಈ ಪ್ರಯುಕ್ತ ಚಂಡಿಕಾ ಹೋಮ, ಶ್ರೀ ದೈವಕ್ಕೆ ವಿಶೇಷ ತಂಬಿಲ ಸೇವೆ ಹಾಗೂ ಮಂಗಳಾರತಿ ನಡೆಯಿತು. ಬಳಿಕ ಪ್ರಸಾದ ವಿತರಣೆ ನೆರವೇರಿತು. ಶ್ರೀ ದೇವಳದ ಪ್ರಧಾನ ಅರ್ಚಕ ವೇದಮೂರ್ತಿ ಸೀತಾರಾಮ ಎಡಪಡಿತ್ತಾಯರು ವೈದಿಕ ವಿಧಿ ವಿಧಾನ ನೆರವೇರಿಸಿದರು. ಈ ಸಂದರ್ಭ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್.ಎಸ್. ಇಂಜಾಡಿ, , ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ಡಾ. ರಘು, ಅಜಿತ್ ಪಾಲೇರಿ, ಪ್ರವೀಣಾ ರೈ ಮರುವಂಜ, ಸೌಮ್ಯ ಭರತ್, ಲೀಲಾ ಮನಮೋಹನ್ ಹಾಗೂ ಸಹಾಯಕ ಕಾರ್ಯನಿರ್ವಹಣಾಧಿಕಾರಿ ಎಸ್.ಜೆ.ಯೇಸುರಾಜ್ ಸೇರಿದಂತೆ ಭಕ್ತರು ಉಪಸ್ಥಿತರಿದ್ದರು.

ಮೇ 20ರಂದು ಆರೋಗ್ಯ ಶಿಬಿರ

ಮುಲ್ಕಿ: ಹಳೆಯಂಗಡಿಯ ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿಯ 5ನೇ ವರ್ಷದ ಸಂಭ್ರಮಾಚರಣೆ ಅಂಗವಾಗಿ ವಿವಿಧ ಸಂಘಟನೆಗಳ ಸಹಕಾರದಲ್ಲಿ ಮೇ 20ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಹಳೆಯಂಗಡಿಯ ಹರಿ ಓಂ ಕಟ್ಟಡದ ಆವರಣದಲ್ಲಿ ಕಟೀಲು ಆಸ್ಪತ್ರೆಯ ಆಡಳಿತ ನಿರ್ದೇಶಕ ಡಾ. ಶಿವಾನಂದ ಪ್ರಭು ನೇತೃತ್ವದಲ್ಲಿ ನುರಿತ ವೈದ್ಯರುಗಳಿಂದ ಉಚಿತ ಆರೋಗ್ಯ ವೈದ್ಯಕೀಯ ತಪಾಸಣಾ ಶಿಬಿರ ನಡೆಯಲಿದೆ. ಶಿಬಿರವನ್ನು ದ.ಕ.ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕ ಎಚ್. ಎನ್ ರಮೇಶ್ ಉದ್ಘಾಟಿಸಲಿದ್ದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಿಯದರ್ಶಿನಿ ಸಹಕಾರ ಸಂಘ ನಿ. ಹಳೆಯಂಗಡಿಯ ಅಧ್ಯಕ್ಷ ಎಚ್ ವಸಂತ್ ಬೆರ್ನಾರ್ಡ್ ವಹಿಸಲಿದ್ದಾರೆ. ಆಸಕ್ತರು ಇದರ ಪ್ರಯೋಜನ ಪಡೆಯುವಂತೆ ಸೊಸೈಟಿ ಅಧ್ಯಕ್ಷ ಎಚ್. ವಸಂತ ಬೆರ್ನಾಡ್ ತಿಳಿಸಿದ್ದಾರೆ.

ಮಲಿನಗೊಳ್ಳುತ್ತಿದೆ ಇತಿಹಾಸ ಪ್ರಸಿದ್ಧ ನಂದಿನಿ ನದಿ | ಖಂಡಿಗೆಯಲ್ಲಿ ಹಠಾತ್ ಪ್ರತಿಭಟನೆ ನಡೆಸಿದ ಗ್ರಾಮಸ್ಥರು

ಮೀನು ಹಿಡಿಯುವ ಜಾತ್ರೆಗೆ ಕೊಳಚೆ ನೀರಿನ ಕಂಟಕ!



ಸುರತ್ಕಲ್: ಇತಿಹಾಸ ಪ್ರಸಿದ್ಧ ಚೇಳ್ಯಾರು ಖಂಡಿಗೆ ನಂದಿನಿ ನದಿಗೆ ಮುಂಚೂರು ವೆಟ್‌ವೆಲ್‌ನ ಹತ್ತಿರದ ಒಳಚರಂಡಿಯ ಕೊಳಚೆ ನೀರು ಕೊಡಿಪಾಡಿಯಲ್ಲಿ ನಿರ್ಮಾಣವಾಗುವ ತ್ಯಾಜ್ಯ ಸಂಸ್ಕರಣಾ ಘಟಕದ ನೀರು, ಚೊಕ್ಕಬೆಟ್ಟು ಪರಿಸರದ ಮನೆಯ ತ್ಯಾಜ್ಯ ನೀರು, ಮುಕ್ಕದ ಖಾಸಗಿ ಆಸ್ಪತ್ರೆ, ಕಾಲೇಜು, ವಸತಿ ಗೃಹ ಮತ್ತು ಹೋಟೆಲ್‌ಗಳ ತ್ಯಾಜ್ಯ ನೀರುಗಳನ್ನು ನಂದಿನಿ ನದಿಗೆ ಬಿಡುವುದರಿಂದ ನಂದಿನಿ ನದಿ ಸಂಪೂರ್ಣ ಕಲುಷಿತಗೊಂಡಿದೆ.

ಇದರಿಂದಾಗಿ ಚೇಳ್ಯಾರು ಖಂಡಿಗೆ ಭಾಗದ ಅನೇಕ ಕೃಷಿಯನ್ನೇ ಅವಲಂಬಿತ ಕುಟುಂಬಗಳು ಕೃಷಿ ಮಾಡದ ಪರಿಸ್ಥಿತಿ ಎದುರಾಗಿದೆ. ಕುಡಿಯುವ ನೀರಿಗೂ ಸಮಸ್ಯೆಯಾಗಿದ್ದು ಬಾವಿಗಳು ಮಲಿನ ಗೊಂಡಿದೆ. ಇತ್ತವಲ್ಲದೆ, ಇತಿಹಾಸ ಪ್ರಸಿದ್ಧ ಖಂಡಿಗೆ ದೈವಸ್ಥಾನದ ಮೀನು ಹಿಡಿಯುವ ಜಾತ್ರೆ ನಿಲ್ಲುವಂತಾಗಿದೆ. ಶುಕ್ರವಾರ ಖಂಡಿಗೆ ಜಾತ್ರೆಯ ಪ್ರಯುಕ್ತ ಮೀನು ಹಿಡಿಯಲು ಜನರೇ ಇಲ್ಲದಿರುವುದನ್ನು ಕಂಡು ನಂದಿನಿ ನದಿ ಹೋರಾಟ ಸಮಿತಿ ಮತ್ತು ಸಾರ್ವಜನಿಕರಿಂದ ಹಠಾತ್ ಪ್ರತಿಭಟನೆ ನಡೆಸಿದ ಘಟನೆ ನಡೆಯಿತು.

ಪ್ರತಿಭಟನಾಕಾರರು ಜಿಲ್ಲಾಡಳಿತ, ಜನಪ್ರತಿನಿಧಿ ಗಳಿಗೆ ದಿಕ್ಕಾರ ಕೂಗಿದರು. ಚೇಳ್ಯಾರು ಗ್ರಾ.ಪಂ. ಮಾಜಿ ಅಧ್ಯಕ್ಷ ಜಯಾನಂದ ಮಾತನಾಡಿ, ನಂದಿನಿ ನದಿ ಕಲುಷಿತ ಗೊಂಡಿರುವ ಬಗ್ಗೆ 2 ವರ್ಷಗಳಿಂದ ನಿರಂತರ ಹೋರಾಟ ಮತ್ತು ಸಂಬಂಧಿಸಿದ ಎಲ್ಲಾ ಇಲಾಖೆಗೆ, ಜನಪ್ರತಿನಿಧಿಗಳಿಗೆ ಮನವಿ ನೀಡಿದರೂ ಪ್ರಯೋಜನವಾಗಿಲ್ಲ, ಹಾಗಾಗಿ ನದಿ ವಿಷಯಕ್ಕೆ ವಾಗಲು ಜಿಲ್ಲಾಡಳಿತ ಮತ್ತು ನಗರಪಾಲಿಕೆ ಅಧಿಕಾರಿಗಳು ನೇರ ಹೊಣೆ ಎಂದರು.

ಧಾರ್ಮಿಕ ಮುಖಂಡ ಕಿರಣ್ ಶೆಟ್ಟಿ ಕೆರೆಮನೆ ಮಾತನಾಡಿ, ನಾವು ಎಲ್ಲಾ ಪಕ್ಷದ ಜನಪ್ರತಿನಿಧಿ ಗಳಿಗೆ ನಮ್ಮ ಸಮಸ್ಯೆ ಬಗ್ಗೆ ಮನವಿ ನೀಡಿದ್ದೇವೆ. ಆದರೆ ಯಾರು ಸ್ಪಂದನೆ ನೀಡದ ಕಾರಣ ಸಮಸ್ಯೆ ಸರಿಯಾಗದ ತನಕ ಮುಂದೆ ಬರುವ ಎಲ್ಲಾ ಚುನಾವಣೆಯನ್ನು ಚೇಳ್ಯಾರು ಗ್ರಾಮ ಪಂಚಾಯತ್ ವ್ಯಾಪ್ತಿಯ ಜನರು ಮತದಾನ ಮಾಡದೇ ಚುನಾವಣೆ ಬಹಿಷ್ಕಾರ ಮಾಡಲಿದ್ದಾರೆ ಎಂದು ಎಚ್ಚರಿಸಿದರು.

ನಂದಿನಿ ನದಿ ಹೋರಾಟ ಸಮಿತಿಯ ನಿತಿನ್ ಶೆಟ್ಟಿ ಖಂಡಿಗೆ ಮಾತನಾಡಿ, 6 ತಿಂಗಳ ಒಳಗೆ ನಂದಿನಿ ನದಿಗೆ ಬರುವ ಖಾಸಗಿ ಆಸ್ಪತ್ರೆ, ಎಸ್‌ಟಿಪಿ ಪ್ಲಾಂಟ್, ವೆಟ್ ವೆಲ್ ನೀರು, ಖಾಸಗಿ ವಸತಿ ಸಮುಚ್ಛಯದ ನೀರನ್ನು ಜಿಲ್ಲಾಡಳಿತ ಬಂದ್ ಮಾಡಬೇಕು. ನದಿಯನ್ನು ಸ್ವಚ್ಛಗೊಳಿಸಬೇಕು. ಇದಕ್ಕೆ ಜಿಲ್ಲಾಡಳಿತ ಸರಿಯಾದ ಕ್ರಮ ಕೈಗೊಳ್ಳದಿದ್ದರೆ, ಆಗುವ ಅನಾಹುತಗಳಿಗೆ ಜಿಲ್ಲಾಡಳಿತ ನೇರ ಹೊಣೆ ಎಂದು ಎಚ್ಚರಿಕೆ ನೀಡಿದರು. ಚೇಳ್ಯಾರು ಗ್ರಾ.ಪಂ. ಮಾಜಿ ಅಧ್ಯಕ್ಷ ಪುಷ್ಪರಾಜ್ ಶೆಟ್ಟಿ, ಮಾಜಿ ಸದಸ್ಯ ವಿನಯಕುಮಾರ್ ಶೆಟ್ಟಿ ಗಂಗಾಧರ ಪೂಜಾರಿ ಚೇಳ್ಯಾರು ಕಾಲನಿ ಮುಂತಾದವರು ಉಪಸ್ಥಿತರಿದ್ದರು.

> **‘ನಂದಿನಿ ನದಿ ಉಳಿಸಿ’ ಎಂಬ ಹೋರಾಟ ಕೇವಲ ಇಂದು ಮಾತ್ರ ನಡೆಯದೇ ನಮ್ಮ ಸಮಸ್ಯೆ ಪರಿಹಾರ ಆಗುವವರೆಗೆ ಹೋರಾಟ ಮುಂದುವರಿಯಬೇಕು. ಯಾರದೋ ಒತ್ತಡಕ್ಕೆ, ಹಣದ ಆಸೆಗೆ ಬಲಿಯಾಗ ಬಾರದು. ಇದರ ಹಿಂದೆ ಎಷ್ಟೇ ಬಲಿಷ್ಠ ರಾಜಕೀಯ ಪ್ರೇರಿತ ವ್ಯಕ್ತಿ ಇದ್ದರೂ ಆತನ ವಿರುದ್ಧ ನಾವು ಹೋರಾಡಬೇಕು .**
> ● ಸುಕೇಶ್ ಶೆಟ್ಟಿ ಖಂಡಿಗೆ, ಹೋರಾಟ ಸಮಿತಿಯ ಪ್ರಮುಖರು

> **ಈ ಮೊದಲು ನಂದಿನಿ ನದಿಯಲ್ಲಿ ಮೀನು ಹಿಡಿಯಲು ಸಾವಿರಾರು ಜನ ಸೇರುತ್ತಿದ್ದರು. ಇಂದು ದಿನ ಮೀನು ಹಿಡಿಯಲು ಬೆರಳೆಣಿಕೆ ಜನ ಇಳಿದಿರುವುದು ಬಹಳ ದುಃಖದ ವಿಷಯ. ದೊಡ್ಡ ಕಂಪೆನಿಗಳು, ಆಸ್ಪತ್ರೆಗಳಿಂದ ಕಲುಷಿತ ನೀರು ನದಿಗೆ ಬಿಡುವುದರಿಂದ ಪರಿಸರ ಜೊತೆಗೆ ನಮ್ಮ ಆರೋಗ್ಯಕ್ಕೆ ಹಾನಿಕರವಾಗಿದೆ.**
> ● ದಿವಾಕರ ಸಾಮಾನಿ, ನಂದಿನಿ ಹೋರಾಟ ಸಮಿತಿ ಪ್ರಮುಖರು

ಪುತ್ತೂರು: ಗುಂಡ್ಯಡ್ಕ-ಮಾಯಿಲಕೊಚ್ಚಿ ರಸ್ತೆ ಅಭಿವೃದ್ಧಿಗೆ ಶಿಲಾನ್ಯಾಸ

ಅಭಿವೃದ್ಧಿಯಲ್ಲಿ ದ್ವೇಷ ಬೇಡ: ಅಶೋಕ್ ರೈ



ಪುತ್ತೂರು: ಪ್ರತೀ ಮಳೆಗಾಲದಲ್ಲಿ ನಮಗೆ ಈ ರಸ್ತೆಯಲ್ಲಿ ನಡೆದುಕೊಂಡು ಹೋಗಲೂ ಸಾಧ್ಯವಾಗುತ್ತಿರಲಿಲ್ಲ, ನಮ್ಮ ಮನವಿ ಸ್ವೀಕರಿಸಿ ಅನುದಾನ ಇಟ್ಟದ್ದು ಶಾಸಕ ಅಶೋಕ್ ರೈ ಅವರು ಮಾತ್ರ. ಅವರು ಮಾಡಿದ ಉಪಕಾರವನ್ನು ನಾವು ಎಂದಿಗೂ ಮರೆಯುವುದಿಲ್ಲ ಎಂದು ಗುಂಡ್ಯಡ್ಕ-ಮಾಯಿಲಕೊಚ್ಚಿ ರಸ್ತೆ ಫಲಾನುಭವಿಗಳು ಹೇಳಿದರು.

ಶನಿವಾರ ಅಭಿವೃದ್ಧಿಗೊಂಡ ರಸ್ತೆಗೆ ಶಿಲಾನ್ಯಾಸ ಕಾರ್ಯಕ್ರಮ ನಡೆಯಿತು. ರೂ.15 ಲಕ್ಷ ಅನುದಾನವನ್ನು ಮಂಜೂರು ಮಾಡಲಾಗಿದ್ದು, ಅನೇಕ ವರ್ಷಗಳಿಂದ ಈ ರಸ್ತೆ ಅಭಿವೃದ್ಧಿಯಾಗದೇ ಇರುವ ಬಗ್ಗೆ ಇತ್ತೀಚೆಗೆ ಗ್ರಾಮಸ್ಥರು ಶಾಸಕರ ಕಚೇರಿಗೆ ಬಂದು ಮನವಿ ಮಾಡಿದ್ದರು.

ಶಾಸಕ ಅಶೋಕ್ ರೈ ಮಾತನಾಡಿ, ಈ ರಸ್ತೆಗೆ ಮೊದಲ ಅವಧಿಯಲ್ಲಿ ರೂ.15 ಲಕ್ಷ ನೀಡಿದ್ದೇನೆ. ಮುಂದಿನ ಎರಡು ವರ್ಷದಲ್ಲಿ ಈ ರಸ್ತೆಯನ್ನು ಪೂರ್ತಿಯಾಗಿ ಕಾಂಕ್ರೀಟ್ ಮಾಡಿ ಕೊಡುವುದಾಗಿ ಭರವಸೆ ನೀಡಿದರು. ನಮ್ಮದು ಎಲ್ಲವನ್ನೂ ಒಳಗೊಂಡ ಹಿಂದುತ್ವವಾಗಿದೆ. ಸರಕಾರಿ ಜಾಗದಲ್ಲಿರುವ ದೇವಸ್ಥಾನ, ಭಜನಾ ಮಂದಿರ, ಮಸೀದಿ, ಚರ್ಚುಗಳನ್ನು ದೇವರ ಹೆಸರಿಗೆ ಮಾಡುವ ಮೂಲಕ ಅವುಗಳ ಅಭಿವೃದ್ಧಿಗೆ ಅನುದಾನ ನೀಡುವ ಹಿಂದುತ್ವ ನಮ್ಮದಾಗಿದೆ. ಅನ್ಯರನ್ನು ದೂಷಿಸುವ, ದ್ವೇಷ ಹುಟ್ಟಿಸುವ ಮನಸ್ಸು ಯಾರಿಗೂ ಇರಬಾರದು. ಇದರಿಂದ ಸಂಘರ್ಷವೇ ಹೊರತು ಅಭಿವೃದ್ಧಿ ಸಾಧ್ಯವಿಲ್ಲ ಎಂದು ಶಾಸಕರು ಹೇಳಿದರು.

ವಲಯ ಕಾಂಗ್ರೆಸ್ ಅಧ್ಯಕ್ಷ ಇಕ್ಬಾಲ್ ಹುಸೇನ್ ಮಾತನಾಡಿ, ಶಾಸಕರು ಅನುದಾನ ನೀಡುವ ರೀತಿಯಲ್ಲೇ ಸಂಸದರೂ ಅನುದಾನ ನೀಡಬೇಕು. ಆಗ ಗ್ರಾಮದ ಎಲ್ಲಾ ರಸ್ತೆಗಳು ಅಭಿವೃದ್ಧಿ ಯಾಗುತ್ತದೆ. ಅನುದಾನ ಇಡುವ ಕೆಲಸವನ್ನು ಆ ಪಕ್ಷದ ಮುಖಂಡರು ಮಾಡಬೇಕು ಮತ್ತು ಸಂಸದರಿಗೆ ಒತ್ತಾಯವನ್ನು ಮಾಡಬೇಕು ಎಂದರು.

ಮನವಿಗೆ ತಕ್ಷಣ ಸ್ಪಂದನೆ

ನಾವು ಶಾಸಕರ ಕಚೇರಿಗೆ ತೆರಳಿ ರಸ್ತೆ ಅಭಿವೃದ್ಧಿಗೆ ಮನವಿ ಮಾಡಿದ್ದೆವು. ನಮ್ಮ ಮನವಿಗೆ ಶಾಸಕರು ತಕ್ಷಣ ಸ್ಪಂದನೆ ಮಾಡಿದ್ದಾರೆ. ಶಾಸಕರು ಅಭಿವೃದ್ಧಿಯಲ್ಲಿ ಎಲ್ಲರಿಗೂ ಮಾದರಿಯಾಗಿದ್ದಾರೆ ಎಂದು ವಿದ್ಯಾರ್ಥಿನಿ ಅನ್ವಿತಾ ಕೃತಜ್ಞತೆ ಸಲ್ಲಿಸಿದರು.

ಪ್ರಮುಖರಾದ ವಾಸು ಪೂಜಾರಿ ಗುಂಡ್ಯಡ್ಕ, ಶಿವರಾಮ ಮಣಿಯಾಣಿ, ಬೂತ್ ಅಧ್ಯಕ್ಷರಾದ ಚಂದ್ರಶೇಖರ ಮಣಿಯಾಣಿ ಕುರುಂಜ, ಬಶೀರ್ ಕೌಡಿಚ್ಚಾರ್, ಚಂದ್ರ ಗುಂಡ್ಯಡ್ಕ, ಬಾಬು ನಾಯ್ಕ್ ಕುತ್ಯಾಡಿ, ಜೀವನ್ ಕುತ್ಯಾಡಿ, ಪೂವಪ್ಪ ನಾಯ್ಕ್ ಕುತ್ಯಾಡಿ, ನಾರಾಯಣ ನಾಯ್ಕ ಅಕ್ಕೆ, ಅಚ್ಯುತ ಮಣಿಯಾಣಿ ಮಾಯಿಲ ಕೊಚ್ಚಿ, ಮುಕುಂದ ಕುತ್ಯಾಡಿ, ಲೋಕೇಶ್ ಶೆಟ್ಟಿ ಪಾಪೆಮಜಲು, ಶಿವಪ್ಪ ನಾಯ್ಕ ಮಾಯಿಲಕೊಚ್ಚಿ, ಚಂದ್ರ ದೇವಮೂಲೆ, ರೋಹಿತ್ ಕುತ್ಯಾಡಿ, ಬಾಲಚಂದ್ರ ಭಟ್ ಕುತ್ಯಾಡಿ, ಹರೀಶ್ ರೈ ಬಲ್ಲಿಕಾನ, ದುರ್ಗಾಪ್ರಸಾದ್ ಕುತ್ಯಾಡಿ, ಸುನಿಲ್ ಕುಮಾರ್ ಗುಂಡ್ಯಡ್ಕ, ಅಪ್ಪಯ್ಯ ನಾಯ್ಕ ಬಪ್ಪಮುಂಡೇಲು, ಧರ್ಣಪ್ಪ ಗೌಡ ಗುಂಡ್ಯಡ್ಕ, ಸೇಸಮ್ಮ ಗುಂಡ್ಯಡ್ಕ, ಗೀತಾ ಕುತ್ಯಾಡಿ, ಪುಷ್ಪಾವತಿ ಕುತ್ಯಾಡಿ, ಪವನ ಕುತ್ಯಾಡಿ, ಸುನಂದ ಗುಂಡ್ಯಡ್ಕ ಮತ್ತಿತರರಿದ್ದರು.

ಹಿಜಾಬ್ ವಿಚಾರ | ಕಾಂಗ್ರೆಸ್ ಸರ್ಕಾರದ ನಡೆಗೆ ಮಠಂದೂರು ಆಕ್ರೋಶ

ಕೋರ್ಟ್‌ನ ತೀರ್ಪನ್ನು ಧಿಕ್ಕರಿಸುವುದು ಸಲ್ಲದು

ಪುತ್ತೂರು: ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಸಿದ್ದರಾಮಯ್ಯ ಸರಕಾರವು ನ್ಯಾಯಾಲಯದ ತೀರ್ಮಾನವನ್ನು ಕ್ಕರಿಸಿ ಸಂವಿಧಾನ ವಿರೋಧಿ ಹಿಜಾಬನ್ನು ಅನುಷ್ಠಾನಕ್ಕೆ ಶಿಕ್ಷಣ ಇಲಾಖೆ ಮೂಲಕ ಆದೇಶಿಸಿರುವುದು ಖಂಡನೀಯ ಎಂದು ಪುತ್ತೂರು ಮಾಜಿ ಶಾಸಕ ಸಂಜೀವ ಮಠಂದೂರು ಹೇಳಿದ್ದಾರೆ.

2022ರಲ್ಲಿ ಉಡುಪಿಯಲ್ಲಿ ಹಿಜಾಬ್ ವಿಚಾರ ಬಂದಾಗ ಉಚ್ಚ ನ್ಯಾಯಾಲಯ ಮೆಟ್ಟಿಲೇರಿ ಅಲ್ಲಿ ಆದೇಶವಾದ ಮೇರೆಗೆ ಕರ್ನಾಟಕ ಸರಕಾರ 2022ರಲ್ಲಿ ಹಿಜಾಬ್‌ಗೆ ಪೂರಕವಾಗಿ ಎಲ್ಲಾ ಶಾಲೆಗಳಲ್ಲಿ ವಸ್ತ್ರ ಸಂಹಿತೆ ಇರಬೇಕು ಎಂದು ಆದೇಶ ತಂದಿದೆ. ಅಲ್ಲಿ ಧರ್ಮಕ್ಕೆ ಆಧಾರಿತ ವಸ್ತ್ರ ಸಂಹಿತೆ ಇರಬಾರದು, ಇಡೀ ರಾಜ್ಯಕ್ಕೆ ಅನುಗುಣವಾಗಿ ಎಲ್ಲಾ ಮಕ್ಕಳು ಶಾಲಾ ಚಟುವಟಿಕೆಗಳಲ್ಲಿ ಭಾಗ ವಹಿಸುವ ದೃಷ್ಟಿಯಿಂದ ತಾರತಮ್ಯ ಇರದಂತೆ ವಸ್ತ್ರ ಸಂಹಿತೆ ತಂದಿತ್ತು. ವಸ್ತ್ರ ಸಂಹಿತೆ ಇಲ್ಲಿ ತನಕ ಅನುಷ್ಠಾನದಲ್ಲಿತ್ತು. ಆದರೆ, ಸಿದ್ದರಾಮಯ್ಯ ಸರಕಾರ ಏಕಾಏಕಿ ಹಿಜಾಬನ್ನು ಮತ್ತೆ ತರುವ ಉದ್ದೇಶದಿಂದ ಸಾರ್ವಜನಿಕ ಶಿಕ್ಷಣ ಇಲಾಖೆ ಮೂಲಕ ಆದೇಶ ಮಾಡಿದೆ ಎಂದರು.

ಜನಿವಾರದ ವಿಚಾರ ಯಾಕೆ?

ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಸುಪ್ರೀಂ ಕೋರ್ಟ್‌ಗೆ ಹೋಗಿರುವುದು ಹಿಜಾಬ್ ವಿಚಾರವೇ ಹೊರತು ಜನಿವಾರದ ವಿಚಾರವಲ್ಲ, ಇವರು ಜನಿವಾರವನ್ನು ಯಾಕೆ ಎಳಿತಾರೆ ಗೊತ್ತಿಲ್ಲ, ಜನಿವಾರ ಹಿಂದಿನಿಂದಲೂ ಭಾರತೀಯ ಪರಂಪರೆಯ ಭಾಗ. ಈ ಸರಕಾರವೇ ಜನಿವಾರವನ್ನು ತೆಗೆಸಿದ್ದು ಹೊರತು ಬೇರೆ ಸರಕಾರ ಮಾಡಿಲ್ಲ, ರಾಜ್ಯ ಸರಕಾರವೇ ಜನಿವಾರ ತೆಗೆಸುವ ಮೂಲಕ ಹಿಂದೂಗಳ ಭಾವನೆಗೆ ಆಘಾತ ತಂದಿದೆ. ಅದೇ ಹಿಂದೂಗಳನ್ನು ಮತ್ತೆ ಸಂತೃಪ್ತಿಗೊಳಿಸಲು ನಾವು ಜನಿವಾರಕ್ಕೂ ಅವಕಾಶ ಕೊಡಿಸಿದ್ದೇವೆ ಎಂದು ಹಿಜಾಬ್‌ನ ಜತೆ ಎಳೆದುಕೊಂಡಿದ್ದಾರೆ. ಮುಸ್ಲಿಮರನ್ನು ಓಲೈಕೆ ಮಾಡುವ ಸಂದರ್ಭದಲ್ಲಿ ಹಿಂದೂಗಳಿಗೂ ಪುಕ್ಕಟ್ಟೆ ಸಹಕಾರ ಮಾಡಿದ್ದೇವೆ, ಅನುಕೂಲ ಮಾಡಿಕೊಟ್ಟಿದ್ದೇವೆ ಎಂದು ಹೊಸ ಆದೇಶ ತಂದಿದ್ದಾರೆ.

ಮುಸ್ಲಿಂ ಮತಬ್ಯಾಂಕ್‌ಗಾಗಿ

ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ್ನು ಮುಸ್ಲಿಮರು ವಿರೋಧಿ ಸಿದ್ದಾರೆ, ಬೆಂಗಳೂರಿನಲ್ಲಿ ನಡೆದ ಮುಸ್ಲಿಮರ ಪ್ರತಿಭಟನಾ ಸಮಾವೇಶದಲ್ಲಿ ಹಿಜಾಬ್‌ನ ಉಲ್ಲೇಖ ಮಾಡಿದ್ದಾರೆ ಎಂದು ಸಮಜಾಯಿಷಿಕೆಗಾಗಿ ಈ ಆದೇಶ ತರುವ ಮೂಲಕ ಮುಸ್ಲಿಂ ಮತ ಬ್ಯಾಂಕ್ ಗಟ್ಟಿಗೊಳಿಸುವ ಪ್ರಯತ್ನ ಆದೇಶದ ಮುಖಾಂತರ ಮಾಡುತ್ತಿದ್ದಾರೆ. ಹಿಜಾಬ್ ಬಗ್ಗೆ ಹೈಕೋರ್ಟ್ ಆದೇಶ, ಅದಕ್ಕೆ ಪೂರಕವಾಗಿ ರಾಜ್ಯ ಸರಕಾರ 2022 ರಲ್ಲಿ ವಸ್ತ್ರ ಸಂಹಿತೆ ಆದೇಶ ಮಾಡಿದೆ. ಈಗ ಸುಪ್ರೀಂ ಕೋರ್ಟ್‌ನಲ್ಲಿ ಕೇಸು ನಡೆಯುತ್ತಿರುವ ಸಂದರ್ಭದಲ್ಲಿ ರಾಜ್ಯ ಸರಕಾರ ಯಾವ ರೀತಿ ಈ ಆದೇಶವನ್ನು ಶಿಕ್ಷಣ ಇಲಾಖೆ ಮೂಲಕ ಕೊಟ್ಟಿದೆ. ಇದು ಸಂವಿಧಾನ ವಿರೋಧಿ ಮತ್ತು ಮುಸ್ಲಿಂ ಓಲೈಕೆಯ ಭಾಗ ಎಂದು ಆರೋಪಿಸಿದರು.



> **ಹೋರಾಟ**
> **ಈ ಆದೇಶ ಹಿಂಪಡೆಯದಿದ್ದರೆ ಬಿಜೆಪಿ ಇಲ್ಲಿ ನಡೆಯುವ ಎಲ್ಲಾ ಹೋರಾಟ, ಪ್ರತಿಭಟನೆಗಳಿಗೆ ಬೆಂಬಲ ನೀಡಲಿದೆ. ಮಕ್ಕಳಲ್ಲಿ ಧರ್ಮದ ಆಧಾರದಲ್ಲಿ ಶಿಕ್ಷಣ ನೀತಿ ಅಳವಡಿಸದಂತೆ, ಮತ್ತೆ 2022 ರ ವಸ್ತ್ರ ಸಂಹಿತೆ ಜಾರಿಗೊಳಿಸಲು ಒತ್ತಾಯ ಮಾಡುತ್ತದೆ.**
> ● ಸಂಜೀವ ಮಠಂದೂರು

ಡೆಂಗ್ಯೂ ನಿಯಂತ್ರಣಕ್ಕಾಗಿ ಆರೋಗ್ಯ ಇಲಾಖೆಯಿಂದ ಲಾರ್ವ ಪತ್ತೆ ಸಮೀಕ್ಷೆ



ಬಂಟ್ವಾಳ: ಸಜಿಪಮುನ್ನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ನಂದಾವರ, ನಂದಾವರ ಕೋಟೆ, ದಾಸರಗುಡ್ಡೆ ಪರಿಸರದಲ್ಲಿ ವಿಶೇಷ ಲಾರ್ವ ಸಮೀಕ್ಷೆ ಕೈಗೊಳ್ಳಲಾಯಿತು.

ಬಂಟ್ವಾಳ ತಾಲೂಕಿನ ತಾಲೂಕು ಆರೋಗ್ಯಾಧಿಕಾರಿ ಡಾ. ಅಶೋಕ್ ಕುಮಾರ್ ರೈ, ಸಜಿಪನಡು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ತುಫೈಲ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಕುಸುಮ, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಇಂದಿರಾ ಅವರು ಉಪಸ್ಥಿತರಿದ್ದರು.

ಮನೆ ಮನೆ ಭೇಟಿ

ಬಂಟ್ವಾಳ ತಾಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು ಹಾಗೂ ಸಜಿಪನಡು ವ್ಯಾಪ್ತಿಯ ಎಲ್ಲಾ ಆಶಾ ಕಾರ್ಯಕರ್ತೆಯರು ಮಳೆಗಾಲ ಆರಂಭವಾಗುತ್ತಿರುವ ಹಿನ್ನಲೆಯಲ್ಲಿ ಮುಂಜಾಗ್ರತ ಕ್ರಮವಾಗಿ ಮನೆ ಮನೆ ಭೇಟಿ ನೀಡಿ ಡೆಂಗ್ಯೂ ನಿಯಂತ್ರಣ ಲಾರ್ವ ಉತ್ಪತ್ತಿ ತಾಣಗಳ ನಿರ್ಮೂಲನೆ ಹಾಗೂ ಸ್ವಚ್ಛತೆ ಬಗ್ಗೆ ವಿಶೇಷ ಮಾಹಿತಿ ನೀಡಿದರು.

ಯಾವುದೇ ಜ್ವರ ಪ್ರಕರಣ ಕಂಡು ಬಂದರೆ ಹತ್ತಿರದ ಪ್ರಾಥಮಿಕ ಆರೋಗ್ಯಕೇಂದ್ರಕ್ಕೆ ಭೇಟಿ ನೀಡಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವಂತೆ ಈ ಸಂದರ್ಭ ಜನರಿಗೆ ಸಲಹೆ ನೀಡಲಾಯಿತು.

> **ವಿಶೇಷ ಜಾಗೃತಿ**
> **ಮುಂಗಾರು ಪೂರ್ವ ಮಳೆ ಚುರುಕುಗೊಳ್ಳುತ್ತಿದ್ದು, ಈ ಹಿನ್ನಲೆಯಲ್ಲಿ ಬಂಟ್ವಾಳ ತಾಲೂಕಿನಲ್ಲಿ ಆರೋಗ್ಯ ಇಲಾಖೆಯಿಂದ ಡೆಂಗ್ಯೂ ಜ್ವರ ನಿಯಂತ್ರಣಕ್ಕೆ ಕ್ರಮ ವಹಿಸಿದೆ.**

ಕಲಾಸಕ್ತಿ ಇದ್ದರೆ ಮಾತ್ರ ಕಲೆಯು ಸಿದ್ಧಿ: ಉಳ್ಳಾಲ ಮೋಹನ್ ಕುಮಾರ್ ಅಭಿಮತ



ಕೊಣಾಜೆ: ಯಾವುದೇ ಕಲೆಯು ಸಿದ್ಧಿಯಾಗಬೇಕಾದರೆ ಪರಿಶ್ರಮದೊಂದಿಗೆ ಕಲಾಸಕ್ತಿಯೂ ಮುಖ್ಯ. ಭರತನಾಟ್ಯ ಕಲೆ ಶ್ರೇಷ್ಠ ಕಲೆಯಾಗಿದ್ದು ಇದರ ಶಾಸ್ತ್ರೀಯತೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಜವಬ್ದಾರಿ ನಮ್ಮೆಲ್ಲರಿಗೂ ಇದೆ ಎಂದು ಕರ್ನಾಟಕ ರಾಜ್ಯೋತ್ಸವ ಪುರಸ್ಕೃತ, ನಾಟ್ಯಾಚಾರ್ಯ ಉಳ್ಳಾಲ ಮೋಹನ್ ಕುಮಾರ್ ಅವರು ಹೇಳಿದರು.

ಅಸೈಗೋಳಿಯಲ್ಲಿ ಗುರುವಾರ ಅಸೈಗೋಳಿಯ ಶ್ರೀ ದುರ್ಗಾ ಸ್ವಾತಿ ನೃತ್ಯಾಲಯದ 'ಸಾಧನಾ-2026' 12ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ವಹಿಸಿ, ಭಾರತೀಯ ಸಂಸ್ಕೃತಿಯು ಅತ್ಯಂತ ಶ್ರೀಮಂತ ಸಂಸ್ಕೃತಿಯಾಗಿದೆ. ಭರತನಾಟ್ಯ, ಯಕ್ಷಗಾನದಂತಹ ಕಲೆಗಳು ನಮ್ಮ ನಾಡಿನ ಶ್ರೇಷ್ಠತೆಗೆ ಕಾರಣೀಭೂತವಾಗಿದೆ. ದುರ್ಗಾಸ್ವಾತಿನೃತ್ಯಾಲಯವುಯಶಸ್ವಿಯಾಗಿ ಮುನ್ನಡೆಯಲಿ ಎಂದರು.

ನಾಟ್ಯಾಚಾರ್ಯ ಉಳ್ಳಾಲ ಮೋಹನ್ ಕುಮಾರ್, ವಿದುಷಿ ರಾಜಶ್ರೀ ಉಳ್ಳಾಲ ವಿದ್ವಾನ್ ಪ್ರಮೋದ್ ಉಳ್ಳಾಲ್ ಅವರಿಗೆ ಗೌರವಾಭಿವಂದನೆ ಸಲ್ಲಿಸಲಾಯಿತು. ವಿದ್ಯಾರತ್ನ ಆಂಗ್ಲ ಮಾಧ್ಯಮ ಶಾಲೆಯ ಸಂಚಾಲಕರಾದ ರವೀಂದ್ರ ಶೆಟ್ಟಿ ಉಳಿದೊಟ್ಟು, ಪುಣ್ಯಕೋಟಿ ಶ್ರೀ ಶಾರದಾ ಗಣಪತಿ ವಿದ್ಯಾ ಸಂಸ್ಥೆಯ ಸಂಚಾಲಕ ಟಿ.ಜಿ.ರಾಜಾರಾಂ ಭಟ್, ಬಂಟರ ಸಂಘದ ಅಧ್ಯಕ್ಷ ರವೀಂದ್ರ ರೈ ಕಲ್ಲಿಮಾರ್, ಮುಡಿಪು ಕುಲಾಲ ಸಂಘದ ಅಧ್ಯಕ್ಷ ಪುಂಡರೀಕ್ಷಾ ಕುಲಾಲ್, ಪ್ರವೀಣ್ ಕುಂಪಲ, ಯುವ ಉದ್ಯಮಿ ಕಿರಣ್ ಕುಮಾರ್, ಉದ್ಯಮಿ ಚಂದ್ರಶೇಖರ್ ಮಂಟಮೆ ಮತ್ತಿತರರು ಇದ್ದರು. ನೃತ್ಯಗುರು ವಿದುಷಿ ಸ್ವಾತಿ ಭಟ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸ್ವಸ್ತಿಕಾ ಸ್ವಾಗತಿಸಿ, ದಿನೇಶ್ ನಿರೂಪಿಸಿ, ವಿದ್ಯಾಪ್ರಭು ವಂದಿಸಿದರು. ಬಳಿಕ ವಿದ್ಯಾರ್ಥಿಗಳಿಂದ ಭರತನಾಟ್ಯ, ನೃತ್ಯರೂಪಕ ನಡೆಯಿತು.

ವಲೇರಿಯನ್ ಡಿ’ಸೋಜರ ಕಥಾ ಸಂಗ್ರಹ ಪುಸ್ತಕ ಬಿಡುಗಡೆ



ಮಂಗಳೂರು: ಕೊಂಕಣಿ ಸಾಹಿತ್ಯ ಮತ್ತು ಸಂಘಟನೆಗೆ ವಲ್ಲಿ ವಗ್ಗ ಎಂದೇ ಖ್ಯಾತರಾದ ವಲೇರಿಯನ್ ಡಿಸೋಜ ಅವರ ಕೊಡುಗೆ ಮಹತ್ತರವಾದುದು ಎಂದು ಕೊಂಕಣಿ ಭಾಷಾ ಸಲಹಾ ಸಮಿತಿಯ ಸಂಚಾಲಕ, ಕವಿ ಮೆಲ್ವಿನ್ ರೊಡ್ರಿಗಸ್ ಅಭಿಪ್ರಾಯಪಟ್ಟರು.

ಅವರು ವಲ್ಲಿ ವಗ್ಗ ಮೈಸೂರು ಕಾವ್ಯನಾಮದಿಂದ ಖ್ಯಾತರಾಗಿರುವ, ನಿರ್ಕಾಣ್ - ವಗ್ಗದ ವಲೇರಿಯನ್ ಡಿಸೋಜಾ ಅವರ ವಿಂಚ್ಣಾರ್ ಕಾಣಿಯೊ (ಆಯ್ದ ಕತೆಗಳು) ಕಥಾ ಸಂಗ್ರಹವನ್ನು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಸಹೋದಯ ಸಭಾಂಗಣದಲ್ಲಿ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ವಲ್ಲಿ ವಗ್ಗ ಅವರು ಅಭಿಪ್ರಾಯ ಬೇಧವಿರುವ ಕೊಂಕಣಿ ಲೇಖಕರನ್ನು ಒಗ್ಗೂಡಿಸಿ, ಸಂಬಂಧಗಳನ್ನು ದಾರದಲ್ಲಿ ಪೋಣಿಸುವ ದರ್ಜಿಯಂತೆ. ಕಳೆದ ಆರು ದಶಕಗಳಿಂದ ಸತತವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿರುವ ಅವರ ಸಾಹಿತ್ಯವನ್ನು ಸಂಭ್ರಮಿಸುವುದೇ ಅವರಿಗೆ ನಾವು ಸಲ್ಲಿಸಬಹುದಾದ ಶ್ರೇಷ್ಠ ಗೌರವ ಎಂದರು.

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಎಚ್. ಎಮ್.ಪೆರ್ನಾಲ್ ವಿಂಚ್ಣಾರ್ ಕಾಣಿಯೊ ಕೃತಿಯನ್ನು ಪರಿಚಯಿಸಿದರು. 1964 ರಲ್ಲಿ ಬರವಣಿಗೆ ಆರಂಭಿಸಿ, ಕನ್ನಡದಲ್ಲೂ ಸಾಕಷ್ಟು ಕತೆಗಳನ್ನು ಬರೆದಿರುವ ವಲ್ಲಿ ವಗ್ಗ ಕರ್ನಾಟಕ ರಾಜ್ಯೋತ್ಸವ ಪುರಸ್ಕೃತ ಹಿರಿಯ ಕತೆಗಾರರಾಗಿದ್ದು, ಸಮಾಜದಲ್ಲಿ ದುರ್ಲಕ್ಷ್ಯಕ್ಕೊಳಗಾದ ಧಮನಿತ ವರ್ಗದ ಪರವಾಗಿ ನಿಲ್ಲುವುದು ಮತ್ತು ಜೀವಪರತೆಯನ್ನು ಸಾರುವುದೇ ಅವರ ಕತೆಗಳ ಪ್ರಮುಖ ಗುಣ ಎಂದರು. ಲೊಯ್ ಡಿ'ಸೋಜಾ ಈ ಸಂದರ್ಭದಲ್ಲಿ ಇದ್ದರು. ಲಿಬೇರಾ ಡಿ ಸೋಜಾ ಸ್ವಾಗತಿಸಿ, ವಲ್ಲಿ ವಗ್ಗ ವಂದಿಸಿದರು. ಕವಿ ಟೈಟಸ್ ನೊರೊನ್ಹಾ ಕಾರ್ಯಕ್ರಮ ನಿರೂಪಿಸಿದರು.

ಆತ್ಮಶಕ್ತಿ ಸಹಕಾರಿ ಸಂಘದ ಕರಂಗಲ್ಪಾಡಿ ಶಾಖೆಯ ವಾರ್ಷಿಕೋತ್ಸವ, ಗ್ರಾಹಕರ ಸಭೆ

ಉದ್ಯೋಗದಲ್ಲಿ ಮಹಿಳೆಯರಿಗೆ ಆದ್ಯತೆ: ಚಿತ್ತರಂಜನ್



ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಕರಂಗಲ್ಪಾಡಿ ಶಾಖೆಯ 11ನೇ ವಾರ್ಷಿಕೋತ್ಸವ ಪ್ರಯುಕ್ತ ಗ್ರಾಹಕರ ಸಭೆಯು ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಅಧ್ಯಕ್ಷತೆಯಲ್ಲಿ ಕರಂಗಲ್ಪಾಡಿ ಶಾಖೆಯಲ್ಲಿ ಜರುಗಿತು.

ಕಾರ್ಯಕ್ರಮವನ್ನು ಸಂಘದ ಸದಸ್ಯ ಪುಟ್ಟಸ್ವಾಮಿ ಎಚ್, ಬಿ. ಸತೀಶ್ ಶೆಟ್ಟಿ ಮಾರಪ್ಪ ಪೂಜಾರಿ, ಸುಮ ಪ್ರಸಾದ್ ಹಾಗೂ ಶಾಲಿನಿ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಮಾತನಾಡಿ, ಮಹಿಳಾ ಸಬಲೀಕರಣದ ಉದ್ದೇಶದಿಂದ ಸಂಘದಲ್ಲಿ ಹೆಚ್ಚಿನ ಮಹಿಳಾ ಸಿಬ್ಬಂದಿ ಗಳಿಗೆ ಉದ್ಯೋಗವಕಾಶ ನೀಡಲಾಗಿದೆ. ಸಂಘವು ಕೇವಲ ಬ್ಯಾಂಕಿಂಗ್ ಮಾತ್ರವಲ್ಲದೆ, ವಿವಿಧ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿ ಕೊಂಡಿದೆ ಎಂದರು.

ಕರಂಗಲ್ಪಾಡಿ ಶಾಖೆಯ ವಾರ್ಷಿಕೋತ್ಸವದ ಪ್ರಯುಕ್ತ 500 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ಘೋಷಿಸಲಾಗಿದ್ದು 1000 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10.50 ವನ್ನು ನೀಡಲಾಗುತ್ತಿದ್ದು ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂಗೆ ಗರಿಷ್ಠ ಮೌಲ್ಯ ರೂ. 12,000 ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲವನ್ನು ಸದಸ್ಯರಿಗೆ ನೀಡಲಾಗುವುದು ಎಂದರು.

ಸಂಘದ ಸದಸ್ಯ ನಾಗೇಶ್ ಸಂಘದ ಸಿಬ್ಬಂದಿ ಗಳ ಕಾರ್ಯ ವೈಖರಿಯನ್ನು ಮೆಚ್ಚುಗೆ ವ್ಯಕ್ತಪಡಿಸಿದರು. ಸಂಘದ ಸದಸ್ಯ ಎನ್.ಪಿ ಪೂವಪ್ಪ, ಸುಮನ್ ಕುಮಾರ್ ಕಂದಕ್, ಬಿ. ಸತೀಶ್ ಕುಮಾರ್, ಅಶೋಕ್ ಮೊಯ್ಲಿ ಶುಭ ಹಾರೈಸಿದರು. ಈ ಸಂದರ್ಭ ಸಂಘದ ಉಪಾಧ್ಯಕ್ಷ ನೇಮಿರಾಜ್ ಪಿ, ನಿರ್ದೇಶಕರಾದ ಜಿ. ಪರಮೇಶ್ವರ ಪೂಜಾರಿ, ಸೀತಾರಾಮ್ ಎನ್, ಗೋಪಾಲ್ ಎಂ., ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೌಮ್ಯ ವಿಜಯ್ ಮತ್ತಿತರರು ಉಪಸ್ಥಿತರಿದ್ದರು. ಸಂಘದ ಕರಂಗಲ್ಪಾಡಿ ಶಾಖೆಯ ಸಿಬ್ಬಂದಿ ಕುಮಾರಿ ಪ್ರಮೀಳಾ ಸ್ವಾಗತಿಸಿ , ಲಾವಣ್ಯ ವಂದಿಸಿದರು. ಶಾಖಾಧಿಕಾರಿ ಅನ್ವಿತಾ ನಿರೂಪಿಸಿದರು.

ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಪ್ರತಿಷ್ಠಾ ವರ್ಧಂತ್ಯುತ್ಸವ

ಉತ್ಸವ ಬಲಿ, ಬಂಡಿ ಉತ್ಸವ ಸಂಪನ್ನ



ಪುತ್ತೂರು: ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಪ್ರತಿಷ್ಠಾ ವರ್ಧಂತ್ಯುತ್ಸವವು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ ನೇತೃತ್ವದಲ್ಲಿ ಬ್ರಹ್ಮಶ್ರೀ ಗುರು ತಂತ್ರಿಯವರ ವೈಧಿಕತ್ವದಲ್ಲಿ ನಡೆಯಿತು.

ಪ್ರತಿಷ್ಠಾ ವರ್ಧಂತ್ಯುತ್ಸವದ ಅಂಗವಾಗಿ ಗುರುವಾರ ಬೆಳಗ್ಗೆ ಪ್ರಧಾನ ಅರ್ಚಕ ವೇ.ಮೂ. ವಸಂತ ಕೆದಿಲಾಯ ಅವರ ವೈಧಿಕತ್ವದಲ್ಲಿ ಗಣಪತಿ ಹೋಮ, ಚಂಡಿಕಾ ಹೋಮ ಹಾಗೂ ಪ್ರಧಾನ ಅರ್ಚಕ ವೇ. ಮೂ.. ವಿ.ಎಸ್. ಭಟ್ ಅವರ ನೇತೃತ್ವದಲ್ಲಿ ಶತರುದ್ರಾಭಿಷೇಕ ನಡೆಯಿತು. ರಾತ್ರಿ ಶ್ರೀ ದೇವರ ಉತ್ಸವ ಬಲಿ ಹೊರಟು ಹೊರಾಂಗಣದಲ್ಲಿ ಉತ್ಸವ, ಬಂಡಿ ಉತ್ಸವ ನಡೆಯಿತು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಸದಸ್ಯ ಮಹಾಬಲ ರೈ ವಳತ್ತಡ್ಕ ಈಶ್ವರ ಬೆಡೇಕರ್, ದಿನೇಶ್ ಪಿ.ವಿ., ನಳಿನಿ ಪಿ. ಶೆಟ್ಟಿ ಕೃಷ್ಣವೇಣಿ, ಸುಭಾಷ್ ರೈ ಬೆಳ್ಳಿಪ್ಪಾಡಿ, ಹಿರಿಯರಾದ ಕಿಟ್ಟಣ್ಣಗೌಡ ಇದ್ದರು.

ಸುತ್ತಮುತ್ತ

ನಾಳೆ ಗಮಕ ಸಪ್ತಾಹ ಉದ್ಘಾಟನೆ

ಮಂಗಳೂರು: ಕರ್ನಾಟಕ ಗಮಕ ಕಲಾ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಡಾ. ಕೆ.ಆರ್ ಶೆಟ್ಟಿ ತುಳು ತಿರ್ಲಜಕೆ ಚಾವಡಿ ನಿಟ್ಟೆ ವಿಶ್ವವಿದ್ಯಾಲಯ ಹಾಗೂ ಮಂದಾರ ಪ್ರತಿಷ್ಠಾನ, ಕುಡುಪು ಇವರ ಸಹಯೋಗದಲ್ಲಿ ಅಧಿಕ ಮಾಸ ಪ್ರಯುಕ್ತ 'ಅಧಿಕಸ್ಯ ಅಧಿಕಂ ಫಲಂ' ಎನ್ನುವ ವಿಶೇಷ ಗಮಕ ಸಪ್ತಾಹವನ್ನು ಹಮ್ಮಿಕೊಳ್ಳಲಾಗಿದೆ. ದಕ್ಷಿಣ ಕನ್ನಡದ ನಾಲ್ಕು ಪ್ರಸಿದ್ಧ ದೇಗುಲಗಳಲ್ಲಿ ನಾಲ್ಕು ವಾರಗಳು ಸತತ ಕಾರ್ಯಕ್ರಮ ನಡೆಯಲಿದ್ದು, ಮೇ 17ರ ಬೆಳಗ್ಗೆ 10ಕ್ಕೆ ಶರವು ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಕ್ಷೇತ್ರದ ಆಡಳಿತ ಮೊಕ್ತೇಸರ ಶರವು ರಾಘವೇಂದ್ರ ಶಾಸ್ತ್ರಿ, ಧರ್ಮದರ್ಶಿ ಹರಿಕೃಷ್ಣ ಪುನರೂರು, ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಹಾಗೂ ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಎಸ್.ಪ್ರದೀಪ ಕುಮಾರ ಕಲ್ಕೂರ ಮತ್ತಿರರ ಉಪಸ್ಥಿತಿಯಲ್ಲಿ ' ಗಮಕ ಸಪ್ತಾಹ ' ಉದ್ಘಾಟನೆಗೊಳ್ಳಲಿದೆ.

ಪ್ರಥಮ ಸಪ್ತಾಹ 'ಶ್ರೀ ರಾಘವೇಂದ್ರ ಸರಿತ್ಸಾಗರ' ಶರವು ದೇವಳದಲ್ಲಿ, ದ್ವಿತೀಯ ಸಪ್ತಾಹ 'ಸಪ್ತ ಕಲ್ಯಾಣ' ಮಂಗಳಾದೇವಿ ದೇವಸ್ಥಾನದಲ್ಲಿ, ತೃತೀಯ ಸಪ್ತಾಹ 'ಭಾಗವತದ ಕತೆಗಳು' ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ, ಚತುರ್ಥ ಸಪ್ತಾಹ 'ಮಂದಾರ ರಾಮಾಯಣ' ಕುಡುಪು ಶ್ರೀ ಅನಂತ ಪದ್ಮನಾಭ ದೇಗುಲದಲ್ಲಿ ಜರಗಲಿದೆ ಎಂದು ಗಮಕ ಕಲಾ ಪರಿಷತ್ತು ಮಂಗಳೂರು ತಾಲೂಕು ಘಟಕದ ಅಧ್ಯಕ್ಷ ಗಮಕಿ ಸುರೇಶ್ ರಾವ್ ಅತ್ತೂರು, ಕಾರ್ಯದರ್ಶಿ ಶುಭಕರ ಕೆ. ಮತ್ತು ಪ್ರಮುಖರಾದ ಎಸ್.ಪ್ರದೀಪ ಕುಮಾರ ಕಲ್ಕೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ವೈಫಲ್ಯ ಕಾರಣ: ಎನ್‌ಎಸ್‌ಯುಐ

ಉಡುಪಿ: ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಭಾರೀ ಅಕ್ರಮಗಳಿಂದಾಗಿ ನೀಟ್-ಯುಜಿ ಪರೀಕ್ಷೆ ರದ್ದಾಗಲು ಕೇಂದ್ರ ಸರ್ಕಾರದ ವೈಫಲ್ಯವೇ ಕಾರಣ ಎಂದು ಎನ್‌ಎಸ್‌ಯುಐ ಉಡುಪಿ ಜಿಲ್ಲಾ ಸಮಿತಿ ಅಧ್ಯಕ್ಷ ಸೌರಭ್ ಬಲ್ಲಾಳ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಉಡುಪಿಯಲ್ಲಿ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉಡುಪಿ, ದಕ್ಷಿಣ ಕನ್ನಡ ಮತ್ತು ಕರ್ನಾಟಕದಾದ್ಯಂತ ವಿದ್ಯಾರ್ಥಿಗಳು 2 ವರ್ಷ ತಯಾರಿ ನಡೆಸಿ, ಕೋಚಿಂಗ್‌ಗೆ ಲಕ್ಷಾಂತರ ರೂ. ಖರ್ಚು ಮಾಡಿ ಈಗ ಅನಿಶ್ಚಿತತೆ ಮತ್ತು ತೀವ್ರ ಮಾನಸಿಕ ಆಘಾತ ಎದುರಿಸುತ್ತಿದ್ದಾರೆ. ವಿದ್ಯಾರ್ಥಿಗಳ ತಪ್ಪಿಲ್ಲದೆ ಮರು- ಪರೀಕ್ಷೆ ಅನ್ಯಾಯದ ಶಿಕ್ಷೆಯಾಗಿದೆ. ಎನ್‌ಟಿಎ ಪದೇ ಪದೇ ವಿಫಲವಾಗಿ ಎಲ್ಲಾ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ. ಕೋಚಿಂಗ್ ಮಾಫಿಯಾದ ಕೈಗೊಂಬೆಯಾಗಿರುವ ಎನ್‌ಟಿಎಯನ್ನು ತಕ್ಷಣ ವಿಸರ್ಜಿಸಬೇಕೆಂದು ಆಗ್ರಹಿಸಿದರು.

ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತಂತೆ ಉನ್ನತ ಮಟ್ಟದ ತನಿಖೆಯಾಗಬೇಕು. ಕೋಚಿಂಗ್ ಮಾಫಿಯಾ-ಓಎಂ ನಂಟನ್ನು ಬಯಲಿಗೆಳೆಯಲು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯ ನ್ಯಾಯಾಂಗ ಆಯೋಗ ರಚಿಸಿ, ಮಾದರಿ ಶಿಕ್ಷೆ ನೀಡಬೇಕು. ನ್ಯಾಯ ವಿಳಂಬವಾದರೆ ಉಡುಪಿ, ಕುಂದಾಪುರ, ಕಾರ್ಕಳ ಮತ್ತು ಬ್ರಹ್ಮಾವರದಲ್ಲಿ ಜಿಲ್ಲಾವ್ಯಾಪಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಎನ್‌ಎಸ್‌ಯುಐ ಪ್ರಮುಖರಾದ ಶರತ್ ಕುಂದರ್, ಅನೀಶ್ ಕುಮಾರ್, ಅಧ್ನಾನ್ ಮೊದಲಾದವರು ಉಪಸ್ಥಿತರಿದ್ದರು.

ಮೇ 20: ಪ್ರತಿಷ್ಠಾ ವರ್ಧಂತಿ

ಮುಲ್ಕಿ: ಕೆ.ಎಸ್. ರಾವ್ ನಗರದ ಶ್ರೀ ನಾರಾಯಣ ಗುರು ಸಮಾಜ ಸೇವಾ ಸಂಘದ 4ನೇ ವರ್ಷದ ಗುರುಮೂರ್ತಿ ಪ್ರತಿಷ್ಠಾ ವರ್ಧಂತಿಯು ಶ್ರೀ ವಿಠ್ಠಾನಂದ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಹೆಜಮಾಡಿ ಮಹೇಶ್ ಶಾಂತಿ ಅವರ ಪೌರೋಹಿತ್ಯದಲ್ಲಿ ಮೇ 20ರಂದು ನಡೆಯಲಿದೆ. ಅಂದು ಬೆಳಗ್ಗೆ ಗಣಪತಿ ಹೋಮ, ಕಲಶಾಭಿಷೇಕ, ಬೆಳಗ್ಗೆ 10ರಿಂದ ಭಜನೆ, ಗುರುಪೂಜೆ, ಮಧ್ಯಾಹ್ನ ಮಹಾ ಮಂಗಳಾರತಿ, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಸಂಜೆ 7ರಿಂದ ನಡೆಯುವ ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ಶಾಸಕ ಉಮಾನಾಥ ಎ. ಕೋಟ್ಯಾನ್ ವಹಿಸಲಿದ್ದು ಮಾಜಿ ಸಚಿವ ವಿನಯ ಕುಮಾರ್ ಸೊರಕೆ ವಿದ್ಯಾರ್ಥಿ ವೇತನ ಹಾಗೂ ಪುಸ್ತಕ ವಿತರಣೆ ಮಾಡಲಿದ್ದಾರೆ. ಮಣಿಪಾಲ ಕೆಎಂಸಿ ಆಸ್ಪತ್ರೆಯ ಸರ್ಜನ್ ಡಾ.ಶೈಲೇಶ್ ಪೂಜಾರಿ, ಕರ್ನಿರೆ ಸುವರ್ಣ ಪ್ರತಿಷ್ಠಾನದ ಸ್ಥಾಪಕಾಧ್ಯಕ್ಷ ಪ್ರಭಾಕರ ಡಿ. ಸುವರ್ಣ, ಉದ್ಯಮಿ ಜನಾರ್ದನ ಪೂಜಾರಿ ಮುಖ್ಯ ಅಭ್ಯಾಗತರಾಗಿ ಭಾಗವಹಿಸಲಿದ್ದಾರೆ. ಅಂತಾರಾಷ್ಟ್ರೀಯ ಕುಡ್ಡ ಆಟಗಾರ್ತಿ ಧನಲಕ್ಷ್ಮಿ ಪೂಜಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಚೈತನ್ಯ ಕೋಟ್ಯಾನ್ ಅವರನ್ನು ಗೌರವಿಸಲಾಗುವುದು.

ರಸ್ತೆ ಅವ್ಯವಸ್ಥೆ ಸರಿಪಡಿಸಲು ಒತ್ತಾಯಿಸಿ ರಸ್ತೆ ತಡೆ, ಪ್ರತಿಭಟನೆ

ಸುರತ್ಕಲ್: ಕಾನ -ಚೊಕೂರು -ಜೋಕಟ್ಟೆ ಮುಖ್ಯ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ರಸ್ತೆ ಸಂಪೂರ್ಣ ಹೊಂಡಗುಂಡಿಗಳಿಂದ ತುಂಬಿ ಹೋಗಿದ್ದು ಕೂಡಲೇ ರಸ್ತೆ ಕಾಮಗಾರಿ ನಡೆಸಿ ದುರಸ್ತಿ ಮಾಡುವಂತೆ ಒತ್ತಾಯಿಸಿ ಕಾನ ಜಂಕ್ಷನ್ ಬಳಿ ಡಿವೈಎಫ್ಐ ಕಾನ ಘಟಕ, ಆಟೋ ರಿಕ್ಷಾ ಚಾಲಕರ ಸಂಘ, ಸಿಐಟಿಯು ನಾಗರಿಕ ಹೋರಾಟ ಸಮಿತಿ ಕಾನ ನೇತೃತ್ವದಲ್ಲಿ ಮಂಗಳವಾರ ರಸ್ತೆ ತಡೆ ಪ್ರತಿಭಟನೆ ನಡೆಯಿತು. ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಮಾತನಾಡಿದರು. ವಿವಿಧ ಸಂಘಟನೆಗಳ ಪ್ರಮುಖರಾದ ಅಬೂಬಕ್ಕರ್ ಬಾವ ಜೋಕಟ್ಟೆ, ಇಕ್ಬಾಲ್ ಜೋಕಟ್ಟೆ,ಬಿಕೆ ಮಸೂದ್,ಅಜ್ಮಲ್ ಅಹ್ಮದ್, ಶ್ರೀನಾಥ್ ಕುಲಾಲ್, ಜಗದೀಶ್, ಅಬ್ದುಲ್ ರಹೀಮ್,ಅಬೂಬಕ್ಕರ್ ಕೆ.ಪಿ, ಫ್ರಾನ್ಸಿಸ್ ಡಿಸೋಜಾ, ಮುಸ್ತಫಾ ಒಕ್ಕೆಣಿಯರ್, ಲಕ್ಷ್ಮೀಶ ಅಂಚನ್, ಹಂಝ ಮೈಂದಗುರಿ, ಸುಧೀರ್ ಕೊಡಿಕೆರೆ, ಐ. ಮಹಮ್ಮದ್, ಇಬ್ರಾಹಿಂ ಹೆಸಿಬನವೀಸ, ಹನೀಫ್ ಕುಳಾಯಿ,ನವಾಜ್ ಕುಳಾಯಿ, ಸಿರಾಜ್ ಮೈಂದಗುರಿ ಉಪಸ್ಥಿತರಿದ್ದರು.





ಪುತ್ತೂರು, ಸುಳ್ಯ, ಬಂಟ್ವಾಳದಲ್ಲಿ ತಾಲೂಕುಮಟ್ಟದ ದಾಖಲಾತಿ ಆಂದೋಲನ | ವಿಷ್ಣುಪ್ರಸಾದ್ ಮಾಹಿತಿ

ದ.ಕ. ಜಿಲ್ಲೆಯ ಶಾಲೆಗಳಲ್ಲಿ ದ್ವಿಭಾಷಾ ಬೋಧನೆ ಅನುಷ್ಠಾನ

ಪುತ್ತೂರು/ಸುಳ್ಯ/ಬಂಟ್ವಾಳ: ಸರಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸುವ ದೃಷ್ಟಿಯಿಂದ ಪುತ್ತೂರು ತಾಲೂಕು ಮಟ್ಟದಲ್ಲಿ ಆಯೋಜಿಸಿರುವ ದಾಖಲಾತಿ ಆಂದೋಲನಕ್ಕೆ ಚಾಲನೆಯಾಗಿ ಶುಕ್ರವಾರ ಪುತ್ತೂರು, ಸುಳ್ಯ, ಬಂಟ್ವಾಳದಲ್ಲಿ ಜಾಥಾ ನಡೆಯಿತು.

ಪುತ್ತೂರು ತಹಶೀಲ್ದಾರ್ ಎಸ್.ಬಿ. ಕೂಡಲಗಿ ಹಾಗೂ ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ನವೀನ್ ಭಂಡಾರಿ ಅವರ ಸಮ್ಮುಖದಲ್ಲಿ ತಾಲೂಕು ಆಡಳಿತ ಸೌಧದಲ್ಲಿ ಚಾಲನೆ ದೊರಕಿತು. ಬಳಿಕ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯವರೆಗೆ ಜಾಥಾ ನಡೆಸಲಾಯಿತು.

ಪುತ್ತೂರು ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್ ಸಿ. ಅವರು, ಆಂದೋಲನದ ಉದ್ದೇಶವನ್ನು ವಿವರಿಸಿ, ಆಂದೋಲನದ ಮೂಲಕ ತಾಲೂಕಿನಲ್ಲಿ ಕಳೆದ ವರ್ಷಕ್ಕಿಂತ ಶೇ. 5ಕ್ಕಿಂತ ಹೆಚ್ಚು ದಾಖಲಾತಿಯ ಗುರಿ ಹೊಂದಲಾಗಿದ್ದು, ಶಾಲೆಯಿಂದ ಹೊರಗುಳಿದಿರುವ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶ ಇರುತ್ತದೆ. ಸರ್ಕಾರಿ ಶಾಲೆಗಳಲ್ಲಿ ಸಿಗುವ ಗುಣಮಟ್ಟದ ಶಿಕ್ಷಣದ ಜತೆಗೆ ವಿವಿಧ ಸೌಲಭ್ಯಗಳ ಕುರಿತು ಪೋಷಕರ ಮನವೊಲಿಸಿ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಸೇರಿಸುವ ಪ್ರಯತ್ನ ಮಾಡಲಾಗುತ್ತಿದೆ. ರಾಜ್ಯದ ಆಯ್ದ 15 ಜಿಲ್ಲೆಗಳಲ್ಲಿ ದ್ವಿಭಾಷಾ ಬೋಧನಾ ಕಲಿಕೆಯನ್ನು ಸರಕಾರ ಜಾರಿ ಮಾಡಿದ್ದು ದ.ಕ. ಜಿಲ್ಲೆಯ ಎಲ್ಲಾ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ ಬೋಧನೆ ಅನುಷ್ಠಾನಗೊಳ್ಳಲಿದೆ ಎಂದು ವಿವರಿಸಿದರು.



ಮುಂದೆ ಕ್ಲಸ್ಟರ್ ಮಟ್ಟದಲ್ಲಿ ಆಂದೋಲನಗಳು ನಡೆದು ಎಲ್ಲಾ ಕಡೆಯೂ ಸರಕಾರಿ ಶಾಲೆಗಳಿಗೆ ಮಕ್ಕಳನ್ನು ದಾಖಲಿಸುವ ಪ್ರಯತ್ನ ನಡೆಯಲಿದೆ. ಮೇ 29ರವರೆಗೆ ಆಂದೋಲನ ನಡೆದು ಬಳಿಕ ಶಾಲಾರಂಭ, ಪ್ರಾರಂಭೋತ್ಸವಕ್ಕೆ ಸಿದ್ಧತೆ ನಡೆಯುತ್ತದೆ ಎಂದರು.

ಪ್ರಭಾರ ಕ್ಷೇತ್ರ ಸಮನ್ವಯಾಧಿಕಾರಿ ನವೀನ್ ಸ್ಟೀಫನ್ ವೇಗಸ್, ಪ್ರಭಾರ ದೈಹಿಕ ಶಿಕ್ಷಣ ಪರಿವೀಕ್ಷಕ ಚಕ್ರಪಾಣಿ ಎ.ಎ., ಶಿಕ್ಷಣ ಸಂಯೋಜಕ ಹರಿಪ್ರಸಾದ್, ಅಬ್ರಹಾಂ, ಕರುಣಾಕರ ಮಣಿಯಾಣಿ, ಬಿಆರ್.ಪಿ., ಸಿ.ಆರ್.ಪಿ.ಗಳು, ಶಿಕ್ಷಕರು ಉಪಸ್ಥಿತರಿದ್ದರು.

ಸುಳ್ಯದಲ್ಲಿ ಜಾಥಾ

ಸುಳ್ಯ ತಾಲೂಕು ಪಂಚಾಯತ್ ಆವರಣದಲ್ಲಿ ಶುಕ್ರವಾರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರದ ನೇತೃತ್ವದಲ್ಲಿ ಸುಳ್ಯ ತಾಲೂಕು ಮಟ್ಟದ ಶಾಲಾ ದಾಖಲಾತಿ ಆಂದೋಲನಕ್ಕೆ ಸುಳ್ಯ ತಹಶೀಲ್ದಾರ್ ಮಂಜುಳ ಎಂ. ಚಾಲನೆ ನೀಡಿ ಮಾತನಾಡಿದರು.

ಈ ವೇಳೆ ಮಾತನಾಡಿದ ಅವರು, ಸರಕಾರಿ ಶಾಲೆಯಲ್ಲಿ ದಾಖಲಾತಿ ಹೆಚ್ಚಿಸುವ ಜತೆಗೆ ಯಾವ ಮಗುವೂ ಶಿಕ್ಷಣದಿಂದ ಹೊರಗುಳಿಯಬಾರದು ಎಂಬ ಗುರಿಯನ್ನು ಇಟ್ಟುಕೊಂಡು ಸುಳ್ಯ ತಾಲೂಕು ಮಟ್ಟದ ಶಾಲಾ ದಾಖಲಾತಿ ಆಂದೋಲನ ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಪೋಷಕರು ತಮ್ಮ ತಮ್ಮ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಸೇರಿಸುವ ಮೂಲಕ ಸರಕಾರಿ ಶಾಲೆಗಳನ್ನು ಉಳಿಸುವ ಮತ್ತು ಬೆಳೆಸುವ ಕಾರ್ಯಕ್ಕೆ ಮುಂದಾಗಬೇಕಾಗಿದೆ ಎಂದು

ಕ್ಷೇತ್ರ ಸಂಪನ್ಮೂಲ ಅಧಿಕಾರಿ ಯು.ಕೆ. ಶೀತಲ್ ಮಾತನಾಡಿ, ಸರಕಾರಿ ಶಾಲೆಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದು, ಖಾಸಗಿ ಶಾಲೆಗಳಿಗೆ ಸರಿ ಸಮಾನವಾಗಿ ಅಭಿವೃದ್ಧಿಯನ್ನು ಹೊಂದಿದೆ. ತಾಲೂಕಿನಲ್ಲಿ ವಿವಿಧ ಶಾಲೆಗಳು ಎಲ್‌ಕೆಜಿ ಮತ್ತು ಯುಕೆಜಿಯನ್ನು ಒಳಗೊಂಡ ಪೂರ್ವ ಪ್ರಾಥಮಿಕ ಶಾಲೆಗಳಾಗಿದ್ದು ಪೋಷಕರಿಗೆ ಯಾವುದೇ ಆರ್ಥಿಕ ಹೊರೆ ಇಲ್ಲದೆ ಉಚಿತವಾದ ಶಿಕ್ಷಣ ನೀಡುವ ಕೆಲಸ ಸರ್ಕಾರಿ ಶಾಲೆಗಳಿಂದ ಆಗುತ್ತಿದೆ ಎಂದರು.

ದಾಖಲಾತಿ ಅಭಿಯಾನ

ಬಳಿಕ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ದಾಖಲಾತಿ ಅಭಿಯಾನದಲ್ಲಿ ವಿದ್ಯಾರ್ಥಿಗಳಿಗೆ ದಾಖಲಾತಿ ಪತ್ರವನ್ನು ನೀಡಿ ಅಭಿಯಾನಕ್ಕೆ ಚಾಲನೆ ನೀಡಿದರು. ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ರಾಜಣ್ಣ ಮಾತನಾಡಿ, ಸರಕಾರಿ ಶಾಲೆಗಳಲ್ಲಿ ಪಠ್ಯ ಚಟುವಟಿಕೆ ಸೇರಿ ವಿವಿಧ ಸವಲತ್ತುಗಳನ್ನು ನೀಡಲಾಗುತ್ತದೆ. ಸರಕಾರಿ ಶಾಲೆ ಕಲಿಕೆಯಲ್ಲಿ ಹಿಂದುಳಿದಿಲ್ಲ ಎಂಬುದಕ್ಕೆ ಹತ್ತನೇ ತರಗತಿ ಫಲಿತಾಂಶ ಸಾಕ್ಷಿಯಾಗಿದೆ. ತಾಲೂಕಿನ ಅನೇಕ ಸರ್ಕಾರಿ ಶಾಲೆಯಲ್ಲಿ ಶೇ.100 ತೇರ್ಗಡೆ ದಾಖಲಾಗಿದೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಎಸ್. ಹರಗಿ ಪ್ರಾಸ್ತಾವಿಸಿದರು. ಗ್ಯಾರೆಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ಮತ್ತಿತರರು ಉಪಸ್ಥಿತರಿದ್ದರು. ಶಿಕ್ಷಣ ಸಂಯೋಜಕ ಉದಯ ವಂದಿಸಿದರು. ನಾರಾಯಣ ಕಾರ್ಯಕ್ರಮ ನಿರ್ವಹಿಸಿದರು.

ಕ್ರಿಯಾಯೋಜನೆಗೆ ಮಾರ್ಗದರ್ಶನ

ಬಂಟ್ವಾಳ ಕ್ಷೇತ್ರ ಶಿಕ್ಷಣ ಇಲಾಖಾ ವತಿಯಿಂದ ಬಿ.ಸಿ.ರೋಡಿನ ಕೊಡಂಗೆ ಪಿಎಂ ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2026-27ನೇ ಸಾಲಿನ ತಾಲೂಕು ಹಂತದ ದಾಖಲಾತಿ ಆಂದೋಲನ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಬಂಟ್ವಾಳ ಕ್ಷೇತ್ರ ಪ್ರಭರ ಶಿಕ್ಷಣಾಧಿಕಾರಿ ಮಾಲತಿಯವರು ಸರ್ಕಾರದ ಈ ಮಹತ್ವಾಕಾಂಕ್ಷೆಯ ಯೋಜನೆಯ ಕುರಿತು ಮಾಹಿತಿಯನ್ನು ನೀಡಿದರಲ್ಲದೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿಸುವ ನಿಟ್ಟಿನಲ್ಲಿ ಪೋಷಕ ಕ್ರಿಯಾಯೋಜನೆ ರೂಪಿಸಲು ಮಾರ್ಗದರ್ಶನ ನೀಡಿದರು. ಪ್ರಭಾರ ಕ್ಷೇತ್ರ ಸಮನ್ವಯಾಧಿಕಾರಿಗಳಾದ ವಿದ್ಯಾ, ಶಿಕ್ಷಣ ಸಂಯೋಜಕರಾದ ಪ್ರತಿಮಾ ಮತ್ತು ಸುಧಾ, ಕೊಡಂಗೆ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಸುಧೀರ್ ಜಿ, ಪ್ರಾಥಮಿಕ ಮತ್ತು ಪ್ರೌಢಶಾಲೆಯ ಎಲ್ಲಾ ಶಿಕ್ಷಕರು, ಎಸ್ .ಡಿ. ಎಂ.ಸಿ ಸದಸ್ಯರು, ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರು ಮತ್ತು ಪಾಲಕರು ಶಾಲಾ ಮಕ್ಕಳು ಇದ್ದರು. ಈ ಸಂದರ್ಭ ಸ್ಥಳೀಯ ಪರಿಸರದಲ್ಲಿ ಜಾಥ ನಡೆಸಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಲು ಮನವೊಲಿಸಲಾಯಿತು. ಕೊಡಂಗೆ ಶಾಲೆಯ ವಿವಿಧ ತರಗತಿಗಳಿಗೆ ಈವರೆಗೆ 65 ಮಕ್ಕಳು ದಾಖಲಾಗಿದ್ದಾರೆ. ಶಾಲಾ ಮುಖ್ಯ ಶಿಕ್ಷಕಿ ಸುಗುಣ ಸ್ವಾಗತಿಸಿದರು.

ಕಿನ್ನಾಜೆಯ ಶ್ರೀ ಮಹಾಗಣಪತಿ ಸೇವಾ ವೃಂದದಿಂದ ಪ್ರತಿಭಾ ಪುರಸ್ಕಾರ



ಬಂಟ್ವಾಳ: ಇತ್ತೀಚಿನ ಸ್ಪರ್ಧಾತ್ಮಕ ಸಮಯದಲ್ಲಿ ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ಅಳವಡಿಸಿಕೊಂಡು, ವಿನಯತೆ, ಶಿಸ್ತಿನಿಂದ ನಡೆದರೆ ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಯಾಗಿ ಬೆಳೆಯಲು ಸಾಧ್ಯ ಎಂದು ಖ್ಯಾತ ಜ್ಯೋತಿಷ್ಯರಾದ ವೇದಮೂರ್ತಿ ಭವಾನಿ ಶಂಕರ್ ಭಟ್ ಇರುವೈಲು ಅಭಿಪ್ರಾಯ ವ್ಯಕ್ತಪಡಿಸಿದರು.

ಬಂಟ್ವಾಳ ತಾಲೂಕು ಕರ್ಪೆ ಗ್ರಾಮದ ಕಿನ್ನಾಜೆ ಗಣಪತಿ ದೇವಸ್ಥಾನ ವಠಾರದಲ್ಲಿ ಶ್ರೀ ಮಹಾಗಣಪತಿ ಸೇವಾ ವೃಂದದ ವತಿಯಿಂದ ಜರಗಿದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನಗೈದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಎಡಪದವು ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಗಾಯತ್ರಿ ಶಿವರಾಯ ಪ್ರಭು ಮಾತನಾಡಿ, ಮಕ್ಕಳು ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ತಾವೇ ಮಾಡಿಕೊಂಡು ಶಿಕ್ಷಣ ಪಡೆಯುವ ಮೂಲಕ ಹಿರಿಯರೊಂದಿಗೆ ಗೌರವಯುತವಾಗಿ ವರ್ತಿಸಬೇಕು ಎಂದರು.

ಶೇ.90ಕಿಂತ ಅಂಕ ಪಡೆದವರಿಗೆ ಪುರಸ್ಕಾರ

ಕಾರ್ಯಕ್ರಮದಲ್ಲಿ ಶೇ. 90ಕ್ಕಿಂತ ಅಧಿಕ ಅಂಕ ಪಡೆದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಾಧಕರನ್ನು ಗೌರವಿಸಲಾಯಿತು.

ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕ ಕೆ. ರಮೇಶ್ ನಾಯಕ್ ರಾಯಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಿದ್ದಕಟ್ಟೆ ಸಿ.ಎ.ಬ್ಯಾಂಕ್ ಅಧ್ಯಕ್ಷ ಪ್ರಭಾಕರ ಪ್ರಭು, ಸ್ಥಳೀಯ ಪ್ರಮುಖರಾದ ಗಣೇಶ್ ಪ್ರಭು ಪಂಜಿಕಲ್ಲು, ದಯಾನಂದ ಭಟ್ ಬಾಳ್ತಿಲ, ನಿವೃತ್ತ ಶಿಕ್ಷಕರಾದ ಕೆ.ನಾರಾಯಣ ನಾಯಕ್, ದಾಮೋದರ ನಾಯಕ್, ಶಶಿಧರ ಶೆಣೈ, ಗೋಪಾಲಕೃಷ್ಣ ಪ್ರಭು, ಚಂದ್ರಶೇಖರ ಪ್ರಭು ಹೆಣ್ಣೂರು, ರವೀಂದ್ರ ನಾಯಕ್ ಬೋಳಂಗಡಿ, ರಾಮರಾಯ ನಾಯಕ್ ಇದ್ದರು. ಸೇವಾ ವೃಂದದ ಅಧ್ಯಕ್ಷ ಸುಧಾಕರ ಪ್ರಭು ಸ್ವಾಗತಿಸಿದರು, ಶಿಕ್ಷಕ ಕೆ. ರವೀಂದ್ರ ನಾಯಕ್ ನಿರೂಪಿಸಿದರು. ಕೆ. ರಾಮಕೃಷ್ಣ ನಾಯಕ್ ವಂದಿಸಿದರು.

ದಿ.ನವೀನ್ ಕುಮಾರ್ ರೈ ಮೇನಾಲ ಪ್ರಯಾಣಿಕರ ತಂಗುದಾಣ ಲೋಕಾರ್ಪಣೆ



ಸುಳ್ಯ: ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಹಾಗೂ ಬಿಜೆಪಿ ಮುಖಂಡರಾಗಿದ್ದ ದಿ. ನವೀನ್ ರೈ ಮೇನಾಲ ಅವರ ನೆನಪಿನಲ್ಲಿ ಅಭಿಮಾನಿಗಳ ಬಳಗದ ವತಿಯಿಂದ ಮೇನಾಲದಲ್ಲಿ ನಿರ್ಮಿಸಿದ ಪ್ರಯಾಣಿಕರ ತಂಗುದಾಣವನ್ನು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಗುರುವಾರ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಸಜ್ಜನ ಸಮಾಜ ಸೇವಕರಾಗಿದ್ದ ನವೀನ್ ರೈ ಅವರು ಬಿಜೆಪಿ ಕಾರ್ಯಕರ್ತರಿಗೆ ಮಾದರಿಯಾಗಿದ್ದರು. ಸಾಮಾಜಿಕವಾಗಿ ಕೆಲಸ ಮಾಡಲು ಅವರು ಪ್ರೇರಣೆಯಾಗಿದ್ದು ಅವರ ನಿಧನರಾದ ದಿನದಂದು ಕಂಡ ಆ ಜನ ಸಮೂಹವೇ ಅವರ ಗುಣವನ್ನು ತೋರಿಸುತ್ತದೆ ಎಂದು ಹೇಳಿದರು.

ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, ದಿ. ನವೀನ್ ರೈ ಮೇನಾಲ ಪ್ರತಿಯೊಬ್ಬರೊಂದಿಗೂ ಬೆರೆಯುವ ಗುಣಗಳನ್ನು ಹೊಂದಿದ್ದು, ಅವರೊಬ್ಬ ಅಜಾತಶತ್ರುವಾಗಿ, ಸಮಾಜಸೇವಕನಾಗಿ ಜನ ನಾಯಕನಾಗಿ ಸಮಾಜದಲ್ಲಿ ಗುರುತಿಸಿದ್ದರು ಎಂದು ಹೇಳಿದರು.

ಈ ಸಂದರ್ಭ ರೂಪ ನವೀನ್ ರೈ, ನಯನ್ ಕುಮಾರ್ ರೈ, ಮೇನಾಲ ಕುಟುಂಬದ ಹಿರಿಯರಾದ ಗುಡ್ಡಪ್ಪ ರೈ ಮೇನಾಲ, ಪ್ರಮುಖರಾದ ಪದ್ಮನಾಭ ಸ್ವಾಮೀಜಿ ಮೇನಾಲ, ಬಿಜೆಪಿ ಮಂಡಲ ಸಮಿತಿ ಅಧ್ಯಕ್ಷ ವೆಂಕಟ್ ವಳಲಂಬೆ, ಮಾಜಿ ಅಧ್ಯಕ್ಷ ಹರೀಶ್ ಕಂಜಿಪಿಲಿ, ಕಿಟ್ಟಣ್ಣ ರೈ ಇರಂತಮಜಲು, ರವೀಂದ್ರನಾಥ ರೈ, ವಿಕ್ರಂ ಅಡ್ಪಂಗಾಯ, ಪ್ರಸಾದ್ ರೈ ಮೇನಾಲ, ಸುರೇಶ್ ಕಣೆಮರಡ್ಕ, ಎ.ವಿ. ತೀರ್ಥರಾಮ, ಮುಳಿಯ ಕೇಶವ ಭಟ್, ರಾಕೇಶ್ ರೈ ಕೆಡೆಂಜಿ, ಕೇಶವ ಅಡ್ತಲೆ, ಜಯರಾಜ್ ಕುಕ್ಕೇಟ್ಟಿ, ಸುನಿಲ್ ರೈ ಕೇರ್ಪಳ, ಸತ್ಯವತಿ ಬಸವನಪಾದೆ, ಭಾರತಿ ಉಳುವಾರು, ವಿನುತ ಪಾತಿಕಲ್ಲು, ಬಾಲಚಂದ್ರ ದೇವರಗುಂಡ, ಶಿವಪ್ರಸಾದ್ ಉಗ್ರಾಣಿಮನೆ, ರಂಜಿತ್ ರೈ ಮೇನಾಲ, ಪುಷ್ಪಾ ಮೇದಪ್ಪ, ನಾರಾಯಣ ಕೇಕಡ್ಕ, ವಿನಯ ಕುಮಾರ್ ಕಂದಡ್ಕ, ಚನಿಯ ಕಲ್ತಡ್ಕ, ಶಿಲ್ಪಾ ಸುದೇವ್, ಶಕ್ತಿ ಭಟ್, ಸಂತೋಷ್ ಕುತ್ತಮೊಟ್ಟೆ, ಅಶೋಕ್ ಅಡ್ಕಾರ್, ಶೌಖತ್ ಅಲಿ, ಆನಂದ ರಾವ್ ಕಾಂತಮಂಗಲ, ಶ್ರೀಕಾಂತ್ ಮಾವಿನಕಟ್ಟೆ, ರಮೇಶ್ ಇರಂತಮಜಲು ಮತ್ತಿತರರು ಉಪಸ್ಥಿತರಿದ್ದರು. ದಿ.ನವೀನ್ ಕುಮಾರ್ ರೈ ಮೇನಾಲ ಅಭಿಮಾನಿ ಬಳಗದ ಸುಬೋಧ್ ಶೆಟ್ಟಿ ಮೇನಾಲ ಸ್ವಾಗತಿಸಿ, ವಂದಿಸಿದರು. ಬಾಲಕೃಷ್ಣ ಮೇನಾಲ ಕಾರ್ಯಕ್ರಮ ನಿರ್ವಹಿಸಿದರು.

ರಾಮಕುಂಜದಲ್ಲಿ ಕಸಾಪ ದಿನಾಚರಣೆ



ಕಡಬ: ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕಡಬ ತಾಲೂಕು ಘಟಕದ ವತಿಯಿಂದ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ರಾಮಕುಂಜದ ಶ್ರೀ ರಾಮಕುಂಜೇಶ್ವರ ವಸತಿ ಶಾಲಾ ಸಭಾಂಗಣದಲ್ಲಿ ಗುರುವಾರ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಕ.ಸಾ.ಪ. ಕಡಬ ತಾಲೂಕು ಘಟಕದ ಅಧ್ಯಕ್ಷ ಕೆ. ಸೇಸಪ್ಪ ರೈ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ಹಾದಿಯ ಕುರಿತು ತಿಳಿಸಿದರು. ಹೋಬಳಿ ಅಧ್ಯಕ್ಷ ಪದ್ಮಪ್ಪ ಗೌಡ ಮಾತನಾದರು.

ಕೋಶಾಧಿಕಾರಿ ಬಾಲಚಂದ್ರ ಮುಚ್ಚಿಂತಾಯ, ಸದಸ್ಯರಾದ ಎ.ಎನ್. ಕೊಳಂಬೆ, ಪುಷ್ಪ ರಾಮಕುಂಜೇಶ್ವರ ಆಂಗ್ಲ ಮಾಧ್ಯಮ ಶಾಲಾ ಮುಖ್ಯ ಶಿಕ್ಷಕಿ ಗಾಯತ್ರಿ ಯು.ಎನ್., ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕಿ ಲೋಹಿತ ಎ. ಕನ್ನಡ ಶಿಕ್ಷಕಿ ಸಂಚಿತ ಇದ್ದರು. ತಾಲೂಕು ಸಂಘಟನಾ ಕಾರ್ಯದರ್ಶಿ ಕಿಶೋರ್ ಕುಮಾರ್ ಬಿ. ಸ್ವಾಗತಿಸಿ, ಸದಸ್ಯೆ ಪ್ರೇಮಾ ವಂದಿಸಿದರು.

ಮೂಡುಗಿಳಿಯಾರು: ಮುಖ್ಯರಸ್ತೆ ತ್ಯಾಜ್ಯ ತೆರವು



ಕೋಟ: ರೋಟರಿ ಸಮುದಾಯದಳ ಮೂಡುಗಿಳಿಯಾರು ನೇತೃತ್ವದಲ್ಲಿ ಸ್ವಚ್ಛ ಗ್ರಾಮ ಪರಿಕಲ್ಪನೆಯಡಿ ಮುಖ್ಯ ರಸ್ತೆಯಲ್ಲಿ ತ್ಯಾಜ್ಯ ತೆರವು ಕಾರ್ಯಗೈದರು.

ಈ ಅಭಿಯಾನದಲ್ಲಿ ವಕೀಲ ಮಂಜುನಾಥ್ ಗಿಳಿಯಾರ್ ಭಾಗವಹಿಸಿ, ಪ್ರಮುಖರಾದ ತಿಮ್ಮ ಪೂಜಾರಿ, ರೋಟರಿ ಸಮುದಾಯದಳದ ಸಭಾಪತಿ ಗೋಪಾಲ್, ಅಧ್ಯಕ್ಷ ದಯಾನಂದ ಪೂಜಾರಿ, ಕಾರ್ಯದರ್ಶಿ ಮಲ್ಲಿಕಾ ದೇವಾಡಿಗ, ಸದಸ್ಯರಾದ ಶರಣಯ್ಯ ಹಿರೇಮಠ್, ರಾಘವೇಂದ್ರ. ಜಿ, ರಾಕೇಶ್, ಸಂತೋಷ್, ರವಿ, ಸದಾ ಹೊನ್ನಾರಿ, ಅವಿನಾಶ್ ಆಚಾರ್ಯ, ಪ್ರಶಾಂತ್, ಮನ್ವಿತ್, ಶಾಂತ, ಗಿರಿಜಾ ಮಾತಾಜಿ ಭಾಗವಹಿಸಿದ್ದರು.

ಟವರ್ ನಿರ್ಮಾಣ ಕಾಮಗಾರಿ 6 ತಿಂಗಳಿನಲ್ಲಿ ಪೂರ್ಣ | ಮುಂದಿನ ವರ್ಷದ ಒಳಗಾಗಿ ವಿದ್ಯುತ್ ಸಂಪರ್ಕ: ಸ್ಟೆಲ್ಲಾ ಭರವಸೆ

ನಿರಂತರ ಸಭೆಗಳ ಪರಿಣಾಮ ಬಹುಬೇಡಿಕೆಯ 110 ಕೆವಿ ಕಾಮಗಾರಿ ಚುರುಕು

ಸುಳ್ಯ: ಸುಳ್ಯ ತಾಲೂಕಿನ ಬಹು ಬೇಡಿಕೆಯ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಕಾಮಗಾರಿ ವೇಗವನ್ನು ಹೆಚ್ಚಿಸಿಕೊಂಡಿದ್ದು, ಈಗ 50 ಟವರ್‌ಗಳ ಅಡಿಪಾಯ ಮುಕ್ತಾಯಗೊಂಡು ಟವರ್ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದ್ದು ನಿರಂತರ ನಾಲ್ಕು ಸಭೆಯ ಪರಿಣಾಮ 6 ತಿಂಗಳಿನಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್ ತಿಳಿಸಿದ್ದಾರೆ.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅಧ್ಯಕ್ಷತೆಯಲ್ಲಿ ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್ ಉಪಸ್ಥಿತಿಯಲ್ಲಿ ಶಾಸಕರ ಕಚೇರಿಯಲ್ಲಿ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಕಾಮಗಾರಿ ಕುರಿತು ನಡೆದ ಸಭೆಯಲ್ಲಿ ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್ ಮಾತನಾಡಿ, ಪುತ್ತೂರು ಹಾಗೂ ಸುಳ್ಯ ತಾಲೂಕು ಸೇರಿ 26 ಟವರ್‌ಗಳ ಅಡಿಪಾಯಕ್ಕೆ ಈಗ ಚಾಲನೆ ನೀಡಲಾಗಿದ್ದು ಸಣ್ಣಪುಟ್ಟ ಸಮಸ್ಯೆಗಳನ್ನು ಇತ್ಯರ್ಥಪಡಿಸಿ ಮುಂದಿನ ವರ್ಷದ ಒಳಗಾಗಿ 110 ಕೆವಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದು ಹೇಳಿದರು.



ಅಲ್ಲದೆ, ಟವರ್ ನಿರ್ಮಾಣವಾದ ಸ್ಥಳಗಳಲ್ಲಿ ಕಾರಿಡಾರ್ ಸರ್ವೆ ಆಗಬೇಕಿದೆ. ಟವರ್‌ಗಳ ಸರ್ವೆ ನಡೆಸಲು ಸರ್ವೆಯರ್ ಕೊರತೆ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದು ಡೆಪ್ಯುಟೇಶನ್ ಮೂಲಕ ಮಾಡಿಸಲಾಗುವುದು ಎಂದು ಸಲಹೆ ನೀಡಿದರು. ಸುಳ್ಯ ತಾಲೂಕು ಹಾಗೂ ಪುತ್ತೂರು ತಾಲೂಕಿನಲ್ಲಿ ಈ ತಂತಿಗಳು ಹಾದು ಬರುವ ಸ್ಥಳಗಳು ಕಾಡುಗುಡ್ಡಗಳಿಂದ ಕೂಡಿದ್ದು, ಎರಡು ದಿನಗಳಲ್ಲಿ ಮುಗಿಯಬೇಕಾದ ಅಡಿಪಾಯ ಕೆಲಸ 8ರಿಂದ 10 ದಿನಗಳು ಹಿಡಿಯುತ್ತದೆ ಎಂದು ಕೆಪಿಟಿಸಿಎಲ್ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಅಲ್ಲದೆ, ಈಗಾಗಲೇ 22 ಭೂ ಮಾಲಿಕರಿಗೆ ಪರಿಹಾರವನ್ನು ಪಾವತಿ ಮಾಡಲಾಗಿದ್ದು, ದಾಖಲೆ ಪತ್ರಗಳು ದೊರೆತ ಎರಡು ಮೂರು ದಿನಗಳಲ್ಲಿ ಪರಿಹಾರ ವರ್ಗಾವಣೆ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು.

ಮಹಿಳಾಮಣಿಗಳ ಇಚ್ಛಾಶಕ್ತಿ

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಹಾಗೂ ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್ ಅವರ ನೇತೃತ್ವದಲ್ಲಿ ನಿರಂತರ ಸಭೆಗಳ ಮೂಲಕ ಸುಳ್ಯ ಬಹು ಬೇಡಿಕೆಯ 110 ಕೆ.ವಿ. ಕಾಮಗಾರಿ ವೇಗ ದೊರೆತ್ತಿದ್ದು ಟವರ್ ನಿರ್ಮಾಣವು ನಡೆಯುವುದರ ಜೊತೆಗೆ ಕೆಲ ಸಮಸ್ಯೆಗಳನ್ನು ಇತ್ಯರ್ಥಕ್ಕೆ ಕಾಲಮಿತಿ ನಿಗದಿಪಡಿಸಿ ಕಾಮಗಾರಿಯಲ್ಲಿ ಪ್ರಗತಿ ಸಾಧಿಸಲಾಗುತ್ತಿದೆ. ಬಹು ಬೇಡಿಕೆಯ 110 ಕೆ.ವಿ. 2026ರ ಒಳಗೆ ಮಹಿಳಾಮಣಿಗಳ ನೇತೃತ್ವದಲ್ಲಿ ಸಫಲವಾಗಲಿದೆ.

ಸುಳ್ಯ ತಹಶೀಲ್ದಾರ್ ಮಂಜುಳ ಎಂ., ಪುತ್ತೂರು ತಹಶೀಲ್ದಾರ್ ಎಸ್.ಬಿ. ಕೂಡಲಗಿ, ಕೆಪಿಟಿಸಿಎಲ್ ಕಾರ್ಯನಿರ್ವಾಹಕ ಇಂಜಿನಿಯರ್ ಶ್ರೀನಾಥ್ ಆಚಾರ್ಯ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸಚಿನ್ ಕುಮಾರ್, ಸಹಾಯಕ ಇಂಜಿನಿಯರ್ ವಿವೇಕಾನಂದ ಶೆಣೈ, ಕಾರ್ಯನಿರ್ವಾಹಕ ಇಂಜಿನಿಯರ್ ಕೆಪಿಟಿಸಿಎಲ್ ವೃತ್ತ ಅಮರಾವತಿ ಎನ್., ನೀನಾ ಶೆಟ್ಟಿ ಕೆಪಿಟಿಸಿಎಲ್, ಅಧಿಕಾರಿಗಳಾದ ರೇಖಾ ಎ., ಪ್ರಮೋದ್ ಸಿ.ಎಂ., ಚಂದ್ರಸೇನಾ ರೆಡ್ಡಿ, ಚಂದ್ರಮೋಹನ್ ರೆಡ್ಡಿ, ತಿಮ್ಮಪ್ಪ ನಾಯ್ಕ್, ಪ್ರಕಾಶ್ ಬಿ.ಎಸ್., ಸಂದೀಪ್ ಸಿ.ಕೆ., ರಂಜಿತಾ ಪಿ., ಜಿನೇಶ್ ಕುಮಾರ್ ಪಿ.ಸಿ., ಎಚ್.ವಿ. ಶ್ರೀನಿವಾಸ್‌ಮೂರ್ತಿ ಇದ್ದರು.

ಸುತ್ತಮುತ್ತ

ನಮೋ ಕರೆಗೂ ಕಾಂಗ್ರೆಸ್‌ನಿಂದ ರಾಜಕೀಯ: ರಾಕೇಶ್



ಮಡಿಕೇರಿ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಮತ್ತು ಜಾಗತಿಕ ತೈಲ ಮಾರುಕಟ್ಟೆಯ ಅಸ್ಥಿರತೆಯ ಹಿನ್ನೆಲೆಯಲ್ಲಿ ಪ್ರಧಾನ ನರೇಂದ್ರ ಮೋದಿ ಅವರು ಇಂಧನ ಉಳಿತಾಯ ಹಾಗೂ ಆರ್ಥಿಕ ಶಿಸ್ತಿನ ಬಗ್ಗೆ ದೇಶದ ಜನತೆಗೆ ನೀಡಿರುವ ಸಲಹೆಯನ್ನು ಕಾಂಗ್ರೆಸ್ ಪಕ್ಷ ಕ್ಷುಲ್ಲಕ ರಾಜಕಾರಣಕ್ಕಾಗಿ ಬಳಸುತ್ತಿರುವುದು ಖಂಡನೀಯವೆಂದು ವಿರಾಜಪೇಟೆ ಬಿಜೆಪಿ ಮಂಡಲದ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು ಮಧ್ಯಪ್ರಾಚ್ಯದಲ್ಲಿ ಉದ್ಭವಿಸಿರುವ ಸಂಘರ್ಷ ಇಡೀ ವಿಶ್ವದ ಮೇಲೆ ಪರಿಣಾಮ ಬೀರಿದೆ. ಮುಂದಿನ ದಿನಗಳಲ್ಲಿ ದೇಶದ ಜನರಿಗೆ ಸಮಸ್ಯೆಯಾಗಬಾರದು ಎನ್ನುವ ದೂರದೃಷ್ಟಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರು ಆರ್ಥಿಕ ಶಿಸ್ತಿನ ಕುರಿತು ಅಗತ್ಯ ಸಲಹೆ, ಸೂಚನೆಗಳನ್ನು ನೀಡಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳದ ಕಾಂಗ್ರೆಸ್ಸಿಗರು ದೇಶದ ಆಂತರಿಕ ಸಮಸ್ಯೆ ಎಂಬಂತೆ ಪ್ರತಿಬಿಂಬಿಸಿ ಜನರ ಹಾದಿ ತಪ್ಪಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಪ್ಲಾಟಿಂಗ್‌ಗೆ ಅಧಿಕಾರಿಗಳಿಂದ ತೊಂದರೆ: ಮಹಮ್ಮದ್ ಆಲಿ

ಪುತ್ತೂರು: ಸರಕಾರವು ಸಾರ್ವಜನಿಕರ ಅನುಕೂಲಕ್ಕಾಗಿ ಪ್ಲಾಟಿಂಗ್ ನಿಯಮ ವನ್ನು ಸರಳೀಕರಣಗೊಳಿಸಿದ ಆದೇಶ ಹೊರಡಿಸಿದರೂ ದ.ಕ. ಜಿಲ್ಲೆಯ ಭೂ ಮಾಪನ ಇಲಾಖೆಯ ಡಿಡಿಎಲ್‌ಆರ್ ಹಾಗೂ ಎಡಿಎಲ್‌ಆರ್ ಅವರು ಅದನ್ನು ಧಿಕ್ಕರಿಸಿ ಹಣ ಮಾಡುವ ದುರುದ್ದೇಶದಿಂದ ಜನರಿಗೆ ಅನಗತ್ಯ ತೊಂದರೆ ಕೊಡುತ್ತಿದ್ದಾರೆ. ಇದರ ಬಗ್ಗೆ ಕರ್ನಾಟಕ ಲೋಕಾಯುಕ್ತ ಪೊಲೀಸರಿಗೆ ಲಿಖಿತ ದೂರು ಸಲ್ಲಿಸಿದ್ದು ದೂರು ಲೋಕಾಯುಕ್ತದಲ್ಲಿ ದಾಖಲಾಗಿದೆ ಎಂದು ಪುತ್ತೂರು ನಗರಸಭಾ ಮಾಜಿ ವಿಪಕ್ಷ ನಾಯಕ, ದ.ಕ. ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಎಚ್. ಮಹಮ್ಮದ್ ಆಲಿ ಹೇಳಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲಾಖಾಧಿಕಾರಿಗಳ ಭ್ರಷ್ಟಾಚಾರದಿಂದ ಅರ್ಜಿ ನೀಡಿ 10 ವರ್ಷ ಗಳಾಗಿದ್ದರೂ ಪ್ಲಾಟಿಂಗ್ ಆಗದೇ ಜನರಿಗೆ ತೊಂದರೆಯಾಗುತ್ತಿತ್ತು. ಇದಕ್ಕಾಗಿ ದ.ಕ. ಜಿಲ್ಲೆಯಲ್ಲಿ ಪ್ಲಾಟಿಂಗ್‌ಗೆ ಸಂಬಂಧಿಸಿದಂತೆ ಅಭಿಯಾನ ನಡೆದಿದ್ದು ಜಿಲ್ಲೆಯ ತಾಲೂಕುವಾರು ಪ್ಲಾಟಿಂಗ್‌ಗೆ ಬಂದಿರುವ 8727 ಕಡತಗಳಲ್ಲಿ 5855 ಕಡತಗಳನ್ನು ಮಂಜೂರು ಮಾಡಿ ಪಹಣಿ ಇಂಡೀಕರಣ ಮಾಡಿದ್ದಾರೆ. ಆದರೆ, ಕಡತಗಳಿಗೆ ಮಂಜೂರಾತಿ ನೀಡದೇ ಇರಿಸಿಕೊಂಡಿದ್ದಾರೆ ಎಂದು ಆರೋಪಿಸಿದರು. ಬ್ಲಾಕ್ ಕಾಂಗ್ರೆಸ್ ಮಾಜಿ ಉಪಾಧ್ಯಕ್ಷ ಮೌರಿಸ್ ಮಸ್ಕರೇನಸ್, ನಗರ ಕಾಂಗ್ರೆಸ್ ಮಾಜಿ ಉಪಾಧ್ಯಕ್ಷ ಸುರೇಶ್ ಪೂಜಾರಿ, ಮಾಜಿ ಕಾರ್ಯದರ್ಶಿ ರೋಷನ್ ಡಯಾಸ್, ಕಮರುದ್ದೀನ್ ಕೂರ್ನಡ್ಕ ಇದ್ದರು.

ಕಾರ್ಮಿಕರಿಗೆ ಉಚಿತ ಕನ್ನಡಕಗಳ ವಿತರಣೆ

ಸುರತ್ಕಲ್: ಉತ್ಕರ್ಷ್ ಚಾರಿಟೇಬಲ್ ಮತ್ತು ವೆಲ್ಫೇರ್ ಟ್ರಸ್ಟ್, ಮಂಗಳೂರು ಮಹಾನಗರ ಪಾಲಿಕೆ ಸುರತ್ಕಲ್ ವಲಯ ಮತ್ತು ಪ್ರಸಾದ್ ನೇತ್ರಾಲಯದ ಸಹಯೋಗದೊಂದಿಗೆ ಸುರತ್ಕಲ್ ವಲಯದ ಪೌರ ಕಾರ್ಮಿಕರಿಗೆ ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮ ಮೇ 11ರಂದು ಸುರತ್ಕಲ್ ಎಂಸಿಸಿ ಕಟ್ಟಡದಲ್ಲಿ ನಡೆಯಿತು. ಪೌರ ಕಾರ್ಮಿಕರಿಗೆ ಈ ಹಿಂದೆ ನಡೆಸಲಾದ ಉಚಿತ ವೈದ್ಯಕೀಯ ಮತ್ತು ಕಣ್ಣಿನ ತಪಾಸಣಾ ಶಿಬಿರದಲ್ಲಿ ಫಲಾನುಭವಿಗಳನ್ನು ಗುರುತಿಸಲಾಗಿತ್ತು. ವೈದ್ಯಕೀಯ ವೃತ್ತಿಪರರು ಸಲಹೆ/ಸೂಚಿಸಿದ/ ಸರಿಪಡಿಸುವ ಕನ್ನಡಕದ ಅಗತ್ಯವಿರುವವರನ್ನು ಆಯ್ಕೆ ಮಾಡಿದ್ದು ನಿರಂತರ ಆರೋಗ್ಯ ಬೆಂಬಲ ಉಪಕ್ರಮದ ಭಾಗವಾಗಿ ಆಯ್ದ ಫಲಾನುಭವಿಗಳಿಗೆ ಉಚಿತ ಕನ್ನಡಕಗಳನ್ನು ವಿತರಿಸಲಾಯಿತು.
ನಗರದ ಸಾರ್ವಜನಿಕ ನೈರ್ಮಲ್ಯ ಮತ್ತು ನಾಗರಿಕ ಸೇವೆಗಳನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುವ ಪೌರ ಕಾರ್ಮಿಕರ ಕಣ್ಣಿನ ಆರೋಗ್ಯ ಮತ್ತು ಯೋಗಕ್ಷೇಮ ಉತ್ತೇಜಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮಂಗಳೂರು ಮಹಾನಗರ ಪಾಲಿಕೆಯ ಸುರತ್ಕಲ್ ವಲಯ ಆಯುಕ್ತ ಬಾಲಚಂದ್ರ ಅವರು ಈ ಉಪಕ್ರಮವನ್ನು ಶ್ಲಾಘಿಸಿದರು. ಉತ್ಕರ್ಷ್ ಸಂಸ್ಥೆಯ ಕಾರ್ಯಕ್ರಮ ವ್ಯವಸ್ಥಾಪಕಿ ಅರುಂಧತಿ ಹೆಗ್ಡೆ, ಸಮುದಾಯ ಕಾರ್ಯಕರ್ತರು ಮತ್ತು ಫಲಾನುಭವಿಗಳು ಉಪಸ್ಥಿತರಿದ್ದರು. ಕಚೇರಿ ಅಧೀಕ್ಷಕಿ ಎಸ್. ಮೀರಾ ಅವರು ಸಾಂಕೇತಿಕವಾಗಿ ಫಲಾನುಭವಿಗಳಿಗೆ ಕನ್ನಡಕ ಹಸ್ತಾಂತರಿಸಿದರು. ಸುರತ್ಕಲ್ ವಲಯದ ಆರೋಗ್ಯ ನಿರೀಕ್ಷಕ ಸಂಜಯ್ ಕುಮಾರ್ ಮತ್ತು ಆರೋಗ್ಯ ಮೇಲ್ವಿಚಾರಕ ಪ್ರವೀಣ್ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ಶತರುದ್ರ ಪಾರಾಯಣ

ಬಂಟ್ವಾಳ: ಶ್ರೀ ರುದ್ರ ಪಠಣ ಸಮಿತಿ ಬಂಟ್ವಾಳ ಇದರ ಆಶ್ರಯದಲ್ಲಿ ಸಾಮೂಹಿಕ ಶತರುದ್ರ ಪಾರಾಯಣ ಕಳ್ಳಿಗೆ ಗ್ರಾಮದ ಕನಪಾಡಿ ಪದ್ಮನಾಭ ರಾವ್ ಮನೆಯಲ್ಲಿ ನಡೆಸಲಾಯಿತು. ಸಜೀಪಮಾಗಣೆ ತಂತ್ರಿ ಎಂ. ಸುಬ್ರಹ್ಮಣ್ಯ ಭಟ್, ರವಿಶಂಕರ ಮಯ್ಯ, ಎಸ್‌ವಿಎಸ್ ಕಾಲೇಜ್ ನಿವೃತ್ತ ಪ್ರಾಂಶುಪಾಲ ಸೀತಾರಾಮ ಮಯ್ಯ, ಕೂಟ ಮಹಾ ಜಗತ್ತು ಬಂಟ್ವಾಳ ಅಂಗ ಸಂಸ್ಥೆಯ ಅಧ್ಯಕ್ಷ ಕೆ. ರಮೇಶ ಹೊಳ್ಳ, ಕೆ. ರಾಜಾರಾಮ ಐತಾಳ, ಎ. ಧನೇಶ್ವರ ರಾವ್, ಮಿಥುನ ರಾವ್ ಕೆ.ಎಂ., ಶಾಂತರಾಮ ರಾವ್, ಕೃಷ್ಣ ಕುಮಾರ ಸೋಮಯಾಜಿ, ಎನ್. ರಾಮಚಂದ್ರ ಮಯ್ಯ ಕೆ. ರಘುರಾಮರಾವ್. ಎಂ. ಜಯರಾಮ ಮಯ್ಯ, ಚಂದ್ರಮೋಹನರಾವ್, ಕೆ. ರಮೇಶ್ ರಾವ್, ಕೆ. ಶ್ರೀನಿವಾಸಹೊಳ್ಳ, ಕೆ. ಪರಮೇಶ್ವರ ಹೊಳ್ಳ, ನವನೀತ ರಾವ್, ಆದಿತ್ಯ ರಾವ್, ಪ್ರಣೀತ ರಾವ್, ನವೀನರಾವ್, ಶ್ರೀನಿಧಿರಾವ್, ಸುಧಾಕರ ಯು ಎಸ್‌ಎ, ಪದ್ಮನಾಭ ಹೊಳ್ಳ, ಉಪನ್ಯಾಸಕ ರವಿಶಂಕರ್ ಮೊದಲಾದವರು ಭಾಗವಹಿಸಿದ್ದರು.

ರಾಜಸೀಟು ಉದ್ಯಾನವನದಲ್ಲಿ ಫುಡ್‌ಕೋರ್ಟ್ ನಿರ್ಮಾಣಕ್ಕೆ ಭೂಮಿಪೂಜೆ | ಮಂಥರ್ ಭರವಸೆ

ವಿದ್ಯುತ್ ಚಾಲಿತ ಪುಟಾಣಿ ರೈಲು ಆರಂಭಿಸಲು ಪ್ರಯತ್ನ

ಮಡಿಕೇರಿ: ನಗರದ ರಾಜಸೀಟು ಉದ್ಯಾನವನದಲ್ಲಿ ಫುಡ್ ಕೋರ್ಟ್ ನಿರ್ಮಾಣಕ್ಕೆ ಶಾಸಕರಾದ ಡಾ. ಮಂಥರ್ ಗೌಡ ಅವರು ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು.

ರಾಜಸೀಟು ಉದ್ಯಾನವನ ಪುಟಾಣಿ ರೈಲು ವಿಭಾಗದಲ್ಲಿ ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ಸಾರ್ವಜನಿಕ-ಖಾಸಗಿ ಪಾಲುದಾರಿಕೆಯ ಫುಡ್ ಕೋರ್ಟ್ ನಿರ್ಮಾಣ ಮಾಡಲಾಗುತ್ತಿದ್ದು ಪ್ರವಾಸಿಗರಿಗೆ ಶುದ್ಧ ಹಾಗೂ ಗುಣಮಟ್ಟದ ಆಹಾರ ಪೂರೈಸುವುದು ಉದ್ದೇಶವಾಗಿದೆ ಎಂದು ಹೇಳಿದರು.

ಗುಣಮಟ್ಟದ ಆಹಾರ ನೀಡುವುದರ ಜೊತೆಗೆ ಪರಿಸರ ಶುಚಿತ್ವಕ್ಕೆ ಒತ್ತು ನೀಡುವುದು ಆದ್ಯತೆಯಾಗಿದೆ. ಪುಟಾಣಿ ರೈಲು ಮಾರ್ಗದಲ್ಲಿ ಯಾವುದೇ ರೀತಿ ತೊಂದರೆಯಾಗದಂತೆ ಫುಡ್ ಕೋರ್ಟ್ ನಿರ್ಮಾಣ ಮಾಡಲಾಗುತ್ತಿದೆ ಎಂದು ನುಡಿದರು.

ಪುಟಾಣಿ ರೈಲು ಸಂಬಂಧ ದಕ್ಷಿಣ ಭಾಗದ ನೈರುತ್ಯ ರೈಲ್ವೆ ವಿಭಾಗದವರು ವರದಿ ನೀಡಿದ್ದು ವಿದ್ಯುತ್ ಚಾಲಿತ ಪುಟಾಣಿ ರೈಲು ಆರಂಭಿಸಲು ಪ್ರಯತ್ನಿಸಲಾಗುವುದು ಎಂದು ಶಾಸಕರು ಮಾಹಿತಿ ನೀಡಿದರು. ಫುಡ್‌ಕೋರ್ಟ್ ಕಾಮಗಾರಿಯು ಒಂದು ವರ್ಷದಲ್ಲಿ ಪೂರ್ಣಗೊಳ್ಳಲಿದ್ದು ಪ್ರವಾಸಿಗರ ಅನುಕೂಲಕ್ಕೆ ಆದಷ್ಟು ಶೀಘ್ರ ಕಾಮಗಾರಿ ಪೂರ್ಣಗೊಳಿಸುವಂತೆ ಡಾ.ಮಂಥರ್ ಗೌಡ ಅವರು ಸಲಹೆ ಮಾಡಿದರು.



ಕೊಡಗು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಮಾತನಾಡಿ, ಪುಟಾಣಿ ರೈಲು ಜಾಗಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆ ಆಗದಂತೆ ಫುಡ್ ಕೋರ್ಟ್ ನಿರ್ಮಾಣ ಮಾಡಬೇಕು. ಪರಿಸರ ಶುಚಿತ್ವಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದರು.

65 ಲಕ್ಷ ಪ್ರವಾಸಿಗರು
ರಾಜಸೀಟು ಉದ್ಯಾನವನಕ್ಕೆ ಪ್ರತೀ ವರ್ಷದ 65 ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಿದ್ದು ರಾಜಸೀಟನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯವಾಗಿದೆ.
● ಎಸ್.ಜೆ.ಸೋಮಶೇಖರ್, ಕೊಡಗು ಜಿಲ್ಲಾಧಿಕಾರಿ

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಅವರು ಮಾತನಾಡಿ, ರಾಜಾಸೀಟು ಉದ್ಯಾನವನ ವೀಕ್ಷಣೆಗೆ ರಾಜ್ಯದ ವಿವಿಧ ಕಡೆಯಿಂದ ಪ್ರವಾಸಿಗರು ಆಗಮಿಸುತ್ತಾರೆ. ಪ್ರವಾಸಿಗರಿಗೆ ಕನಿಷ್ಠ ಮೂಲ ಸೌಲಭ್ಯವನ್ನಾದರೂ ಕಲ್ಪಿಸುವುದು ಅತ್ಯಗತ್ಯವಾಗಿದೆ. ಆ ನಿಟ್ಟಿನಲ್ಲಿ ರಾಜಸೀಟನ್ನು ಮತ್ತಷ್ಟು ಆಕರ್ಷಣೀಗೊಳಿಸುವಲ್ಲಿ ಪ್ರಯತ್ನಗಳು ನಡೆದಿವೆ ಎಂದು ತಿಳಿಸಿದರು.

ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ ಅವರು ಮಾತನಾಡಿ, ಮಡಿಕೇರಿ ನಗರದ ಅಭಿವೃದ್ಧಿಗೆ ನಗರಸಭೆ ವತಿಯಿಂದ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ಮಡಿಕೇರಿ ನಗರ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಲಾಗುವುದು. ಆ ನಿಟ್ಟಿನಲ್ಲಿ ಅಭಿವೃದ್ಧಿ ಕೆಲಸಕ್ಕೆ ಸದಾ ಕೈಜೋಡಿಸಲಾಗುವುದು ಎಂದು ಹೇಳಿದರು.

ನಗರಸಭೆ ಸದಸ್ಯ ಸವಿತಾ ಮಾತನಾಡಿ, ರಾಜಸೀಟು ಉದ್ಯಾನವನ ಮತ್ತಷ್ಟು ಹಸಿರುಮಯವಾಗಬೇಕು. ಕುಂಡಗಳು, ಹೂಗಳು ಇನ್ನಷ್ಟು ಆಕರ್ಷಣೀಯವಾಗಬೇಕು. ಫಾಚ್‌ಗಳನ್ನು ಹೆಚ್ಚಿಸಬೇಕು. ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ನುಡಿದರು. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೇಶ್ ಯಲ್ಲಪ್ಪ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸತೀಶ್, ಅರುಣ್ ಶೆಟ್ಟಿ ಶಾರದಾ ನಾಗರಾಜು, ನಗರಸಭಾ ಸದಸ್ಯರು, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರು ಹಾಗೂ ನಗರಸಭೆ ಪೌರಾಯುಕ್ತರು ಇತರರು ಇದ್ದರು. ತೆನ್ನಿರಾ ಮೈನಾ ಸ್ವಾಗತಿಸಿ, ನಿರೂಪಿಸಿ, ಕಾರ್ಯಕ್ರಮ ವಂದಿಸಿದರು.

ಕಿಲೆಂಜಾರು ದೈವಸ್ಥಾನದ ಜೀರ್ಣೋದ್ಧಾರ: ಸಂಕೋಚ ಕಾರ್ಯ



ಕುಪ್ಪೆಪದವು: ಕಿಲೆಂಜಾರು ಗ್ರಾಮ ದೈವ ಶ್ರೀ ಕೊಡಮಣಿತ್ತಾಯ ದೈವದ ಊದುಗುಡ್ಡೆ ದೈವಸ್ಥಾನ ಜೀರ್ಣೋದ್ಧಾರದ ಅಂಗವಾಗಿ ದೈವಜ್ಞರ ಸಲಹೆಯಂತೆ ದೈವಸ್ಥಾನದ ಸಂಕೋಚ ಕಾರ್ಯ ವಿನಯ ಕಾರಂತರ ನೇತೃತ್ವದಲ್ಲಿ ಗುರುವಾರ ಜರುಗಿತು.

ಬೆಳಿಗ್ಗೆ 9ಕ್ಕೆ ಕಿಲೆಂಜಾರು ಅರಮನೆಯಲ್ಲಿ ನವಕ ಕಲಶಾಭಿಷೇಕ ಹಾಗೂ ಪರ್ವ ಸೇವೆ ನಡೆಯಿತು. 10.30ಕ್ಕೆ ಊದುಗುಡ್ಡೆ ದೈವಸ್ಥಾನದಲ್ಲಿ ಕೊಡಮಣಿತ್ತಾಯ ಹಾಗೂ ಪರಿವಾರ ದೈವಗಳಿಗೆ ನವಕ ಕಲಶಾಭಿಷೇಕ ಹಾಗೂ ಪರ್ವ ಸೇವೆಯ ಬಳಿಕ ಕೊಡಮಣಿತ್ತಾಯ ದೈವದ ದರ್ಶನದೊಂದಿಗೆ ಕಿಲೆಂಜಾರು ಅರಮನೆಯಲ್ಲಿ ಶ್ರೀ ದೈವಗಳ ಬಾಲಾಲಯ ಪ್ರತಿಷ್ಠೆ ನಡೆಸಲಾಯಿತು. ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು. ಕಿಲೆಂಜಾರು ಅರಮನೆ ಮುಖ್ಯಸ್ಥ ದಿನೇಶ್ ಕುಮಾರ್ ಬಳ್ಳಾಲ್, ಪ್ರಮುಖರಾದ ಚಂದ್ರಹಾಸ್ ಶೆಟ್ಟಿ ಉಳಿಪಾಡಿಗುತ್ತು, ಮನೋಹರ್ ಶೆಟ್ಟಿ ನಡಿಕಂಬ್ಳಗುತ್ತು, ರೋಹಿತ್ ಶೆಟ್ಟಿ ಮಜಲ್ ಕೋಡಿಗುತ್ತು, ಬಾಳಿಕೆಗಳ ಪ್ರಮುಖರಾದ ಅನಿಲ್ ಕುಮಾರ್ ಅಂಬೆಲೊಟ್ಟು, ಜಿತೇಂದ್ರ ರನ್ನಜೆ, ಹರೀಶ್ ಪೂಜಾರಿ ಊದು, ಸಂತೋಷ್ ಕಡಂಬಿಲ, ಸನತ್ ರನ್ನಜೆ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಜಗದೀಶ್ ಕುಲಾಲ್ ಪಾಕಜೆ, ಕಾರ್ಯದರ್ಶಿ ಚೇತನ್ ಸುವರ್ಣ ಅಂಬೆಲೊಟ್ಟು, ಕೋಶಾಧಿಕಾರಿ ಗಣೇಶ್ ನಾಯ್ಕ್ ಮಾಣಿಪಲ್ಲ, ಸಮಿತಿಯ ಪದಾಧಿಕಾರಿಗಳು, ಸದಸ್ಯರು, ಗ್ರಾಮಸ್ಥರು ಇದ್ದರು.

ಮೆಸ್ಕಾಂ ಮುಲ್ಕಿ ವಿಭಾಗದ ಗ್ರಾಹಕರ ಕುಂದುಕೊರತೆ ಸಭೆ, ಅಹವಾಲು ಸ್ವೀಕಾರ



ಮುಲ್ಕಿ: ಮೆಸ್ಕಾಂ ಮುಲ್ಕಿ ವಿಭಾಗದ ಗ್ರಾಹಕರ ಕುಂದು ಕೊರತೆ ಹಾಗೂ ಅಹವಾಲು ಸ್ವೀಕಾರ ಸಭೆ ಕಾರ್ನಾಡ್ ಮೆಸ್ಕಾಂ ಕಚೇರಿಯಲ್ಲಿ ನಡೆಯಿತು.

ಕಾರ್ನಾಡ್ ದರ್ಗಾ ರಸ್ತೆಯ ಪರಿಸರದಲ್ಲಿ ವಿದ್ಯುತ್ ವ್ಯತ್ಯಯ, ಹಳೆಯಂಗಡಿಯ ಕರಿತೋಟ ಪ್ರದೇಶದಲ್ಲಿ ಹೈ ಟೆನ್ಶನ್ ವಿದ್ಯುತ್ ತಂತಿಗಳಿಗೆ ಮರದ ಬಳ್ಳಿಗಳು ಸಿಲುಕಿಕೊಂಡಿರುವುದು, ಮೆಸ್ಕಾಂ ಬಿಲ್ ಕಲೆಕ್ಟರ್ ಸರಿಯಾದ ಸಮಯಕ್ಕೆ ಬಿಲ್ ನೀಡದಿರುವುದು, ಅಪಾಯಕಾರಿ ಮರದ ಗೆಲ್ಲು ತೆರವುಗೊಳಿಸುವಿಕೆ ಸೇರಿದಂತೆ ಹಲವು ಸಮಸ್ಯೆಗಳ ಬಗ್ಗೆ ಗ್ರಾಹಕರು ಗಮನ ಸೆಳೆದರು.

ನಡಿಕುದ್ರುಗೆ ವಿದ್ಯುತ್ ವ್ಯವಸ್ಥೆ ಕಲ್ಪಿಸಿ

ಉಡುಪಿ ಜಿಲ್ಲೆಯ ಹೆಜಮಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ನಡಿಕುದ್ರು ಪ್ರದೇಶಕ್ಕೆ ಮುಲ್ಕಿ ಮೆಸ್ಕಾಂನಿಂದ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಎಂಬ ಆಗ್ರಹವೂ ಕೇಳಿ ಬಂತು. ಸಭೆಯಲ್ಲಿ ಜೇಮ್ಸ್ ಡಿಸೋಜಾ, ಈಶ್ವರ ಕರಿತೋಟ, ಉದಯಕುಮಾರ್ ಶೆಟ್ಟಿ, ಸಾಧು ಅಂಚನ್ ಮಟ್ಟು, ಕೃಷಿಕ ಬಾಲಚಂದ್ರ ಸನಿಲ್, ಚಂದ್ರಹಾಸ್ ಕೋಟ್ಯಾನ್ ನಡಿಕುದ್ರು, ಗ್ರಾಹಕ ನವೀನ್ ರಾಜ್, ದಿನೇಶ್ಚಂದ್ರ ಅಜಿಲ, ಗ್ರಾಹಕ ವಕೀಲ ರವೀಶ್ ಕಾಮತ್, ಅಶೋಕ್ ಜನನಿ ಮತ್ತಿತರರು ಮಾತನಾಡಿದರು. ಮಂಗಳೂರು ವಿದ್ಯುತ್ ಶಕ್ತಿ ಅಧೀಕ್ಷಕ ಇಂಜಿನಿಯರ್ ಕೃಷ್ಣರಾಜ ಕೆ., ಕಾವೂರು ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಲೋಹಿತ್, ಮುಲ್ಕಿ ಮೆಸ್ಕಾಂ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರಾಮಕೃಷ್ಣ ಐತಾಳ, ಸಹಾಯಕ ಇಂಜಿನಿಯರ್ ತಾಂತ್ರಿಕ ವಿಭಾಗ ಉಪೇಂದ್ರನಾಥ ಕೆಯು, ಮುಲ್ಕಿ ತಾಲೂಕು ಮೆಸ್ಕಾಂ ಸಲಹಾ ಸಮಿತಿಯ ಸದಸ್ಯ ಧರ್ಮಾನಂದ ಶೆಟ್ಟಿಗಾರ್, ಮೆಸ್ಕಾಂ ಮುಲ್ಕಿ ವಿಭಾಗದ ಎಸ್‌ಒ ಕೃಷ್ಣಪ್ಪ ಮತ್ತಿತರರಿದ್ದರು.

ಬೆಥನಿ ಜೀವನ್ ಜ್ಯೋತಿ ಸೆರೆನಿಟಿ ಸೆಂಟರ್‌ನಲ್ಲಿ ಸುಜ್ಞಾನ ಪೋಷಣೆ



ಕಡಬ: ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳನ್ನು ಕೇವಲ ಅಂಕಗಳಿಸುವ ಯಂತ್ರಗಳನ್ನಾಗಿ ಮಾಡದೆ ಅವರನ್ನು ಸುಸಂಸ್ಕೃತ ಪ್ರಜೆಗಳನ್ನಾಗಿ ಬೆಳೆಸುವ ನಿಟ್ಟಿನಲ್ಲಿ ನಾವು ಚಿಂತಿಸಬೇಕು. ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಅತೀ ಮುಖ್ಯ ಎಂದು ಪುತ್ತೂರು ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷ ಡಾ. ಗೀವರ್ಗೀಸ್ ಮಾರ್ ಮಕಾರಿಯೋಸ್ ಹೇಳಿದರು. ಮರ್ದಾಳದ ಬೆಥನಿ ಜೀವನ್ ಜ್ಯೋತಿ ಸೆರೆನಿಟಿ ಸೆಂಟರ್‌ನಲ್ಲಿ ಪೋಷಕರಿಗಾಗಿ ನಡೆದ ಸುಜ್ಞಾನ ಪೋಷಣೆ ವಿಶೇಷ ಕಾರ್ಯಾಗಾರ ಅವರು ಉದ್ಘಾಟಿಸಿ ಆಶೀರ್ವಚನ ನೀಡಿದರು.

ಸಂಸ್ಥೆಯ ನಿರ್ದೇಶಕ ಫಾ. ಸಕರಿಯಾಸ್ ನಂದಿಯಾಟ್ ಆಧ್ಯಾತ್ಮಿಕ ಮಾರ್ಗದರ್ಶನ ನೀಡಿದರು.

ಮೊಬೈಲ್ ಗೀಳು ಬೇಡ

ಸಂಪನ್ಮೂಲ ವ್ಯಕ್ತಿಯಾಗಿದ್ದ ಉಪ್ಪಿನಂಗಡಿ ಸರಕಾರಿ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ನಂದೀಶ್ ವೈ.ಡಿ. ಮಾತನಾಡಿ, ಪೋಷಕತ್ವ ಎನ್ನುವುದು ಒಂದು ಕಲೆ. ಮಕ್ಕಳ ಮೇಲೆ ಒತ್ತಡ ಹೇರುವ ಬದಲು ಅವರ ಭಾವನೆಗಳನ್ನು ಅರ್ಥೈಸಿಕೊಂಡು ಬೆಂಬಲ ನೀಡುವುದು ಅಗತ್ಯ. ಡಿಜಿಟಲ್ ಯುಗದಲ್ಲಿ ಮಕ್ಕಳನ್ನು ಮೊಬೈಲ್ ವ್ಯಸನದಿಂದ ದೂರವಿಟ್ಟು ಅವರಲ್ಲಿ ಓದುವ ಮತ್ತು ಆಟವಾಡುವ ಹವ್ಯಾಸವನ್ನು ಬೆಳೆಸಬೇಕು ಎಂದರು.

ಎನ್‌ಜಿಒ ಮುಖ್ಯಸ್ಥ ಮುರುಗೇಶ್ ಮಾತನಾಡಿದರು. ಕಡಬ ಆರಕ್ಷಕ ಠಾಣೆಯ ಉಪನಿರೀಕ್ಷಕ ಜಂಬೂರಾಜ್ ಮಹಾಜನ್ ಅವರು 'ಮಾದಕ ವ್ಯಸನ ಮುಕ್ತ ಯುವ ಜನತೆ' ಎಂಬ ವಿಚಾರದಲ್ಲಿ ಉಪನ್ಯಾಸ ನೀಡಿದರು. ಶಾಲಾ ಮುಖ್ಯ ಶಿಕ್ಷಕಿ ಶೈಲಾ ಸ್ವಾಗತಿಸಿ, ವಂದಿಸಿದರು. ಡಾ. ಉಷಾ ಮನೋಜ್ ಕಾರ್ಯಕ್ರಮ ನಿರ್ವಹಿಸಿದರು.

ಮಾಣಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದ ಇಂಟರ್ ಲಾಕ್ ಉದ್ಘಾಟನೆ



ಬಂಟ್ವಾಳ: ಮಾಣಿ ಪ್ರಾಥಮಿಕ ಆರೋಗ್ಯ ಕೇಂದ್ರ, ಬಂಟ್ವಾಳ ತಾಲೂಕು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಆರೋಗ್ಯ ಕೇಂದ್ರ ವ್ಯಾಪ್ತಿಯ ಗ್ರಾಮ ಪಂಚಾಯತ್ ಹಾಗೂ ವಿವಿಧ ದಾನಿಗಳ ಸಹಕಾರದಿಂದ ಆಸ್ಪತ್ರೆಯ ಆವರಣಕ್ಕೆ ಅಳವಡಿಸಿದ ಇಂಟರ್ ಲಾಕ್ ಉದ್ಘಾಟನೆ ಹಾಗೂ ಆರೋಗ್ಯಕೇಂದ್ರದ ಮೂಲಭೂತ ಸೌಕರ್ಯಕ್ಕೆ ಸಹಕರಿಸದವರಿಗೆ ಅಭಿನಂದನಾ ಕಾರ್ಯಕ್ರಮ ಬುಧವಾರ ಆರೋಗ್ಯ ಕೇಂದ್ರದಲ್ಲಿ ನಡೆಯಿತು.

ಶ್ರೀ ಉಳ್ಳಾಲ್ತಿ ದೇವಸ್ಥಾನ ಅನಂತಾಡಿ ಅಧ್ಯಕ್ಷ ನರೇಂದ್ರ ರೈ ನೆಲ್ಲೊಟ್ಟು ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಶಶಿಕಲಾ ಆರೋಗ್ಯ ಕೇಂದ್ರದ ಅಭಿವೃದ್ಧಿಯಲ್ಲಿ ಸಹಕರಿಸಿದವರನ್ನು ಸ್ಮರಿಸಿದರು. ಈ ಸಂದರ್ಭದಲ್ಲಿ ಮಾಜಿ ಸೈನಿಕ ಕೆ. ಟಿ.ನಾಯ್ಕ, ಮಾಧವ ಕುಲಾಲ್ ಹಾಗೂ ಆರೋಗ್ಯ ಕೇಂದ್ರದ ಮೂಲಭೂತ ಸೌಕರ್ಯಕ್ಕೆ ಸಹಕರಿಸಿದವರನ್ನು ಗೌರವಿಸಿ ಅಭಿನಂದಿಸಲಾಯಿತು.

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಬಂಟ್ವಾಳ ಅಧ್ಯಕ್ಷ ಮೋನಪ್ಪ ಪೂಜಾರಿ ಮೊಗರ್ನಾಡ್, ಪ್ರಗತಿಪರ ಕೃಷಿಕರಾದ ಪ್ರಫುಲ್ಲ ರೈ ಮಾಣಿ, ತಾಲೂಕು ಆರೋಗ್ಯ ಅಧಿಕಾರಿ ಡಾ. ಅಶೋಕ್ ರೈ, ಮಾಣಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಇಬ್ರಾಹಿಂ ಕೆ, ಉಪಸ್ಥಿತರಿದ್ದರು. ಡಾ. ಮನೋಹರ್ ರೈ, ಡಾ ಶ್ರೀನಾಥ್ ಆಳ್ವ ಡಾ. ಬಿ ಎಸ್ ನಾಯಕ್, ಅನಂತಾಡಿ ಪಂಚಾಯತ್ ಮಾಜಿ ಅಧ್ಯಕ್ಷ ಸನತ್ ರೈ ಅನಂತಾಡಿ, ಪೆರಾಜೆ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಕುಶಾಲ ಪೆರಾಜೆ, ಪೆರ್ನೆ ಪಂಚಾಯತ್ ಕಾರ್ಯದರ್ಶಿ ರಾಜೇಶ್, ಆರೋಗ್ಯ ಕೇಂದ್ರದ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು. ಸುದೀಪ್ ಕುಮಾರ್ ಶೆಟ್ಟಿ ಪ್ರಾಸ್ತಾವಿಕದೊಂದಿಗೆ ಸ್ವಾಗತಿಸಿ, ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ಅರುಂಧತಿ ವಂದಿಸಿದರು. ಬಾಲಕೃಷ್ಣ ಆಳ್ವ ಕೊಡಾಜೆ ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಪಾಡಿ ಇಗ್ಗುತ್ತಪ್ಪ ದೇವಳದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವಕ್ಕೆ ಚಾಲನೆ

ನಾಪೋಕ್ಲು: ಇಲ್ಲಿಗೆ ಸಮೀಪದ ಕಕ್ಕಬ್ಬೆಯ ಶ್ರೀ ಪಾಡಿ ಇಗ್ಗುತ್ತಪ್ಪ ದೇವಾಲಯದ ಅಷ್ಟಬಂಧ ಬ್ರಹ್ಮಕಲಶ ಉತ್ಸವಕ್ಕೆ ವಿಶೇಷ ಪ್ರಾರ್ಥನೆಯೊಂದಿಗೆ ಬುಧವಾರ ಚಾಲನೆ ನೀಡಲಾಯಿತು.

ನೀಲೇಶ್ವರ ಉಚ್ಚಿಲತಾಯ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಮೇ 18ರವರೆಗೆ ಜರಗಲಿರುವ ಅಷ್ಟಬಂದ ಬ್ರಹ್ಮಕಲಶ ಅಂಗವಾಗಿ ಬುಧವಾರ ವಿವಿಧ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬುಧವಾರ ಸಂಜೆ ದೇವಾಲಯದಲ್ಲಿ ಸಾಮೂಹಿಕ ಪ್ರಾರ್ಥನೆಯೊಂದಿಗೆ ತಕ್ಕ ಮುಖ್ಯಸ್ಥರು ಹಾಗೂ ಭಕ್ತ ಜನ ಸಂಘದ ಅಧ್ಯಕ್ಷ ಪರದಂಡ ಸುಮನ್ ಸುಬ್ರಮಣಿ ಅವರು ದೇವರ ನಡೆಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ ಧಾರ್ಮಿಕ ಪೂಜಾ ವಿಧಿ ವಿಧಾನಕ್ಕೆ ಚಾಲನೆ ನೀಡಲಾಯಿತು.

ಬಳಿಕ ಧಾರ್ಮಿಕ ಕಾರ್ಯಕ್ರಮಗಳಾದ ಅಂಕುರಾರ್ಪಣೆ, ಪ್ರಾಸಾದ ಶುದ್ಧಿ ವಾಸ್ತು ರಾಕ್ಷೋಘ್ನ ಹೋಮ, ವಾಸ್ತು ಬಲಿ ಜರುಗಿದವು. ಇದಕ್ಕೂ ಮೊದಲು ನೀಲೇಶ್ವರ ಉಚ್ಚಿಲತಾಯ ಪದ್ಮನಾಭ ತಂತ್ರಿಗಳ ಅವರನ್ನು ಚಂಡೆ, ವಾದ್ಯ ಮೇಳಗಳೊಂದಿಗೆ ಸಾಂಪ್ರದಾಯಿಕ ಹಾಗೂ ಗೌರವಯುತವಾಗಿ ಸ್ವಾಗತಿಸಿದರು. ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಬಾಚಮಂಡ ರಾಜ ಪೂವಣ್ಣ ಹಾಗೂ ಸುಮನ್ ಸುಬ್ರಮಣಿ ಮಾಧ್ಯಮದೊಂದಿಗೆ ಮಾತನಾಡಿ ಪೂಜಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಿ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗಬೇಕೆಂದು ಮನವಿ ಮಾಡಿದರು.



ಈ ಸಂದರ್ಭ ಭಕ್ತ ಜನ ಸಂಘದ ಕಾರ್ಯದರ್ಶಿ ಬಟ್ಟೀರ ಚೊಂದಮ್ಮ ಮೇದಪ್ಪ ಖಜಾಂಜಿ ಅಂಜಪರವಂಡ ಕುಶಾಲಪ್ಪ ಮಾಜಿ ಖಜಾಂಜಿ ನಬುಡುಮಂಡ ಸುಬ್ರಮಣಿ, ನಿರ್ದೇಶಕ ಪರದಂಡ ನರೇಂದ್ರ, ಪರದಂಡ ರಮೇಶ್, ಅನ್ನಡಿಯಂಡ ದಿಲೀಪ್ ಕುಮಾರ್, ಮಾಜಿ ಅಧ್ಯಕ್ಷ ಕಾಂಡಂಡ ಜೋಯಪ್ಪ, ಕಣಿಯರ ನಾಣಯ್ಯ, ಪಾರುಪತ್ತೆಗಾರ ಪರದಂಡ ಪ್ರಿನ್ಸ್, ಉದಿಯಂಡ ಸುಭಾಷ್, ಬಟ್ಟೀರ ಮೇದಪ್ಪ ಕಾಂಡಂಡ ಉಷಾ ಜೋಯಪ್ಪ ಸೇರಿದಂತೆ ಭಕ್ತಾದಿಗಳು ಉಪಸ್ಥಿತರಿದ್ದರು.



ಬಹುಭಾಷಾ ಸಂಗಮ ಭೂಮಿ ಕಾಸರಗೋಡು ಜಿಲ್ಲೆಯ ಹೊಸದುರ್ಗ ತಾಲೂಕಿನ ಚಿತ್ತಾರಿ ಬಾರಿಕ್ಕಾಡು ಶ್ರೀ ಮಹಿಷಮರ್ದಿನಿ ದೇವಳದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವವು ವಿವಿಧ ವೈದಿಕ, ಧಾರ್ಮಿಕ ಕಾರ್ಯಕ್ರಮ ಗಳೊಂದಿಗೆ ಜರಗಿತು. ಜಾತ್ರೆ ಕೊನೆಯ ದಿನ ರಾತ್ರಿ, ಪಂಚ ಮೂರ್ತಿಗಳ ಉತ್ಸವ ನಡೆಯಿತು. ಶ್ರೀ ಮಹಾಗಣಪತಿ, ಶ್ರೀ ಧರ್ಮಶಾಸ್ತ್ರ ಶ್ರೀ ಮಹಾವಿಷ್ಣು, ಶ್ರೀ ಮಹಿಷಮರ್ದಿನಿ, ಶ್ರೀ ಮಹಾದೇವ ಪಂಚ ದೇವರುಗಳ ನೃತ್ಯೋತ್ಸವ, ದರ್ಶನ ಬಲಿ ನಡೆಯಿತು.



ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದ ಬ್ರಹ್ಮಕಲಶಕ್ಕಾಗಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ (ಎಸ್‌ಪಿವೈಎಸ್‌ಎಸ್)ಯ ಮಂಗಳೂರಿನ ಜೆಪ್ಪಿನಮೊಗರು ಶಾಲೆಯ ಕಾರ್ಯಕರ್ತರು ತಮ್ಮದೇ ಶೈಲಿಯಲ್ಲಿ ಸೇವೆ ಸಲ್ಲಿಸಿ ಗಮನ ಸೆಳೆದರು. ಸಂಸ್ಕಾರ, ಸಂಘಟನೆ, ಸೇವೆಗಳನ್ನು ಮುಖ್ಯ ಭೂಮಿಕೆಯನ್ನಾಗಿಸಿ ದುಡಿಯುವ ಸಂಸ್ಥೆಯ ತರಬೇತಿ ಪಡೆದಿರುವ ಈ ತಂಡ ಇಲ್ಲಿಗೆ ಆಗಮಿಸಿ ತಮ್ಮ ಯೋಗದಾನ ನೀಡಿದರು. ಮಹಿಳೆಯರು, ಮಹಾನುಭಾವರ ಸಹಿತ 25 ಮಂದಿ ಇಲ್ಲಿ ಸ್ವಯಂ ಪ್ರೇರಣೆಯಿಂದ ಹಗಲು ರಾತ್ರಿಯೆನ್ನದೆ ಶ್ರಮಿಸಿದರು.

ಬಂಟ್ವಾಳ ತಾಲೂಕು ಬ್ಯಾರಿ ಸಾಹಿತ್ಯ ಸಮ್ಮೇಳನದ ಸಮಾರೋಪ | ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ

ಸಾಹಿತ್ಯ ಮನುಷ್ಯನಲ್ಲಿ ಸಾಮರಸ್ಯ ಬೆಳೆಸಲು ಪ್ರೇರಣೆ ನೀಡಲಿ: ರಮಾನಾಥ ರೈ

ಬಂಟ್ವಾಳ: ಸಾಹಿತ್ಯಗಳು ಮನುಷ್ಯ-ಮನುಷ್ಯರ ನಡುವಿನ ಅಪನಂಬಿಕೆ, ಮನಸ್ಸಿನ ದ್ವೇಷ, ಅಸೂಯೆಗಳನ್ನು ಅಳಿಸಿ ಸಾಮರಸ್ಯವನ್ನು ಬೆಳೆಸಲು ಪ್ರೇರಣೆಯಾಗಬೇಕು ಎಂದು ಮಾಜಿ ಸಚಿವ ಬಿ. ರಮಾನಾಥ ರೈ ಹೇಳಿದರು.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಬ್ಯಾರಿ ಸಾಹಿತ್ಯ ಪರಿಷತ್ ಬಂಟ್ವಾಳ ಸಹಯೋಗದಲ್ಲಿ ಪಾಣೆ ಮಂಗಳೂರಿನ ಆಲಡ್ಕದ ಎಸ್‌ಎಸ್ ಸಭಾಂಗಣದ ಜಿ. ಅಬ್ದುಲ್ ಖಾದರ್ ವೇದಿಕೆಯಲ್ಲಿ ನಡೆದ ಬಂಟ್ವಾಳ ತಾಲೂಕು ಬ್ಯಾರಿ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಭಾಗವಹಿಸಿ, ಮಾತನಾಡಿದರು.

ಭಾಷೆ ಒಂದು ಸಮುದಾಯಕ್ಕೆ ಸೀಮಿತವಾದುದಲ್ಲ, ಅದು ಸಮಾಜದ ವಿವಿಧ ವರ್ಗಗಳ ಜನರ ಮಧ್ಯೆ ಸಂಪರ್ಕದ ಮಾಧ್ಯಮ. ಬ್ಯಾರಿ ಭಾಷೆ ಸುಂದರ ಭಾಷೆ, ಬ್ಯಾರಿ ಭಾಷೆಯಲ್ಲಿ ಹೇರಳ ಸಾಹಿತ್ಯಕ ಸೊಬಗಿದೆ. ಸಾಹಿತ್ಯಕ ಕೃಷಿ ಹೆಚ್ಚು ಮಾಡಿದಾಗ ಭಾಷೆಯ ಹಾಗೂ ಜೊತೆಗೆ ಸಮುದಾಯದ ಅಭಿವೃದ್ಧಿ ಸಾಧ್ಯ ಎಂದರು.



ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮರ್ ಯು.ಎಚ್. ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಅಲ್ಪಸಂಖ್ಯಾತ ಆಯೋಗದ ಮಾಜಿ ಅಧ್ಯಕ್ಷ ಜಿಎ ಬಾವಾ, ಪೂನಾದ ಡಾ.ಡಿ.ವೈ. ಪಾಟೀಲ ವಿವಿ ಕುಲಸಚಿವ ಡಾ. ಬೀರಾನ್ ಮೊಯಿದಿನ್ ಬಿ.ಎಂ., ಬಂಟ್ವಾಳ ತಾ.ಪಂ. ಮಾಜಿ ಉಪಾಧ್ಯಕ್ಷ ಉಸ್ಮಾನ್ ಕರೋಪಾಡಿ, ಜನಪ್ರಿಯ ಸಮೂಹ ಸಂಸ್ಥೆಗಳ ಆಡಳಿತ ನಿರ್ದೇಶಕ ಡಾ. ಅಬ್ದುಲ್ ಬಶೀರ್ ವಿ.ಕೆ., ಮಂಗಳೂರು ಎಜೆ ಆಸ್ಪತ್ರೆಯ ಸ್ಥಾನೀಯ ವೈದ್ಯೆ ಡಾ ಹಸೀನಾ ಪೊನ್ನೋಡಿ, ಹಿರಿಯ ಪತ್ರಕರ್ತ ಇಬ್ರಾಹಿಂ ಅಡ್ಕಸ್ಥಳ ಅವರು ಅತಿಥಿಗಳಾಗಿ ಭಾಗವಹಿಸಿದ್ದರು.

ಇದೇ ವೇಳೆ ವಿವಿಧ ಕ್ಷೇತ್ರಗಳ ಸಾಧನೆಗೈದ ಡಾ. ಎಂ. ಎಂ. ಶರೀಫ್ ಪಾಣೆಮಂಗಳೂರು (ವೈದ್ಯಕೀಯ), ಆಬ್ಬೋನು ನಂದಾವರ (ಬ್ಯಾರಿ ಜನಪದ), ಅವ್ವಮ್ಮ ಒಕ್ಕೆತ್ತೂರು (ನಾಟಿ ವೈದ್ಯೆ), ಅಬ್ದುಲ್ ಖಾದರ್ ಮೋನುಂಞ ಕಲ್ಲಡ್ಕ (ಪತ್ರಿಕಾ ಕ್ಷೇತ್ರ), ಮುಹಮ್ಮದ್ ಕೋಡಪದವು (ಪರಿಸರ), ಝುಬೈದಾ ಪಲ್ಲೋಟ್ಟು (ಸಾಮುದಾಯಿಕ ಸೇವೆ ಕ್ಷೇತ್ರ), ಇಸ್ಮಾಯಿಲ್ ಅರಬಿ ಬಂಟ್ವಾಳ (ಸಾಮಾಜಿಕ ಕ್ಷೇತ್ರ) ಹಾಗೂ ಸಮ್ಮೇಳನದ ಸರ್ವಾಧ್ಯಕ್ಷ ರಹೀಂ ಬಿ.ಸಿ. ರೋಡು, ಬಂಟ್ವಾಳ ಬ್ಯಾರಿ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಎಂ. ಅಬ್ಬಾಸ್ ಅಲಿ ಹಾಗೂ ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ ಮುಹಮ್ಮದ್ ಹನೀಫ್ ಗೋಳ್ತಮಜಲು ಅವರನ್ನು ಸನ್ಮಾನಿಸಲಾಯಿತು. ಬಂಟ್ವಾಳ ಬ್ಯಾರಿ ಸಾಹಿತ್ಯ ಪರಿಷತ್ ಸಂಚಾಲಕ ಪಿ.ಎ. ರಹೀಂ, ಕೋಶಾಧಿಕಾರಿ ಮುಹಮ್ಮದ್ ಸಾಗರ್, ಉಪಾಧ್ಯಕ್ಷ ಯು. ಮುಸ್ತಫಾ, ಯೂಸುಫ್ ಕರಂದಾಡಿ, ಸಂಘಟನಾ ಕಾರ್ಯದರ್ಶಿ ಮುಹಮ್ಮದ್ ನಂದಾವರ, ಪತ್ರಿಕಾ ಕಾರ್ಯದರ್ಶಿ ಪಿ. ಮುಹಮ್ಮದ್ ಪಾಣೆಮಂಗಳೂರು, ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಪಿ.ಎಂ. ಅಶ್ರಫ್ ಪಾಣೆಮಂಗಳೂರು, ಕೋಶಾಧಿಕಾರಿ ಹಂಝ ಬಸ್ತಿಕೋಡಿ ಇದ್ದರು. ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ ಮುಹಮ್ಮದ್ ಹನೀಫ್ ಗೋಳ್ತ ಮಜಲು ಸ್ವಾಗತಿಸಿ, ಅಬೂಬಕ್ಕರ್ ಅನಿಲಕಟ್ಟೆ ವಂದಿಸಿದರು. ಬ್ಯಾರಿ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಲತೀಫ್ ನೇರಳಕಟ್ಟೆ ನಿರೂಪಿಸಿದರು. ಬಳಿಕ ರಶೀದ್ ನಂದಾವರ, ಅಶ್ರಫ್ ಅಪೋಲೋ, ಶರೀಫ್ ಪರ್ಲಿಯಾ ನೇತೃತ್ವದಲ್ಲಿ ಬ್ಯಾರಿ ಹಾಡುಗಾರಿಕೆ ಹಾಗೂ ಸತ್ತಾರ್ ಗೂಡಿನಬಳಿ ನಿರ್ದೇಶನದ 'ತೆರು ತಪ್ಪಿರ್' ಪ್ರಹಸನ ಪ್ರದರ್ಶನಗೊಂಡಿತು.

ಸುತ್ತಮುತ್ತ

ಬಜಕೂಡ್ಲು ಗೋಶಾಲೆ: 'ಶನಿ ನಮನ ತಾಪ ಶಮನ' ಕಾರ್ಯಕ್ರಮ

ಪೆರ್ಲ: ಶನಿ ಜಯಂತಿಯ ಪುಣ್ಯಪರ್ವದ ಅಂಗವಾಗಿ ಗೋಕರ್ಣ ಮಂಡಲಾಧೀಶ್ವರ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಬಜಕೂಡ್ಲು ಅಮೃತ ಧಾರಾ ಗೋಶಾಲೆಯಲ್ಲಿ ಮೇ 16 , 17ರಂದು 'ಶನಿ ನಮನ ತಾಪ ಶಮನ' ನಡೆಯಲಿದೆ. ಮೇ 16ರಂದು ಮುಂಜಾನೆ 4.30ಕ್ಕೆ ಗುರು ವಂದನೆ, ದೇವತಾ ಪ್ರಾರ್ಥನೆ, ಬಾಲಗಣ ಪತಿ ಹವನ, ಬೆಳಿಗ್ಗೆ 6.06ರಿಂದ ಶ್ರೀ ಮಹಾಗಣ ಪತ್ಯಥರ್ವಶೀರ್ಷ ಅಖಂಡ ಪಾರಾಯಣ ಆರಂಭ. 7ರಿಂದ ಶ್ರೀ ಗೋಪಾಲಕೃಷ್ಣ ಪೂಜೆ, ಗೋಪೂಜೆ, 8.30ರಿಂದ ಶ್ರೀ ಮಹಾಗಣಪತಿ ಹವನ, ಪೂರ್ಣನವಗ್ರಹ ಶಾಂತಿ, ಶನಿಶಾಂತಿ ಹವನ, 10.30ರಿಂದ ಶ್ರೀ ಹನುಮತ್ಪಂಚರತ್ನ ಸ್ತೋತ್ರ ಪಾರಾಯಣ, ಸಂಜೆ 5ರಿಂದ ಶನಿಕಲ್ಪೋಕ್ತ ಪೂಜೆ, ರಾತ್ರಿ 7ಕ್ಕೆ ಶನಿಪೂಜೆ ನೆರವೇರಲಿದೆ.
ಮಾ.17ರಂದು ಬೆಳಗ್ಗೆ 6.06ರಿಂದ ಶ್ರೀ ಮಹಾಗಣ ಪತ್ಯಥರ್ವಶೀರ್ಷ ಅಖಂಡ ಪಾರಾಯಣ ಮಂಗಲ, ಚತುದ್ರವ್ಯಾತ್ಮಕ ಶ್ರೀ ಮಹಾಗಣಪತ್ಯಥರ್ವ ಶೀರ್ಷ ಹವನ ನಡೆಯಲಿದೆ. ಸೇವಾಕರ್ತರಿಗೆ ಗೋಗ್ರಾಸ ಸೇವೆ, ಗೋಪೂಜೆ, ಶನಿ ಕಲ್ಪೋಕ್ತ ಪೂಜೆ ಸಂಕಲ್ಪ ಮಾಡುವ ವ್ಯವಸ್ಥೆ, ಶನಿ ಶಾಂತಿ ಹವನ ಸಂಕಲ್ಪ, ಇಷ್ಟಾರ್ಥ ಪ್ರಾಪ್ತಿಗಾಗಿ 108 ಅಥರ್ವಶೀರ್ಷ ಪಾರಾಯಣ, ಅಥರ್ವಶೀರ್ಷ ಹವನ ಸಂಕಲ್ಪ, ಮಾತೆಯರಿಗೆ ಕುಂಕುಮಾರ್ಚನೆ, ಶ್ರೀ ಗಣೇಶ ಪಂಚರತ್ನಸ್ತೋತ್ರ ಹಾಗೂ ಶ್ರೀ ಹನುಮತ್ಪಂಚರತ್ನಸ್ತೋತ್ರ ಪಾರಾಯ ಣಕ್ಕೆ ಅವಕಾಶವಿದೆ. ಮೇ 16ರ ಸೂರ್ಯೋದಯದಿಂದ ಮೇ 17ರ ಸೂರ್ಯೋದಯದ ತನಕ ಅಖಂಡ ಶ್ರೀ ಗಣಪತ್ಯಥರ್ವಶೀರ್ಷ ಪಾರಾಯಣ ಜರಗಲಿದೆ.

ನಾಳೆ ಬಾಲಕಿಯರ ಜಿಲ್ಲಾ ಕ್ರಿಕೆಟ್ ತಂಡಕ್ಕೆ ಆಯ್ಕೆ

ಕಾಸರಗೋಡು: 19 ವರ್ಷದೊಳಗಿನ ಬಾಲಕಿಯರ ಉತ್ತರ ವಲಯ ಅಂತರ ಜಿಲ್ಲಾ ಕ್ರಿಕೆಟ್ ಪಂದ್ಯಾವಳಿಗಾಗಿ ಕಾಸರಗೋಡು ಜಿಲ್ಲಾ ಮಟ್ಟದ ಕ್ರಿಕೆಟ್ ತಂಡದ ಆಯ್ಕೆ ಪ್ರಕ್ರಿಯೆಯು ಮೇ 17ರಂದು ಬೆಳಗ್ಗೆ 10 ಗಂಟೆಗೆ ಪ್ರತಿಷ್ಠಿತ ಕಾಸರಗೋಡು ಕೆಸಿಎ ಕ್ರೀಡಾಂಗಣದಲ್ಲಿ ನಡೆಯಲಿದೆ. 01-09-2007ರ ನಂತರ ಜನಿಸಿದ ಹುಡುಗಿಯರು ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸಬಹುದು. ಆಸಕ್ತ ಅಭ್ಯರ್ಥಿಗಳು ತಮ್ಮ ವಯಸ್ಸು, ಕ್ರಿಕೆಟ್ ಕಿಟ್ ಮತ್ತು ಬಿಳಿ ಬಣ್ಣದ ವಸ್ತ್ರಗಳು ಸಹಿತ ಮೂಲ ಜನನ ಪ್ರಮಾಣಪತ್ರದೊಂದಿಗೆ ಅದೇ ದಿನ ಬೆಳಿಗ್ಗೆ 10 ರ ಮೊದಲು ಕ್ರೀಡಾಂಗಣಕ್ಕೆ ವರದಿ ಮಾಡಬೇಕು. ಹೆಚ್ಚಿನ ಮಾಹಿತಿಗಾಗಿ 04994 227500 ಅಥವಾ 9778179601 ಕರೆ ಮಾಡಬಹುದು.

ಚಾಲಕ ಹುದ್ದೆಗೆ ಸಂದರ್ಶನ

ಕಾಸರಗೋಡು: ಕಾಸರಗೋಡು ತಳಂಗರೆ ಸರಕಾರಿ ಮುಸ್ಲಿಂ ವೃತ್ತಿಪರ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಶಾಲಾ ವ್ಯಾನ್ ಚಾಲಕರ ನೇಮಕಾತಿಗಾಗಿ ಸಂದರ್ಶನವು ಮೇ 19 ರಂದು ಬೆಳಗ್ಗೆ 11 ಗಂಟೆಗೆ ಶಾಲೆಯಲ್ಲಿ ನಡೆಯಲಿದೆ ಎಂದು ಸಂಬಂಧಿತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೇ 21: ಸಂದರ್ಶನ

ಕಾಸರಗೋಡು: ಪೈವಳಿಕೆ ಗ್ರಾಮ ಪಂಚಾಯತ್ ನಲ್ಲಿರುವ ಎಲ್‌ಎಸ್‌ಜಿಡಿ ಸಹಾಯಕ ಇಂಜಿನಿಯರ್ ಕಚೇರಿಗೆ ಗುಮಾಸ್ತರ ನೇಮಕಾತಿಗಾಗಿ ಮೇ 21ರಂದು ಬೆಳಗ್ಗೆ 11 ಗಂಟೆಗೆ ಗ್ರಾಮ ಪಂಚಾಯತ್ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ. 10ನೇ ತರಗತಿ ಅರ್ಹತೆ ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಮಾಹಿತಿಗಾಗಿ 9496049719 ಎಂಬ ಮೊಬೈಲ್ ಸಂಖ್ಯೆಗೆ ಕರೆ ಮಾಡಬಹುದು.

ಮೇ 29: ಮುಳಿಯಾರು ಕ್ಷೇತ್ರದಲ್ಲಿ ಪ್ರತಿಷ್ಠಾ ಉತ್ಸವ

ಕಾಸರಗೋಡು: ಬೋವಿಕ್ಕಾನ ಮುಳಿಯಾರು ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ವಾರ್ಷಿಕ ಪ್ರತಿಷ್ಠಾ ದಿನ ಮಹೋತ್ಸವವು ಮೇ 29 ರಂದು ಬೆಳಗ್ಗೆ 7 ಗಂಟೆಗೆ ಗಣಪತಿ ಹೋಮದೊಂದಿಗೆ ಜರಗಲಿದೆ. ಇದಾದ ಬಳಿಕ 11 ಗಂಟೆಗೆ ಉಷಾಪೂಜೆ, ನವಕ ಕಲಶಾಭಿಷೇಕ, ಮಹಾಪೂಜೆ, 11.30ಕ್ಕೆ ಶ್ರೀ ಭೂತಬಲಿ, ಮಧ್ಯಾಹ್ನ 12ಕ್ಕೆ ದರ್ಶನ ಬಲಿ, ರಾತ್ರಿ 7ಕ್ಕೆ ಬಟ್ಟಲು ಕಾಣಿಕೆ, ಮಂತ್ರಾಕ್ಷತೆ ಹಾಗೂ ಶ್ರೀರಂಗ ಪೂಜೆ ನಡೆಯಲಿದೆ.

ಟೆಂಡರ್ ಆಹ್ವಾನ

ಕಾಸರಗೋಡು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿರುವ ಕಾಸರಗೋಡು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಚೇರಿಯಲ್ಲಿ ಅಧಿಕೃತ ಉದ್ದೇಶಗಳಿಗಾಗಿ ವಾಹನ ಬಾಡಿಗೆಗೆ ಟೆಂಡರ್ ಆಹ್ವಾನಿಸಲಾಗಿದೆ. ಮೇ 28ರಂದು ಮಧ್ಯಾಹ್ನ 1 ಗಂಟೆಗೆ ಕೊನೆ ದಿನಾಂಕವಾಗಿದೆ. ಮಾಹಿತಿಗೆ ದೂ.ಸಂ. 04994 293060, 9846593486 ಕರೆ ಮಾಡಬಹುದು.

ಕಥೆ ಹೇಳುವ ಸ್ಪರ್ಧೆ: ಪಾರ್ವತಿಗೆ ಪ್ರಥಮ ಸ್ಥಾನ

ಕಾಸರಗೋಡು: ಭಾರತೀಯ ಬರಹಗಾರರ ವೇದಿಕೆ ಒ.ವಿ.ವಿಜಯನ್ ಸ್ಮಾರಕ ಸಮಿತಿ ಮಧುರಂ ಗಾಯತಿ – 2026 ಕಾರ್ಯಕ್ರಮದಲ್ಲಿ ಸೂಕ್ಷ್ಮ ಸಣ್ಣ ಕಥಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಪೆರಿಯ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಮಲೆಯಾಳ ವಿಭಾಗದ ಸಹಾಯಕ ಪ್ರಾಧ್ಯಾಪಿಕೆ



ಪಾರ್ವತಿ ಪಿ.ಚಂದ್ರನ್ ಪ್ರಥಮ ಬಹುಮಾನ ಪಡೆದರು. ಅವರ ಏಕಂ ಕಥೆಗೆ ಬಹುಮಾನ ನೀಡಲಾಯಿತು. ತಿರುವನಂತಪುರ ಪ್ರೆಸ್ ಕ್ಲಬ್‌ನಲ್ಲಿ ನಡೆದ ಸಮಾರಂಭದಲ್ಲಿ ಬರಹಗಾರ ಬಾಬು ಕುಝಿಮಟ್ಟಂ ಪ್ರಶಸ್ತಿ ಪ್ರದಾನ ಮಾಡಿದರು. ಭಾರತೀಯ ಬರಹಗಾರರ ವೇದಿಕೆ ಕಾರ್ಯದರ್ಶಿ ಉಣ್ಣಿ ಅಮ್ಮಾಯಂಬಲಂ, ಅಧ್ಯಕ್ಷ ಸುನೀಲ್ ಸಿ.ಒ., ಒ.ವಿ.ಉಷಾ ಅವರನ್ನೊಳಗೊಂಡ ತೀರ್ಪುಗಾರರ ತಂಡವು ಕಥೆಯನ್ನು ಆಯ್ಕೆ ಮಾಡಿದೆ.

ಕೆಎಸ್ಸಾರ್ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಭರವಸೆ ವಿಳಂಬ

ಕಾಂಗ್ರೆಸ್ ನಾಯಕತ್ವ ವಿರುದ್ಧ ಬಿಜೆಪಿಯಿಂದ ಬೃಹತ್ ಪ್ರತಿಭಟನೆ

ಕಾಸರಗೋಡು: ಕೇರಳ ಕೆಎಸ್ಸಾರ್ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ವ್ಯವಸ್ಥೆಯು ವಿಳಂಬವಾಗುತ್ತಿರುವುದನ್ನು ಖಂಡಿಸಿ ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಮಹಿಳೆಯರು ಶುಕ್ರವಾರ ಕಾಸರಗೋಡು ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಟಿಕೆಟ್ ರಹಿತ ಪ್ರಯಾಣ ನಡೆಸಿ ಬೃಹತ್ ಪ್ರತಿಭಟನೆ ನಡೆಸಿದರು.
ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮೇ 15ರಿಂದ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವುದಾಗಿ ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ಕಾಂಗ್ರೆಸ್ ಮುಖಂಡ ವಿ.ಡಿ.ಸತೀಶನ್ ಘೋಷಿಸಿದ್ದರು. ಆದರೆ ಮೇ 15ರಿಂದ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಪ್ರಾರಂಭವಾಗಿಲ್ಲ, ಆದ್ದರಿಂದ ಈ ಪೊಳ್ಳು ಭರವಸೆ ಖಂಡಿಸಿ ಬಿಜೆಪಿ ಮತ್ತು ಮಹಿಳಾಮೋರ್ಚಾದ ಕಾರ್ಯಕರ್ತೆಯರು ಕಾಸರಗೋಡು ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಮಂಗಳೂರಿಗೆ ತೆರಳುವ ಬಸ್ ಗೇರಿದರು. ಆದರೆ ಅರ್ಧ ಗಂಟೆ ಕಳೆದರೂ ಪ್ರಸ್ತುತ ಬಸ್ ಸಂಚಾರ ಆರಂಭಿಸದೆ ಅದರಲ್ಲಿದ್ದ ಚಾಲಕರು



ಬಸ್‌ನಿಂದ ಕೆಳಗಿಳಿದರು. ಬಳಿಕ ಪ್ರತಿಭಟನಾಕಾರರು ಬಸ್‌ನಿಂದ ಕೆಳಗಿಳಿದು ಬಸ್‌ಗಳ ಸಂಚಾರವನ್ನು ತಡೆಯುವ ನಿಟ್ಟಿನಲ್ಲಿ ಕೆಎಸ್ಸಾರ್ಟಿಸಿ ತಂಗುದಾಣದ ಮುಂಭಾಗದಲ್ಲಿ ಧರಣಿ ಕುಳಿತರು.
ಇದೇ ವೇಳೆ ಪೊಲೀಸರು ಬಿಜೆಪಿ ಮುಖಂಡರನ್ನು ಬಂಧಿಸಿ ಠಾಣೆಗೆ ಕರೆದೊಯ್ದರು. ಪಕ್ಷದ ಕಾರ್ಯಕರ್ತೆಯರು ಕೂಡಲೇ ಕೆಎಸ್ಸಾರ್ಟಿಸಿನಿಂದ ಮೆರವಣಿಗೆ ಮೂಲಕ ಠಾಣೆಗೆ ತೆರಳಿ ಧರಣಿ ನಡೆಸಿ ಬಂಧಿತರನ್ನು ತಕ್ಷಣ ಬಿಡುಗಡೆಗೊಳಿಸಬೇಕೆಂದು ಆಗ್ರಹಿಸಿದರು. ಬಳಿಕ ಪೊಲೀಸರು ಮಹಿಳೆಯರ ಪ್ರತಿಭಟನೆಗೆ ಮಣಿದು ಬಂಧಿತರನ್ನು ಬಿಡುಗಡೆಗೊಳಿಸಿದರು.
ಈ ಸಂದರ್ಭ ಪೊಲೀಸ್ ಠಾಣೆ ಎದುರು ಕಾರ್ಯಕರ್ತೆಯರನ್ನುದ್ದೇಶಿಸಿ ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್. ಅಶ್ವಿನಿ ಮಾತನಾಡಿ, ಮೇ 15ರಿಂದ ಕೆಎಸ್ಸಾರ್ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವುದಾಗಿ ಕಾಂಗ್ರೆಸ್ ಪಕ್ಷವು ಭರವಸೆ ನೀಡಿತ್ತು.ಆದರೆ ಕೊಟ್ಟ ಮಾತನ್ನು ಈಡೇರಿಸುವಲ್ಲಿ ಕಾಂಗ್ರೆಸ್ ವಿಫಲವಾಗಿದೆ ಎಂದು ಅವರು ಹೇಳಿದರು.

ಉಗ್ರ ಹೋರಾಟದ ಎಚ್ಚರಿಕೆ

ಯುಡಿಎಫ್ ಸರಕಾರದ ಮೊದಲ ಯೋಜನೆ ಪೊಳ್ಳಾಗಿದೆ. ಇನ್ನುಳಿದ ಭರವಸೆ ಈಡೇರಿ ಸಲು ಸಾಧ್ಯವೇ ಎಂದು ಪ್ರಶ್ನಿಸಿದರು. ಮಹಿಳೆಯ ರನ್ನು ವಂಚಿಸಿರುವ ಕಾಂಗ್ರೆಸ್ ನಾಯಕತ್ವಕ್ಕೆ ಧಿಕ್ಕಾರವಿರಲಿ ಎಂದರು. ಮುಂದಿನ 2 ದಿನಗಳೊಳಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಆರಂಭಿಸದಿದ್ದಲ್ಲಿ ಉಗ್ರ ಹೋರಾಟ ನಡೆಸಲಾ ಗುವುದೆಂದು ಎಂ.ಎಲ್.ಅಶ್ವಿನಿ ಎಚ್ಚರಿಸಿದರು.

ಪ್ರತಿಭಟನಾ ಧರಣಿಗೆ ಬಿಜೆಪಿ ಜಿಲ್ಲಾ ಕಾರ್ಯದರ್ಶಿಗಳಾದ ಪ್ರಮೀಳಾ ಮಜಲ್, ಪುಷ್ಪಾ ಗೋಪಾಲನ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಕೆ.ಎಸ್. ರಮಣಿ, ಗ್ರಾ.ಪಂ.ಗಳ ಅಧ್ಯಕ್ಷರಾದ ಸುಜ್ಞಾನಿ ಎಸ್.ಶ್ಯಾನುಭೋಗ್ ಮಧೂರು, ಎಂ.ಜನನಿ ಕಾರಡ್ಕ, ಯಶೋಧಾ ಎನ್. ಕುಂಬ್ಡಾಜೆ, ಮಾಲಿನಿ ಬೆಳ್ಳೂರು, ಬದಿಯಡ್ಕ ಗ್ರಾ.ಪಂ. ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಅನಿತಾ ನಾಯ್ಕ್ ನೇತೃತ್ವ ವಹಿಸಿದ್ದರು.

ಮಹಿಳೆಯರನ್ನು ವಂಚಿಸುತ್ತಿದೆ

ಯುಡಿಎಫ್ ಒಕ್ಕೂಟ ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಮಂಡಿಸಿದ ಇಂದಿರಾ ಖಾತರಿಯಂತೆ ಮೇ 15 ರಿಂದ ಮಹಿಳೆಯರಿಗೆ ಉಚಿತ ಕೆಎಸ್ಸಾರ್ಟಿಸಿ ಬಸ್ ಪ್ರಯಾಣ ಪ್ರಾರಂಭಿಸದಿರುವುದು ಮಹಿಳೆಯರನ್ನು ವಂಚಿಸುವ ಕೃತ್ಯವಾಗಿದೆ. ಕೇರಳದ ಜೊತೆಗೆ ವಿಧಾನಸಭಾ ಚುನಾವಣೆ ನಡೆದ 4 ರಾಜ್ಯಗಳಲ್ಲಿ ಸರಕಾರ ರಚನೆಯಾಗಿ ಸಚಿವ ಸಂಪುಟ ಸಭೆಗಳು ನಡೆದು ದಿನಗಳು ಕಳೆದಿವೆ. ಕೇರಳದಲ್ಲಿ ಇಂದಿರಾ ಗ್ಯಾರಂಟಿ ಸೇರಿದಂತೆ ಪ್ರಣಾಳಿಕೆಯಲ್ಲಿ ಮಹಿಳೆಯರಿಗೆ ಭರವಸೆ ನೀಡಿದ ಸವಲತ್ತುಗಳು, ಯೋಜನೆ ಜಾರಿಗೆ ತರಲು ಯುಡಿಎಫ್ ಒಕ್ಕೂಟವು ಇನ್ನೂ ವಿಳಂಬ ಮಾಡುತ್ತಿದೆ.

● ಎಂ.ಎಲ್.ಅಶ್ವಿನಿ, ಅಧ್ಯಕ್ಷೆ, ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿ

ಪೆರ್ಲ -ಉಕ್ಕಿನಡ್ಕ: ಎಣ್ಮಕಜೆ ಗ್ರಾಪಂನಿಂದ ಮಳೆಗಾಲ ಪೂರ್ವ ಸ್ವಚ್ಛತಾ ಕಾರ್ಯಕ್ರಮ



ಪೆರ್ಲ: ಮಳೆಗಾಲದ ಪೂರ್ವ ಸಿದ್ಧತೆಯ ಅಂಗವಾಗಿ ಎಣ್ಮಕಜೆ ಗ್ರಾಮ ಪಂಚಾಯತ್ ವತಿಯಿಂದ ಪೆರ್ಲ ಪೇಟೆಯಿಂದ ಉಕ್ಕಿನಡ್ಕದ ತನಕ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಈ ಸಂದರ್ಭ ಶುಚೀಕರಣಕ್ಕೆ ಸಂಬಂಧಿಸಿ ಜಾಗೃತಿ ಮೂಡಿಸಲಾಯಿತು. ಅಲ್ಲದೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.
ಗ್ರಾಮ ಪಂಚಾಯತ್ ಅಧ್ಯಕ್ಷೆ ಕುಸುಮಾವತಿ ಟೀಚರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪಂಚಾಯತ್ ಉಪಾಧ್ಯಕ್ಷ ಅಬೂಬಕ್ಕರ್ ಸಿದ್ದಿಕ್ ಒಳಮೊಗರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸ್ಥಾಯೀ ಸಮಿತಿ ಅಧ್ಯಕ್ಷರಾದ ರಮ್ಲಾ ಇಬ್ರಾಹಿಂ, ವಿಜಯ ಕೆ., ಪಂಚಾಯತ್ ಸದಸ್ಯರಾದ ಪ್ರಮೀಳಾ, ಐತ್ತಪ್ಪ ಕುಲಾಲ್, ಪುಷ್ಪಾವತಿ, ಆಯಿಷಾ ಎ.ಎ., ರಾಬಿಯಾ, ಸದಾನಂದ ಶೆಟ್ಟಿ ಕುದ್ವ, ನಳಿನಾಕ್ಷಿ, ಕೃಷ್ಣಪ್ಪ ಬಜಕೂಡ್ಲು, ಜಗದೀಶ್, ಪಂಚಾಯತ್ ಕಾರ್ಯದರ್ಶಿ ಕೆ.ರಾಧಾಕೃಷ್ಣ, ಸಹಾಯಕ ಕಾರ್ಯದರ್ಶಿ ಟಿ.ಗಿರೀಶ್, ಆರೋಗ್ಯ ಅಧಿಕಾರಿ ಬಾಬು ರಾಜ್ ಮೊದಲಾದವರು ಉಪಸ್ಥಿತರಿದ್ದರು.
ಹಸಿರು ಕ್ರಿಯಾ ಸೇನೆಯ ಸದಸ್ಯರು, ಆಶಾ ಕಾರ್ಯಕರ್ತೆಯರು, ಪಂ.ಸಿಬ್ಬಂದಿಗಳು, ಕುಟುಂಬ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಶುಚೀಕರಣ ಕಾರ್ಯದಲ್ಲಿ ಕೈ ಜೋಡಿಸಿದರು.

ಜಾಗೃತಿ ಸಂದೇಶ

ಮಳೆಗಾಲದ ಪೂರ್ವಭಾವಿಯಾಗಿ ಸಮರ್ಪಕ ಸ್ವಚ್ಛತಾ ಕಾರ್ಯ ಕೈಗೊಂಡಲ್ಲಿ ಮಾತ್ರ ಮಾರಕ ಸಾಂಕ್ರಾಮಿಕ ರೋಗಗಳನ್ನು ಸಂಪೂರ್ಣವಾಗಿ ತಡೆಗಟ್ಟಬಹುದು ಎಂಬ ಸಂದೇಶ ನೀಡಲಾಯಿತು.

ಕೆಂಪುಕಲ್ಲು ಗುಡ್ಡೆಯಲ್ಲಿ ಹಸಿರು ಕ್ರಾಂತಿ: ಡಾ. ರತ್ನಾಕರ ಮಲ್ಲಮೂಲೆಗೆ 'ವನಮಿತ್ರ' ಪ್ರಶಸ್ತಿ

ಕಾಸರಗೋಡು: ಕೆಂಪು ಬಂಡೆಗಳಿಂದ ಕತ್ತರಿಸಿದ ಬೆಟ್ಟಗಳು ಸಹ ಹಸಿರಿನಿಂದ ಆವೃತವಾಗಬಹುದು ಎಂದು ಡಾ.ರತ್ನಾಕರ ಮಲ್ಲಮೂಲೆ ಸಾಬೀತುಪಡಿಸಿದ್ದು, ಅವರ ಪ್ರಯತ್ನವನ್ನು ಗುರುತಿಸಿ ಕೇರಳ ಸರಕಾರದ 'ವನಮಿತ್ರ' ಪ್ರಶಸ್ತಿ ಅರಸಿ ಬಂದಿದೆ.
ನೀರ್ಚಾಲು ಬಳಿಯ ಬುರುಡಡ್ಕ ಎಂಬ ಬಂಜರು ಭೂಮಿಯನ್ನು ಬನವಾಸಿ ಎಂಬ ಹೆಸರಿನಿಂದ ಹಸಿರು ಕಾಡಾಗಿ ಪರಿವರ್ತಿಸಿದ ಕಾಸರಗೋಡು ಸರಕಾರಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ರತ್ನಾಕರ ಮಲ್ಲಮೂಲೆ ಅವರ ಯಶೋಗಾಥೆ ಕೇವಲ ಕೃಷಿ ಸಾಧನೆ ಮಾತ್ರವಲ್ಲ ಜೊತೆಗೆ ಪ್ರಕೃತಿಯೊಂದಿಗಿನ ಆಳವಾದ ಸಂಪರ್ಕದ ಕಥೆಯಾಗಿದೆ.
ನೀರು ಮತ್ತು ಗೊಬ್ಬರದ ಕೊರತೆಯಿರುವ ಎತ್ತರದ ಪ್ರದೇಶದ ಬಿಕ್ಕಟ್ಟನ್ನು ಅವರು ವೈಜ್ಞಾನಿಕ ದೂರದೃಷ್ಟಿಯಿಂದ ಎದುರಿಸಿದರು. ಅಂತರ್ಜಲ ಮರುಪೂರಣ , ಮಳೆ ಕೊಯ್ಲು ಕೊಳಗಳ ಮೂಲಕ ಮಳೆನೀರನ್ನು ಮಣ್ಣಿನೊಳಗೆ ತಂದಾಗ ಒಣಗಿದ ಬಾವಿಗಳು ಶುದ್ಧ ನೀರಿನಿಂದ ಸಮೃದ್ಧವಾದವು. ಸೌರಶಕ್ತಿ ವ್ಯವಸ್ಥೆ ಜೊತೆಗೆ ಪರಿಸರ ಸ್ನೇಹಿ ಮನೆಯ ಸ್ಥಾಪನೆ ಯೊಂದಿಗೆ ಬನವಾಸಿಯು ಪ್ರಕೃತಿಯೊಂದಿಗೆ ಸಂಪೂರ್ಣ ಸಾಮರಸ್ಯದ ಪರಿಸರ ವ್ಯವಸ್ಥೆಯಾಗಿ ಪ್ರಸಿದ್ಧಿ ಪಡೆದಿದೆ.
ಈ ಮಣ್ಣಿನಲ್ಲಿ ಈಗ ಸೋರೆಕಾಯಿ, ತೆಂಗಿನ ಕಾಯಿ, ಮೆಣಸಿನಕಾಯಿ, ತರಕಾರಿಗಳು



ಸೂಕ್ತ ಮನ್ನಣೆ

ತಮ್ಮ ಖಾಸಗಿ ಜಾಗವನ್ನು ಸಾಮಾಜಿಕ ಜಾಗೃತಿ ಕೇಂದ್ರವನ್ನಾಗಿ ಪರಿವರ್ತಿಸಿದ ರತ್ನಾಕರ ಅವರ ಪ್ರಕೃತಿಪ್ರೀತಿ ಸರಕಾರಿ ಇಲಾಖೆಗಳು ವಿಶೇಷವಾಗಿ ಪ್ರಶಂಸಿಸಿವೆ.ಒಣ ಭೂಮಿಯನ್ನು ಹಸಿರು ಭೂಮಿಯಾಗಿ ಪರಿವರ್ತಿಸುವಲ್ಲಿ ಅವರ ಸಮರ್ಪಣಾ ಭಾವಕ್ಕೆ ಈ ವನಮಿತ್ರ ಪ್ರಶಸ್ತಿ ಅತ್ಯಂತ ಸೂಕ್ತವಾದ ಮನ್ನಣೆಯಾಗಿದೆ.

ಮಾತ್ರವಲ್ಲದೆ ಅಪರೂಪದ ಔಷಧೀಯ ಸಸ್ಯಗಳು, ಹಣ್ಣಿನ ಗಿಡಗಳು ಸಹಬೇರು ಬಿಟ್ಟಿವೆ. ರತ್ನಾಕರ ಮಲ್ಲಮೂಲಮೂರ್ನಾಲ್ಕು ವರ್ಷಗಳ ಕಠಿಣ ಪರಿಶ್ರಮ ದಿಂದ ನಿರ್ಮಿಸಿರುವ ಈ ಮಾದರಿ ಜಗತ್ತನ್ನು ನೋಡಲು ಶಾಲಾ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಅನೇಕ ಜನರು ಪ್ರತಿದಿನ ಬುರುಡಡ್ಕಕ್ಕೆ ಬರುತ್ತಾರೆ.
ಇಚ್ಛಾಶಕ್ತಿ ಮತ್ತು ವೈಜ್ಞಾನಿಕ ಅರಿವು ಇದ್ದರೆ ಪ್ರಕೃತಿಯನ್ನು ಮರಳಿ ಪಡೆಯಬಹುದೆಂಬ ಸಂದೇಶ ಡಾ.ರತ್ನಾಕರ ಅವರು ನೀಡಿದ್ದಾರೆ.

ಬೇಸಿಗೆ ಶಿಬಿರ ಮಕ್ಕಳ ದೈಹಿಕ -ಮಾನಸಿಕ ಬೆಳವಣಿಗೆಗೆ ಹೊಸ ಚೈತನ್ಯ ನೀಡುತ್ತದೆ

ಕಾಸರಗೋಡು: ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಚೇರಿಯ ನೇತೃತ್ವದಲ್ಲಿ ಜಿಲ್ಲೆಯ 12 ಐಸಿಡಿಎಸ್ ಯೋಜನಾ ಪ್ರದೇಶಗಳಲ್ಲಿ ಮಕ್ಕಳ ಅಭಿವೃದ್ಧಿ ಯೋಜನಾ ಅಧಿಕಾರಿಗಳು, ಶಾಲಾ ಸಲಹೆಗಾರರು - ಐಸಿಡಿಎಸ್ ಮೇಲ್ವಿಚಾರಕರು ಜಂಟಿಯಾಗಿ ಆಯೋಜಿಸಿರುವ 'ವ್ಯಕ್ತಿತ್ವ ವಿಕಸನ' ಬೇಸಿಗೆ ಶಿಬಿರಗಳು ಮೇ ತಿಂಗಳ 29ರವರೆಗೆ ನಡೆಯಲಿದೆ.
ಈ ಶಿಬಿರಗಳು ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಹೊಸ ಚೈತನ್ಯ ನೀಡುತ್ತವೆ. ಈ ತರಬೇತಿಗಳು ಕಲಿಕೆ ಕೇವಲ ತರಗತಿಯ ಕಲಿಕೆ ಬಗ್ಗೆ ಮಾತ್ರವಲ್ಲ, ಆಟದ ಮೂಲಕ ಹೇಗೆ ಕಲಿಯುವುದು ಎಂಬುದನ್ನು ಕಲಿಸುತ್ತದೆ. ಪ್ರತಿಯೊಂದು ಶಿಬಿರವು ಆತ್ಮವಿಶ್ವಾಸ ಹೆಚ್ಚಿಸುವ 'ಐಸ್-ಬ್ರೇಕಿಂಗ್' ಅವಧಿಗಳೊಂದಿಗೆ ಪ್ರಾರಂಭವಾಗುತ್ತದೆ. ಮಕ್ಕಳು ತಮ್ಮ ಭಯ ಮತ್ತು ಹಿಂಜರಿಕೆಗಳನ್ನು ನಿವಾರಿಸಿದಾಗ ಅವರು ತಮ್ಮನ್ನು ಪರಿಚಯಿಸಿಕೊಳ್ಳುತ್ತಾರೆ ಮತ್ತು ಗುಂಪುಗಳಾಗಿ ಆಟಗಳಲ್ಲಿ ತೊಡಗುತ್ತಾರೆ, ಹೊಸ ಗುರುತಿನತ್ತ ಹೆಜ್ಜೆ ಇಡುತ್ತಾರೆ.

ಜಾಗೃತಿ ಮೂಡಿಸುವ ಕಾರ್ಯ

ಹದಿಹರೆಯದವರು ಎದುರಿಸುವ ದೈಹಿಕ -ಮಾನಸಿಕ ಸವಾಲು ಗಳನ್ನು ಎದುರಿಸಲು ಆರೋಗ್ಯ ಇಲಾಖೆ ತಜ್ಞರು ತರಗತಿ ನಡೆಸುತ್ತಾರೆ. ವೈಯಕ್ತಿಕ ಸುರಕ್ಷತೆ, ಹದಿಹರೆಯದವರ ಆರೋಗ್ಯ- ನೈರ್ಮಲ್ಯದ ಜೊತೆಗೆ ಆಧುನಿಕ ಕಾಲದ ಪ್ರಮುಖ ಬೆದರಿಕೆಯಾದ ಮಾದಕ ದ್ರವ್ಯಗಳ ವಿರುದ್ಧ



ಜಾಗೃತಿ ಮೂಡಿಸುವಿಕೆ ಸಹ ಈ ಶಿಬಿರ ಒಳಗೊಂಡಿದೆ. ಡಿಜಿಟಲ್ ಜಗತ್ತಿನಲ್ಲಿ ಅಪಾಯಗಳ ಗುರುತಿಸಲು ಕೃತಕ ಬುದ್ಧಿಮತ್ತೆ- ಆನ್‌ಲೈನ್ ಸುರಕ್ಷತೆಯಲ್ಲಿ ತರಬೇತಿ ನೀಡುವುದು ಇಂದಿನ ಜಗತ್ತಿನ ಮಕ್ಕಳಿಗೆ ಉತ್ತಮ ಆಸ್ತಿಯಾಗಿದೆ.
ಶಿಬಿರದ ಕೊಠಡಿಗಳ ಚೈತನ್ಯಗೊಳಿಸಲು ಜುಂಬಾ ನೃತ್ಯ, ಚಲನೆಯ ಚಿಕಿತ್ಸೆ , ಯೋಗವನ್ನು ವ್ಯವಸ್ಥೆ ಮಾಡಲಾಗಿದೆ. ಮನಸ್ಸನ್ನು ಶಾಂತಗೊಳಿಸಲು ಧ್ಯಾನ ಬಳಸಲಾಗುತ್ತದೆ.

ಭವಿಷ್ಯಕ್ಕಾಗಿ ಒಂದು ನಿಬಂಧನೆ

ಆರ್ಥಿಕ ಶಿಸ್ತನ್ನು ಕಲಿಸಲು ವಿನ್ಯಾಸಗೊಳಿಸಲಾದ 'ಕುಟುಂಬ ಬಜೆಟ್' ಅಧಿವೇಶನಗಳು ಮಕ್ಕಳಲ್ಲಿ ಜವಾಬ್ದಾರಿ ಪ್ರಜ್ಞೆ ಮೂಡಿಸುತ್ತವೆ. ಪ್ರತಿ ಅಧಿವೇಶನದಲ್ಲಿ ಪರಿಸರ ಸಂರಕ್ಷಣೆ ಮಹತ್ವ ಒತ್ತಿ ಹೇಳಲಾಗುತ್ತದೆ. ವಿವಿಧ ಸ್ಥಳೀಯಾಡಳಿತ ಸಂಸ್ಥೆಗಳು, ಸಾರ್ವಜನಿಕ ಪ್ರತಿನಿಧಿಗಳ ಸಹಯೋಗದೊಂದಿಗೆ ನಡೆಸಲಾಗುತ್ತಿರುವ ಈ ಉಪಕ್ರಮ ಹೊಸ ಪೀಳಿಗೆ ಬಲಿಷ್ಠ - ಸಾಮಾಜಿಕವಾಗಿ ಜವಾಬ್ದಾರಿಯುತವಾಗಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

ಕುಂಬಳೆಯಲ್ಲಿ ಬಸ್ ನಿಲ್ದಾಣ, ಕಾಂಪ್ಲೆಕ್ಸ್ ಕಟ್ಟಡ ನಿರ್ಮಾಣ: ಅಧಿಕಾರಿಗಳಿಂದ ಸ್ಥಳ ಪರಿಶೀಲನೆ



ಕುಂಬಳೆ: ಸರಿಸುಮಾರು ಹನ್ನೆರಡು ವರ್ಷಗಳ ಹಿಂದೆ ತೆರವುಗೊಳಿಸಲಾಗಿದ್ದ ಕುಂಬಳೆ ಬಸ್ ನಿಲ್ದಾಣದ ಹಳೆಯ ಕಟ್ಟಡದ ಬದಲಿಯಾಗಿ ನೂತನ ಬಸ್ ನಿಲ್ದಾಣ , ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಡ ನಿರ್ಮಾಣಕ್ಕೆ ಮತ್ತೆ ಕಾಲ ಕೂಡಿ ಬಂದಿದೆ. ಈ ನಿಟ್ಟಿನಲ್ಲಿ ಉದ್ದೇಶಿತ ಮಹತ್ವಾಕಾಂಕ್ಷೆ ಯೋಜನೆಗೆ ಚಾಲನೆ ನೀಡುವ ಅಂಗವಾಗಿ ಇಂಜಿನಿಯರ್ ಸಹಿತ ಇತರ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಅಧಿಕಾರಿಗಳಿಂದ ಮಾಹಿತಿ

ಕುಂಬಳೆ ಪೇಟೆ ಕೇಂದ್ರೀಕರಿಸಿ ನಾಲ್ಕು ಅಂತಸ್ತಿನ ಸುಸಜ್ಜಿತ ಕಟ್ಟಡ ನಿರ್ಮಿಸಲಿರುವ ಕಾರ್ಯಯೋಜನೆ ತಯಾರಿಸಲಾಗಿದೆ. ಗ್ರೌಂಡ್ ಫ್ಲೋರ್‌ನಲ್ಲಿ ವಾಹನ ಪಾರ್ಕಿಂಗ್, ಸ್ಯಾನಿಟರಿ ಸೌಕರ್ಯ ಇತ್ಯಾದಿಗಳನ್ನು ಏರ್ಪಡಿಸಲು ನಿರ್ಧರಿಸಲಾಗಿದೆ. ಒಂದು, ಎರಡು ಮತ್ತು ಮೂರನೇ ಮಹಡಿಗಳಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಹಾಗೂ ಇನ್ನಿತರ ಸೌಕರ್ಯಗಳನ್ನು ಕಲ್ಪಿಸಲು ತೀರ್ಮಾನಿಸಲಾಗಿದೆ. 4ನೇ ಮಹಡಿಯಲ್ಲಿ 500 ಮಂದಿಗೆ ಕುಳಿತುಕೊಳ್ಳಬಹುದಾದ ಅತ್ಯಾಧುನಿಕ ಮಾದರಿಯ ಸಭಾಂಗಣ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಸ್ಥಳ ಸಂದರ್ಶಿಸಿದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಕುಂಬಳೆ ಗ್ರಾ.ಪಂ.ಅಧ್ಯಕ್ಷ ವಿ.ಪಿ.ಅಬ್ದುಲ್ ಖಾದರ್, ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಎ.ಕೆ.ಆರಿಫ್, ಆರೋಗ್ಯ - ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಖಾಲಿದ್ ಅಲ್ಲದೆ ಇತರ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಹಾಜರಿದ್ದರು.

ಮುತುವರ್ಜಿ ವಹಿಸಿ

ಕುಂಬಳೆಯಲ್ಲಿ ಸುಸಜ್ಜಿತ ಬಸ್ ನಿಲ್ದಾಣ, ಶೌಚಾಲಯವಿಲ್ಲದೆ ಸಾರ್ವಜನಿಕರು ಅಪಾರ ಸಂಕಷ್ಟ ಎದುರಿಸುತ್ತಿದ್ದಾರೆ. ಇನ್ನಾದರೂ ಕುಂಬಳೆ ಪೇಟೆಯಲ್ಲಿ ಅತ್ಯಾಧುನಿಕ ಮಾದರಿಯಲ್ಲಿ ಉತ್ತಮ ಸೌಕರ್ಯಗಳುಳ್ಳ ಬಸ್ ತಂಗುದಾಣ ನಿರ್ಮಿಸು ವಲ್ಲಿ ಪಂ.ಆಡಳಿತ ಮುತುವರ್ಜಿ ವಹಿಸಬೇಕಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಶ್ರಮಿಸಿದ ವಿವಿಧ ಅಧಿಕಾರಿ, ನೌಕರರಿಗೆ ಅಭಿನಂದನೆ



ಕಾಸರಗೋಡು: 2026ರ ವಿಧಾನಸಭಾ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಲು ಚಟುವಟಿಕೆಗಳನ್ನು ಮುನ್ನಡೆಸಿದ ಜಿಲ್ಲೆಯ ವಿವಿಧ ಅಧಿಕಾರಿಗಳನ್ನು ಮತ್ತು ನೌಕರರನ್ನು ಕಾಸರಗೋಡು ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಶುಕ್ರವಾರ ಕಲೆಕ್ಟರೇಟ್‌ನಲ್ಲಿ ಅಭಿನಂದಿಸಿದರು.
ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು-ತೃಕ್ಕರೀಪುರ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಅಧಿಕಾರಿಗಳು, ಐವರು ಉಪ ಚುನಾವಣಾ ಅಧಿಕಾರಿಗಳು, 20 ಮಂದಿ ನೋಡಲ್ ಅಧಿ ಕಾರಿಗಳು, 24 ಮಂದಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ತರಬೇತುದಾರರು, ವೀಕ್ಷಕ ವಲಯದ ಐದು ಮಂದಿ ಸಂಪರ್ಕ ಅಧಿಕಾರಿಗಳು, ಚುನಾವಣಾ ಉಪ ಕಲೆಕ್ಟರ್, ಚುನಾವಣಾ ಇಲಾಖೆಯ ನೌಕರರು, ವಲಯ ಅಧಿಕಾರಿಗಳಾಗಿರುವ 124 ಮಂದಿ ಗ್ರಾಮ ಅಧಿಕಾರಿಗಳು, ಜಿಲ್ಲಾಧಿಕಾರಿಗಳ ಚುನಾವಣಾ ಇಲಾಖೆಯ ಕಿರಿಯ ಅಧೀಕ್ಷಕ ಎ.ರಾಜೀವನ್, ಚುನಾವಣಾ ಇಲಾಖೆಯ ಗುಮಾಸ್ತ ಬಿನು ಕುಮಾರ್, ಚುನಾವಣಾ ಅಧಿಕಾರಿಗಳ ನೌಕರರು ಮತ್ತು ಸ್ಟ್ರಾಂಗ್ ರೂಮ್‌ಗಳನ್ನು ಹೊಂದಿರುವ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರಿಗೆ ಪ್ರಶಂಸಾ ಪತ್ರಗಳನ್ನು ನೀಡಿ ಸನ್ಮಾನಿಸಲಾಯಿತು.
ಚುನಾವಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಪೊಲೀಸ್ ಅಧಿಕಾರಿಗಳಿಗೆ ಪ್ರಮಾಣ ಪತ್ರಗಳ ವಿತರಿಸಲಾಯಿತು. ಕೇಂದ್ರ ಭದ್ರತಾ ಪಡೆಯ ಸದಸ್ಯರನ್ನು ಜಿಲ್ಲಾಧಿಕಾರಿ ಗೌರವಿಸಿದರು. ಭದ್ರತಾ ಕರ್ತವ್ಯ ನಿರ್ವಹಿಸಿದ ಎಲ್ಲಾ ಸದಸ್ಯರನ್ನು ಜಿಲ್ಲಾಧಿಕಾರಿ ಪ್ರಮಾಣ ಪತ್ರಗಳೊಂದಿಗೆ ಸನ್ಮಾನಿಸಿದರು. ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆದ ಈ ಸಮಾರಂಭದ ಅಧ್ಯಕ್ಷತೆಯನ್ನು ಎಡಿಎಂ ಕೆ.ವಿ.ಶ್ರುತಿ ವಹಿಸಿದ್ದರು. ಚುನಾವಣಾಧಿಕಾರಿಗಳಾದ ವಿ.ಪಿ.ರಘು ಮಣಿ, ಬಿನು ಜೋಸೆಫ್, ಲಿಪು ಎಸ್.ಲಾರೆನ್ಸ್ , ಕೆ.ಆರ್.ಮನೋಜ್, ವಿ.ಇ.ಶೆರ್ಲಿ ಮಾತ ನಾಡಿದರು. ಚುನಾವಣಾ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್ ಸ್ವಾಗತಿಸಿ, ಎಂ.ಮಧುಸೂದನನ್ ವಂದಿಸಿದರು.

ಕೃಷ್ಣನಗರ ಎಸ್ಸಿ ಕಾಲನಿಯಲ್ಲಿ ಮನೆಗಳ ಮೇಲೆ ವಾಲಿರುವ ವಿದ್ಯುತ್ ಕಂಬಗಳು





ಉಪ್ಪಳ: ಮನೆಗಳಿಗೆ ವಿದ್ಯುತ್ ಕಂಬ ಹಾಗೂ ತಂತಿ ವಾಲಿಕೊಂಡಿದ್ದು ಪರಿಸರ ನಿವಾಸಿಗಳಲ್ಲಿ ಆತಂಕ ಸೃಷ್ಟಿಯಾಗಿದೆ. ಮಂಗಲ್ಪಾಡಿ ಪಂ. ವ್ಯಾಪ್ತಿಯ ಕೃಷ್ಣನಗರ ಎಸ್‌ಸಿ ಕಾಲನಿಯಲ್ಲಿ ವಿದ್ಯುತ್ ಕಂಬಗಳು ಈ ರೀತಿ ಆತಂಕ ಸೃಷ್ಟಿಸಿದೆ. ಇಲ್ಲಿನ ಕುಸುಮ ಎಂಬವರ ಮನೆ ಬಳಿಯಲ್ಲಿರುವ ವಾಲಿಕೊಂಡ ವಿದ್ಯುತ್ ಕಂಬ ಯಾವುದೇ ಕ್ಷಣದಲ್ಲಿ ಮನೆಯ ಮೇಲೆ ಬೀಳಲು ಸಿದ್ಧಗೊಂಡಿದ್ದು, ಇನ್ನೊಂದು ಕಂಬ ಅಶೋಕ ಎಂಬವರ ಮನೆಯ ಹತ್ತಿರದಲ್ಲೇ ಇದ್ದು ಈ ಪರಿಸರದಿಂದ ಹಾದು ಹೋದ ತಂತಿ ಮನೆಯ ಮೇಲ್ಭಾಗಕ್ಕೆ ಹಾಗೂ ತೆಂಗಿನ ಮರಕ್ಕೂ ಸ್ಪರ್ಶಿಸುತ್ತಿರುವುದು ಆತಂಕದ ಸ್ಥಿತಿ ಉಂಟಾಗಿದೆ. ಮರದ ರೆಂಬೆಗಳು ತಾಗಿ ವಿದ್ಯುತ್ ಸ್ಥಗಿತಗೊಳ್ಳುತ್ತಿದೆ.
ವಿದ್ಯುತ್ ಕಂಬ ಬದಲಾಯಿಸಲು ವಾರ್ಡ್ ಸದಸ್ಯರ ಮೂಲಕ , ಸ್ಥಳೀಯರು ಉಪ್ಪಳ ವಿದ್ಯುತ್ ಸೆಕ್ಷನ್‌ಗೆ ದೂರು ನೀಡಿದರೂ ಕ್ರಮಕೈಗೊಳ್ಳಲು ಮುಂದಾಗಲಿಲ್ಲವೆಂದು ನಿವಾಸಿಗಳು ತಿಳಿಸಿದ್ದಾರೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಮಳೆಗಾಲದ ಮೊದಲೇ ದುರಸ್ತಿಗೊಳಿಸಿ ಸಂಭವಿಸುವ ಅಪಾಯ ತಪ್ಪಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ವೀಣಾವಾದಿನಿ ಸಂಗೀತ ಹಾಗೂ ವೈದಿಕ - ತಾಂತ್ರಿಕ ವಿದ್ಯಾಪೀಠಕ್ಕೆ ಶೃಂಗೇರಿ ಶ್ರೀ ಭೇಟಿ

ಸಂಗೀತವು ಕೇವಲ ಕಲೆ ಅಲ್ಲ, ಅದು ಭಗವಂತನ ಉಪಾಸನೆ ಮಾರ್ಗ: ಸ್ವಾಮೀಜಿ

ಬದಿಯಡ್ಕ: ಭಾರತೀಯ ಸಂಸ್ಕೃತಿಯಲ್ಲಿ ವೇದಗಳಿಗೆ ಇರುವ ಮಹತ್ವದಂತೆಯೇ ಸಂಗೀತಕ್ಕೂ ಶ್ರೇಷ್ಠ ಸ್ಥಾನವಿದೆ. ಸಂಗೀತವು ಕೇವಲ ಕಲೆ ಅಲ್ಲ, ಅದು ಭಗವಂತನ ಉಪಾಸನೆ ಮಾರ್ಗ ಹೌದು ಎಂದು ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸನ್ನಿಧಾನಂಗಳವರು ಹೇಳಿದ್ದಾರೆ.
ಅವರು ಬಳ್ಳಪದವು ನಾರಾಯಣೀಯಂನಲ್ಲಿ ಕಾರ್ಯನಿರ್ವ ಹಿಸುತ್ತಿರುವ ವೀಣಾವಾದಿನಿ ಸಂಗೀತ ಹಾಗೂ ವೈದಿಕ - ತಾಂತ್ರಿಕ ವಿದ್ಯಾಪೀಠಕ್ಕೆ ಚಿತ್ತೈಸಿದ ಅವರು ಆಶೀರ್ವಚನ ನೀಡಿದರು.
ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿಯೇ ಸಂಗೀತ ಹಾಗೂ ಶಾಸ್ತ್ರೀಯ ಕಲೆಗಳ ಅಭ್ಯಾಸ ಆರಂಭಿಸಿದರೆ ಅದು ಜೀವನಪೂರ್ತಿ ಉಳಿಯುತ್ತದೆ. ಹೆತ್ತವರು





ಮಕ್ಕಳನ್ನು ವೀಣಾವಾದಿನಿಯಂತಹ ಸಂಸ್ಥೆಗಳಿಗೆ ಕಳುಹಿಸಿ ಸಂಗೀತ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಕಲಿಸಬೇಕೆಂದು ಶೃಂಗೇರಿ ಜಗದ್ಗುರುಗಳು ತಿಳಿಸಿದರು. ವೀಣಾವಾದಿನಿಯಲ್ಲಿ ನಡೆಯುತ್ತಿರುವ ಸಂಗೀತ ಅಧ್ಯಾಪನ, ಕಲಿಕೆ ಮತ್ತು ಆರಾಧನಾ ಚಟುವಟಿಕೆಗಳನ್ನು ಜಗದ್ಗುರುಗಳು ಶ್ಲಾಘಿಸಿ, ಸಂಸ್ಥೆಗೆ ತಮ್ಮ ಆಶೀರ್ವಾದ ಹಾಗೂ ಅನುಗ್ರಹ ಸದಾ ಇರುತ್ತದೆ ಎಂದು ಹರಸಿದರು.
ಜಗದ್ಗುರುಗಳನ್ನು ಸಂಸ್ಥೆಯ ವತಿಯಿಂದ ಭಕ್ತಿಪೂರ್ವಕವಾಗಿ ಸ್ವಾಗತಿಸಲಾಯಿತು. ಈ ಸಂದರ್ಭ ಯೋಗೀಶ ಶರ್ಮಾ ಬಳ್ಳಪದವು ಹಾಗೂ ವೀಣಾವಾದಿನಿಯ ವಿದ್ಯಾರ್ಥಿಗಳು ಜಗದ್ಗುರುಗಳ ಸಮ್ಮುಖದಲ್ಲಿ ಸಂಗೀತಾರ್ಚನೆ ಸೇವೆ ಸಲ್ಲಿಸಿದರು. ಮೃದಂಗದಲ್ಲಿ ಪಯ್ಯನ್ನೂರು ಗೋವಿಂದ ಪ್ರಸಾದ್, ಘಟಂನಲ್ಲಿ ಪರಾಶರ ಉಪ್ಪಂಗಳ ಸಹಕರಿಸಿದರು.
ಈ ವೇಳೆ ವೀಣಾವಾದಿನಿಯ 25 ವರ್ಷಗಳ ಪಯಣ, ಇಲ್ಲಿ ನಡೆಯುತ್ತಿರುವ ಸಂಗೀತಾರಾಧನೆ, ಪೂಜೆ ಜೊತೆಗೆ ಜರಗುವ ಸಂಗೀತಾರ್ಚನೆ ಹಾಗೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಕುರಿತು ರಾಜಾರಾಮ ಪೆರ್ಲ ವಿವರಿಸಿದರು. ಪೂರ್ವದಲ್ಲಿ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರು ವೀಣಾವಾದಿನಿಗೆ ಆಗಮಿಸಿ ಆಶೀರ್ವದಿಸಿದ್ದನ್ನು ಅವರು ಸ್ಮರಿಸಿದರು. ಅದಕ್ಕೂ ಮೊದಲಿನ ಜಗದ್ಗುರುಗಳಾಗಿದ್ದ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ವೀಣಾವಾದಿನಿಯು ಈಗ ನೆಲೆನಿಂತಿರುವ ಬಳ್ಳಪದವಿನ ನೆಲಕ್ಕೆ ಚಿತ್ತೈಸಿದ್ದು ಬಳ್ಳಪದವು ಪರಂಪರೆಯ ಮಹಾಭಾಗ್ಯ ಎಂಬುದೂ ಇಲ್ಲಿ ಗಮನಾರ್ಹ ವಿಷಯ ಅವರು ಉಲ್ಲೇಖಿಸಿದರು.

ಸಂಗೀತ ಪರಂಪರೆಯ ಅಮೂಲ್ಯ ಸಂಪತ್ತು

ಸಂಗೀತ ತ್ರಿಮೂರ್ತಿಗಳು , ವಾಗ್ಗೇಯಕಾರರು ಭಗವಂತನ ಆರಾಧನೆಗಾಗಿ ರಚಿಸಿದ ಕೃತಿಗಳೇ ಭಾರತೀಯ ಸಂಗೀತ ಪರಂಪರೆಯ ಅಮೂಲ್ಯ ಸಂಪತ್ತು. ಇಂದಿನ ಸಂಗೀತಜ್ಞರು ಹಾಗೂ ವಿದ್ಯಾರ್ಥಿಗಳು ಆ ಪರಂಪರೆಯನ್ನು ಗೌರವಿಸಿ ಮುಂದುವರಿಸಬೇಕು.

● ಶೃಂಗೇರಿ ಶ್ರೀ

ಸುತ್ತಮುತ್ತ

ಮೇ 16: ತ್ರೈಮಾಸಿಕ ಕೆಡಿಪಿ ಸಭೆ

ಉಡುಪಿ: ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯು ಮೇ 16ರಂದು ಬೆಳಗ್ಗೆ 10.30 ಕ್ಕೆ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಡಾ.ವಿ.ಎಸ್ ಆಚಾರ್ಯ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಆರ್ ಹೆಬ್ಬಾಳ್ಕರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ್‌ನ ಕಚೇರಿ ಪ್ರಕಟಣೆ ತಿಳಿಸಿದೆ.

ಸಹಾಯಧನ ಸೌಲಭ್ಯ : ಅರ್ಜಿ ಆಹ್ವಾನ

ಉಡುಪಿ: ಉಡುಪಿ ನಗರಸಭೆಯ ಪ್ರಸಕ್ತ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿಯ ಶೇ. 5 ರ ವಿಕಲಚೇತನರ ಕಲ್ಯಾಣ ಕಾರ್ಯಕ್ರಮದ ಅನುದಾನದಡಿ ಕೃತಕ ಅಂಗ ಜೋಡಣೆಗೆ ಮತ್ತು ಶಸ್ತ್ರ ಚಿಕಿತ್ಸೆಗೆ ಸಹಾಯಧನ ಸೌಲಭ್ಯ ಪಡೆಯಲು, ದೈಹಿಕ ವಿಕಲತೆಯ ಬಗ್ಗೆ ಜಿಲ್ಲಾ ಸರ್ಜನ್‌ರಿಂದ ಪಡೆದ ಪ್ರಮಾಣ ಪತ್ರ, ಆದಾಯ ದೃಢಪತ್ರ, ಪ್ರಸಕ್ತ ಸಾಲಿನ ಆಸ್ತಿ ತೆರಿಗೆ ಪಾವತಿ ರಶೀದಿ, ಪಡಿತರ ಚೀಟಿ, ಆಧಾರ್ ಕಾರ್ಡ್ ಪ್ರತಿಯೊಂದಿಗೆ ಮೇ 25 ರ ಒಳಗಾಗಿ ಉಡುಪಿ ನಗರಸಭಾ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ನಗರಸಭೆ ಪೌರಾಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಕಾನೂನು ಪದವೀಧರರಿಗೆ ಶಿಷ್ಯವೇತನ: ಅರ್ಜಿ ಸಲ್ಲಿಸಲು ಆಹ್ವಾನ

ಉಡುಪಿ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು ಮತ್ತು ಸಿಖ್ ಸಮುದಾಯದ ಕಾನೂನು ಪದವೀಧರರಿಗೆ ವಕೀಲಿ ವೃತ್ತಿಯಲ್ಲಿ ತರಬೇತಿ ನೀಡಿ ಶಿಷ್ಯವೇತನ ಮಂಜೂರು ಮಾಡಲು ಅರ್ಹ ಮತ್ತು ಆಸಕ್ತ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿರುವ ಕಾನೂನು ಪದವೀಧರ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ. 3,50,000 ಮಿತಿಯಲ್ಲಿರಬೇಕು. ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಅನುಭವಿ ಹಾಗೂ ನುರಿತ ವಕೀಲರ ಅಧೀನದಲ್ಲಿ ವಕೀಲಿ ವೃತ್ತಿಯಲ್ಲಿ ತರಬೇತಿ ನೀಡಿ ನಾಲ್ಕು ವರ್ಷಗಳ ವರೆಗೆ ಮಾಹೆಯಾನ ರೂ.5000 ಗಳಂತೆ ಶಿಷ್ಯವೇತನ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡಿ, ಅವಶ್ಯವಿರುವ ದಾಖಲಾತಿಗಳೊಡನೆ ಜೂ. 12ರ ಒಳಗಾಗಿ ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ, ಶಿವಳ್ಳಿ, ಅಲೆವೂರು ರಸ್ತೆ, ಮಣಿಪಾಲ, ಉಡುಪಿ ಇವರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಚೇರಿಯ ದೂರವಾಣಿ ಸಂಖ್ಯೆ: 0820-2574596 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮೃತ ಮಹಿಳೆಯ ವಾರಸುದಾರರಿಗೆ ಸೂಚನೆ

ಉಡುಪಿ: ಬ್ರಹ್ಮಾವರ ತಾಲೂಕಿನ ಬಾರ್ಕೂರು ಬಳಿ ರಸ್ತೆ ಅಫಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲುಗೊಂಡಿದ್ದ ಲೀಲಾ (62) ಎನ್ನುವ ಮಹಿಳೆಯು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಮೃತರನ್ನು ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ. 5 ಅಡಿ 3 ಇಂಚು ಎತ್ತರ, ಸಪೂರ ಶರೀರ, ಗೋಧಿ ಮೈಬಣ್ಣ ಹೊಂದಿದ್ದು, ಬಲಭುಜದ ಕಾಲರ್ ಮೂಳೆ ಹಾಗೂ ಎಡಕೈನಲ್ಲಿ ಮಚ್ಚೆ ಇದ್ದು ಮುಂಬೈನಲ್ಲಿ ಕೆಲಸ ಮಾಡಿಕೊಂಡಿದ್ದ ಇವರು ಕಳೆದ 20 ವರ್ಷಗಳಿಂದ ಬ್ರಹ್ಮಾವರ, ಬಾರ್ಕೂರು ಕಡೆಗಳಲ್ಲಿ ಬಾಡಿಗೆ ಮನೆಯಲ್ಲಿ ವಾಸಮಾಡಿಕೊಂಡಿದ್ದರು. ಮೃತ ಮಹಿಳೆಯ ಸಂಬಂಧಿಕರು ಯಾರಾದರೂ ಇದ್ದಲ್ಲಿ ಬ್ರಹ್ಮಾವರ ಪೊಲೀಸ್ ಠಾಣೆ ಪಿ.ಎಸ್.ಐ ದೂರವಾಣಿ ಸಂಖ್ಯೆ 9480805453, ಬ್ರಹ್ಮಾವರ ಸಿಪಿಐ ದೂರವಾಣಿ ಸಂಖ್ಯೆ 9480805432, ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ 0820-2526709, 2526444 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಬ್ರಹ್ಮಾವರ ವೃತ್ತ ಪೊಲೀಸ್ ನಿರೀಕ್ಷಕರ ಕಚೇರಿ ಪ್ರಕಟಣೆ ತಿಳಿಸಿದೆ.

ವ್ಯಕ್ತಿ ಸ್ಥಿತಿ ಚಿಂತಾಜನಕ: ವಾರಸುದಾರರಿಗೆ ಸೂಚನೆ

ಉಡುಪಿ: ಜಿಲ್ಲಾಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಬಸಪ್ಪ (75) ಎಂಬ ವೃದ್ಧರ ಸ್ಥಿತಿ ಚಿಂತಾಜನಕವಾಗಿದ್ದು, ವಾರಿಸುದಾರರು ಯಾರಾದರೂ ಇದ್ದಲ್ಲಿ ಜಿಲ್ಲಾಸ್ಪತ್ರೆಯ ನಾಗರಿಕ ಸಹಾಯ ಕೇಂದ್ರ ದೂರವಾಣಿ ಸಂಖ್ಯೆ 0820-2520555/9449827833 ಅನ್ನು ಸಂಪರ್ಕಿಸುವಂತೆ ಜಿಲ್ಲಾಸ್ಪತ್ರೆಯ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಅಪಾರ ನಷ್ಟ

ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡ ಜಯ ಸಾಲ್ಯಾನ್ ಅವರನ್ನು ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಇದಲ್ಲದೆ ಈದು, ಪಳ್ಳಿ ಮತ್ತು ಮುದ್ರಾಡಿ ಗ್ರಾಮಗಳಲ್ಲೂ ಮನೆಗಳಿಗೆ ಸಿಡಿಲು ಬಡಿದು ಸುಮಾರು 1 ಲಕ್ಷ ರೂ.ಗಳಷ್ಟು ನಷ್ಟ ಸಂಭವಿಸಿದೆ. ಹೆಬ್ರಿ ತಾಲೂಕಿನ ನಾಡ್ಪಾಲು ಮತ್ತು ಅಲ್ಬಾಡಿ ಗ್ರಾಮಗಳಲ್ಲಿ ಬಿರುಗಾಳಿಯ ಹೊಡೆತಕ್ಕೆ ಸುಮಾರು 1.5 ಲಕ್ಷ ರೂಪಾಯಿ ಮೌಲ್ಯದ ತೋಟಗಾರಿಕಾ ಬೆಳೆಗಳು ನಾಶವಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಡುಪಿ ಜಿಲ್ಲಾ ಲಸಿಕಾ ಕಾರ್ಯಪಡೆ ಸಮನ್ವಯ ಸಮಿತಿಯ ಸಭೆ | ಜಿಲ್ಲಾಧಿಕಾರಿ ಸ್ವರೂಪ ಸೂಚನೆ

ಮಕ್ಕಳು ಪಲ್ಸ್ ಪೋಲಿಯೋದಿಂದ ಹೊರಗುಳಿಯದಂತೆ ಕ್ರಮ

ಉಡುಪಿ: ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮವು ಜೂನ್ 28ರಂದು ನಡೆಯಲಿದ್ದು, 0–5 ವರ್ಷದೊಳಗಿನ ಯಾವುದೇ ಮಗುವು ಲಸಿಕೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಜಿಲ್ಲಾ ಲಸಿಕಾ ಕಾರ್ಯಪಡೆ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

0–5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡಲಾಗುತ್ತಿದ್ದು, ಪ್ರತಿಯೊಬ್ಬ ಪೋಷಕರು ಮಕ್ಕಳಿಗೆ ಲಸಿಕೆಯನ್ನು ಹಾಕಿಸಬೇಕು ಎಂದರು.

ಕಳೆದ ಸಾಲಿನ ಡಿಸೆಂಬರ್ ನಲ್ಲಿ ನಡೆದ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದಲ್ಲಿ ಒಟ್ಟು 65,401 ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ಶೇ.103ರಷ್ಟು ಗುರಿ ಮೀರಿ ಸಾಧನೆ ಮಾಡಲಾಗಿದೆ ಎಂದರು.



ಲಸಿಕೆಗೆ 63,524 ಮಕ್ಕಳ ಗುರುತು

ಜೂನ್‌ನಲ್ಲಿ ನಡೆಯಲಿರುವ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಅಂದಾಜು 63,524 ಮಕ್ಕಳನ್ನು ಗುರುತಿಸಲಾಗಿದ್ದು, ಸಮೀಕ್ಷೆ ಪ್ರಗತಿಯಲ್ಲಿದೆ. ಮಕ್ಕಳಿಗೆ ಲಸಿಕೆಗಳನ್ನು ನೀಡಲು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 668 ಲಸಿಕಾ ಕೇಂದ್ರಗಳ ಜೊತೆಯಲ್ಲಿ ಟ್ರಾನ್ಸಿಟ್ 18 ಬೂತುಗಳು, 5 ಮೊಬೈಲ್ ಟೀಮ್‌ಗಳಿದ್ದು 1363 ತಂಡಗಳು ಹಾಗೂ 155 ಮೇಲ್ವಿಚಾರಕರನ್ನು ನೇಮಿಸಲಾಗಿದೆ ಎಂದರು.

ನಿರಂತರ ವಿದ್ಯುತ್ ಪೂರೈಸಿ

ಭಾನುವಾರವಾಗಿರುವ ಹಿನ್ನೆಲೆ, ರೈಲ್ವೆ ನಿಲ್ದಾಣ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಟೋಲ್ ಗೇಟ್‌ಗಳಲ್ಲಿ ಬೂತ್‌ಗಳನ್ನು ತೆರೆಯಲು ಅನುವು ಮಾಡಿಕೊಡಬೇಕು ಎಂದ ಅವರು, ಲಸಿಕೆಯ ಸುರಕ್ಷಿತ ದಾಸ್ತಾನಿನ ಬಗ್ಗೆ ಗಮನ ಹರಿಸುವುದರೊಂದಿಗೆ ಲಸಿಕೆ ಹಾಳಾಗದಂತೆ ನಿರಂತರ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಮೆಸ್ಕಾಂ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.


ಎಚ್‌ಪಿವಿ ಲಸಿಕೆ ಬಗ್ಗೆ ಜಾಗೃತಿ ವಹಿಸಿ

ಹೆಣ್ಣು ಮಕ್ಕಳಲ್ಲಿ ಕಂಡು ಬರುವ ಗರ್ಭಕಂಠ ಕ್ಯಾನ್ಸರ್‌ನಿಂದ ರಕ್ಷಣೆ ಪಡೆಯಲು ಜಿಲ್ಲೆಯ ಎಲ್ಲಾ 14 ವರ್ಷ ಮೇಲ್ಪಟ್ಟ 15 ವರ್ಷದೊಳಗಿನ ಹೆಣ್ಣು ಮಕ್ಕಳು ಎಚ್‌ಪಿವಿ ಲಸಿಕೆಯನ್ನು ಪಡೆಯುವಂತೆ ಪೋಸ್ಟರ್‌ಗಳನ್ನು, ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಪೋಷಕರಿಗೆ ಲಸಿಕೆಯು ಸುರಕ್ಷಿತವಾಗಿರುವ ಕುರಿತು ಮನದಟ್ಟು ಮಾಡಿಸಬೇಕು ಎಂದರು.

ವಲಸೆ, ಕಟ್ಟಡ ಹಾಗೂ ಮತ್ತಿತರ ಕೂಲಿ ಕಾರ್ಮಿಕರ ಮಕ್ಕಳು ಲಸಿಕಾ ಪಡೆಯುವಂತೆ ಹೆಚ್ಚು ಜಾಗೃತಿ ಮೂಡಿಸಬೇಕು. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಪ್ರಚಾರ ನೀಡಬೇಕು. ಪಲ್ಸ್ ಪೋಲೀಯೋ ಕಾರ್ಯಕ್ರಮದ ಯಶಸ್ವಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಿಕ್ಷಣ, ಮೆಸ್ಕಾಂ, ಸಾರಿಗೆ, ರೈಲ್ವೆ, ಹೆದ್ದಾರಿ ಪ್ರಾಧಿಕಾರ, ಪೊಲೀಸ್ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕೆಂದರು.

ಸಭೆಯಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸುಬ್ರಹ್ಮಣ್ಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಬಸವರಾಜ ಹುಬ್ಬಳ್ಳಿ, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ. ನಾಗರತ್ನ, ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿ ಡಾ.ಲತಾ ನಾಯಕ್, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ಜ್ಯೋತ್ಸ್ನಾ ಬಿ.ಕೆ, ವಿವಿಧ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು, ತಾಲೂಕು ಆರೋಗ್ಯಾಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಅಧಿಕ ಮಾಸದಲ್ಲಿ ಪುರುಷೋತ್ತಮನ ಆರಾಧನೆ ಅಗತ್ಯ: ಶ್ರೀ ವಿದ್ಯಾಧೀಶತೀರ್ಥ



ಕುಂದಾಪುರ: ಸುಖ ಕೊಡುವುದು ಮತ್ತು ದುಃಖ ಬಾರದೆ ರಕ್ಷಣೆ ಮಾಡುವುದು ದೇವರ ಕೈಯಲ್ಲಿದೆ. ದೇವರ ನಿರಂತರವಾಗಿ ಸೇವೆ ಮಾಡುವುದು, ಉಪಾಸನೆ ಮಾಡುವುದು, ಪ್ರತಿನಿತ್ಯ ನಾಮೋಚ್ಚಾರಣೆ ಮಾಡುವುದು, ಭಜನೆ ಮಾಡುವುದು ದೇವರು ನಮಗೆ ಕೊಟ್ಟ ಶಕ್ತಿ. ಅಧಿಕ ಮಾಸದಲ್ಲಿ ಪುರುಷೋತ್ತಮನ ಆರಾಧನೆ ಮಾಡಬೇಕು. ದೇವರ ನಾಮಸ್ಮರಣೆ ಮಾಡುವುದರಿಂದ ಶ್ರೇಯೋಭಿವೃದ್ಧಿ ಆಗುತ್ತದೆ ಎಂದು ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ಹೇಳಿದರು.

ಗಂಗೊಳ್ಳಿ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಮೊಕ್ಕಾಂಗೆ ಗುರುವಾರ ಆಗಮಿಸಿದ ಶ್ರೀಗಳು ಆಶೀರ್ವಚನ ನೀಡಿದರು. ಅಧಿಕ ಮಾಸದಲ್ಲಿ ಮುಖ್ಯವಾಗಿ ಪುರುಷೋತ್ತಮ ಸಂತುಷ್ಟವಾಗುವಂತಹ ಕಾರ್ಯ ಮಾಡಬೇಕು. ದೇವತಾ ಪ್ರೀತ್ಯರ್ಥ ಮಾಡುವಂತಹ ಕಾರ್ಯ ಮಾಡಬೇಕು. ನಿಷ್ಕಾಮ್ಯ ಕಾರ್ಯಗಳನ್ನು ಅಧಿಕ ಮಾಸದಲ್ಲಿ ಮಾಡಿದರೆ ದೇವರು ಸಂಪ್ರೀತನಾಗಿ ನಮ್ಮ ಜೀವನದಲ್ಲಿ ಅಭಿವೃದ್ಧಿ ಆಗುತ್ತದೆ. ಹರಿನಾಮ ಸ್ಮರಣೆಯ ಮಹತ್ವವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು ಎಂದು ಅವರು ಹೇಳಿದರು.

ದೇವಳದ ಆಡಳಿತ ಮೊಕ್ತೇಸರ ಎನ್. ಸದಾಶಿವ ನಾಯಕ್ ಮತ್ತು ಜಿ.ವೆಂಕಟೇಶ ನಾಯಕ್ ಶ್ರೀಗಳ ಪಾದಪೂಜೆ ನೆರವೇರಿಸಿದರು. ದೇವಳದ ಪ್ರಧಾನ ಅರ್ಚಕ ಎಸ್.ವೆಂಕಟರಮಣ ಆಚಾರ್ಯ, ತಾಂತ್ರಿಕ ಜಿ.ವಸಂತ ಭಟ್, ಆಡಳಿತ ಮಂಡಳಿ ಸದಸ್ಯರು, ವೈದಿಕರು, ಪುರೋಹಿತರು, ಊರಿನ ಹತ್ತು ಸಮಸ್ತರು, ಸಮಾಜ ಬಾಂಧವರು ಉಪಸ್ಥಿತರಿದ್ದರು. ಎನ್.ಸದಾಶಿವ ನಾಯಕ್ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 300ಕ್ಕೂ ಅಧಿಕ ಪ್ರಶಿಕ್ಷಣ ವರ್ಗ : ನವೀನ್ ಶೆಟ್ಟಿ



ಶಿರ್ವ: ಉಡುಪಿ ಜಿಲ್ಲಾ ಭಾರತೀಯ ಜನತಾಪಾರ್ಟಿ ಉಡುಪಿ ಜಿಲ್ಲೆ ಇದರ ನೇತೃತ್ವದಲ್ಲಿ ಶಿರ್ವ ಸಮೀಪದ ಕಳತ್ತೂರು ಕುಶಲ ಶೇಖರ ಶೆಟ್ಟಿ ಸಭಾಭವನದಲ್ಲಿ ಎರಡು ದಿನಗಳ ಕಾಪು ಮಂಡಲ ಪ್ರಶಿಕ್ಷಣ ಅಭಿಯಾನಕ್ಕೆ ಶುಕ್ರವಾರ ಜಿಲ್ಲಾ ಬಿಜೆಪಿ ಅಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಇವರು ದೀಪ ಪ್ರಜ್ವಲನದ ಮೂಲಕ ಚಾಲನೆ ನೀಡಿದರು.

ವೇದಿಕೆಯಲ್ಲಿರುವ ಗಣ್ಯರು ಭಾರತಮಾತೆ, ಪಂ. ದೀನದಯಾಳ್ ಉಪಾಧ್ಯಾಯ, ಶ್ಯಾಮ್‌ಪ್ರಸಾದ್ ಮುಖರ್ಜಿಯವರ ಭಾವಚಿತ್ರಕ್ಕೆ ಪುಷ್ಪ ಗೌರವ ಸಲ್ಲಿಸಿದರು.

ಉದ್ಘಾಟಕರಾದ ಕುತ್ಯಾರು ನವೀನ್ ಶೆಟ್ಟಿ ಮಾತನಾಡಿ ಬಿಜೆಪಿಯ ನೂತನ ರಾಷ್ಟ್ರೀಯ ಅಧ್ಯಕ್ಷರ ಆಶಯದಂತೆ ವ್ಯಕ್ತಿ ನಿರ್ಮಾಣದಿಂದ ಸಂಘಟನೆ, ಸಂಘಟನೆಯಿಂದ ರಾಷ್ಟ್ರ ನಿರ್ಮಾಣ ತತ್ವದಡಿಯಲ್ಲಿ ಪ್ರತೀ ಬೂತ್ ಮಟ್ಟದ ಪ್ರಮುಖರಿಗೆ ವೈಚಾರಿಕ ಬದ್ಧತೆಯನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಶಿಕ್ಷಣ ನೀಡುವ ಮೂಲಕ ಪ್ರತೀ ವಿಧಾನಸಭಾ ಕ್ಷೇತ್ರದಲ್ಲಿ 300ಕ್ಕೂ ಅಧಿಕ ಪ್ರಶಿಕ್ಷಣ ವರ್ಗಗಳು ನಡೆಯುತ್ತಿವೆ ಎಂದರು.

ಕಾಪು ಕ್ಷೇತ್ರ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾತನಾಡಿ, ಇತ್ತೀಚೆಗೆ ನಡೆದ ಚುನಾವಣಾ ಗೆಲುವು ಕಾರ್ಯಕರ್ತರ ಬಲದಿಂದ ಆಗಿದೆ. ಜನಸಂಘದ ಕಾಲದಿಂದಲೂ ಪ್ರಮುಖ ಕಾರ್ಯಕರ್ತರಿಗೆ ಪ್ರಶಿಕ್ಷಣ ವರ್ಗ ನಡೆಸಲಾಗುತ್ತಿದ್ದು, ಬಿಜೆಪಿಯಲ್ಲೂ ಮೇಲ್ಪಟ್ಟದ ನಾಯಕರಿಗೆ,ಕಾರ್ಯಕರ್ತರಿಗೆ ಈ ಕಾರ್ಯಕ್ರಮ ನಡೆಯುತ್ತಿತ್ತು. ಪಕ್ಷ ತಾಯಿ ಇದ್ದಂತೆ. ಈಗ ತಳಮಟ್ಟದ ಕಾರ್ಯಕರ್ತರಿಗೂ ಆತ್ಮವಿಶ್ವಾಸ,ಬದ್ಧತೆ ಬೆಳೆಸುವ ಕಾರ್ಯ ನಡೆಯುತ್ತದೆ. ಜಗತ್ತಿನಲ್ಲಿ ಒಳ್ಳೆಯ ಚರಿತ್ರೆ ಇರುವ ಪಕ್ಷದಲ್ಲಿ ನಾವಿದ್ದೇವೆ ಎಂದರು.

ಕಾಪು ಮಂಡಲ ಬಿಜೆಪಿ ಅಧ್ಯಕ್ಷ ಜಿತೇಂದ್ರ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ,ವೇದಿಕೆಯಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್, ಉಡುಪಿ ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಶ್ರೀಕಾಂತ್ ನಾಯಕ್, ಮಾಜಿ ಶಾಸಕರಾದ ಲಾಲಾಜಿ ಆರ್ ಮೆಂಡನ್, ಜಿಲ್ಲಾ ಕೋಶಾಧಿಕಾರಿ ಪ್ರವೀಣ್ ಶೆಟ್ಟಿ ಕಪ್ಪೆಟ್ಟು, ಶರಣ್ ಕುಮಾರ್ ಮಟ್ಟು ಉಪಸ್ಥಿತರಿದ್ದರು. ಕುತ್ಯಾರು ಪ್ರಸಾದ್ ಶೆಟ್ಟಿ ನಿರೂಪಿಸಿದರು. ಪಾಣೇಶ್ ಹೆಜಮಾಡಿ ವಂದೇಮಾತರಮ್ ಗೀತೆ ಹಾಡಿದರು. ಕಾಪು ಮಂಡಲ ಬಿಜೆಪಿ ಕಾರ್ಯದರ್ಶಿ ಗೋಪಾಲಕೃಷ್ಣ ರಾವ್ ವಂದಿಸಿದರು.

ಅಂಬಲಪಾಡಿ ಮೇಲ್ಸೇತುವೆಯ ಕಾಮಗಾರಿ: ಸಂಸದ ಕೋಟ ಪರಿಶೀಲನೆ



ಉಡುಪಿ: ಅಂಬಲಪಾಡಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಳೆದ ಒಂದೂವರೆ ವರ್ಷದಿಂದ ನಡೆಯುತ್ತಿರುವ ಮೇಲ್ಸೇತುವೆ ಕಾಮಗಾರಿ ಈಗ ಮುಕ್ತಾಯದ ಹಂತ ತಲುಪಿದ್ದು, ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ಸ್ಥಳಕ್ಕೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿದರು.

ಅಂಬಲಪಾಡಿ ಜಂಕ್ಷನ್‌ನಲ್ಲಿ ನಿರಂತರವಾಗಿ ಸಂಭವಿಸುತ್ತಿದ್ದ ಅಪಘಾತಗಳು ಹಾಗೂ ವಾಹನ ದಟ್ಟಣೆಯ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಮೇಲ್ಸೇತುವೆ ನಿರ್ಮಾಣ ಮಾಡಲಾಗುತ್ತಿದೆ. ಅಧಿಕಾರಿಗಳೊಂದಿಗೆ ಕಾಮಗಾರಿ ವೀಕ್ಷಿಸಿದ ಸಂಸದರು, ಮೇ ಅಂತ್ಯದೊಳಗೆ ಮೊದಲ ಹಂತದ ಕೆಲಸಗಳನ್ನು ಮುಗಿಸಲು ಪ್ರಯತ್ನಿಸಲಾಗುತ್ತಿತ್ತು. ಆದರೆ ತಾಂತ್ರಿಕ ಕಾರಣಗಳಿಂದಾಗಿ ಜೂನ್ ಮೊದಲ ವಾರದಲ್ಲಿ ಮೇಲ್ಸೇತುವೆಯ ಒಂದು ಭಾಗವನ್ನು ಸಾರ್ವಜನಿಕ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಈ ಮೇಲ್ಸೇತುವೆ ಬಳಕೆಗೆ ಲಭ್ಯವಾದರೆ ಮಣಿಪಾಲ–ಉಡುಪಿ ಭಾಗದಿಂದ ಬರುವ ವಾಹನಗಳ ಒತ್ತಡ ಕಡಿಮೆಯಾಗಿ, ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಹೆದ್ದಾರಿ ಇಲಾಖೆಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಇಂಜಿನಿಯರ್ ನವೀನ್ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾಳಾವರ ಪದವಿ ಕಾಲೇಜು, ಸ್ನಾತಕೋತ್ತರ ಕೇಂದ್ರದ ವಾರ್ಷಿಕೋತ್ಸವ



ಕುಂದಾಪುರ: ದೃಢತೆಯಿಂದ ಕೂಡಿದ ಅವಿರತ ಪರಿಶ್ರಮ, ತಾಳ್ಮೆ ಮತ್ತು ಸಹಿಷ್ಣುತೆಯಿಂದ ಏನನ್ನು ಬೇಕಾದರೂ ಸಾಧಿಸಬಹುದು. ಅವಿರತವಾದ ಶ್ರಮ ಎಂದರೆ ಕ್ರಿಯಾಶೀಲವಾದ ನಿರಂತರ ಪ್ರಯತ್ನ ಎಂದು ಕುಂದಾಪುರ ಕ್ಷೇತ್ರದ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ಕುಂದಾಪುರದ ಕೋಟೇಶ್ವರದ ಕಾಳಾವರ ವರದರಾಜ ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ವಾರ್ಷಿಕೋತ್ಸವ ಉದ್ಘಾಟಿಸಿ, ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ರಾಮರಾಯ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಬಿದ್ಕಲ್‌ಕಟ್ಟೆ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲ ವಿಘ್ನೇಶ್ವರ ಭಟ್ ದಿಕ್ಸೂಚಿ ಭಾಷಣ ಮಾಡಿದರು. ಸಾಂಸ್ಕೃತಿಕ ಸಂಚಾಲಕ ಡಾ. ಶೇಖರ ಬಿ., ಆರಣ್ಯ ಗುತ್ತಿಗೆದಾರ ಜೆ.ಪಿ. ಶೆಟ್ಟಿ ಕಟ್ಕೆರೆ ಹಾಗೂ ವಿದ್ಯಾರ್ಥಿ ವೇದಿಕೆ ನಾಯಕ ಉಪಸ್ಥಿತರಿದ್ದರು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ನಾಗರಾಜ ವೈದ್ಯ ಎಂ. ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಸಾಧಕರಿಗೆ ಸನ್ಮಾನ

ಕಾರ್ಯಕ್ರಮದಲ್ಲಿ ಡಾಕ್ಟರೇಟ್ ಪದವಿ ಪಡೆದ ಮನೋಹರ್ ಬಿ., ಅನುಷಾ ಎಲ್., ಪ್ರೇಮಾ ಆಚಾರಿ ಹಾಗೂ ರ‍್ಯಾಂಕ್ ವಿಜೇತರನ್ನು ಸನ್ಮಾನಿಸಲಾಯಿತು. ಡಾ. ಉದಯ ಶೆಟ್ಟಿ ಕೆ., ರವಿಚಂದ್ರ ಎಚ್.ಎಸ್., ಡಾ. ಶೇಖರ ಬಿ., ಶೃತಿ ಆಚಾರ್ಯ ಎಸ್., ಡಾ. ಭಾಗೀರಥಿ ನಾಯ್ಕ ಡಾ. ಮನೋಹರ ಬಿ. ಬಹುಮಾನಿತರ ಪಟ್ಟಿ ವಾಚಿಸಿದರು. ಕಾಲೇಜಿನ ವಾರ್ಷಿಕ ವರದಿಯನ್ನು ಐಕ್ಯೂಎಸಿ ಸಂಚಾಲಕ ನಾಗರಾಜ ಯು. ವಾಚಿಸಿದರು. ನಿರಂಜನ ಶರ್ಮ ನಿರೂಪಿಸಿದರು. ವಿದ್ಯಾರ್ಥಿ ವೇದಿಕೆಯ ಅಧ್ಯಕ್ಷ ಕೃತಿಕ್ ವಂದಿಸಿದರು.

ಆರೂರಿನಲ್ಲಿ ಸ್ಪಂದನ ಯುವ ವೃಂದ ದಶಮಾನೋತ್ಸವ ಸಂಭ್ರಮ




ಬ್ರಹ್ಮಾವರ: ಸಮಾಜಮುಖಿ ಚಿಂತನೆಗಳೊಂದಿಗೆ ಸಾಮಾಜಿಕ ಮೌಲ್ಯಗಳನ್ನು ನೆಚ್ಚಿ ಕೊಂಡು ಬದುಕು ಕಟ್ಟಿಕೊಳ್ಳುವುದು ಅಷ್ಟು ಸುಲಭವಲ್ಲ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.

ಆರೂರಿನಲ್ಲಿ ನಡೆದ ಸ್ಪಂದನ ಯುವ ವೃಂದದ ದಶಮಾನೋತ್ಸವದ ಸಂಭ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜೀವಮಾನ ಸಾಧನೆಗಾಗಿ ನಿವೃತ್ತ ಮುಖ್ಯ ಶಿಕ್ಷಕ ಆರೂರು ತಿಮ್ಮಪ್ಪ ಶೆಟ್ಟಿ ಆವರಿಗೆ ಸ್ಪಂದನ ದಶಸಂಭ್ರಮ ಸಾಧನಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಾಸಕ ಯಶಪಾಲ್ ಸುವರ್ಣ, ಉದ್ಯಮಿ ಸುಗ್ಗಿ ಸುಧಾಕರ ಶೆಟ್ಟಿ ಪ್ರಮುಖರಾದ ಅಶೋಕ್ ಕುಮಾರ್ ಶೆಟ್ಟಿ ಮೈರ್ಮಾಡಿ, ರಾಜೇಶ್ ಶೆಟ್ಟಿ ಬಿರ್ತಿ, ಆರೂರು ಶ್ರೀಧರ ಶೆಟ್ಟಿ ಗುರುರಾಜ ರಾವ್, ಮುಖ್ಯ ಶಿಕ್ಷಕ ಮಂಜುನಾಥ ನಾಯಕ್, ಮಮತಾ ಶೆಟ್ಟಿ, ಕುರುಡುಂಜೆ ರತ್ನಾಕರ್ ಶೆಟ್ಟಿ, ಪ್ರತಾಪ್ ಹೆಗ್ಡೆ ಮಾರಾಳಿ, ಗೋಪಿ ಕೆ.ನಾಯಕ್ ಉಪಸ್ಥಿತರಿದ್ದರು.

ನೀಟ್ ಅಕ್ರಮ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಉಡುಪಿ: ನೀಟ್ ಪರೀಕ್ಷೆಯಲ್ಲಿ ನಡೆದಿರುವ ಭಾರೀ ಅಕ್ರಮ ಹಾಗೂ ಭ್ರಷ್ಟಾಚಾರವನ್ನು ಖಂಡಿಸಿ ಶುಕ್ರವಾರ ಉಡುಪಿ ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ಮಣಿಪಾಲ ಜಿಲ್ಲಾಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಯಿತು. ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕೃಷ್ಣ ಶೆಟ್ಟಿ ಬಜಗೋಳಿ, ಸುರಯ್ಯ ಅಂಜುಮ್, ಕಿಶನ್ ಹೆಗ್ಡೆ ಕೊಳ್ಕೆಬೈಲು, ಪ್ರಖ್ಯಾತ್ ಶೆಟ್ಟಿ ಯತೀಶ್ ಕರ್ಕೇರ, ಅಜಿತ್ ಶೆಟ್ಟಿ ಸುದೇಶ್ ಶೆಟ್ಟಿ ನವೀನ್ ಸಾಲ್ಯಾನ್ ಕುಕ್ಕೆಹಳ್ಳಿ, ಆತೀಫ್, ಪ್ರದೀಪ್ ಶೆಟ್ಟಿ ನಲ್ಲೂರು, ಮಂಜುನಾಥ್ ಶೆಟ್ಟಿ ಅಕ್ಷತ್ ಪೈ, ಶಿರಿಶ್, ಜುನೈದ್, ಶಶಿಧರ್ ಹವಾಲ್ದಾರ್‌ಬೆಟ್ಟು ಉಪಸ್ಥಿತರಿದ್ದರು.



ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನ 'ದರ್ಶನ 2024-25' ವಾರ್ಷಿಕ ಸಂಚಿಕೆಯು ಮಂಗಳೂರು ವಿಶ್ವವಿದ್ಯಾನಿಲಯ ಕೊಡಮಾಡುವ ಅತ್ಯುತ್ತಮ ಕಾಲೇಜು ವಾರ್ಷಿಕ ಸಂಚಿಕೆ ಪ್ರಶಸ್ತಿಯನ್ನು ದ್ವಿತೀಯ ಬಹುಮಾನದೊಂದಿಗೆ ಪಡೆದುಕೊಂಡಿದೆ.

ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆ ಕುರಿತು ಕ್ರಿಯಾ ಯೋಜನೆಯ ತರಬೇತಿ | ಅಧಿಕಾರಿಗಳಿಗೆ ಕ್ಷಮಾ ಪಾಟೀಲ್ ಸಲಹೆ

ಸವಾಲುಗಳನ್ನು ನಿಭಾಯಿಸಲು ಎಲ್ಲಾ ಇಲಾಖೆಗಳ ಜೊತೆ ಸಮನ್ವಯತೆ ಅಗತ್ಯ

ಉಡುಪಿ: ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಇವರ ಸಹಯೋಗದೊಂದಿಗೆ ಹವಾಮಾನ ಬದಲಾವಣೆ ಕುರಿತು ಕ್ರಿಯಾ ಯೋಜನೆ ತರಬೇತಿ ಕಾರ್ಯಕ್ರಮವು ರಜತಾದ್ರಿಯ ಜಿಲ್ಲಾ ಸಂಪನ್ಮೂಲ ಕೇಂದ್ರದಲ್ಲಿ ನಡೆಯಿತು.

ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕಿ ಕ್ಷಮಾ ಪಾಟೀಲ್ ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಎಂಪ್ರಿ ಹವಾಮಾನ ಬದಲಾವಣೆ ವಿಭಾಗದ ಹಿರಿಯ ಸಮಾಲೋಚಕಿ ಡಾ. ಸರಿತಾ ಬೋಯಾ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿ ಮಾತನಾಡಿ, ಹವಾಮಾನ ಬದಲಾವಣೆಯನ್ನು ಸಮರ್ಥವಾಗಿ ಎದುರಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಜಿಲ್ಲೆಯಲ್ಲಿನ ಸವಾಲುಗಳನ್ನು ನಿಭಾಯಿಸಲು ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು.



ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು, ಕರ್ನಾಟಕ ಸರ್ಕಾರದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ರಾಜ್ಯ ಸರ್ಕಾರದ ನಿರ್ದೇಶನದಂತೆ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ 2024ರಲ್ಲಿ ಕೇಂದ್ರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಅನುಮೋದನೆ ಪಡೆದಿದೆ. ಈ ಯೋಜನೆಯಡಿಯಲ್ಲಿ ಹವಾಮಾನ ಬದಲಾವಣೆ ಕುರಿತ ಕಾರ್ಯ ಅಂಶಗಳನ್ನು ಆಧರಿಸಿ, ವಿವಿಧ ಇಲಾಖೆಗಳು 2025–2030ರ ಅವಧಿಗೆ ಪ್ರಮುಖ ಕಾರ್ಯಕ್ಷಮತಾ ಸೂಚಕಗಳನ್ನು ಗುರಿಗಳೊಂದಿಗೆ ನಿಗದಿಪಡಿಸಿವೆ. ಈ ಸೂಚಕಗಳ ಪರಿಣಾಮಕಾರಿ ಅನುಷ್ಠಾನವನ್ನು ಮಾಡಬೇಕಿದೆ ಎಂದರು.

15 ಇಲಾಖೆಗಳು

2026-27ನೇ ಸಾಲಿನಲ್ಲಿ ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ವಿಸ್ತರಿಸಲಾಗುತ್ತಿದೆ. ಈ ಕ್ರಿಯಾ ಯೋಜನೆಗೆ ಒಟ್ಟು 15 ಇಲಾಖೆಗಳು ಒಳಪಡಲಿದ್ದು, ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆಯನ್ನು ಸಂಬಂಧಿಸಿದ ಎಲ್ಲ ಇಲಾಖೆಗಳು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಿ ನಿಗದಿತ ಗುರಿ ತಲುಪಬೇಕು.

● ಕ್ಷಮಾ ಪಾಟೀಲ್, ಜಂಟಿ ನಿರ್ದೇಶಕಿ, ತೋಟಗಾರಿಕೆ ಇಲಾಖೆ

ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಉಪನಿರ್ದೇಶಕ ಡಾ. ರೆಡ್ಡಪ್ಪ, ಮೀನುಗಾರಿಕಾ ಇಲಾಖೆಯ ಉಪನಿರ್ದೇಶಕ ಕುಮಾರಸ್ವಾಮಿ, ಮೆಸ್ಕಾಂನ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಸನ್ನ ಕುಮಾರ್, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ಎಂಪ್ರಿ ತರಬೇತಿ ಮುಖ್ಯಸ್ಥೆ ಲತಾ ಎಂ.ಹೆಚ್ ಸ್ವಾಗತಿಸಿ, ನಿರೂಪಿಸಿದರು.